ಓಂ ನಮಃ ಸುಖಾಯ    ಓಂ ನಮೋ ನಾನವೆ

# ಶ್ರೀ ಸದ್ಗುರು ಶಿವಾನಂದ ಸ್ವಾಮಿಗಳವರ ಪ್ರವಚನ ಸಾರ




ಸಂಗ್ರಹಕಾರರು:

**ಶ್ರೀ ಗೌಡಪ್ಪಗೌಡ್ರು ದೇಸಾಯಿಗೌಡ್ರು ಬಾಚಲಾಪೂರ,**

**ಶ್ರೀ ಶಂಕರರಾವ ಕುರ್ತಕೋಟಿ**

ಸಾರಾಂಶ ಸಂಗ್ರಹಿಸಿದವರು :

**ಪ್ರೊ. ಎಸ್.ಎಸ್. ಕುರುಬರ** ಎಂ.ಎಸ್‌ಸಿ.

ಪೂಜ್ಯ ಶ್ರೀ ಗುರುದೇವ ಆತ್ಮಾನಂದ ಆಶ್ರಮ

ಸಾ॥ ಹಂಗರಕಿ, ತಾ/ಜಿ॥ ಧಾರವಾಡ.



ಪ್ರಕಾಶಕರು

ಶ್ರೀ ಜಡಿಶಂಕರಲಿಂಗ ಅಧ್ಯಾತ್ಮ ಪ್ರಕಾಶನ

ಮು॥ ಶಿವಪೇಠ, ಪೋ॥ ಅವರಾದಿ,

ತಾ॥ ರಾಮದುರ್ಗ, ಜಿ॥ ಬೆಳಗಾವಿ

ಓಂ ನಮಃ ಸುಖಾಯ ಓಂ ನಮೋ ನಾನವೆ

# ಶ್ರೀ ಸದ್ಗುರು ಶಿವಾನಂದ ಸ್ವಾಮಿಗಳವರ ಪ್ರವಚನ ಸಾರ




ಸಂಗ್ರಹಕಾರರು:

**ಶ್ರೀ ಗೌಡಪ್ಪಗೌಡ್ರು ದೇಸಾಯಿಗೌಡ್ರು ಬಾಚಲಾಪೂರ,**
**ಶ್ರೀ ಶಂಕರರಾವ ಕುರ್ತಕೋಟಿ**

ಸಾರಾಂಶ ಸಂಗ್ರಹಿಸಿದವರು :

**ಪ್ರೊ. ಎಸ್.ಎಸ್. ಕುರುಬರ** ಎಂ.ಎಸ್‌ಸಿ.
ಪೂಜ್ಯ ಶ್ರೀ ಗುರುದೇವ ಆತ್ಮಾನಂದ ಆಶ್ರಮ
ಸಾ॥ ಹಂಗರಕಿ, ತಾ/ಜಿ॥ ಧಾರವಾಡ.



ಪ್ರಕಾಶಕರು:

**ಶ್ರೀ ಜಡಿಶಂಕರಲಿಂಗ ಅಧ್ಯಾತ್ಮ ಪ್ರಕಾಶನ**
ಮು॥ ಶಿವಪೇಠ, ಪೋ॥ ಅವರಾದಿ,
ತಾ॥ ರಾಮದುರ್ಗ, ಜಿ॥ ಬೆಳಗಾವಿ

ಐದನೆಯ ಮುದ್ರಣ : 2015

(ಒಂದು ಸಾವಿರ ಪ್ರತಿಗಳು)

ಎಲ್ಲ ಹಕ್ಕುಗಳು ಲೇಖಕರಿಂದ ಹಾಗೂ ಪ್ರಕಾಶಕರಿಂದ ಕಾಯ್ದಿರಿಸಲ್ಪಟ್ಟಿವೆ.

ಬೆಲೆ : 40-00 (ನಾಲವತ್ತು ರೂಪಾಯಿಗಳು)

ಮುದ್ರಕರು : ಶ್ರೀ ಸಾಯಿ ಆಫಸೆಟ್, ಬೀಡಿ.

ಓಂ ನಮಃ ಸುಖಾಯ ಓಂ ನಮೋ ನಾನವೆ



**ಪೂಜ್ಯ ಶ್ರೀ ಗುರುದೇವ ಆತ್ಮಾನಂದರು**

ಸಾ: ಮನಿಹಾಳ - ಸುರೇಬಾನ, ತಾ: ರಾಮದುರ್ಗ, ಜಿ: ಬೆಳಗಾವಿ

## ಪೂಜ್ಯ ಶ್ರೀ ಸದ್ಗುರು ಆತ್ಮಾನಂದರ
## ಸಂಕ್ಷಿಪ್ತ ಪರಿಚಯ

ಪೂಜ್ಯ ಶ್ರೀ ಸದ್ಗುರು ಆತ್ಮಾನಂದರು 1904ರಲ್ಲಿ ಪರಮ ತಪಸ್ವಿಗಳೂ, ಅವತಾರಿ ಪುರುಷರೂ ಆದ ಪೂಜ್ಯ ಶ್ರೀ ಸದ್ಗುರು ಶಿವಾನಂದರ (ನಾಗನೂರ–ಗದಗ) ಏಕಮೇವ ಮಾನಸ ಮತ್ತು ಔರಸ ಪುತ್ರರಾಗಿ ಜನಿಸಿದರು. ಬಾಲ್ಯದಿಂದಲೇ ಅವರಿಗೆ ಅಧ್ಯಾತ್ಮ ವಿಚಾರದ ಕಡೆಗೆ ಒಲವು ಇತ್ತು. ಪೂಜ್ಯ ಶ್ರೀ ಸದ್ಗುರು ಶಿವಾನಂದರು ಅಧ್ಯಾತ್ಮ ಬೋಧೆಗಾಗಿಯೇ ತಮ್ಮ ಜೀವನವನ್ನು ಮುಡುಪಿಟ್ಟರು. ಆತ್ಮಾನಂದರು ತಮ್ಮ ತಂದೆಯವರ ವಿಶೇಷ ಪೋಷಣೆಯಲ್ಲಿಯೇ ಬೆಳೆದರು. ಅವರು ಪ್ರಾಥಮಿಕ ಶಾಲೆಯಲ್ಲಿ ಓದುತ್ತಿದ್ದಾಗ ಪೂಜ್ಯ ಶ್ರೀ ಸದ್ಗುರು ಶಿವಾನಂದರು ತುರ್ಯಸ್ಥಿತಿಯನ್ನು ಹೊಂದುತ್ತಿದ್ದರು. ಅದು ಎರಡು–ಮೂರು ದಿನಗಳವರೆಗೆ ಇರುತ್ತಿತ್ತು. ಆಗ ಆತ್ಮಾನಂದರು ಪೂಜ್ಯ ಶ್ರೀ ಸದ್ಗುರು ಶಿವಾನಂದರ ತುರ್ಯಸ್ಥಿತಿಯನ್ನು ಲಕ್ಷ್ಯಪೂರ್ವಕವಾಗಿ ನೀರಿಕ್ಷಿಸಿ ಅದರ ಗೂಡಾರ್ಥವನ್ನು ತಿಳಿದುಕೊಂಡರು. ಅವರು 1932ರಲ್ಲಿ "ಪ್ರಾಚೀನ ಭಾರತೀಯ ಇತಿಹಾಸ ಮತ್ತು ಸಂಸ್ಕೃತಿ" ಎಂಬ ವಿಷಯವನ್ನು ತೆಗೆದುಕೊಂಡು, ಬನಾರಸ ಹಿಂದೂ ವಿಶ್ವವಿದ್ಯಾಲಯದ ಎಂ.ಎ. ಪರೀಕ್ಷೆಯಲ್ಲಿ ದ್ವಿತೀಯ ಶ್ರೇಣಿಯಲ್ಲಿ ತೇರ್ಗಡೆ ಹೊಂದಿದರು. ನಂತರ ತಮ್ಮ ತಂದೆಯವರ ವಿಶೇಷ ಮಾರ್ಗದರ್ಶನದಿಂದ ಮತ್ತು ತಮ್ಮ ಹಿಂದಿನ ಜನ್ಮದ ಆತ್ಮಾಭ್ಯಾಸದ ತೀವ್ರ ಸಂಸ್ಕಾರದಿಂದ ತುರ್ಯ ಸ್ಥಿತಿಯನ್ನು ಹೊಂದಿಯೇ ತೀರಬೇಕೆಂದು ನಿಶ್ಚಯಿಸಿದರು. ಎಲ್ಲ ಅಧಿಕಾರ, ಸಂಪತ್ತು, ಐಷಾರಾಮದ ಜೀವನ ಮತ್ತು ಲೋಕ ಪ್ರಸಿದ್ಧಿಯನ್ನು ನಿರ್ಲಕ್ಷಿಸಿದರು. ಆಗ ಅವರು ಕೆಲವು ಕಾಲ ಸಂಚಾರಕೈಗೊಂಡು ಸ್ವರೂಪಾವ ಸ್ಥಿತಿಯನ್ನು ಹೊಂದುವ ಸತತ ಅಭ್ಯಾಸದಲ್ಲಿ ತೊಡಗಿ ಅಲ್ಪಕಾಲದಲ್ಲಿಯೇ ಆತ್ಮಜ್ಞಾನಿಗಳಾದರು.

ಪೂಜ್ಯ ಶ್ರೀ ಸದ್ಗುರು ಶಿವಾನಂದರು ಮತ್ತು ಅವರ ಪುತ್ರರಾದ ಪೂಜ್ಯ ಶ್ರೀ ಸದ್ಗುರು ಆತ್ಮಾನಂದರು ವ್ಯಾಸ ಶುಕದೇವ ಮುನಿಗಳಂತೆ ಇದ್ದರು. ಪ್ರವಚನ ಹೇಳುವ ಕಾಲಕ್ಕೆ ಅನೇಕ ಸಲ ತುರ್ಯ ಸ್ಥಿತಿಯನ್ನು ಹೊಂದಿದ ಧೀರರಿವರು. ಪೂಜ್ಯ ಶ್ರೀ ಸದ್ಗುರು ಆತ್ಮಾನಂದರು ತಾವು ಪಡೆದ ಪರಮೋನ್ನತ ಶಾಂತಿಯನ್ನು ಇನ್ನುಳಿದ ಜೀವಿಗಳು ಪಡೆದು ಸುಖಿಯಾಗಲಿ ಎಂದು ವೈಯ್ಯಾಕರಣಿಯ ಸ್ಥಿತಿಯಿಂದ ಅವರಿವರೆನ್ನದೆ ಭುವನದ ಮಾನವರೆಲ್ಲರಿಗೂ 45 ವರ್ಷಗಳವರೆಗೆ ಅಧ್ಯಾತ್ಮ ಜ್ಞಾನವನ್ನು ಬೋಧಿಸಿದರು.

ಎಲ್ಲ ಜೀವಿಗಳಿಗೆ ಬೇಕಾದದ್ದು ಶಾಶ್ವತ ಸುಖವು, ಅದು ರೂಪರಹಿತವಿದೆ. ಆದರೆ ಅಜ್ಞಾನಿ ಜೀವಿಗಳು ರೂಪಗಳಲ್ಲಿಯೇ ಸುಖವನ್ನು ಹುಡುಕುತ್ತಾರೆ ಮತ್ತು ಕಲ್ಪಿತ ರೂಪಗಳಿಗಾಗಿ ಜಗಳಾಡುತ್ತಾರೆ. ಆದ್ದರಿಂದ ಜೀವಿಗಳು ವ್ಯರ್ಥವಾಗಿ ರೂಪಗಳಲ್ಲಿ ಸುಖವನ್ನು ಹುಡುಕದೆ ಮತ್ತು ಕಲ್ಪಿತ ರೂಪಗಳಿಗಾಗಿ (ಶಿವ, ಪಾರ್ವತಿ, ವಿಷ್ಣು, ಲಕ್ಷ್ಮಿ ಮುಂತಾದವುಗಳು) ಜಗಳಾಡದೆ, ಕೇವಲ ರೂಪರಹಿತ ಸುಖವನ್ನು ನೆನಪಿಗೆ ತಂದುಕೊಳ್ಳುವದಕ್ಕಾಗಿ ಪೂಜ್ಯ ಶ್ರೀ ಸದ್ಗುರು ಆತ್ಮಾನಂದರು "ಓಂ ನಮಃ ಸುಖಾಯ" ಎಂಬ ಮಂತ್ರವನ್ನು ಹೇಳಿದರು.

ಅದರಂತೆ ಅಜ್ಞಾನಿ ಜೀವರು ಸುಖವನ್ನು ತಮ್ಮ ನಿಜ ಸ್ವರೂಪದ ಹೊರಗೆ ಹುಡುಕಿ ಬಳಲುತ್ತಾರೆ, ಹೀಗೆ ಅವರು ವ್ಯರ್ಥ ಬಳಲದೆ, ತಮ್ಮ ನಿಜ ಸ್ವರೂಪವೇ ಸುಖವೆಂದು ತಿಳಿದು, ಕೇವಲ ತಮ್ಮ ಸುಖಮಯ ನಿಜಸ್ವರೂಪವನ್ನೇ ನೆನಪಿಗೆ ತಂದುಕೊಳ್ಳಲು ಪೂಜ್ಯ ಶ್ರೀ ಸದ್ಗುರು ಆತ್ಮಾನಂದರು "ಓಂ ನಮೋ ನಾನವೆ" ಎಂಬ ಮಂತ್ರವನ್ನು ಹೇಳಿದರು.


ಜೀವಿಗಳಿಗೆ ಆನಂದದ ಗುರುತು ಭಾವ ಉದಯವಾದಾಗಿನಿಂದಲೇ ಇದೆ. ಅದೇ ಪ್ರಥಮಾನುಭೂತಿ. ಅದನ್ನು ಮರೆತಂತಾಗಿದೆ. ಪ್ರಥಮಾನುಭೂತಿಯನ್ನು ನೆನಪಿಸಿಕೊಂಡು ಆನಂದನಿಷ್ಠರಾಗಲು ಘಂಟಾಘೋಷವಾಗಿ ಶ್ರೀಗಳವರು ತಿಳಿಸಿದರು.

ಬ್ರಹ್ಮಚರ್ಯಾಶ್ರಮ (ಬಾಲ್ಯದಲ್ಲಿ ಬ್ರಹ್ಮವಿದ್ಯೆಯ ಅಭ್ಯಾಸ), ಗೃಹಸ್ಥಾಶ್ರಮ (ವಿಷಯಭೋಗದ ವ್ಯವಹಾರವು ನಡೆದಾಗಲೆಲ್ಲಾ ಅದರಲ್ಲಿ ಸುಖವಿದೆಯೋ ಅಥವಾ ದುಃಖವಿದೆಯೋ ಎಂಬುದನ್ನು ವಿಚಾರ ಮಾಡುವದು), ವಾನಪ್ರಸ್ಥಾಶ್ರಮ (ಮನೆತನದ ವ್ಯವಹಾರವನ್ನು ಕೈಬಿಟ್ಟು ಆತ್ಮವಿಚಾರದಲ್ಲಿ ತೊಡಗುವದು) ಇವು ಪುನಃ ಪ್ರತಿಷ್ಠಾಪನೆಯಾಗದ ಹೊರತು ಸಮಾಜದಲ್ಲಿ ಸುಖ-ಶಾಂತಿಗಳು ನೆಲೆಸಲಾರವು ಎಂದು ಪೂಜ್ಯ ಶ್ರೀ ಆತ್ಮಾನಂದ ಗುರುಗಳು ತಿಳಿಸಿದರು.

ನೀತಿ, ವೈರಾಗ್ಯ, ತುರ್ಯಸ್ಥಿತಿ (ಆತ್ಮಜ್ಞಾನ)ಯನ್ನು ಪಡೆಯದೆ ಮೋಕ್ಷವಿಲ್ಲವೆಂದು ಅವರು ಘಂಟಾಘೋಷವಾಗಿ ತಿಳಿಸಿದರು. ಅವರು ಇಡೀ ವಿಶ್ವದ ದಾರ್ಶನಿಕ ಶಾಸ್ತ್ರಗಳ ಸಾರವನ್ನೇ ಅರ್ಥಾತ್ ತಮ್ಮ ಅನುಭವವನ್ನೇ ನೀಡಿದರು. ಅವರು 19-12-1983 ರ ರಾತ್ರಿ 9-30 ಗಂಟೆಗೆ ತಮ್ಮ ಸ್ಥೂಲ ಶರೀರವನ್ನು ಬಿಟ್ಟು ಭಾವರಹಿತ ಪರಮಾತ್ಮರಾಗಿ ಉಳಿದರು.

-ಪ್ರಕಾಶಕರು

ಓಂ ನಮಃ ಸುಖಾಯ ಓಂ ನಮೋ ನಾನವೆ



ಪೂಜ್ಯ ಶ್ರೀ ಸದ್ಗುರು ಶಿವಾನಂದರು
ನಾಗನೂರ - ಗದಗ

# ಪೂಜ್ಯ ಶ್ರೀ ಸದ್ಗುರು ಶಿವಾನಂದರ
# ಸಂಕ್ಷಿಪ್ತ ಪರಿಚಯ

ಧಾರವಾಡ ಜಿಲ್ಲೆಯ 'ರೋಣ' ಎಂಬ ಗ್ರಾಮದಲ್ಲಿ ಶ್ರೀ ಲಿಂಗನಗೌಡರು ಮತ್ತು ಬಸವಮ್ಮ ಎಂಬ ಸದ್ಗುಣ ಸಂಪನ್ನರಾದ ದಂಪತಿಗಳಿಂದ ಕ್ರಿ.ಶ. 1858–59 ರಲ್ಲಿ ಶಿವಾನಂದರು ಜನಿಸಿದರು. ಇವರ ಮೊದಲಿನ ಹೆಸರು 'ಶ್ರೀ ವೀರನಗೌಡ' ಎಂದಿತ್ತು. ಅವರು ಒಂಭತ್ತು ವರ್ಷದವರಾಗುವವರೆಗೆ ಮೌನಿಯಾಗಿಯೇ ಇರುತ್ತಿದ್ದರು. ಆಗ ಅವರು ತಮ್ಮ ಸ್ವರೂಪದ ಅಭ್ಯಾಸವನ್ನು ಮುಂದುವರೆಸುತ್ತಿದ್ದರು. ಹೊಲದಿಂದ ಮೇವಿನ ಹೊರೆಯನ್ನು ಹೊತ್ತುಕೊಂಡು ಬರುವಾಗ ದಾರಿಯಲ್ಲಿ ನಿಂತು "ಮೇವಿನ ಹೊರೆಯನ್ನು ಹೊತ್ತುಕೊಂಡು ನಿಂತವರು ಯಾರು? ಇವರನ್ನು ನೋಡುವವರಾರು? ಇದೆಲ್ಲವನ್ನು ನೋಡುವ ಸಾಕ್ಷಿ ಸ್ವರೂಪವಾವುದು?" ಮುಂತಾಗಿ ವಿಚಾರ ಮಾಡುತ್ತಿದ್ದರು. ಒಮ್ಮೆ ಹುಡುಗಾಟಿಕೆಯಿಂದ ಶ್ರೀ ನಾಗಲಿಂಗ ಸ್ವಾಮಿಗಳು 'ಬಾಚಿಯಿಂದ ಕಡಿಯುತ್ತೇನೆ' ಎಂದು ಶಿವಾನಂದರನ್ನು ಹೆದರಿಸಲು ಬಂದಾಗ "ಶರೀರವನ್ನು ಕಡಿದು ಹಾಕಿರಿ, ಇಲ್ಲದ ವಸ್ತು ಇಲ್ಲದಂತಾಗುತ್ತದೆ" ಎಂದರು. ಈ ಘಟನೆಯು ಅವರು ಪೂರ್ಣ ನಿರ್ಭಯರಾಗಿದ್ದರು ಎಂಬುದನ್ನು ತೋರಿಸುತ್ತದೆ.

ಪ್ರಾಥಮಿಕ ಶಿಕ್ಷಣವನ್ನು ಮುಗಿಸಿದ ನಂತರ ಅವರು ಡೋಣಿ ಡಂಬಳದ ಸಮೀಪದ ಒಂದೆರಡು ಹಳ್ಳಿಗಳಲ್ಲಿ ಮತ್ತು ನವಲಗುಂದ ತಾಲೂಕಿನ ಸೊಟಕನಹಾಳ ಗ್ರಾಮದಲ್ಲಿ ಪ್ರಾಥಮಿಕ ಶಿಕ್ಷಕರಾಗಿ ಕೆಲಸ ಮಾಡಿದರು. ಶ್ರೀ ಶಿವಾನಂದರು ಬಿಡುವಿದ್ದಾಗ ಸಿದ್ಧಪುರುಷರಾದ ಬನಹಟ್ಟಿಯ ಶ್ರೀ ರುದ್ರಸ್ವಾಮಿಗಳವರಲ್ಲಿಗೆ ಮೇಲಿಂದ ಮೇಲೆ ಹೋಗಿ ಅವರೊಡನೆ ತತ್ವಜ್ಞಾನದ ಬಗ್ಗೆ ವಿಚಾರ ವಿನಿಮಯ ನಡೆಸುತ್ತಿದ್ದರು. ಶ್ರೀ ಶಿವಾನಂದರು ತಮ್ಮ ಸ್ವರೂಪಾನುಸಂಧಾನವೃತ್ತಿಯಲ್ಲಿದ್ದು, ಇತರ ಜೀವಿಗಳು ಸಂಕಟದಲ್ಲಿದ್ದಾಗ ಅವರನ್ನು ಸಂಕಟದಿಂದ ಪಾರುಮಾಡಲು ಸಹಾಯ ಸಲ್ಲಿಸುತ್ತಿದ್ದರು.

ನಂತರ ಶ್ರೀ ಶಿವಾನಂದರು ಮನಿಹಾಳ ಗ್ರಾಮದ ಪೋಲೀಸ ಪಾಟೀಲಕಿ ಮನೆತನದ ಶ್ರೀಮತಿ ಹನುಮವ್ವರ ದತ್ತಕ ಪುತ್ರರಾಗಿ, ಆ ಗ್ರಾಮದ ಪೋಲೀಸ ಪಾಟೀಲರಾಗಿ ಕೆಲಸ ಮಾಡಹತ್ತಿದರು. ಈ ಕಾರ್ಯವನ್ನು ದಕ್ಷತೆಯಿಂದಲೂ, ಪರಹಿತವಾಗುವಂತೆಯೂ, ನ್ಯಾಯ ನಿಷ್ಠುರತೆ ನಿಷ್ಪಕ್ಷಪಾತತನದಿಂದಲೂ ಮಾಡುತ್ತಿದ್ದರು. ಆಗ ಶ್ರೀ ಶಿವಾನಂದರು ಧಿನಾಲು ಬ್ರಾಹ್ಮಿ ಮುಹೂರ್ತದಲ್ಲಿ ತಮ್ಮ ಸ್ವರೂಪದ ಅನುಸಂಧಾನಕ್ಕಾಗಿ ಸಮೀಪದ ಗುಡ್ಡದ ಹೆಗ್ಗೊಳ್ಳ ಎಂಬಲ್ಲಿಯೂ ಮತ್ತು ಮನಿಗೇರಮ್ಮನ ಗುಡ್ಡದ ಮೇಲೂ ಹೋಗುತ್ತಿದ್ದರು. ಅವರು ದಾರಿಯಲ್ಲಿ ಬಿದ್ದಂಥ ದೇಶಿ ಹುಲಿಗಳಿಗೆ ಸ್ವಲ್ಪವೂ ಹೆದರುತ್ತಿದ್ದಿಲ್ಲ. ಅಲ್ಲಿ ದಿನಾಲು ತುರ್ಯಸ್ಥಿತಿಯನ್ನು ಹೊಂದಿ, ಮಧ್ಯಾಹ್ನ ಹನ್ನೆರಡು ಗಂಟೆಯ ಸುಮಾರಿಗೆ ಉತ್ಥಾನರಾಗಿ ಮರಳಿ ಮನೆಗೆ ಬರುತ್ತಿದ್ದರು. ಕೆಲವು ಸಲ ಅವರು ತುರ್ಯಸ್ಥಿತಿಯನ್ನು ಹೊಂದಿದಾಗ ನಾಗರಹಾವು ಅವರ ತೊಡೆಯ ಮೇಲಿಂದ ಮೈಮೇಲೆ ಏರಿ ಹೆಡೆ ತೆಗೆದು ಆಡಿದ್ದನ್ನು ಕೆಲವರು ನೋಡಿರುವರು, ಮಳೆಯು ಬಹಳವಾದಾಗ ಮನೆಯಲ್ಲಿಯೇ ಅನುಷ್ಠಾನಕ್ಕೆ

ಕುಳಿತುಕೊಳ್ಳುತ್ತಿದ್ದರು. ಹೀಗೆ ಒಮ್ಮೆ ಕುಳಿತಾಗ ಕೆಂಜಿಗಗಳು ಮೈಚರ್ಮವನ್ನು ಕಡಿದು ಅದು ಪರಟಿಗಟ್ಟಿದ್ದರೂ ಅವರಿಗೆ ಗುರುತೇ ಇರಲಿಲ್ಲ. ಅವರು ಮಹಾನವಮಿಯ ಕಾಲಕ್ಕೆ ಸಮೀಪದ ಶಬರಿಯ ಗುಡಿಯಲ್ಲಿ 18 ತಾಸುಗಳವರೆಗೆ ಪದ್ಮಾಸನದಲ್ಲಿ ಕುಳಿತು ತುರ್ಯಸ್ಥಿತಿಯನ್ನು ಹೊಂದುತ್ತಿದ್ದರು. ಒಂದು ದಿನ ಸ್ನಾನಕ್ಕೆಂದು ಹೊರಗೆ ಬಂದಾಗ ಶಬರಿಯ ಗುಡಿಯ ಕುಂಬಿಯ ಮೇಲೆ ಉದ್ದ ನಾಲಿಗೆ, ಕೋರೆ ಹಲ್ಲು, ರಣಗೂದಲುಳ್ಳ, ಆರ್ಭಟವಾಗಿ ಒದರುವ ಭಯಂಕರ ರಾಕ್ಷಸವನ್ನು ಕಂಡು ಎಳ್ಳಷ್ಟೂ ಭಯಪಡದೆ ಅದರ ಕೆಳಗಿನಿಂದ ಗುಡಿಯೊಳಗೆ ಹೋಗಿ, ಚಿಲಕ ಹಾಕಿ ಪದ್ಮಾಸನದಲ್ಲಿ ಕೂಡ್ರುವಷ್ಟರಲ್ಲಿಯೇ ಪುಣ್ಯಮಯ ದೇವತೆಗಳ ದರ್ಶನ ಪಡೆದರು.

ನಂತರ ಅಧಿಕ ಭೋಗದ ಪ್ರಾರಬ್ಧ ವೈಚಿತ್ರ್ಯವೆಂಬಂತೆ ಅವರ ಅಕ್ಕನ ಮಗಳಾದ ನೀಲಮ್ಮನೊಡನೆ ಅವರ ವಿವಾಹವಾಯಿತು. ಶ್ರೀ ಶಿವಾನಂದರು ಶ್ರೀಮತಿ ನೀಲಮ್ಮನವರೊಡನೆ ಒಂದೇ ಒಂದು ಸಲ ರತಿ ಸುಖವನ್ನು ಪಡೆದರು. ಅದೇ ಗರ್ಭ ನಿಂತು 1904 ರಲ್ಲಿ ಅವರು ಗಂಡು ಮಗುವಿಗೆ ಜನ್ಮವಿತ್ತರು. ಮಗುವಿಗೆ "ಲಿಂಗನಗೌಡ" ಎಂದು ನಾಮಕರಣ ಮಾಡಿದರು. ಲಿಂಗನಗೌಡರು ಜ್ಞಾನಸಮಾಧಿಯನ್ನು ಹೊಂದಿ ಸಹಜಾವಸ್ಥೆಗೆ ಬಂದು ವೈಯ್ಯಾಕರಣಿಯ ಸ್ಥಿತಿಯಿಂದ (ಪೂಜ್ಯ ಶ್ರೀ ಆತ್ಮಾನಂದರು ಎಂಬ ಹೆಸರಿನಿಂದ) ಭುವನದ ಮಾನವರೆಲ್ಲರಿಗೂ ಅವರ ನಿಜಸ್ವರೂಪದ ಬಗ್ಗೆ ಬೋಧಿಸಿ 19–12–1983 ರಂದು ಸ್ಥೂಲ ಶರೀರವನ್ನು ಬಿಟ್ಟು ಭಾವರಹಿತ ಪರಮಾತ್ಮರಾಗಿ ಉಳಿದರು.

ನಂತರ ಶ್ರೀ ಶಿವಾನಂದರು ತಮ್ಮ ಲೌಕಿಕ ಮನೆಯನ್ನು ಬಿಟ್ಟು ಭಕ್ತರ ಆಸ್ಥೆಯ ಮೇರೆಗೆ ನಾಗನೂರಿಗೆ ಹೋಗಿ, ಅಲ್ಲಿ ಹನ್ನೆರಡು ವರ್ಷಗಳವರೆಗೆ (ಶಾಸ್ತ್ರ ಹೇಳುವಾಗ, ಊಟ ಮಾಡುವಾಗ, ಮುಳಗಳ್ಳಿಯಲ್ಲಿ) ತೂರ್ಯಾವಸ್ಥೆಯನ್ನು ಹೊಂದುತ್ತ ಮತ್ತು ಬೋಧಿಸುತ್ತ ಇದ್ದು ಸಹಜಾವಸ್ಥೆಗೆ ಬಂದರು. ಒಮ್ಮೊಮ್ಮೆ ಅವರ ತುರ್ಯಾವಸ್ಥೆಯು ಎರಡು–ಮೂರು ದಿನಗಳವರೆಗೆ ಮುಂದುವರೆಯುತ್ತಿತ್ತು. ಶ್ರೀ ಸಿದ್ಧಾರೂಢ ಸ್ವಾಮಿಗಳು ಆಗಾಗ್ಗೆ ಶ್ರೀ ಶಿವಾನಂದರನ್ನು ಪ್ರವಚನಕ್ಕಾಗಿ ತಮ್ಮಲ್ಲಿಗೆ ಕರೆಸಿಕೊಳ್ಳುತ್ತಿದ್ದರು.

ನಂತರ ಶ್ರೀ ಶಿವಾನಂದರು ಭಕ್ತರ ಆಸ್ಥೆಯ ಮೇರೆಗೆ ಗದುಗಿಗೆ ಹೋಗಿ ಹದಿನೈದು ವರ್ಷಗಳವರೆಗೆ ಭುವನದ ಮಾನವರಿಗೆಲ್ಲ ಅವರ ನಿಜಸ್ವರೂಪದ ಬಗ್ಗೆ ದಿನಾಲು ಮೂರ್ನಾಲ್ಕು ಸಲ ಪ್ರವಚನಗೈದರು. ಅವರು ಆಗಾಗ್ಗೆ ಬೆಳಗಾವಿ, ಬಿಜಾಪುರ, ಧಾರವಾಡ ಜಿಲ್ಲೆಯ ಅನೇಕ ಹಳ್ಳಿಗಳಲ್ಲಿ ಸಂಚರಿಸಿ ತತ್ವಜ್ಞಾನ ಬೋಧೆ ಮಾಡಿದರು. ಅವರು 1939ನೇ ಇಸ್ವಿಯ ಪಂಚಮಿಯಂದು ತಮ್ಮ ಸ್ಥೂಲ ಶರೀರವನ್ನು ಬಿಟ್ಟು ಭಾವರಹಿತ ಪರಮಾತ್ಮರಾಗಿ ಉಳಿದರು.

–ಪ್ರಕಾಶಕರು





- ಎಲ್ಲರಿಗೂ ಸುಖವೇ ಬೇಕು, ಸುಖವೇ ಎಲ್ಲರ ಮತವು, ಸುಖವೇ ಗುರಿ, ಸುಖದ ಭಾವವೇ ಸಾಧನೆ.
- ನೀತಿ ಪಾಲನೆಯಿಂದ ಸಾಮಾಜಿಕ ಶಾಂತಿ, ಆಶೆಯನ್ನು ಬಿಡುವದರಿಂದ ಮಾನಸಿಕ ಶಾಂತಿ, ಆತ್ಮಜ್ಞಾನದಿಂದ ಶಾಶ್ವತ ಶಾಂತಿ.
- ಜ್ಞಾನ ಸಮಾಧಿಯನ್ನು ಹೊಂದದೆ ಮುಕ್ತಿಯಿಲ್ಲ.
- ದೇಹಭಾವ ದುಃಖಮಯ, ವಿಷಯಾಸಕ್ತಿ ದುಃಖಮಯ, ತನ್ನ ನಿಜದ ಭಾವ ಸುಖಮಯ.
- ದೇಹ ತಾನೆಂಬುದನ್ನು ಅಳಿ, ದೇವ ತಾನೆಂಬುದನ್ನು ತಿಳಿ, ತಿಳಿದು ಉಳಿ.
- ಮಾನವ ಜನ್ಮವು ಮುಕ್ತಿಗೆ ಸಾಧನವು.
- ಮಾನವನು ತನ್ನ ದೈವದ ಶಿಲ್ಪಿ ತಾನೇ.
- ಕರ್ಮಕ್ಕನುಸಾರವಾಗಿ ಪುನರ್ಜನ್ಮವು ತಪ್ಪಿದ್ದಲ್ಲ.
- ಅವಿಚಾರದಿಂದ ದುಃಖ, ವಿಚಾರದಿಂದ ಸುಖ.
- ತನ್ನ ಅರಿವೇ ತನಗೆ ಗುರು.
- ಸುಖ ದುಃಖದ ನಿರಂತರ ವಿಚಾರದಿಂದ ಮನೋನಿಗ್ರಹ, ತನ್ನ ನಿಜಸ್ವರೂಪದ ನಿರಂತರ ನೆನಪಿನಿಂದ ಆತ್ಮಜ್ಞಾನ.
- ಕಲ್ಪನಾರಹಿತ ಅರಿವು ಸಹಿತ ಆನಂದಾನುಭವದ ನಿಶ್ಚಲ ಸ್ಥಿತಿಯೇ ಸಂಧ್ಯಾ.
- ತಾನು ದೇವರಲ್ಲ ಎನ್ನುವದೇ ಮಹಾ ಅಪರಾಧ.
- ಆತ್ಮನ ಧರ್ಮ ಸ್ವಧರ್ಮ, ಅನಾತ್ಮನ ಧರ್ಮ ಪರಧರ್ಮ.
- ಶರೀರದಲ್ಲಿ ನೆಲೆಯಾಗಿ ನಿಂತವನು ಮಲಸ್ಥ, ಶಾಶ್ವತ ಸುಖದಲ್ಲಿ ನೆಲೆಯಾಗಿ ನಿಂತವನು ಮಠಸ್ಥ.

## ಪರಿವಿಡಿ


| ವಿಷಯ | ಪುಟ |
|---|---|
| ಸಾಮಾನ್ಯ ಬೋಧ | 5–21 |
| ಕರ್ಮ, ಕರ್ಮಫಲ ಮತ್ತು ಪುನರ್ಜನ್ಮ | 22–28 |
| ನೀತಿ | 29–35 |
| ವಿಷಯ ವೈರಾಗ್ಯ | 36–41 |
| ದೇಹದ ವೈರಾಗ್ಯ | 42–43 |
| ಅಧ್ಯಾತ್ಮ ಪ್ರಸಾರ | 44 |
| ಸಾಧನೆ | 45–68 |
| ಜ್ಞಾನ | 69–80 |
| ಜೀವನ್ಮುಕ್ತನ ಸ್ಥಿತಿ | 81–88 |






ದಿವಂಗತ ಶ್ರೀ ಮಹಾದೇವಪ್ಪ. ದೇವೇಂದ್ರಪ್ಪ ಬೀಳಗಿ
ಇವರ ಸ್ಮರಣಾರ್ಥ ಈ ಗ್ರಂಥವು ಪ್ರಕಟಿಸಲ್ಪಟ್ಟಿದೆ.
ಮು/ಪೋ : ಸುರೇಬಾನ,
ತಾ : ರಾಮದುರ್ಗ, ಜಿ : ಬೆಳಗಾವಿ
(ನಿಧನ : 28–08–1998)

## ಗ್ರಂಥ ಪೋಷಕರು



**ಶ್ರೀಮತಿ ಸರಸ್ವತಿ ಮತ್ತು ಶ್ರೀ ರಮೇಶ ಬೀಳಗಿ ದಂಪತಿಗಳು**

ಮು/ಪೋ : ಸುರೇಬಾನ, ತಾ : ರಾಮದುರ್ಗ, ಜಿ : ಬೆಳಗಾವಿ

ಮರುವರ್ಷದ ಶ್ರಾವಣ ಮಾಸದಿಂದ ಸತತವಾಗಿ ಮೂರು ವರ್ಷಗಳ ಕಾಲ ಪ್ರತಿದಿನ ಶ್ರೀ ಸಿದ್ಧಾರೂಢರ ಮತ್ತು ಅನೇಕ ಮಹಾತ್ಮರ ಚರಿತ್ರೆ ಮತ್ತು ಉಪದೇಶ ಸಾರವನ್ನು ಬೀಳಗಿ ಬಂಧುಗಳು ಓದಲು ಪ್ರಾರಂಭಿಸಿದರು. ಪ್ರತಿವರ್ಷ ಶ್ರಾವಣ ಮಾಸದ ಶ್ರೀ ಸಿದ್ಧಾರೂಢ ಚರಿತಾಮೃತದ ಪ್ರಾರಂಭದಲ್ಲಿ ಮತ್ತು ಮುಕ್ತಾಯ ಸಮಾರಂಭದಲ್ಲಿ ಪೂಜ್ಯ ಶ್ರೀ ಪ್ರೊಪೆಸರ್ ಎಸ್. ಎಸ್, ಕುರುಬರ ಗುರುಗಳು (ಪೂಜ್ಯ ಶ್ರೀ ಗುರುದೇವ ಆತ್ಮಾನಂದ ಆಶ್ರಮ ಹಂಗರಕಿ) ಪೂಜ್ಯ ಶ್ರೀ ಸಿದ್ಧಾರೂಢರ ಹಾಗೂ ಇನ್ನೂ ಅನೇಕ ಮಹಾತ್ಮರ ಚರಿತ್ರೆ ಮತ್ತು ಉಪದೇಶ ಸಾರವನ್ನು ಸವಿಸ್ತಾರವಾಗಿ ವಿವರಿಸಿದರು. ಶ್ರೀ ಕಾಡಸಿದ್ಧೇಶ್ವರ (ಶ್ರೀ ಗುರು) ಮಲ್ಲಪ್ಪ ಕೊಣ್ಣೂರ ಇವರು ಮೂರು ವರ್ಷಗಳ ಕಾಲ ಪ್ರತಿದಿನ ಶ್ರೀ ಸಿದ್ಧಾರೂಢರ ಮತ್ತು ಅನೇಕ ಮಹಾತ್ಮರ ಚರಿತ್ರೆ ಮತ್ತು ಉಪದೇಶ ಸಾರವನ್ನು ಬೀಳಗಿ ಬಂಧುಗಳಿಗೆ ವಿವರಿಸಿ ಹೇಳಿದರು.

ಈ ಕಾರ್ಯಕ್ರಮಗಳಿಂದ ಪ್ರೇರಿತರಾಗಿ ಶ್ರೀಮತಿ ಸರಸ್ವತಿ ಮತ್ತು ಶ್ರೀ ರಮೇಶ ಬೀಳಗಿ ದಂಪತಿಗಳು ಏನಾದರೊಂದು ಸತ್ಕಾರ್ಯವನ್ನು ಮಾಡಬೇಕೆಂದು ಉತ್ಕಟ ಇಚ್ಛೆಯುಳ್ಳವರಾದರು. ಶೃತಿ ಅಭಿಪ್ರಾಯದಂತೆ 'ಅನ್ನದಾತಾ ಸುಖೀ ಭವ, ಜ್ಞಾನದಾತಾ ಸುಖೀ ಭವ' ಎಂಬ ಉಕ್ತಿಯಂತೆ ಅಧ್ಯಾತ್ಮ ಗ್ರಂಥದ ಪೋಷಕರಾದರೆ ಜನ್ಮ ಸಾರ್ಥಕವಾಗುವದೆಂದು ತಿಳಿದು 'ಪೂಜ್ಯ ಶ್ರೀ ಸದ್ಗುರು ಶಿವಾನಂದರ ಪ್ರವಚನ ಸಾರ' ಗ್ರಂಥದ ಪೋಷಕರಾದರು. ಈ ಎಲ್ಲ ಕಾರ್ಯಕ್ರಮಗಳಲ್ಲಿ ಶ್ರೀಮತಿ ಸರಸ್ವತಿ, ಶ್ರೀಮತಿ ಕಸ್ತೂರಿ, ಶ್ರೀ ರಮೇಶ, ಶ್ರೀ ಶ್ರೀಕಾಂತ ಬೀಳಗಿ ಮತ್ತು ಬೀಳಗಿ ಬಂಧುಗಳು ಸೇವೆ ಸಲ್ಲಿಸುತ್ತಿರುವರು. ಶ್ರೀಮತಿ ಸರಸ್ವತಿ ಮತ್ತು ಶ್ರೀ ರಮೇಶ ದಂಪತಿಗಳಿಗೆ ಮೂರು ಜನ ಪುತ್ರಿಯರು ಮತ್ತು ಶ್ರೀಮತಿ ಕಸ್ತೂರಿ ಮತ್ತು ಶ್ರೀ ಶ್ರೀಕಾಂತ ಬೀಳಗಿ ದಂಪತಿಗಳಿಗೆ ಒಬ್ಬ ಪುತ್ರ ಮತ್ತು ಒಬ್ಬ ಪುತ್ರಿ ಇರುವರು. ಇವರೆಲ್ಲರೂ ಅಧ್ಯಾತ್ಮ ಸಂಸ್ಕಾರದವರಾಗಿದ್ದು, ಅಧ್ಯಾತ್ಮ ಸಾಧನೆಯಲ್ಲಿಯೇ ಕಾಲ ಕಳೆಯುತ್ತಿದ್ದಾರೆ. ಶ್ರೀಮತಿ ಈರಮ್ಮನವರು ತಮ್ಮ 75 ವರ್ಷಗಳ ವಯಸ್ಸಿನಲ್ಲಿಯೂ ಪ್ರತಿದಿನ ಅಧ್ಯಾತ್ಮ ಪ್ರವಚನವನ್ನು ಶ್ರವಣ ಮಾಡುತ್ತಿದ್ದು, ಅಧ್ಯಾತ್ಮ ಚಿಂತನೆಯಲ್ಲಿಯೇ ಕಾಲ ಕಳೆಯುತ್ತಿದ್ದಾರೆ. ಬೀಳಗಿ ಬಂಧುಗಳಿಂದ ಇನ್ನು ಮುಂದೆ "ಕೆಡುವ ಶರೀರದ ಸಫಲತೆ ಯಾವದು ಪರಹಿತ, ಮನುಜ ಕುಲ ಜನನದ ಲಾಭ ಯಾವದು ಆನಾರೆಂದು ತಿಳಿಯುವದು" ಎಂಬ ಉಕ್ತಿಯಂತೆ ಅನೇಕ ಪರೋಪಕಾರದ ಕಾರ್ಯಗಳು ಜರುಗಲಿ. ಅವರಿಗೆ ಪೂಜ್ಯ ಶ್ರೀ ಗುರುದೇವ ಆತ್ಮಾನಂದರು ದೀರ್ಘ ಆಯುಷ್ಯ ಮತ್ತು ಪೂರ್ಣ ಆರೋಗ್ಯವನ್ನು ದಯಪಾಲಿಸಿ ಅವರನ್ನು ಉದ್ಧರಿಸಲೆಂದು ಕೋರುತ್ತೇನೆ. ಈ ಗ್ರಂಥವು ಶ್ರೀ ರಮೇಶ ಬೀಳಗಿಯವರ ತಂದೆಯವರಾದ ಶ್ರೀ ಮಹಾದೇವಪ್ಪ ದೇವೇಂದ್ರಪ್ಪ ಬೀಳಗಿ ಇವರ ಸ್ಮರಣಾರ್ಥ ಪ್ರಕಟಿಸಲ್ಪಟ್ಟಿದೆ.

**ಪ್ರೊಫೆಸರ್ ಸುರೇಂದ್ರ ಎಸ್. ಕುರಬರ**
(ನಿವೃತ್ತ ಪ್ರಾಧ್ಯಾಪಕರು, ಜೆ.ಎಸ್.ಎಸ್. ಮಹಾವಿದ್ಯಾಲಯ, ಧಾರವಾಡ)
ಪೂಜ್ಯ ಶ್ರೀ ಗುರುದೇವ ಆತ್ಮಾನಂದ ಆಶ್ರಮ, ಹಂಗರಕಿ

## ಸಾಮಾನ್ಯ ಬೋಧ

ಪ್ರತಿಯೊಬ್ಬರು ಸುಖಕ್ಕಾಗಿ ಒಂದಿಲ್ಲೊಂದು ಉದ್ಯೋಗವನ್ನು ಮಾಡುತ್ತಾರೆ. ಇದರಿಂದ ಯಾರಿಗೆ ಸುಖವಾಗಿದೆ? ಯಾರ ದುಃಖವು ಹೋಗಿದೆ? ಎಷ್ಟು ವಿದ್ಯೆಯನ್ನು ಕಲಿತರೇನು? ನೌಕರಿಯನ್ನು ಮಾಡುವದೇತಕೆ? ಹೊಟ್ಟೆಗೆ ರುಚಿಕರವಾದ ಕೂಳು ಹಾಕಲಿಕ್ಕೆ, ಮೃಷ್ಟಾನ್ನ ಭೋಜನಕ್ಕೇ ಇವರ ಬುದ್ಧಿಯು ನಿಂತಿತು. ಊಟದಲ್ಲಿ ಒಳ್ಳೆಯ ಪ್ರೀತಿ ಇದೆ ಎಂದರೆ ಜಗತ್ತಿನಲ್ಲಿ ಎಲ್ಲವೂ ಬೇಕಾಯಿತು. ನಾಳಿಗೆ ಅದಕ್ಕಿಂತಲೂ ಹೆಚ್ಚು ಬೇಕಾಯಿತು, ಆದರೆ ನಾಲಿಗೆಯ ಪ್ರೀತಿ ತೀರಿಸಿ ಬಿಡೋಣವೆಂದರೆ ಎಂದೂ ಆಗುವದಿಲ್ಲ. ಏನು ಉಣಿಸಿದರೂ ಸಾಕಾಗುವ ಜೀನಸು ಅಲ್ಲ. ಎಂಥ ದೊಡ್ಡ ನೌಕರಿ ಮಾಡಿದರೂ ಹೊಟ್ಟೆಯದಶಿಂದ, ನಾಲಿಗೆಯ ರುಚಿಯದಶಿಂದ, ಅನೇಕ ಭೋಗದದಶಿಂದ, ಇದಕ್ಕಿಂತ ಹೆಚ್ಚಿಗೆ ಮತ್ತೇನಿದೆ. ಮಾಡುತ್ತೀ ಏಕೆಂದರೆ ಉಣ್ಣುವದಕ್ಕೆ, ಉಣ್ಣುತ್ತೀ ಏಕೆಂದರೆ ಮಾಡುವದಕ್ಕೆ. ಮನೆಯಲ್ಲಿ ಹಿರಿಯರು ಮಕ್ಕಳಿಗೆ "ಈಗ ಕಲಿತರೆ ಮುಂದೆ ಕುಳಿತುಕೊಂಡು ಉಣ್ಣಲು ಬರುವದು. ಚಪಾತಿ, ಶಿರಾ ಮುಂತಾದ ರುಚಿಕರವಾದ ಪದಾರ್ಥಗಳನ್ನು ತಿನ್ನುವದು ಪುಣ್ಯವು" ಎಂದು ಬುದ್ಧೀ ಹೇಳಿ ಇದನ್ನೇ ಗಟ್ಟಿ ಮಾಡಿಸುವರು. ಜೀನತನ ಮಾಡಿದವನಿಗೆ "ಉಣ್ಣಲಿಲ್ಲ ತಿನ್ನಲಿಲ್ಲ ಸುಮ್ಮನೆ ಸತ್ತಿತು" ಎನ್ನುವರು. ಇದು ಅನುಭವಾನುಸಾರಿಯಲ್ಲ. ಉಂಡದ್ದೇ ಉಣ್ಣುವದು, ತಿಂದದ್ದೇ ತಿನ್ನುವದು, ಮಾಡಿದ್ದೇ ಮಾಡುವದು, ಮತ್ತೆ ಮತ್ತೆ ಎಷ್ಟು ಅವಸರ ಮಾಡಿದರೂ ಇಂದ್ರಿಯಗಳ ಭೋಗಕ್ಕೇ ಸರಿ, ಹೀಗೆ ಯುಗಪರ್ಯಂತರ ನಡೆದಿದೆ. ಇದರಿಂದ ಯಾರಿಗೆ ಏನು ಲಾಭವಾಗಿದೆ? ಸುಮ್ಮನೆ ದುಡಿಯುವದು, ಉಣ್ಣುವದು. ಮತ್ತೆ ಮತ್ತೆ ಇದನ್ನೇ ಮಾಡುವರು. ಪ್ರಪಂಚದಲ್ಲಿ ಅಡಗಿ ಮಾಡಿಕೊಂಡು ಉಣ್ಣುವದೇ ಮುಕ್ತಿಯೆಂದು ತಿಳಿಯುವರು. ಭೂಮಿಯು ಬೆಳೆಯಬೇಕು, ಜೋಳವನ್ನು ಬಹಳ ಬೆಳೆಯಬೇಕು ಎನ್ನುವವರಿಗೆ ಎಂದಿಗೆ ಗತಿಯಾಗಬೇಕು. ವಿಚಾರವಂತರು ಬಲ್ಲವರ ಹತ್ತಿರ ಹೋಗಿ ತಿಳಿದು ಮುಕ್ತರಾಗುವರು. ದುಡಿದು ಗಳಿಸಿದರೆ, "ತಾನೇ ಸ್ವತಃ ದುಡಿದು ಗಳಿಸಿದ, ಎರಡನೆಯವರಿಗೆ ಕಷ್ಟ ಕೊಡಲಿಲ್ಲ, ಒಳ್ಳೆಯ ಮನುಷ್ಯ" ಎನ್ನುತ್ತಾರೆ. ಇದರಿಂದ ದುಃಖ ತಪ್ಪುವದಿಲ್ಲ. ಮೋಕ್ಷವಾಗುವದಿಲ್ಲ. ಸತ್ಪುರುಷರು ಮನೆಯ ಬಾಗಿಲಿಗೆ ಬಂದು ಹೇಳಿದರೂ ಕೇಳುವದಿಲ್ಲ. ಅವರ ಕೂಡ ಮಾತನಾಡುವದಿಲ್ಲ.

ದನದೊಡನೆ ದುಡಿದು, ಅವುಗಳೊಡನೆ ತಿರುಗಿ ತಾನೂ ದನವಾಗುವನು. ಇದ್ದ ಬುದ್ಧಿಯೂ ದನದ ಬುದ್ಧಿಯಾಗುವದು. ದನದ ಎದುರಿಗೆ ಸಜ್ಜನರು ಬಂದರೆ, ಅದಕ್ಕೇನು ಗೊತ್ತು, ತಿವಿದರೂ ತಿವಿಯಿತೇ.

ಮನಸ್ಸು ಏನನ್ನು ಬೇಡುತ್ತದೆ ಅದನ್ನು ದೊರಕಿಸಿ ಕೊಡಬಾರದು, ಕೊಡುತ್ತ ಹೋದರೆ ಹೆಚ್ಚು ಬೇಡುತ್ತ ಹೋಗುವದು. ವಿಷಯದಿಂದ ಸಂತೋಷಪಡಬಾರದು, ಇದೇ ದುಃಖ. ಮನಸ್ಸನ್ನು ವಿಷಯದಿಂದ ಬಿಡಿಸಿ ಆತ್ಮವಿಚಾರಕ್ಕೆ ಹಚ್ಚಬೇಕು. ಇಲ್ಲವಾದರೆ ಮನಸ್ಸಿಗೂ ಕಷ್ಟ, ದೇಹಕ್ಕೂ ಕಷ್ಟ ತಪ್ಪಿದ್ದಲ್ಲ. ಚುಟ್ಟಾ ತಂಬಾಕಕ್ಕೆ ಎರಡನೆಯವರಿಗೆ ಕೇಳಲಿಕ್ಕೆ ಹಚ್ಚುತ್ತದೆ. ದೊಡ್ಡ ದೊಡ್ಡ ವಿಷಯಗಳನ್ನು ಹೇಗೆ

# ಗ್ರಂಥ ಪೋಷಕರ ಪರಿಚಯ

ಶ್ರೀ ರಮೇಶ ಮಹಾದೇವಪ್ಪ ಬೀಳಗಿ ಮತ್ತು ಶ್ರೀಮತಿ ಸರಸ್ವತಿ ರಮೇಶ ಬೀಳಗಿ ದಂಪತಿಗಳು ಸಾ॥ ಸುರೇಬಾನ ತಾ॥ ರಾಮದುರ್ಗ, ಜಿಲ್ಲಾ ಬೆಳಗಾವಿ, ಇವರು ಈ ಗ್ರಂಥದ ಪೋಷಕರು. ಶ್ರೀ ರಮೇಶ ಮಹಾದೇವಪ್ಪ ಬೀಳಗಿ ಇವರು 01–06–1964 ರಲ್ಲಿ ತಾಯಿ ಈರಮ್ಮ ಇವರ ಪವಿತ್ರ ಉದರದಲ್ಲಿ ಜನಿಸಿದರು. ಶ್ರೀ ರಮೇಶರವರು ತಂದೆ ಮಹಾದೇವಪ್ಪ ಮತ್ತು ತಾಯಿ ಈರಮ್ಮನವರ ಪಾಲನೆ ಪೋಷಣೆಯಲ್ಲಿ ಬೆಳೆದರು. ಶ್ರೀ ಮಹಾದೇವಪ್ಪ ಮತ್ತು ಈರಮ್ಮ ದಂಪತಿಗಳು ಪ್ರಾಮಾಣಿಕರು ಮತ್ತು ಸರಳ ಜೀವಿಗಳು. ಇವರು ಪ್ರಾಮಾಣಿಕತನದಿಂದ ದುಡಿದು ಭೂಮಿಯನ್ನು ಗಳಿಸಿದರು. ಶ್ರೀ ಮಹಾದೇವಪ್ಪ ಬೀಳಗಿಯವರು ಅರಿವೆ ವ್ಯಾಪಾರ, ನೇಕಾರಿಕೆ ಉದ್ಯೋಗ, ಕಿರಾಣಿ ವ್ಯಾಪಾರ ಮತ್ತು ಒಕ್ಕಲುತನ ಇವುಗಳಿಂದ ಕಷ್ಟಪಟ್ಟು ಸಂಪತ್ತನ್ನು ಗಳಿಸಿ ಶ್ರೀಮಂತರಾದರು. ಇವರು ಶ್ರೇಷ್ಠ ಅನ್ನದಾನಿಗಳು, ವಸ್ತುದಾನಿಗಳು ಮತ್ತು ಶಾಂತ ಮನೋವೃತ್ತಿಯವರು, ನೀತಿನಿಷ್ಠುರರು ಆಗಿದ್ದರು. ಶ್ರೀ ಮಹಾದೇವಪ್ಪ ಬೀಳಗಿ ಅವರು ದಿನಾಂಕ 28–08–1998 ರಂದು ತಮ್ಮ 63 ವರ್ಷಗಳ ವಯಸ್ಸಿನಲ್ಲಿ ನಿಧನರಾದರು. ಶ್ರೀ ರಮೇಶರವರು ಶ್ರೀ ಮಹಾದೇವಪ್ಪ ಬೀಳಗಿ ಇವರ ಎರಡನೆಯ ಪುತ್ರರು. ಇವರು ಸುರೇಬಾನದ ಸರಕಾರಿ ಪ್ರಾಥಮಿಕ ಶಾಲೆಯಲ್ಲಿ ಪ್ರಾಥಮಿಕ ಶಿಕ್ಷಣ ಮುಗಿಸಿಕೊಂಡು, ಶ್ರೀ ಫಲಹಾರೇಶ್ವರ ಪ್ರೌಢಶಾಲೆಯಲ್ಲಿ ಮಾಧ್ಯಮಿಕ ಶಿಕ್ಷಣವನ್ನು ಪೂರ್ಣಗೊಳಿಸಿದರು. ತಂದೆಯವರ ನಿಧನದ ನಂತರ ಅವರು ಮನೆತನದ ವ್ಯವಹಾರವನ್ನು ಮುಂದುವರಿಸಿ, ಕಿರಾಣಿ ವ್ಯಾಪಾರದಲ್ಲಿ ತೊಡಗಿ, ಕಷ್ಟ ಪಟ್ಟು ಶ್ರೀಮಂತರಾದರು.

ಶ್ರೀ ನಾರಾಯಣ ಗಾಡದ ಮತ್ತು ಶ್ರೀಮತಿ ದಾನಮ್ಮ ಗಾಡದ ದಂಪತಿಗಳು ವಿಜಯಪುರದವರು. ಇವರು ವಿನಯಶೀಲರು ಮತ್ತು ನೀತಿ ಸಂಪನ್ನರು ಇರುವರು. ಇವರಿಗೆ ಮೂರು ಜನ ಹೆಣ್ಣು ಮಕ್ಕಳು ಮತ್ತು ಇಬ್ಬರು ಗಂಡು ಮಕ್ಕಳು ಇರುವರು. ಇವರ ಜೇಷ್ಠ ಪುತ್ರಿಯಾದ ಕುಮಾರಿ ಸರಸ್ವತಿ ಇವರನ್ನು ಶ್ರೀ ರಮೇಶ ಮಹಾದೇವಪ್ಪ ಬೀಳಗಿ ಇವರು ವಿವಾಹವಾದರು. ಮತ್ತು ಶ್ರೀ ರಮೇಶ ಬೀಳಗಿ ಇವರ ತಮ್ಮನಾದ ಶ್ರೀ ಶ್ರೀಕಾಂತ ಬೀಳಗಿಯವರು ಕುಮಾರಿ ಸರಸ್ವತಿಯರ ತಂಗಿಯವರಾದ ಕುಮಾರಿ ಕಸ್ತೂರಿಯವರನ್ನು ವಿವಾಹವಾದರು. ಕುಮಾರಿ ಸರಸ್ವತಿಯರು ಬಾಲ್ಯಾವಸ್ಥೆಯಿಂದಲೇ ದೇವರ ಪೂಜೆ ಮತ್ತು ಭಜನೆ ಇವುಗಳಲ್ಲಿ ಕಾಲ ಕಳೆಯುತ್ತಿದ್ದರು ಮತ್ತು ವಿಜಯಪುರದ ಷಣ್ಮುಖಾರೂಢ ಮಠದಲ್ಲಿಯ ಸೇವೆ ಸತ್ಕರ್ಮಗಳಲ್ಲಿ ಭಾಗವಹಿಸುತ್ತಿದ್ದರು. ಅವರು ಪತಿಯ ಮನೆಗೆ ಬಂದ ನಂತರ ಅನೇಕ ಕಷ್ಟಗಳನ್ನು ಎದುರಿಸಬೇಕಾಯಿತು. ಆಗ ಅವರು ಅದ್ವೈತ ಚಕ್ರವರ್ತಿಗಳಾದ ಶ್ರೀ ಸಿದ್ಧಾರೂಢ ಸ್ವಾಮಿಗಳಿಗೆ ಮೊರೆ ಹೋದರು . ಪೂಜ್ಯ ಶ್ರೀ ಸಿದ್ಧಾರೂಢರೇ ಅವರ ಪರಮ ದೈವವಾದರು. ನಂತರ ಅವರು ಶ್ರೀ ಸಿದ್ಧಾರೂಢರ ಚರಿತ್ರೆಯನ್ನು ಮನೆಯಲ್ಲಿ ಪ್ರತಿ ವರ್ಷದ ಶ್ರಾವಣ ಮಾಸದಲ್ಲಿ ಒಂದು ವಾರದವರೆಗೆ ಓದಲು ಪ್ರಾರಂಭಿಸಿದರು. ನಂತರ ಎರಡು ವರ್ಷ ಪ್ರತಿ ಶ್ರಾವಣ ಮಾಸದಲ್ಲಿ ಒಂದು ವಾರದವರೆಗೆ ಶ್ರೀ ಅಶೋಕ ಕುಲಕರ್ಣಿ ಸಾ॥ ಶಿರಸಂಗಿ ಇವರು ಬೀಳಗಿ ಬಂಧುಗಳಿಗೆ ಶ್ರೀ ಸಿದ್ಧಾರೂಢರ ಚರಿತ್ರೆಯನ್ನು ವಿವರಿಸಿ ಹೇಳಿದರು.

ಬಿಡಿಸುವದು? ಊರ ಜನರಿಗೆ ಆಳಾಗಿ ದುಡಿದರೂ, ಕೋರ್ಟು ಕಚೇರಿ ಸರಕಾರದಲ್ಲಿ ದುಡಿದರೂ ದುಃಖ ತಪ್ಪುವದಿಲ್ಲ. ಆದರೆ ಮನಸ್ಸು ನಿನ್ನ ಆಧೀನವಾದರೆ ಯಾರೇನು ಮಾಡುವರು. ನೀನು ಮನಸ್ಸಿನ ಆಳಾದರೆ ಮಾತ್ರ ಎಲ್ಲರ ಆಳಾಗುವದಲ್ಲದೆ ಮೂರು ಲೋಕದ ಆಳಾಗುವಿ, ಆದರೂ ದುಃಖ ತಪ್ಪುವದಿಲ್ಲ.

ಯಮದೂತರು ಎಷ್ಟೇ ಕಷ್ಟಕೊಟ್ಟರೂ ನಾಚದೆ ಹೆಂಡಿರು ಮಕ್ಕಳನ್ನು ಉಡಾ ಹಿಡಿದಂತೆ ಹಿಡಿದುಕೊಂಡಿರುತ್ತೇವೆ. ಇವುಗಳಲ್ಲಿಯ ರಾಗ ದ್ವೇಷಗಳು ನಮ್ಮನ್ನು ಹಿಡಿದು, ಮಾಡಬಾರದ ಕೆಲಸವನ್ನು ಮಾಡಲಿಕ್ಕೆ ಹಚ್ಚಿ ಹುಟ್ಟುಟ್ಟಿ ಸಾಯಲು ಹಚ್ಚಿರುವವು.

ಲೌಕಿಕ ವಿದ್ಯೆಯನ್ನು ಕಲಿತರೆ, ದುಡ್ಡು ಗಳಿಸಿದರೆ, ಮಕ್ಕಳು ಮರಿ ಹಡೆದರೆ ದುಃಖವು ಹೋಗುವದಿಲ್ಲ. ತನ್ನ ಸ್ವರೂಪ ತಿಳಿದಾಗ ಮಾತ್ರ ದುಃಖವು ಹೋಗುವದು.

ಸುಮ್ಮನೆ ದುಡಿದು ದುಡಿದು ಸಾಯುತ್ತಾರೆ. ಹೊರಗೆ ಸುಖವನ್ನು ಹುಡುಕುತ್ತಾರಲ್ಲದೆ, ಅದು ತಮ್ಮಲ್ಲಿಯೇ ಇದೆ ಎಂಬುದನ್ನು ವಿಚಾರ ಮಾಡದೆ ಭವಸಾಗರದಲ್ಲಿ ಬಿದ್ದು ಹುಟ್ಟು ಸಾವುಗಳ ಗೋಳಾಟಕ್ಕೆ ಗುರಿಯಾಗುವರು. ಜಗತ್ತಿಗೆ ಸುಖವೆಂದು ಬಗೆದು, ಅದರ ಬೆನ್ನು ಹತ್ತಿ ಓಡಿದರೆ ಸುಖವು ಸಿಗಬಹುದೇ? ಇದು ಬಿಸಿಲುಗುದರೆಯನ್ನು ಕಂಡು ನೀರೆಂದು ಬೆನ್ನುಹತ್ತಿ ಓಡಿದಂತಿದೆ.

ಅಜ್ಞಾನಿಗೆ ಅಧ್ಯಾತ್ಮ ಸಾಧಿಸಿ ಮುಂದಕ್ಕೆ ನಡೆ ಎಂದರೆ, "ನನ್ನ ಬಾಳ್ವೆಯು ಕೆಡುವದು, ಮಂದಿ ಎದುರಿಗೆ ನಕಲಿ ಆಗುವದು. ಎಲ್ಲರೂ ಇದ್ದಂತೆ ಇದ್ದರೆ ಯಾರೇನು ಮಾಡುವರು? ಅವರಿಗೆ ಆದದ್ದು ನಮಗೂ ಆಗುವದು" ಎನ್ನುವರು.

ಮನುಷ್ಯ ಜನ್ಮಕ್ಕೆ ಬಂದು ತನ್ನಿರವು ತಿಳಿಯದಿದ್ದರೆ ಅವನು ದಡ್ಡನು. ತಾನಾದರೂ ಕೇಳಲಿಲ್ಲ, ಮಂದಿ ಹೇಳಿದರೂ ಕೇಳಲಿಲ್ಲ, ಕೇಳಿದರೂ ವಿಚಾರ ಮಾಡಲಿಲ್ಲ ಪಾಪ.

ಲೌಕಿಕರ ಬೆನ್ನು ಹತ್ತಬೇಡ, ಅವರೊಡನೆ ಇದ್ದು ಅದ್ವೈತ ತಿಳಿವಳಿಕೆಯಿಲ್ಲದೆ ಮತಾಂಧನಾಗಿ ದೇಹದ ಸಂಪತ್ತೇ ಮಿಗಿಲೆಂದು ಹೊಲ ಹಿಡಿಯುವದನ್ನೂ ಮನೆ ಕಟ್ಟಿಸುವದನ್ನೂ ಮಾಡುತ್ತ, ಮನುಷ್ಯ ಜನ್ಮವನ್ನು ಹಾಳುಮಾಡಿಕೊಳ್ಳಬಾರದು.

ಅಧ್ಯಾತ್ಮ ಶ್ರವಣ ಮಾಡಿಕೊಳ್ಳಬೇಕು. ನಮ್ಮ ಪಾಪವು ಶ್ರವಣಕ್ಕೆ ಹೋಗಗೊಡುವದಿಲ್ಲ. ಹೋದರೂ ತಿಳಿಯಗೊಡುವದಿಲ್ಲ. ತಿಳಿದರೂ ನಡೆಯಗೊಡುವದಿಲ್ಲ. ಹರೆಯದಲ್ಲಿ ಮೈ ಕೈ ಗಟ್ಟಿ ಇದ್ದಾಗ ತಿಳಿದುಕೊಳ್ಳಿರಿ, ಮುಪ್ಪಿನಲ್ಲಿ ತಿಳಿದುಕೊಳ್ಳುವದಕ್ಕೆ ಬರುವದಿಲ್ಲ.

ಜೀವನ್ಮುಕ್ತನೆಂದರೆ ಪರಮಾತ್ಮನೇ. ಅವನ ಸೇವೆ ಮಾಡಿ ಗತಿ ಹೊಂದಬೇಕು.

ಜಗತ್ತು, ದೇಹ, ಗಂಡ–ಹೆಂಡಿರು, ಮಕ್ಕಳು ಎಲ್ಲಿಯವರೆಗೆ ಇರುವರು? ಇವರು ಏನು ಮಾಡುವರು? ತನ್ನ ಸಂಗಡ ಬರುವವರಾರು? ಯಾರೂ ಇಲ್ಲ. ಹೀಗೆ ವಿಚಾರಿಸಿ ಇವುಗಳನ್ನು ಹಿಂದಕ್ಕೆ ಸರಿಸಬೇಕು. ಅಂದರೆ ಮಾತ್ರ ದುಃಖವು ತಪ್ಪುವದು.





ವಿಷಯ ಸುಖವು ಎಷ್ಟು ಹೊತ್ತಿರುವದು? ಕೂಡಲೇ ನಾಶವಾಗುವದು. ಈ ಶರೀರವೇ ನಾಶವಾಗುವದೆಂದ ಮೇಲೆ ಯಾವದು ಖರೆ.

ಜಠರಾಗ್ನಿಯನ್ನು ಸಂತೈಸುವ ಸಲುವಾಗಿ ದುಡಿಯಬೇಕು. ಬರೇ ಹೊಟ್ಟೆಗಾದರೆ ತೊಪ್ಪಲು ತಿಂದು ಇರಬಹುದು. ಇಂದ್ರಿಯ ಸುಖದ ಸಲುವಾಗಿ ದುಡಿದು ದುಃಖಕ್ಕೆ ಗುರಿಯಾಗುತ್ತಾರೆ. ಮುಂದೆ ಇದಕ್ಕಿಂತ ಹೆಚ್ಚು ಸುಖ ಸಿಗಬಹುದೆಂದು ಮತ್ತೆ ಮತ್ತೆ ದುಡಿಯುತ್ತಾರೆ. ಇಂದ್ರಿಯ ಭೋಗಗಳಲ್ಲಿ ಏನೂ ಸುಖವಿಲ್ಲ. ಇಂದ್ರಿಯಗಳ ಭೋಗದಲ್ಲಿ ಸುಖವಿತ್ತು, ಆದರೆ ಮರಣ ಬಂದಿತು, ಏನು ಮಾಡುವದೆಂದು ತಿಳಿದಕೂಡಲೆ, ಇದೇ ವಾಸನೆಯು ಉಳಿಯುವದು, ಇದೇ ಬೀಜವಾಗುವದು. ಇದೇ ದಿನ ಕಳೆದಂತೆ ಗಟ್ಟಿ ಬೀಜವಾಗುತ್ತದೆ.

ವಿಷಯ ಸುಖವು ದೇಹವನ್ನು ಕೆಡಿಸುತ್ತದೆ. ನಿದ್ರೆಯ ಸುಖವು ದೇಹವನ್ನು ಕೆಡಿಸುವದಿಲ್ಲ. ನಿದ್ರೆಯಲ್ಲಿ ವಿಷಯಗಳಿಲ್ಲ, ಸುಖವೊಂದೇ ಇರುವದು.

ಅಯ್ಯೋ ನನ್ನ ಹೆಂಡತಿ ಸತ್ತಳಲ್ಲೋ, ನಾನೊಬ್ಬನೇ ಮನೆಯಲ್ಲಿ ಹೇಗಿರಲ್ಯೋ, ನನ್ನ ಮನೆಯು ಮುರಿದು ಮೂರಾಬಟ್ಟೆ ಆಯಿತಲ್ಲೋ, ಎಂದು ಅಳುವವನಿಗೆ ಬಹಳ ದುಃಖವಾಗುವದು. ಇದೇ ವ್ಯಸನದಿಂದ ಆತ್ಮಹತ್ಯೆಯನ್ನು ಮಾಡಿಕೊಳ್ಳುವರು.

ಸ್ತ್ರೀಯಲ್ಲಿ ಸುಖವಿದೆಯೆಂದು ಮನಸ್ಸು ಹೊಯ್ದಾಡಿದರೆ ವ್ಯಭಿಚಾರವಾಗುವದು.

ಈ ಲೋಕದ ಸುಖವಾಗಲಿ, ಪರಲೋಕದ ಸುಖವಾಗಲಿ ಸಕಾಮದಿಂದ ದೊರೆತರೆ ಅದರಿಂದ ನಿಮಗೆ ದುಃಖವೇ ಇರುವದು. ಅವುಗಳ ಸುಖವು ತೋರಿ ಹೋಗುವದು, ಜನನ ಮರಣ ಭಯವಂತೂ ಹೆಚ್ಚುವದು.

ಜೀವನು ತಿರುಗಲಿಕ್ಕೆ ಕರ್ಮವೇ ಕಾರಣವು. ಕರ್ಮವನ್ನು ಮಾಡುತ್ತ ಹೋದಂತೆ ದುಃಖವೇ ಹೆಚ್ಚಾಗುವದು. ಆದ್ದರಿಂದ ಕರ್ಮವನ್ನು ತ್ಯಜಿಸಿ ಸ್ವರೂಪದ ವಿಚಾರ ಮಾಡಿದರೆ ಕರ್ಮದಿಂದ ಬಿಡುಗಡೆಯಾಗುವದು.

ಹೆಂಡಿರು ಮಕ್ಕಳು, ಎಲ್ಲ ವಿಷಯಗಳ ವಾಸನೆ ಬಿಟ್ಟ ಹೊರತು ಬಂಧನವು ಬಿಡುವದಿಲ್ಲ.

ಸ್ವರಾಜ್ಯಕ್ಕೆ ಬಡಿದಾಡುತ್ತಾರೆ. ತಮ್ಮ ಸ್ವರಾಜ್ಯವನ್ನು ನೋಡಲೊಲ್ಲರು. ವೇದಗಳ ಗೂಢಾರ್ಥ ತಿಳಿಯದೆ ತಮ್ಮ ಮನಸ್ಸಿಗೆ ಬಂದಂತೆ ವಿಪರೀತ ಅರ್ಥ ಮಾಡಿಕೊಂಡಿದ್ದಾರೆ. ನೀನು ಒಬ್ಬನೇ ಇದ್ದೀ. ಎಲ್ಲದರಲ್ಲಿ ನೀನೇ ತುಂಬಿದ್ದೀ. ನಾನಾಗಿ ನೀನಾಗಿ ಎಲ್ಲವೂ ಒಂದೇ ಆಗಿರುತ್ತದೆ, ಎಷ್ಟು ಬರೆದರೂ ಇಷ್ಟೇ ತಿಳಿಯುವದಕ್ಕೆ ಹೊರತು, ಬೇರೆ ಇಲ್ಲ. ಇದನ್ನು ತಿಳಿಯದೆ ಎಲ್ಲರೂ ಅಭಿಮಾನಿಸಿಕೊಂಡು, ಹೆಚ್ಚು ಕಡಿಮೆ ತಿಳಿದುಕೊಂಡು, ಭ್ರಮೆಗೊಂಡು ರಂಜನಾದ ಬಣ್ಣಕ್ಕೆ ಮೋಹಿಸಿ ಭ್ರಾಂತಿಗೊಂಡು ಕೆಟ್ಟು ಹೋಗುತ್ತಾರೆ.

ಮುಗ್ಗಲಗೆ ವೇದಾಂತವನ್ನು ಹೇಳಿದರೆ ಗುದೇಂದ್ರಿಯ ತೊಳೆಯುವದನ್ನೇ ಬಿಟ್ಟಿತಂತೆ. ದುಡಿಯುವದನ್ನು ಬಿಟ್ಟು ಸಾಲ ಮಾಡಿಕೊಂಡು, ಹೊಲ ಮನೆ ಕಳೆದುಕೊಂಡು ಹಾಳಾಗುವರು. ಗಾಂಜಿ, ಶೆರೆ, ರಂಡಬಾಜಿ ಮುಂತಾದ ದುರ್ನಡತೆಗೆ ಬೀಳುವರು.

ವಿರಕ್ತಿ ಇಲ್ಲದೆ ಗಂಡ ಹೆಂಡಿರ ಮುಖ ನೋಡುತ್ತ ಕುಳಿತವರಿಗೆ ಅಧ್ಯಾತ್ಮವು ತಿಳಿಯುವದಿಲ್ಲ.

ಅನೇಕ ಧರ್ಮ, ಆಶ್ರಮ, ವರ್ಣ, ಜಾತಿ ಹಿಡಿದುಕೊಂಡು ಕುರಿಗಳಂತೆ ಒಂದರ ಬೆನ್ನು ಒಂದು ಹತ್ತಿ, ಎಲ್ಲವೂ ಹೋಗಿ ಎರಡನೆಯವರ ಹೊಲ ಮೆಯ್ದು ಸಿಕ್ಕು ಕೊಂಡವಾಡಕ್ಕೆ ಬಿದ್ದಂತೆ, ಮುಂದೆ ಯಮನ ಕೈಯಲ್ಲಿ ಸಿಗುವರು. ತಿರುಗಿ ಇಹ ಪರಕ್ಕೆ ತಿರುಗಾಡಿ ಭವಚಕ್ರದಲ್ಲಿ ಬಿದ್ದು ನರಕದಲ್ಲಿ ಗೋಳಾಡುವರು.

ವೇದಾಂತವೆಂದರೆ ಹೇಡಿಗಳ ಶಾಸ್ತ್ರವಲ್ಲ, ಹೊಲ ಮನೆ ಹೋಯಿತು, ಹೆಂಡಿರು ಮಕ್ಕಳು ಸತ್ತರು, ಹೇಗೆ ಮಾಡಲಿ ಎಂದರೆ ಸುಖವಾಗುವದಿಲ್ಲ. ಹೆಂಡತಿ ಓಡಿ ಹೋದರೂ, ಮಕ್ಕಳು ದುಡಿದು ಹಾಕದಿದ್ದರೂ ಹೆದರದೆ (ಚಿಂತಿಸದೆ) ಇದ್ದರೆ ಇದೇ ಮನೋನಿಗ್ರಹವು.

ಕೂಡಿದ್ದು ಅಗಲುವದೆಂದು ಅಂಜಬುರಕರು ಅಳುವರು. ಬಲ್ಲವರು "ಬಾಡಿಗೆಯ ಮನೆಯನ್ನು ಬಿಡಲಿಕ್ಕೆ ಅಳಬೇಕೇ?" ಎನ್ನುವರು.

ಹುಚ್ಚು ಹಿಡಿದವನು 'ತನಗೆ ಹುಚ್ಚು ಹಿಡಿದಿದೆ' ಎನ್ನುವದಿಲ್ಲ. ತಾನು ಹೇಳುವದೇ ಸರಿ ಎನ್ನುವನು. 'ನನಗೆ ಭ್ರಮೆಯಾಗಿದೆಯೇ?, ನಾನು ಹೊಲಸು ತಿನ್ನುತ್ತೇನೇನು?' ಎನ್ನುವನು.

ಎಣ್ಣೆ, ಖಾರ, ಹಸಿ ಮೆಣಸಿನಕಾಯಿ, ಉಳ್ಳೇಗಡ್ಡಿ ಇವುಗಳನ್ನು ತಿಂದು, ಬುದ್ಧಿಯನ್ನು ಕೆಡಿಸಿಕೊಂಡು ಮದಾಂಧತೆಯಿಂದ ಅಮಲೇರಿಸಿಕೊಂಡು, ಕೋಣನಂತೆ ಸೊಕ್ಕಿಕೊಂಡು, ದ್ಯಾಮವ್ವನ ಜಾತ್ರೆಯಲ್ಲಿ ಕಡಿಸಿಕೊಳ್ಳುವಂತೆ, ನಾವೂ ಯಮನಿಂದ ಕಡಿಸಿಕೊಳ್ಳುತ್ತೇವೆ. ಆದ್ದರಿಂದ ಸಾತ್ವಿಕ ಆಹಾರವನ್ನು ಮಿತಿಯಿಂದ ಸೇವಿಸಿ ಬುದ್ಧಿಯನ್ನು ಸುಧಾರಿಸಿಕೊಂಡು ವಿಚಾರಿಯಾಗಬೇಕು.

ಜೀವ ಜಗತ್ತು ಸತ್ಯವೆಂದು ತಿಳಿದಿರುವರು. ಏನಾದರೊಂದು ಯುಕ್ತಿ ಹೂಡಿ ಜೀವವನ್ನು ಉಳಿಸಿಕೊಳ್ಳುವ ಪ್ರಯತ್ನದಲ್ಲಿಯೇ ತೊಡಗುವರು. ಅದರ ರಕ್ಷಣೆಗಾಗಿ ಹೊಲ, ಮನೆ, ಹೆಂಡತಿ ಇವುಗಳನ್ನು ಸಂಪಾದಿಸುವರು, ಒಬ್ಬರಿಗೆ ಆಳಾಗಿ ದುಡಿಯುವರು. ಎಲ್ಲರ ಜೀವಕ್ಕಿಂತ ತಮ್ಮ ಜೀವವೇ ಹೆಚ್ಚಿನದೆಂದು ತಿಳಿದು, ತಾವು ಉಳಿಯುವ ಪ್ರಸಂಗವಿದ್ದರೆ ಉಳಿದವರನ್ನೆಲ್ಲ ಬಲಿಕೊಡುವರು.

"ಸುಮ್ಮನೆ ದುಡಿದು ಸುಮ್ಮನೆ ಉಣ್ಣು, ನಿನಗೇನು ಗುರುತಾಗುವದು?" ಎಂದು ಎಲ್ಲರ ತಂದೆ-ತಾಯಿಗಳು ಇದನ್ನೇ ಕಲಿಸುವರು. "ನೋಡು ಮಂದಿ ಹೇಗೆ ದುಡಿಯುತ್ತಾರೆ, ಶಾಲೆಯನ್ನು ಕಲಿ, ದೊಡ್ಡ ದೊಡ್ಡ ಕೆಲಸ ಮಾಡು, ದುಡಿದು ಹಾಕು" ಎನ್ನುವರು. ಆದಷ್ಟು ಪ್ರಯತ್ನ ಮಾಡಿ ಅವರು ಮಕ್ಕಳನ್ನು ಹೆಣ್ಣು ಹೊನ್ನು ಮಣ್ಣುಗಳ ಮೋಹಕ್ಕೆ ಹಚ್ಚುತ್ತಾರೆ. ಮೇಲಾದ ವಿಚಾರವಂತನು ಇದರ ವಿಚಾರ ಮಾಡಿ ತಾನಾರೆಂದು ತಿಳಿದುಕೊಳ್ಳಲು ಬ್ರಹ್ಮನಿಷ್ಠ ಗುರುಗಳ ಸನ್ನಿಧಿಗೆ ನುಸುಳುವನು.

ಪಾರಮಾರ್ಥವನ್ನು ವಿಚಾರಿಸಿ ತಿಳಿಯಲಿಕ್ಕೆ ಹೋದರೆ ಪಾಪಿಗಳಾದ ಜನರು ಹಾಸ್ಯಾಸ್ಪದ ಮಾಡಿ ಬಿಡಿಸುವರು. "ಮಾಡಿದರೆ ಬಾಳ್ವೆಯಾಗುತ್ತದೆ, ವೇದಾಂತ ಕೇಳಿದರೆ





ಸನ್ಯಾಸಿಯಾಗಿ, ಸನ್ಯಾಸಿಗಳ ಕೂಡ ಆಡಿ, ಲಂಗೋಟಿ ಹಾಕಿಕೊಂಡು ಹೋಗುವಿರಿ" ಎಂದು ಛೀ ಮಾಡಿ ಕೇಳುವದನ್ನು ಬಿಡಿಸುವರು. ಇಂಥವರ ಮಾತನ್ನು ಕೇಳಿದರೆ ಭವದುಃಖದಲ್ಲಿ ಬಿದ್ದು ಒದ್ದಾಡುತ್ತ ಇಹದಲ್ಲಿ ಸಂಕಟವಾಗಿ, ಪರದಲ್ಲಿ ಯಮನ ಶಿಕ್ಷೆಗೆ ಗುರಿಯಾಗಿ ತೊಳಲುತ್ತೇವೆ.

ಪಾಪ-ಪುಣ್ಯ ವಿಚಾರ ಮಾಡಿಯೇ ಪ್ರತಿಯೊಂದು ಕೆಲಸವನ್ನು ಮಾಡಬೇಕು. ಪ್ರಾಪಂಚಿಕರು ತುದಿ ವಿಚಾರ ಮಾಡುವರು, ಜ್ಞಾನಿಗಳು ಮೂಲವನ್ನು ವಿಚಾರ ಮಾಡುವರು.

ಡಾಕ್ಟರರು ಉಳಿದವರ ದುಃಖವನ್ನು ಕಳೆಯುತ್ತೇವೆಂದರೆ ಅವರಿಗೆ ತಮ್ಮ ದುಃಖವನ್ನೇ ಕಳೆದುಕೊಳ್ಳುವದು ಗುರುತಿಲ್ಲ, ಅಂದಮೇಲೆ ಅವರು ಎರಡನೆಯವರ ದುಃಖವನ್ನು ಹೇಗೆ ಕಳೆಯುತ್ತಾರೆ! ಡಾಕ್ಟರನ ಹೆಂಡತಿ ಏನೋ ಹಾಯ್ದು ಸತ್ತಳಂತೆ, ಹೀಗಿದೆ.

ಎತ್ತ ಹೋದರೂ ಕೈಯಲ್ಲಿ ತಂಬಿಗಿರಬೇಕು, ಊರಲ್ಲಿ ನಂಬಿಗಿರಬೇಕು.

ಪ್ರಪಂಚದ ಆಶೆಯಿಂದ ಕುದಿದು ಹೊತ್ತುಗಳೆದು, ಹದ್ದು ಬಾಳಿದಂತೆ ಬಾಳಿ ಸತ್ತು ಹೋಗಬೇಡ.

ಜಾಣನಾದ ಮನುಷ್ಯನು ಮೊದಲು ಆತ್ಮಜ್ಞಾನವನ್ನು ಸಂಪಾದಿಸಿ ಆಮೇಲೆ ಪ್ರಾರಬ್ಧವಶನಾಗಿ ಪ್ರಪಂಚ ನಡೆಸುತ್ತಾನೆ.

ಕರ್ಮದ ವಿಧಿಗಳನ್ನು ಆಚರಿಸುವದೂ, ಒಡಕು ಹಂಚು ಆರಿಸಿಕೊಳ್ಳುವದೂ ಒಂದೇ.

ಗುಬ್ಬಿಯು ಚಿಂವ್ ಚಿಂವ್ ಎನ್ನುವಂತೆ ಚಿಂವ್‌ಗುಟ್ಟಿದರೆ ಗತಿಯಾಗುತ್ತದೆಯೇ? ಶಿವ ಶಿವ ಹರ ಹರ ಮಹಾದೇವ ಎಂದರೆ ಗುಬ್ಬಿಗೂ ಗತಿಯಾಗಬೇಕಾದೀತು.

ಕಲ್ಲು ದೇವರಿಗೆ ಮಡಿಯಿಂದ ಹೋಗಿ, ನೈವೇದ್ಯ ತೋರಿಸಿ, ಕಾಯಿ ಒಡೆದು, ಕಾಯಿಯ ಹೋಳಿಕೆ ಮತ್ತು ನೈವೇದ್ಯವನ್ನು ಮನೆಗೆ ತರುವರು. ಇದು ಭಕ್ತಿಯಲ್ಲ.

ಉಣ್ಣುವ ಜೀವಿಗಳಿಗೆ (ದೇವರಿಗೆ) ಮಾತ್ರ ನೈವೇದ್ಯ ಕೊಡುವದಿಲ್ಲ. ಕಲ್ಲುದೇವರಿಗೆ ಮಾತ್ರ ಕೊಡುವರು ಏಕೆಂದರೆ ತಮಗೆ ತಿರುಗಿ ಬರುವದೆಂದು ತಿಳಿದುಕೊಂಡಿರುವರು. ಕಲ್ಲುಕಟ್ಟಿಗೆಯ ಪೂಜೆ ಮಾಡುತ್ತ ಕುಳಿತರೆ, ಕಲ್ಲು ಕಟ್ಟಿಗೆಗಳಿಗೆ ಅರುವಿಲ್ಲದ್ದರಿಂದ ಅವುಗಳ ಪೂಜೆಯ ಫಲವು ಬರುವದಿಲ್ಲ. ಮೂರ್ತಿಯ ಕಡೆಗೆ ಬರೇ ಕೈಯನ್ನು, ತನ್ನ ಕಡೆಗೆ ನೈವೇದ್ಯವನ್ನು ಮಾಡಿಕೊಂಡರೆ ಫಲವಿಲ್ಲ. ಕಲ್ಲು ಕಟ್ಟಿಗೆಯ ಮೂರ್ತಿಗಳಿಗೆ ಏನಾದರೂ ಮಾಡುತ್ತ ಕುಳಿತರೆ ಫಲವಿಲ್ಲ. ಇಂಥವರಿಗೆ ವಿಚಾರವು ಹುಟ್ಟುವದಿಲ್ಲ.

ಕಚ್ಚಾ ಮಡಿ, ಪಕ್ಕಾ ಮಡಿ, ಮೈಲಿಗೆ ಎಂಬುವವೆಲ್ಲ ಸುಳ್ಳೇ, ಇವೆಲ್ಲ ಜನರೊಳಗೆ ಆಡಂಬರ ಕ್ರಿಯೆಗಳು.

ಚರ್ಮವನ್ನು ತೊಳೆದರೆ ಕರ್ಮವು ಹರಿಯುವದೇ? ಸಾಧ್ಯವಿಲ್ಲ. ಮನಸ್ಸಿನಲ್ಲಿ ಮನೆ ಮಾಡಿಕೊಂಡಿರುವ ಪಾಪವು ಹೊರಗೆ ಮೈ ತೊಳೆದರೆ ಹೋಗುವದೇ? ಹಾಗಾದರೆ ಮೀನು, ಕಪ್ಪೆ, ಏಡಿ ನೀರಿನಲ್ಲಿಯೇ ಇವೆ, ಅವುಗಳ ಪಾಪವೂ ಹೋಗಬೇಕಾದೀತು. ಮೈ ಕೊಳೆ ಹೋಗಲೆಂದು ಜಳಕ, ಸಂದುಗಳಲ್ಲಿಯ ತಂಪು ಆರಲೆಂದು ಭಸ್ಮ ಹಚ್ಚುವದು. ಶ್ರವಣ, ಮನನ, ನಿದಿಧ್ಯಾಸನಗಳಿಂದ ಮನಸ್ಸಿನಲ್ಲಿಯ ಹೀನ ವಾಸನೆಗಳು ನಾಶವಾಗುತ್ತವೆ.

ಆತ್ಮ ವಿಚಾರಕ್ಕಾಗಿ ಪಾದವನ್ನು ನಡೆಯಲಿಕ್ಕೆ ಹಚ್ಚಬೇಕು. ಕ್ಷೇತ್ರ ಯಾತ್ರೆಗೆ ಎಂದೂ ಹೋಗಬಾರದು. ಕೋಟಿ ತೀರ್ಥಗಳಲ್ಲಿ ಸ್ನಾನ ಮಾಡಿದರೂ ವ್ಯರ್ಥವೇ. ಬ್ರಹ್ಮಬೋಧೆ ನಡೆದಲ್ಲಿ ತನ್ನ ಪಾದದಿಂದ ನಡೆದು ಹೋದದ್ದರ ಫಲ ಕೋಟಿ ಯಜ್ಞದ ಫಲಕ್ಕೂ ಮಿಗಿಲಾದುದು. ಕಾಶಿ ರಾಮೇಶ್ವರಕ್ಕೆ ಹೋದರೂ ಅಲ್ಲ. ಯಾವ ಪುಣ್ಯವೂ ಅಲ್ಲ. ಸಾಧು ಸಂತರಿಗೆ ಅನ್ನ ಕೊಡುವದು, ಸತ್ಯದಿಂದ ನಡೆಯುವದು, ಬ್ರಹ್ಮ ವಿಚಾರದಲ್ಲಿ ಇರುವದು, ಇದೇ ಕೆಲಸ. ಮೈ ಕೈ ದೇಹ, ಅರಿವೆ ಅಂಚಡಿ ತಿದ್ದಿ ತೀಡಿಕೊಳ್ಳುತ್ತ ಇದ್ದರೆ ಬ್ರಹ್ಮ ತಿಳಿಯುವದೇ? ವಿಷಯ ಹಿಡಿದರೆ ದುಃಖ, ಹೇಸಿಗೆಯನ್ನು ಕೈಯಲ್ಲಿ ಹಿಡಿದು ನಾರಬೇಡವೆಂದರೆ ಕೇಳುವದೇ?

ಪ್ರತ್ಯಕ್ಷ ಐದು ಮುಖ ತೋರಿಸಿದರೂ ದೇವನೆಂಬುವದು ಸುಳ್ಳು, ಪಿಶಾಚಿ ಇದ್ದಂತೆಂದು ತಿಳಿಯಬೇಕು. ಬೇಡಿದ್ದನ್ನು ಕೊಡುತ್ತೇನೆಂದರೂ ನೀವೇ ಮೊದಲಿಲ್ಲ, ಬೇಡಿದ್ದೇನು ಕೊಡುತ್ತೀ, ಎನ್ನಬೇಕು.

ಕೆಲವರು ಪರಮಾತ್ಮನಿಗೆ ಪಂಚಮುಖಿ ಪಾರ್ವತಿಸಹಿತನೆಂದು ಹೇಳುವರು. ಇದೆಲ್ಲವೂ ಜೀವನ ಕಲ್ಪನೆಯು. ಬೆರಕಿ ಬುದ್ಧಿಯವರು ಏನಾದರೊಂದು ಕಲ್ಪನಾದಿಂದ ಏನೋ ರಚನಾ ಮಾಡಿ ಬರೆದಿರುವರು. ಇದೇ ಹಂಚಿಕೆಯಿಂದ ಕಾಶಿ, ರಾಮೇಶ್ವರ ಮೊದಲಾದ ಕಡೆಗಳಲ್ಲಿ ದೇವಸ್ಥಾನ ಮಾಡಿ, ಅಲ್ಲಿ ಮೂರ್ತಿಯನ್ನು ಇಟ್ಟು, ಬಾಗಿಲಪಟ್ಟಿ, ಕಾಯಿ ಒಡೆಯಲಿಕ್ಕೆ ಪಟ್ಟಿ, ಕರ್ಪೂರ ಹಚ್ಚಿದರೆ, ಕುಂಡಲದಲ್ಲಿ ಜಳಕ ಮಾಡಿದರೆ, ಅಭಿಷೇಕ ಮಾಡಿದರೆ ಹೀಗೆ ಬೇರೆ ಬೇರೆ ಲೆಕ್ಕ ವಸೂಲ ಮಾಡಿ ಕಂತ್ರಾಟ ಹೂಡಿ ರೊಕ್ಕ ಎತ್ತುವ ಹಂಚಿಕೆಯೊಳಗೆ ಇರುವರು ಮತ್ತು ಮೂರ್ತಿ ಸ್ಥಾಪನಾ ಮಾಡಿ ಪುರಾಣ ಬರೆದಿರುವರು. ಮೂರ್ತಿಯು ಭಾವವಿಲ್ಲದಂಥ ವಸ್ತು, ದೇವಿಯ ಕಲ್ಪನೆ ಮಾಡಿ ದೇವಿ ಪುರಾಣ ಬರೆದಿರುವರು.

ಸರದಾಡುವದು ಉರುಳಾಡುವದು ಆತ್ಮನಲ್ಲಿ ಇಲ್ಲದ ಗುಣ. ಆದರೂ ದೇವರು ಬಂದನು, ಅತ್ತ ಹೋದನು, ಸೌಂದರನಲ್ಲಿ ಊಟಕ್ಕೆ ಬರುತ್ತಿದ್ದನು, ಶಿರಿಯಾಳನಲ್ಲಿ ಯಾಚನೆ ಗೈದನು ಎಂದು ಕಲ್ಪಿಸಿ ಹೇಳುವದು ತಪ್ಪು. ಇದನ್ನು ನಂಬಿಕೊಂಡು ಕುಳಿತುಕೊಳ್ಳಬಾರದು.

ಕೈಲಾಸಕ್ಕೆ ಹೋಗಿ ಪರಮಾತ್ಮನನ್ನು ನೋಡಬೇಕೆನ್ನುವ ಹಾಗಿಲ್ಲ. ನೀನೇ ಪರಮಾತ್ಮನಿದ್ದೀ, ಶೃತಿ ಮುಖದಿಂದ ತಿಳಿದುಕೊಂಡು ಮುಕ್ತನಾಗೆಂದು ವೇದಾಂತವು ಹೇಳುವದು. ಆದ್ದರಿಂದ ವೇದಾಂತವು ಗಂಡುಶಾಸ್ತ್ರವು. ಜಪ ತಪ ಮಾಡಿದರೂ,





ಎಂಥ ವಿದ್ಯೆಯನ್ನು ಕಲಿತರೂ, ಇಲ್ಲಿಂದ ಕೈಲಾಸಕ್ಕೆ ಹೋಗುತ್ತೇನೆಂದರೂ ಸುಳ್ಳು, ಶರೀರವೇ ಸುಳ್ಳೆಂದ ಮೇಲೆ ಕೈಲಾಸಕ್ಕೆ ಹೇಗೆ ಹೋಗುತ್ತಾನೆ? ಕೈಲಾಸವೂ ಇಲ್ಲ, ತಾನೂ ಇಲ್ಲ. "ತನ್ನ ಬಿಟ್ಟು ದೇವರಿಲ್ಲ, ಮಣ್ಣು ಬಿಟ್ಟು ಮಡಿಕೆ ಇಲ್ಲ" ಅಂದಮೇಲೆ ಕಲ್ಪಿತ ಅನ್ಯ ದೇವರಿಗೆ ಏಕೆ ನಡೆದುಕೊಳ್ಳಬೇಕು. ಸುಮ್ಮನೆ ತಾನೊಬ್ಬ ದೇವರೊಬ್ಬ ಎಂದರೆ ದ್ವೈತವಾಯಿತು. ಎಲ್ಲಮ್ಮ, ದ್ಯಾಮಮ್ಮ, ಹನುಮಪ್ಪ, ವೀರಭದ್ರಪ್ಪ, ಬಸವಣ್ಣ ಎಂದು ದ್ವೈತ ತಿಳಿದುಕೊಂಡರೆ ಎಂದಿಗೆ ಗತಿಯಾಗುವದು. ತಾನೇ ದೇವರಿದ್ದು ಅನ್ಯ ದೇವರೆಂದು ತಿಳಿದುಕೊಂಡು ದುಃಖಪಡುತ್ತಾನೆ. ತಾನು ದೇವರಲ್ಲ ಎಂದು ತಿಳಿದುಕೊಂಡವನು ಖಂಡಿತನು, ಪಂಡಿತನಲ್ಲ. ಯಾವಾಗಲೂ ಅರುವೇ ತಾನೆಂದು ತಿಳಿದುಕೊಂಡವನು ಉತ್ತಮನು, ಅನ್ಯ ತಿಳಿದವನು ಅಜ್ಞಾನಿಯು. ಇವನು ಅನ್ಯದೇವರು, ಗುರು, ವೇದ, ಮೂರು ಲೋಕಗಳು ಇರುವವು ಎನ್ನುವನು.

ದೇವರು ತನ್ನಿಂದ ಬೇರೆ ಇದ್ದಾನೆಂದು ತಿಳಿದರೆ ಭವ ದುಃಖದಲ್ಲಿ ಬಳಲುವದು ತಪ್ಪುವದಿಲ್ಲ. ಯಾವನು ಅನ್ಯದೇವರನ್ನು ಪೂಜಿಸುವನೋ ಅವನು ಭವಕ್ಕೆ ಬರುವನೆಂದು ಶೃತಿ ಭಗವತಿಯು ಸಾರಿ ಸಾರಿ ಹೇಳುತ್ತಿರುವದು. ಕೆಲವರು ಮೂರ್ತಿಧ್ಯಾನ ಉಪಾಸನಾದಿಗಳನ್ನು ಮಾಡುವರು. ಇವು ನಾಶವಾಗುವವು. ಕೆಲವರು ಆಕಾರ ಹಿಡಿದು ಧ್ಯಾನ ಮಾಡುತ್ತಾರೆ. ಇದು ಆತ್ಮವಲ್ಲ. ಅರಿವು ತಾನೆಂದು ತಿಳಿದುಕೊಂಡವನೇ ಜಾಣರ ದೇವನು.

ಸುಮ್ಮನೆ ಶಿಖಾ ಬಿಟ್ಟು ಬ್ರಾಹ್ಮಣನೆಂದರೆ ಚಿಟ್ಟಲ ಗುಬ್ಬಿ ತಾನಲ್ಲವೆ? ಜನಿವಾರ ಹಾಕಿದರೆ ಬ್ರಾಹ್ಮಣನಾಗಬಲ್ಲನೆ? ಕೌದಿಯಲ್ಲಿ ಬರೇ ಎಳೆಗಳು ತೋರುತ್ತವೆ. ಅದಾದರೂ ಆಚಾರ್ಯವಾಗಬಲ್ಲುದೆ? ಲಿಂಗಧರಿಸಿದವರಿಗೆ ಮೋಕ್ಷವಾಗಬೇಕಾದರೆ ಸೋಡಾದ ಬಾಟ್ಲಿಗೂ ಆಗಬೇಕಾದೀತು. ಯಾಕೆಂದರೆ ಅದರಲ್ಲಿ ಲಿಂಗಾಕಾರದ ಗುಂಡು ಯಾವಾಗಲೂ ಇದ್ದೇ ಇರುತ್ತದೆ. ರುದ್ರಾಕ್ಷಿ ಧರಿಸಿದವನಿಗೆ ಸದ್ಗತಿಯಾಗಬೇಕಾದರೆ ಔಡಲಗಿಡಕ್ಕೂ ಆಗಬೇಕಾದೀತು, ಭಸ್ಮಧಾರಿಗೆ ಕೈಲಾಸವಾಗಬೇಕಾದರೆ ಕತ್ತೆಗೂ ಆಗಬೇಕು. ಏಕೆಂದರೆ ಕತ್ತೆಯು ಬಿಸಿ ಬಿಸಿ ಬೂದಿಯಲ್ಲಿ ಉರುಳಾಡುತ್ತದೆ. ಗಂಧದ ಅನುಲೇಪನಗೈದವಗೆ ವೈಕುಂಠವಾಸ ಕಲ್ಪಿಸಿದರೆ ಮೈತುಂಬ ರಾಡಿಯನ್ನು ಬಡಿದುಕೊಂಡ ಎಮ್ಮೆಗೆ ಸಿಗಬೇಕಲ್ಲವೇ ಆ ವಾಸ.

ಒಮ್ಮೆ ರೋಣದ ಮಾಮಲೇದಾರನು ಸ್ವಚ್ಛವಾಗಿ ಜಳಕ ಮಾಡಿಕೊಂಡು, ಬ್ರಾಹ್ಮಣ್ಯತ್ವದ ಕ್ರಿಯೆಗಳನ್ನು ಮುಗಿಸಿಕೊಂಡು, ಮೈಗೆಲ್ಲಾ ಗಂಧವನ್ನು ಬಡಿದುಕೊಂಡು, ಶಿಖೆಯಲ್ಲಿ ಒಂದೆರಡು ಮಲ್ಲಿಗೆಯ ಹೂಗಳನ್ನಿಟ್ಟುಕೊಂಡು ಜನಿವಾರವನ್ನು ತಿದ್ದಿಕೊಳ್ಳುತ್ತ ದಾರಿಯಲ್ಲಿ ಬರುತ್ತಿದ್ದನು. ಆಗ ನವಲಗುಂದ ನಾಗಲಿಂಗ ಸ್ವಾಮಿಗಳು "ಎಲೋ ಮೂರ್ಖಾ, ಮೈಗೆ ಗಂಧವನ್ನು ಎಷ್ಟು ಬಡಿದುಕೊಂಡಿರುವಿಯೊ? ಆ ಸಾಣಿಕಲ್ಲಲ್ಲಿ ತಿಕ್ಕಿ, ಈ ಸಾಣಿಕಲ್ಲಿಗೆ ಬಡಿದರೆ ಮುಕ್ತಿಯಾಗುವದೇ?" ಎಂದರು.

ಅರಿವೆ ಅಂಚಡಿ, ಕ್ಯಾವಿ ಶಾಟಿಯಲ್ಲಿ ಏನೂ ಇಲ್ಲ. ಎಲ್ಲವೂ ತಿಳುವಳಿಕೆ ಯಲ್ಲಿರುತ್ತದೆ. ಕಾಯದೊಳಗೆ ಸನ್ಯಾಸಿ ವೇಷವ, ಬಾಯಲಿ ಬ್ರಹ್ಮವನು, ಮನದಲ್ಲಿ ರಾಯಪಟ್ಟವ ಕಟ್ಟಿಕೊಳ್ಳಬೇಕೆಂಬುದನೇ ತಳೆದು, ಜಾಯೆಯೊಬ್ಬಳನ್ನು ಬಿಟ್ಟೆನೆಂಬೀ

ನ್ಯಾಯದವ ತಾ ವಾದಿಯಲ್ಲದೆ ಮಾಯೆಯಳಿದ ಆತ್ಮಜ್ಞನೆ, ಸನ್ಯಾಸಿಯವನಲ್ಲ. (ಮಹಲಿಂಗ ರಂಗ).

ಜಪ-ತಪ, ಯಜ್ಞ-ಯಾಗಾದಿಗಳಿಂದ ದುಃಖವು ಹೋಗುವದಿಲ್ಲ. ಶರೀರವನ್ನು ಸರಿಯಾಗಿ ತೊಳೆಯದಿದ್ದರೆ ಕೂರಿ ಹೇನು ಬೀಳುತ್ತವೆಂದು ತೊಳೆಯುವರು, ಬರೇ ತೊಳೆಯುತ್ತ ಕುಳಿತು ದಡ್ಡರಾಗುವರು. ಸುಮ್ಮನೆ ಬೆರಳೆನಿಸಿದರೆ, ಶರೀರವನ್ನು ಸ್ವಚ್ಛವಿಟ್ಟರೆ ಮುಕ್ತಿಯಾಗುವದಿಲ್ಲ. ಶರೀರವು ಅನ್ನ ನೀರಿನಿಂದ ಸಪ್ತಧಾತುವಾಗಿ ಬಲಿತು, ಕಡೆಗೆ ಮಣ್ಣು ಮಣ್ಣಿನಲ್ಲಿ ಕೂಡುತ್ತದೆ.

ಸತ್ತವರ ಗೋರಿ, ಗದ್ದುಗೆ ಕಟ್ಟಿಸುವದು ಭ್ರಮೆಯು. ಇದನ್ನು ನೀಗಿ ತಣ್ಣಗಿರಬೇಕು. "ನಾನು" ಅನ್ನುವಂಥ ಅಹಂಕಾರವನ್ನು ಬಿಟ್ಟವನು ಪರಮಾತ್ಮನೇ.

ಅನ್ಯದೇವರ ಜಾತ್ರೆ ಮಾಡುವವರಿಗೆ ಈ ವೇದಾಂತದ ಮಾತು ನಿಲ್ಲುವದಿಲ್ಲ. ಅವರಿಗೆ ನಂಬಿಕೆ ಆಗುವದಿಲ್ಲ. ತಾವೇ ಮಾಡಿದಂಥ ಕಲ್ಲುದೇವರಲ್ಲಿ ನಂಬಿಕೆ ಹೋಗದವರು ವೇದಾಂತವನ್ನು ಹೇಗೆ ತಿಳಿಯುವರು?

'ಬ್ರಾಹ್ಮಣ' ಎಂದರೆ ಈ ಶಬ್ದ ತನುವಿಗೋ ಜೀವನಿಗೋ? ಏನು ಎರಡರ ಮಿಶ್ರಣಕ್ಕೋ? ತನುವಿಗೆಂದರೆ ಎಲ್ಲ ತನುಗಳು ಪಂಚಭೂತಗಳಿಂದ ನಿರ್ಮಾಣವಾಗಿವೆ. ಇರುವೆ ಮೊದಲಾಗಿ ಹಂದಿ ಕಡೆಯಾಗಿ ಸರ್ವ ಜೀವಿಗಳಿಗೂ ಬ್ರಾಹ್ಮಣರೆನ್ನಲು ನಿರ್ಬಂಧವೇನಿದೆ? ಜೀವನಿಗೆ ಅಂದರೆ ಎಲ್ಲರಿಗೂ ಜೀವವಿದೆ. ಎರಡೂ ಕೂಡಿ ಹೇಳುತ್ತೇವೆಂದರೆ ಮರಮಟ್ಟಾದಿಗಳು ಬ್ರಾಹ್ಮಣರಾಗಬೇಕಾದೀತು. ಸುಮ್ಮನೆ ಹೇಸಿಗೆಯ ಗಡಿಗೆಗೆ ಬ್ರಾಹ್ಮಣವೆಂದು ಭಾವಿಸಿರುವರು, ತಾವು ಶ್ರೇಷ್ಠ ಜಾತಿಯವರೆಂದು ಭಾವದಲ್ಲಿ ಬದಲಾಗಿರುವರು.

ದೊಡ್ಡ ಕುಲದವರು 12 ತಿಂಗಳಿಗೆ, ಸಣ್ಣ ಕುಲದವರು 6 ತಿಂಗಳಿಗೆ ಹುಟ್ಟುವದಿಲ್ಲ. ಕಿವಿ ಕಣ್ಣುಗಳಿಂದ ಬ್ರಾಹ್ಮಣರು, ಗುದೇಂದ್ರಿಯದಿಂದ ಶೂದ್ರರೂ ಹುಟ್ಟುವದಿಲ್ಲ, ಎಲ್ಲರೂ ಒಂದೇ ಸ್ಥಾನದಿಂದ ಒಂದೇ ಮಿತಿಗೆ ಬರುತ್ತಾರೆ. ಬ್ರಹ್ಮವನ್ನು ತಿಳಿದವ ಬ್ರಾಹ್ಮಣ, ಜಗದ್ಭರಿತ ವಸ್ತುವನ್ನು ತಿಳಿದವ ಜಂಗಮ. ಹೀಗಿರಲು ಕುರುಡರಾಗಿ ನಾ ಮೇಲು, ನೀ ಕೀಳು ಎಂದು ಹೆಮ್ಮೆಗೆ ಬಿದ್ದು ಬ್ರಹ್ಮನಿಷ್ಠರ ಬಳಿಗೆ ಹೋಗಿ ವಿಚಾರಿಸದೆ ರಕ್ತಪಾತ ಮಾಡಿಕೊಳ್ಳುತ್ತಾರೆ.

ಮನುಷ್ಯ ಕುಲ ಒಂದೇ. ಕೆಲವರು ಹೆಣ್ಣೊಂದು ಕುಲ, ಗಂಡೊಂದು ಕುಲ ಎನ್ನುವರು. ಇದು ತಪ್ಪು, ವಿಚಾರಿಸಿದರೆ ವಿಚಾರದ್ದೊಂದು ಕುಲ, ಅವಿಚಾರದ್ದೊಂದು ಕುಲ, ಹೀಗೆ ಎರಡೇ ಕುಲಗಳಿವೆ. ಆಶಾದ್ದೊಂದು ಜಾತಿ ನಿರಾಶಾದ್ದೊಂದು ಜಾತಿ.

ಹುಟ್ಟಿದ್ದು ಹೊಲೆಯೂರು, ಬೆಳೆಯುವದು ಮಲದೂರು, ಹೋಗುವದು ಕಾಡೂರು ಎಂಬಂತಿದೆ. ಇದಕ್ಕೆ ಯಾವ ಕುಲದವನೆಂದು ಹೇಳಬೇಕು. ಸುಮ್ಮನೆ ಕುಲ, ಜಾತಿ, ವರ್ಣ, ಆಶ್ರಮ ಬೇರೆ ಬೇರೆ ಎಂದು ತಿಳಿದುದೇ ಹುಚ್ಚು.





ಮಣ್ಣಿನಿಂದ ಧಾನ್ಯ, ಧಾನ್ಯದಿಂದ ಅನ್ನ, ಅನ್ನದಿಂದ ಶರೀರ ಬಂದಿದೆ. ಹೀಗೆ ಮಣ್ಣಿನಿಂದಲೇ ಶರೀರ ಹುಟ್ಟಿದೆ.

ಅಧ್ಯಾತ್ಮ ಶಾಸ್ತ್ರವನ್ನು ಕೇಳಿ ತಿಳಿದವರು ಯಾರು ಇರುವರೋ ಅವರ ಕುಲ ದೊಡ್ಡದು, ಪ್ರಪಂಚದಲ್ಲಿ ಹೆಂಡಿರು ಮಕ್ಕಳ ಆಶೆಯಿಂದ ಕುಲಧರ್ಮ ಆಶ್ರಮದಲ್ಲಿ ಸಿಕ್ಕು ಯಾರು ಒದ್ದಾಡುವರೋ ಅವರ ಕುಲ ಕಡಿಮೆ.

ಈ ಜಗತ್ತು ಹುಚ್ಚರ ಆಸ್ಪತ್ರೆಯು. ಆದ್ದರಿಂದ ಇಲ್ಲಿ ಎಲ್ಲರೂ ಹುಚ್ಚರೇ ಇರುವರು. ಸ್ವರೂಪವನ್ನು ತಿಳಿಯದವರೆಲ್ಲ ಹುಚ್ಚರೇ.

ದೇಹವೇ ನಾನೆಂಬ ತಿಳುವಳಿಕೆ ಇರುವವರೆಗೆ ಬಾಲ್ಯತ್ವವೇ, ಪ್ರೌಢ ಸ್ಥಿತಿಯು ಬಂದಿಲ್ಲ, ಕೂಟಸ್ಥ ಚಿನ್ಮಾತ್ರನೇ ತಾನೆಂಬ ತಿಳುವಳಿಕೆ ಬಂದರೆ ಮಾತ್ರ ವಯಸ್ಸಿಗೆ ಬಂದಂತೆ ಎನ್ನಬಹುದು. ಬಹಳೇ ಜನರು ಬಾಲ್ಯದಲ್ಲಿಯೇ ಸಾಯುತ್ತಾರೆ. ದೇಹವು ಹಲವು ಹೊಲೆಯ ಮನೆಯಂತಿದೆ. ಈ ದೇಹವು ತಾನೆಂದು ತಿಳಿದುಕೊಳ್ಳುವವನೇ ಚಾಂಡಾಲನು.

ನಿರ್ವಿಕಾರ ಆತ್ಮನನ್ನು ಅನುಭವಿಸಿದವನೇ ಬಲ್ಲವನು. ಆತ್ಮನನ್ನು ಬಿಟ್ಟು ಅನ್ಯ ತಿಳಿಯುವವನೇ ಮೂರ್ಖನು.

ತನ್ನ ಇರುವು ತ್ರಿಕಾಲಾಬಾಧಿತ ಎಂಬುದನ್ನು ಬಲ್ಲವನೇ ಅಂಗಲಿಂಗ ಸಾಮರಸ್ಯವನ್ನು ಹೊಂದುವನು. ಇವನೇ ಜಂಗಮನಾಗುವನು. ಬರೇ ಕುಲದಲ್ಲಿ ಹುಟ್ಟಿ ಜಂಗಮನೆನಿಸಿಕೊಳ್ಳುತ್ತೇನೆಂದರೆ ತಪ್ಪಾಗುವದು. ಜಂಗಮನೆಂದರೆ ಜಗದ್ಭರಿತನು, ಹೊಲೆಯರಲ್ಲಿ ಹುಟ್ಟಿದರೂ ಜಂಗಮ ಸ್ಥಳಕ್ಕೆ ಹೋಗಲಿಕ್ಕೆ ಬರುತ್ತದೆ. ಅಂಗಲಿಂಗ ಸಾಮರಸ್ಯವೆಂದರೆ ಜೀವ ಪರಮರ ಐಕ್ಯ. ಜ್ಞಾನಕ್ಕಾಗಿ ಜಾತ್ಯಾದಿ ನಿರ್ಬಂಧವಿಲ್ಲ. ಸ್ವರೂಪಜ್ಞಾನವು ವಂಶಪರಂಪರೆಯಾಗಿ ಬರುವದಿಲ್ಲ. ಯಾವದೇ ಜಾತಿಯವನಾಗಿರಲಿ ಅಧಿಕಾರಿಯಾದವನು ಸ್ವರೂಪಜ್ಞಾನ ಹೊಂದುವನು.

ಬರೇ ದೇಹವು ಮುಪ್ಪಾಗಿ ಬಿಳೇ ಕೂದಲು ಬಂದರೆ ದೊಡ್ಡವನಲ್ಲ. ಮೂರು ವರ್ಷದ ಕೂಸು ಇದ್ದರೂ ಹಿಂದಿನ ಸಂಸ್ಕಾರದಿಂದ ಜ್ಞಾನಿಯಾಗಿದ್ದರೆ ಅವನೇ ದೊಡ್ಡವನು. ತನ್ನ ನಿಜವನ್ನು ಅರಿಯದಿದ್ದವನೇ ಕಿರಿಯನು.

ಒಂದೇ ತಾಯಿಯಲ್ಲಿ ಹುಟ್ಟಿದರೂ ಒಂದೇ ಕುಲದವರೆಂದು ತಿಳಿಯಬಾರದು. ಅವರವರ ತಿಳುವಳಿಕೆ ನಡಾವಳಿ, ನೀತಿಯ ಮೇಲಿಂದ ಕುಲ ಸಿದ್ಧವಾಗುತ್ತದೆ. ನೀತಿ ತಪ್ಪಿದವನೇ ಹೊಲೆಯ, ನೀತಿಯಿಂದ ನಡೆದವನೇ ಉತ್ತಮ ಕುಲದವ. ಅಂದರೆ ತಾಯಿಯ ಗರ್ಭವೆಂದರೆ ಒಂದು ದಾರಿ. ಆ ದಾರಿಯಲ್ಲಿ ಎಲ್ಲರೂ ಹಾಯುವವರೇ. ವಿಷಯ ಸುಖಕ್ಕೆಳೆಸಿದರೆ ಕೆಟ್ಟ ಕರ್ಮದವನೆಂದು ತಿಳಿಯಬೇಕು. ಏಕೆಂದರೆ ವಿಷಯ ಸುಖವು ಎಲ್ಲರನ್ನೂ ದುಃಖಪಡಿಸಿದೆ. ದುಃಖಪಡಿಸುತ್ತಲಿದೆ.

ಎಷ್ಟು ಲೌಕಿಕ ವಿದ್ಯೆಯನ್ನು ಕಲಿತರೇನು. ಎರಡನೆಯವರಿಗೆ ಉಪಕಾರ ಮಾಡುವದನ್ನು ಕಲಿತರೆ ಸಾಕು. ಸಿದ್ಧಾರೂಢರು ಲೌಕಿಕ ವಿದ್ಯೆಯನ್ನು ಕಲಿತಿರಲಿಲ್ಲ. ಗರಗದ ಮಡಿವಾಳಪ್ಪನವರು ಕಲಿತದ್ದನ್ನು ಮರೆತಿದ್ದರು.

ಅನೇಕ ಮತ ಏಕೆ ಆಗಿವೆಯೆಂದರೆ ಒಬ್ಬನು ಎತ್ತ ನಡೆಯಲಿಕ್ಕೆ ಹತ್ತುವನೋ ಅದರಂತೆ ಎಲ್ಲರೂ ನಡೆಯಹತ್ತುವರು. ಜಗತ್ತೆಲ್ಲವೂ ಮಂಗನ ಮಕ್ಕಳಂತೆ ಇದೆ. ಒಂದು ಹೇಗೆ ಹಾರಾಡುತ್ತದೆಯೋ ಹಾಗೆ ಎಲ್ಲವೂ ಹಾರಾಡುತ್ತವೆ.

ನೀನೇ ಕಲ್ಪವೃಕ್ಷ. ಒಳ್ಳೆಯದನ್ನು ಕಲ್ಪಿಸು ಒಳ್ಳೆಯದೇ ಆಗುವದು, ಕೆಟ್ಟದ್ದನ್ನು ಕಲ್ಪಿಸು ಕೆಟ್ಟದ್ದೇ ಆಗುವದು.

ಪ್ರಪಂಚವು ಸುಳ್ಳೇ ಆಟವನ್ನು ಆಡಿದಂತಿರುವದು. ಆದ್ದರಿಂದ ಮಕ್ಕಳಿಗೆ, ಮಿತ್ರರಿಗೆ, ಬಂಧು ಬಾಂಧವರಿಗೆ ಸಕಲರಿಗೂ ಆತ್ಮಜ್ಞಾನವನ್ನು ಗುರ್ತು ಮಾಡಿಕೊಡಬೇಕು. ಇದೇ ನಿಮ್ಮ ಕರ್ತವ್ಯಕರ್ಮ. ನಿಮ್ಮ ಸಂಗಡಿಗರು ಹಿರಿಯರಾಗಲಿ, ಕಿರಿಯರಾಗಲಿ ನೀವು ತಿಳಿದುಕೊಂಡಷ್ಟು ತಿಳಿಸಿ ಈ ಮಾರ್ಗಕ್ಕೆ ಹಚ್ಚಿದರೆ ಇದೇ ಪರಹಿತವು. ಅವರಿಗೆ ಏನು ಕೊಟ್ಟರೂ ಸುಖ ಅಲ್ಲ.

ತ್ಯಾಗದಲ್ಲಿ ಕರ್ಣ, ಸತ್ಯದಲ್ಲಿ ಹರಿಶ್ಚಂದ್ರ, ವೈರಾಗ್ಯದಲ್ಲಿ ಶುಕಮುನಿ ಇವರು ಹೆಸರಾಗಿರುವರು, ಇಂಥವರು ಶರೀರವನ್ನು ಕೊಯ್ದುಕೊಡು ಎಂದರೂ ಕೊಯ್ದುಕೊಡಲಿಕ್ಕೆ ತಯಾರ ಇರುವರು. ಇಂಥವರಿಗೆ ಮಾತ್ರ ಸ್ವರೂಪಜ್ಞಾನವಾಗುವದು. ವಿಷಯಲಂಪಟರಿಗೆ ಸಾಧ್ಯವಿಲ್ಲ.

ಸತ್ಯ ಮಾತನಾಡುವದಕ್ಕೆ ನಾಲಿಗೆ, ಶಾಸ್ತ್ರ ಶ್ರವಣಕ್ಕೆ ಕಿವಿ, ಅಧ್ಯಾತ್ಮ ಗ್ರಂಥ ನೋಡಲಿಕ್ಕೆ ಕಣ್ಣು ಇವೆ.

ಮನುಷ್ಯ ಜನ್ಮಕ್ಕೆ ಬಂದ ಬಳಿಕ ಅನ್ನ, ಅರಿವೆ, ದಾಗೀನುಗಳ ಸಲುವಾಗಿ ಪ್ರಯತ್ನ ಮಾಡಬಾರದು. ಸ್ವರೂಪದ ವಿಚಾರವನ್ನು ತಾನು ತಿಳಿದುಕೊಂಡು ಅದನ್ನು ಉಳಿದವರಿಗೆ ತಿಳಿಸಬೇಕು. ಇದರಿಂದ ನಿಮಗೆ ದೊಡ್ಡ ಕೀರ್ತಿಯು ಬರುವದು. ನಿಮ್ಮ ಪ್ರಾರಬ್ಧದಲ್ಲಿ ಇದ್ದಷ್ಟು ಅನ್ನ, ಅರಿವೆ, ವಿದ್ಯೆ, ದುಡ್ಡು ಎಲ್ಲಿ ಕುಳಿತರೂ ತಾವು ಬಂದೇ ಬರುತ್ತವೆ. ಮಾಡಿಟ್ಟ ಅಡಿಗೆಯನ್ನು ಉಂಡೇ ತೀರಿಸಬೇಕು. ಇದು ನಿಮ್ಮ ಸ್ವತಂತ್ರವಿಲ್ಲ, ಸ್ವರೂಪವನ್ನು ತಿಳಿದುಕೊಳ್ಳಲು ಬಹಳ ಪ್ರಯತ್ನವನ್ನು ಮಾಡಿರಿ.

ಪಾಪ ಪುಣ್ಯದ ಮಾತು ಬರೇ ಬಾಯಿಯಿಂದ ಅನ್ನುವದು ನಡೆದಿದೆ ಹೊರ್ತು ಅದಕ್ಕೆ ಹೆದರುವದಿಲ್ಲ. ದಾಸೋಹ ಇಟ್ಟು ಸುಮ್ಮನೆ ಊಟ ಮಾಡಿದರಾಯಿತು ಎನ್ನುವರು. ಊರಲ್ಲಿಯ ರೊಟ್ಟಿಯನ್ನು ಎತ್ತಿಕೊಂಡು ಬರುವದು. ದಾಸೋಹ ಇಟ್ಟಿದ್ದೇವೆ ಎಂದು ದೊಡ್ಡ ಸುದ್ದಿಯನ್ನು ಮಾಡಿ, ದೊಡ್ಡ ಪದವಿ ಬಂತೆಂದು ತಿಳಿದುಕೊಳ್ಳುವರು. ಇದರಿಂದ ಮುಂದಿನ ಗತಿ ಏನು ಎಂದು ಯಾರೂ ವಿಚಾರ ಮಾಡುವದಿಲ್ಲ. ತನಗೆ ಹೆದರುವಂಥ ಪ್ರಾಣಿಗಳನ್ನು ಕೊಂದು ತಿನ್ನುತ್ತಾನೆ. ಹುಲಿ, ಸಿಂಹ, ಚಿರ್ಚು, ಹೊನಿಗ್ಯಾ ಇವುಗಳಿಗೆ ಹೆದರಿ ಅವುಗಳನ್ನು ಬಿಡುತ್ತಾನೆ. ಇದು ಪಶು ಪಕ್ಷಿಯ ತಿಳುವಳಿಕೆಯೇ ಆಯಿತು.

ಸಂಸಾರ ದುಃಖವು ತಿಳಿಯದ್ದರಿಂದ ಬಂದಿರುವದು. ತಿಳುವಳಿಕೆಯಿಂದಲೇ ಹೋಗುವದು. ಆದ್ದರಿಂದ ತಿಳುವಳಿಕೆಯೇ ಸಾಧನೆ. ನೀನು ಆತ್ಮವನ್ನು ಮರೆತಿರುವಿ. ಇಲ್ಲದ ಪದಾರ್ಥವನ್ನು ಪ್ರಾಪ್ತಿ ಮಾಡಿಕೊಳ್ಳಲಿಕ್ಕೆ ಕರ್ಮವು ಬೇಕು. ಮೊದಲೇ ಇದ್ದ





ಆತ್ಮನಿಗಾಗಿ ಯಾವ ಕರ್ಮವನ್ನು ಮಾಡುವದು? ಆತ್ಮನು ಮೊದಲೇ ಇದ್ದವನು, ಆದ್ದರಿಂದ ಕರ್ಮವು ಬೇಕಿಲ್ಲ.

ಅಂತಃಕರಣದ ಸಂಬಂಧವನ್ನು ಕಿತ್ತೊಗೆದರೆ ಎಲ್ಲ ದುಃಖವು ದೂರಾಗುವದು. ಸತ್ತ ಬಳಿಕ ಶಿವನನ್ನು ಕೂಡುತ್ತಾನೆನ್ನುವದು ಭ್ರಮೆ.

ಆತ್ಮಜ್ಞಾನ ವಿದ್ಯೆಯನ್ನು ಸದ್ಗುರುವಿನಿಂದ ಕಲಿ. ಇದು ಕಾಶಿ ರಾಮೇಶ್ವರದಲ್ಲಿ ಸಿಗುವದಿಲ್ಲ. ಕಾಶಿಯಲ್ಲಿ ಸಿಗುವದೇನು? ಒಣ ಸಂಸ್ಕೃತ ಹೆಮ್ಮೆ ಬೆಳೆಸುವ ವಿದ್ಯೆ, ತಿದ್ದಿ ಮಾತಾಡುವ ವಿದ್ಯೆ, ಆದ್ದರಿಂದಲೇ "ತಾನೆ ತನ್ನೊಳು ತನ್ನ ಮೋಕ್ಷವ ಗಳಿಸಿಕೊಂಡರೆ ಸಾಲದೇ, ಸಂಸ್ಕೃತದಲ್ಲಿನ್ನೇನು" ಎಂದಿದ್ದಾರೆ.

ಬ್ರಹ್ಮನ ಗುರ್ತಿಲ್ಲದೆ ಅರ್ಪಿಸುವದು ಹೇಗೆ? ತಿಳಿಯಹೋದರೆ ತಾನೇ ಬ್ರಹ್ಮ. ಆದ್ದರಿಂದ ಅರ್ಪಿಸುವದೆಲ್ಲ ಭ್ರಮೆ. ನೀನು ಭಾವಿಸಿದ್ದು ದೇವರಾದ ಬಳಿಕ, ನೀನು ದೇವರಾಗಲಿಕ್ಕಿಲ್ಲವೆ? ಅರಿವಿನ ಹೊರತು ದೇವರಿಲ್ಲ.

ರೋಗವು ಬರಬಾರದು ಎಂದರೆ ಶರೀರವು ಬರಬಾರದಂತೆ ಮಾಡಿಕೊಳ್ಳಬೇಕು. ಏಕೆಂದರೆ ಶರೀರವು ರೋಗಗಳ ತವರೂರು. ಏನೂ ರೋಗವಿಲ್ಲದಿದ್ದರೂ ಆರು ತಾಸಿಗೊಮ್ಮೆ ಹಸಿವು ತೃಷೆಗಳ ಕಾಟವಂತೂ, ಇದ್ದೇ ಇರುತ್ತದೆ.

ತಿಳಿದವನಿಗೆ ಬಹಳ ಶಾಸ್ತ್ರವು ಬೇಕಾಗಿಲ್ಲ. ವಿಷಯವಾಸನೆಗಳಿದ್ದವನಿಗೆ ಮಾತ್ರ ಬೇಕು. ಶಾಸ್ತ್ರ ವಾಸನೆ ಎಂದರೆ ಹೇಳಬೇಕು ಕೇಳಬೇಕು ಎಂಬುದು. ಹೇಳುವದು ನಾಲಿಗೆಯ ತಿಂಡಿ, ಕೇಳುವದು ಕಿವಿಯ ತಿಂಡಿ. ಶಾಸ್ತ್ರ ವಾಸನೆಯು ಹೋಗದಿದ್ದರೆ ಮತ್ತೆ ಜನ್ಮ ಬರುವದು, ಬಹಳ ಶಾಸ್ತ್ರ ಓದಿ, ತಲೆಕೆಟ್ಟು, ಹುಚ್ಚು ಹಿಡಿದು ತಿರುಗುತ್ತಾರೆ. ಶ್ರುತಿ, ಸ್ಮೃತಿ, ಶಾಸ್ತ್ರ ಮೊದಲಾದವುಗಳೆಲ್ಲವನ್ನು ತಿಳಿಯಬೇಕೆನ್ನುವದೆಲ್ಲವೂ ದುಃಖವೇ ಸರಿ.

ಸಕಾಮದ ಪೂಜೆಯು ಗುರುವಿನ ಹತ್ತಿರ ಹೋಗಗೊಡುವದಿಲ್ಲ. ಆದ್ದರಿಂದ ಅದು ಶಿವಪೂಜೆಯಲ್ಲವು. ಸಕಾಮಿಯು ಸಕಲಗುಣ ಸಂಪನ್ನ, ಅವಗುಣ ಪರಿಪೂರ್ಣನಿರುತ್ತಾನೆ. ಸಕಾಮಿಯು ಕೆರೆ ಕಡಿಸಿ ಪುಣ್ಯ ಬೇಡುತ್ತಾನೆ, ಇವನಿಗೆ ವ್ಯಾಪಾರಿ ಎನ್ನಬೇಕು. ನಿಷ್ಕಾಮದವನು ಏನನ್ನೂ ಬಯಸಬಾರದು. ಯಾವದಕ್ಕೂ ಆಶೆ ಮಾಡದೆ ಬೇಡದೆ ಇರಬೇಕು. ಎಂಥ ಸಂಕಟ ಬಂದರೂ ನೆಟ್ಟಗಾಗಲಿ ಎಂಬ ಮನಸ್ಸಾದರೆ ಸಕಾಮಕ್ಕೆ ಬಿದ್ದಂತೆ. ಸಕಾಮಿಗೆ ಹೆಂಡಿರು ಮಕ್ಕಳು ಶ್ರೀಮಂತಿಕೆ ಇತ್ಯಾದಿ ದೊರಕುವವು. ನಿಷ್ಕಾಮಿಗೆ ಮನುಷ್ಯ ಜನ್ಮ, ತತ್ವ ವಿಚಾರ, ವೇದ, ಗುರು ಸಿಗುವವು.

ಕೆಲವರು ಮಂತ್ರ ಪೂಜಾದಿಗಳಿಂದ ಇಂದ್ರ ಚಂದ್ರಾದಿ ಲೋಕದ ಭೋಗಕ್ಕೆ ಆಶೆಪಟ್ಟು ಹೋಗುತ್ತಾರೆ. ಆದರೆ ಅವರ ಶರೀರವು ನಾಶವಾಗುತ್ತದೆ. ಸುಮ್ಮನೆ ಇಂದ್ರಜಾಲದಂತೆ ಎಲ್ಲವೂ ತೋರುತ್ತದೆ. ಆಶೆಯು ಇಲ್ಲದಿರುವಿಕೆಯೇ ನಿಜವಾದ ವೈಭವ.

ದೇಹಕ್ಕೆ ತಾನು ಯಮಸ್ವರೂಪನಾಗಬೇಕು. ತಾನು ದೇಹದ ಆಧೀನನಾಗದೆ, ಅದನ್ನು ತನ್ನ ಆಧೀನದಲ್ಲಿ ಇಟ್ಟುಕೊಂಡರೆ ಯಮನು ಅವರ ಸಮೀಪಕ್ಕೆ ಬರಲು ಅಂಜುವನು.

ಯಾರೇ ಆಗಲಿ ಒಬ್ಬರು ಇನ್ನೊಬ್ಬರ ದುಃಖವನ್ನು ಕಳೆಯುವದಿಲ್ಲ.

ಗಾಢನಿದ್ರೆಯಲ್ಲಿ ಆರಾಮವಿದೆ. ಎಚ್ಚರವಾದ ಕೂಡಲೆ ಗದ್ದಲವೇ ಗದ್ದಲ. ಜನ್ಮ ತಾಳಿದ್ದು ಅತಿ ದುಃಖಮಯವು. ಸತಿ ಸುತರೆಂಬ ಸೀರುಮೆತ್ತಿವೆ. ಸೀರು, ಹೇನುಗಳಲ್ಲಿ ಸುಖವುಂಟೆ?

ತನಗೆ ಯಾವದು ಸುಖವಾಗುತ್ತದೆಯೋ ಅದೇ ಸುಖಾಸನವು.

ಶರೀರಾದಿಗಳು ತಾನಲ್ಲವೆಂದವನು ರೋಗ ಬಂದರೂ ಹೆದರುವದಿಲ್ಲ. ಇಲ್ಲದಿದ್ದರೆ 10ಕ್ಕೆ ಹಕ್ಕಿ, 20ಕ್ಕೆ ನಕ್ಕಿ, 30ಕ್ಕೆ ಮುರುಕ, 40ಕ್ಕೆ ನಾಚಿಕೆ, 50ಕ್ಕೆ ಅರುವು, 60ಕ್ಕೆ ಮರುವು, 70ಕ್ಕೆ ಕಾಗಿ, 80ಕ್ಕೆ ಗೂಗಿ, 90ಕ್ಕೆ ಬಾಗಿ, 100ಕ್ಕೆ ಸುಡಗಾಡಕ್ಕೆ ಹೊತ್ತುಕೊಂಡು ಹೋಗಿ ಆಗುವನು.

ವಿರತಿ ಇಲ್ಲದೆ, ಶಂಭುಪದ ಭಕ್ತಿ ಘಟಿಸದೆ, ವರ ಸಮಾಹಿತೆ ಸಿದ್ಧಿಪಡೆಯದೆ ಮೋಕ್ಷವಾಗುತ್ತದೆಂದು ಹಾರಾಡಿ, ಅಧ್ಯಾತ್ಮ ಗ್ರಂಥಗಳನ್ನು ಮಾರಿ ಹೊಟ್ಟೆ ತುಂಬಿಕೊಳ್ಳಲು ಬರೆದಿರುವರೆಂದೂ, ಗುರುಗಳಿಗೆ ಠಕ್ಕರು, ಮುಗ್ಗಲರು, ಮೋಸಗಾರರು, ದುಡಿದಿಟ್ಟವರ ಅನ್ನ ತಿನ್ನುವ ಹೇಡಿಗಳೆಂದು ಬೈಯ್ಯುವರು. ಇವರಿಗೆ ಸಮಾಧಿಯ ಆನಂದವೆಂದೂ ದೊರೆಯದು, ನರಕ ದುಃಖ ತಪ್ಪದು.

ವಶಿಷ್ಠರ ಬಳಿ ಪಕ್ವಾನ್ನ ಉಣ್ಣುತ್ತ, ಲಂಗೋಟಿ ಹಾಕಿಕೊಂಡು ಮೂರು ಕೋಟಿ ಶಿಷ್ಯರಿದ್ದರು. ಒಮ್ಮೆ ನಂಬಿಗೆ ನೋಡಬೇಕೆಂದು ಪರೀಕ್ಷಿಸಿದಾಗ ಮೂರೇ ಜನರು ಉಳಿದರು. ಉಳಿದವರೆಲ್ಲರೂ ನಂಬಿಕೆಯನ್ನು ಕೆಡಿಸಿಕೊಂಡಿದ್ದರು.

ವಿಷಯದ ಆಲೋಚನೆಗೆ ವ್ಯಸನವೆನ್ನುತ್ತಾರೆ. ಪರಮಾತ್ಮನ ಆಲೋಚನೆಗೆ ಧ್ಯಾನವೆನ್ನುತ್ತಾರೆ. ವಿಷಯ ವ್ಯಸನದಿಂದ ದುಃಖ, ಪರಮಾತ್ಮನ ಧ್ಯಾನದಿಂದ ಸುಖ.

'ಸಮಾಧಿ' ಎಂದರೆ ಸಮವಾದ ಬುದ್ಧಿ. ಸಮಾಧಿ ಸಿದ್ಧಿಯಾದರೆ ದೇಹವು ಸುಟ್ಟರೂ ಗುರ್ತಾಗುವದಿಲ್ಲ. ಶರೀರದ ಪ್ರಜ್ಞೆಯು ಬಂದನಂತರ ಗುರ್ತಾಗುವದು. ಮಂದಿ ಮಾಡಿದ್ದು ಹಾಳು ಕುಣಿ. ತನ್ನ ಸಮಾಧಿಯನ್ನು ತಾನೇ ಮಾಡಿಕೊಳ್ಳಬೇಕು.

ಕೆಲವರು ಸಂಸ್ಕೃತ ಕಲಿತುಕೊಂಡು ಬಾಯ್ಬಡಕತನ ಕಲಿಯುವರು. ಬಲ್ಲವರ ಮಾತು ಕಲಿತುಕೊಂಡು ಅವರಿಗೇ ತಿರುಗಿ ಬೀಳುವರು. ಬಲ್ಲವರು ಮಾತ್ರ ಏನನ್ನೂ ಕಲಿಯದೆ ಕಲಿತವರನ್ನು ಅನುಭವವೆಂಬ ಸಿಂಹದಿಂದ ಹೊಡೆದು ಹಾಕುವರು. ಅಂದರೆ ಎಲ್ಲ ಶಾಸ್ತ್ರಗಳೆಂಬ ಆನೆಗಳು ಓಡಿ ಹೋಗುತ್ತವೆ.

ಜಡವಾದ ಪ್ರಕೃತಿಯು ಕಾರಣವಾಗಿ ಜಗತ್ಕಾರ್ಯವನ್ನು ಹೇಗೆ ಮಾಡುವದು? ಸಾಧ್ಯವಿಲ್ಲ, ಇದು ಸುಳ್ಳು. ವ್ಯರ್ಥವಾಗಿ ಮತಾಂಧರಾಗಿ ಇಲ್ಲದ ಜಗತ್ತು ನಂಬಿ, ಆ ದೇವ ಮಾಡಿದ, ಮಹಾದೇವ ಮಾಡಿದ, ಗಣಪ್ಪ ಮಾಡಿದನೆಂದರೆ ಎಷ್ಟು ತಪ್ಪು, ಅವರೇಕೆ ದುಃಖಮಯ ಜಗತ್ತನ್ನು ಮಾಡುವರು. ನಮ್ಮ ನಿದ್ರೆಯಲ್ಲಿ ಸ್ವಪ್ನವು ಹೊರಬಿದ್ದಂತೆ ಬಲವಾದ ಮರವೆಯಲ್ಲಿ ಈ ಜಗತ್ತು ಹೊರಬಿದ್ದಿದೆ. ಕನಸೂ ಇಲ್ಲ, ಜಾಗ್ರವೂ ಇಲ್ಲ, ಮತಗಳೂ ಇಲ್ಲ, ಇರುವವನು ನೀನೊಬ್ಬನೇ.





ಕರ್ಮಿಗೆ ಕರ್ಮದಿಂದ ಎಂದೂ ಮುಕ್ತಿಯಿಲ್ಲ. ಕೆಲವರು ಕರ್ಮ ಜ್ಞಾನಗಳ ಸಮುಚ್ಚಯ ಮಾಡುವರು. ಇದರಿಂದಲೂ ಮೋಕ್ಷವಿಲ್ಲ, ಯಾಕೆಂದರೆ ಕತ್ತಲೆ ಬೆಳಕು ಕೂಡುವದಿಲ್ಲ. ಕರ್ಮದಿಂದ ಗತಿಯಿಲ್ಲ. ಕರ್ಮ ಮಾಡುತ್ತ ಉಣ್ಣುವದು, ಉಣ್ಣುತ್ತ ಕರ್ಮ ಮಾಡುವದು.

ಜಗತ್ತನ್ನು ನೋಡಿ ಸೃಷ್ಟಿಸಿದವನು ಒಬ್ಬನು ಇರಬೇಕೆಂದು ಕಲ್ಪಿಸಿದ್ದಾರೆ. ಅವನೇ ಕರ್ತಾ ಎಂದು ಒಪ್ಪಿಕೊಂಡಿದ್ದಾರೆ. ಜಗತ್ತನ್ನು ನೋಡಿ ಕಲ್ಪಿಸಿ ಬರೆದಿರುತ್ತಾರೆ. ವಿಚಾರಿಸಿ ನೋಡಿದರೆ ಈ ಕಲ್ಪನೆಯೆಲ್ಲ ಸುಳ್ಳೆನಿಸುವದು. ಯುಗಪತ್ಸೃಷ್ಟಿ, ಕ್ರಮಸೃಷ್ಟಿ ಇವೆರಡೂ ಸುಳ್ಳು.

ಜೀವಾತ್ಮ ಬೇರೆ, ಪರಮಾತ್ಮ ಬೇರೆ, ಜಗತ್ತು ಭಿನ್ನವಿದೆ ಎಂದು ದುರ್ಬಲ ಶೃತಿಯು ಹೇಳುವದು. ಪ್ರಬಲ ಶೃತಿಯ ಮಾತು ಹಾಗಲ್ಲ, ಇದು ಅಭಿನ್ನತ್ವವನ್ನು ಹೇಳುತ್ತದೆ. ಪರಮಾತ್ಮನ ಹೊರತು ಅನ್ಯವೇನೂ ಇಲ್ಲ ಎಂಬುದೇ ವೇದಾಂತದ ಸಾರವು.

ಅನೇಕಾತ್ಮರು ಇರುವರು ಎಂಬುದು ಭ್ರಮಾತ್ಮಕ ತಿಳುವಳಿಕೆಯು. ಸದ್ರೂಪವು ಇದ್ದಂತೆ ಇರುವದು. ಆದ್ದರಿಂದ ಹೇಳುವದು ಕೇಳುವದು ಎರಡೂ ಸುಳ್ಳು. ನೀನು ಕೇಳಿದ್ದರಿಂದ ನಿನಗೆ ತಿಳಿಸುವದಕ್ಕೆ ಸುಮ್ಮನೆ ಕಲ್ಪಿಸಿ ಹೇಳಿರುತ್ತದೆ. "ನೆಗಳಿ ಪೇಳಿದೆನ್ನೈಸೆ ಪೆರತುಂಟೆ" ಅಂದರೆ ಹುಟ್ಟಿಸಿಕೊಂಡು ಕೈಲೆ ಹಾಕಿ ಹೇಳಿದೆ.

ಎಲ್ಲ ಶಾಸ್ತ್ರ-ಪುರಾಣಗಳು ದಾದಿಯ ಕಥೆಯಂತೆ ಸುಳ್ಳೇ ಹೇಳುವದು, ಕೇಳುವದು ಮಾಡುವವು. ತಿಳಿಯದವರ ಮುಂದೆ ಏನು ಹೇಳಿದರೂ ಸತ್ಯವೆಂದೇ ಭಾವಿಸುತ್ತಾರೆ. ದಾದಿಯೊಬ್ಬಳು ಹುಡುಗನನ್ನು ಕೂಡ್ರಿಸಿ "ಬಂಜೆಯ ಮಗನಿಗೆ ಒಂದು ಲಕ್ಷ ರೂಪಾಯಿ ವರದಕ್ಷಿಣೆ ಕೊಟ್ಟು ಮದುವೆ ಮಾಡಿದರು. ಅವನು ನಾಲ್ಕಾರು ವರ್ಷ ಬಾಳ್ವೆ ಮಾಡಿ ಐದಾರು ಮಕ್ಕಳನ್ನು ಹಡೆದನು. ಮಕ್ಕಳಿಗೆ ವಿದ್ಯೆಯನ್ನು ಕಲಿಸಿ, ನೌಕರಿ ಕೊಡಿಸಿ ಅವರ ತಲೆಯ ಮೇಲೆ ಅಕ್ಕಿಕಾಳು ಹಾಕಿ ಸತ್ತನು, ನಮ್ಮ ಊರಿಗೂರು ಅವನ ಮಣ್ಣಿಗೆ ಹೋಗಿದ್ದೆವು. ನಾನು ಅಳುವದನ್ನೂ ಮುಗಿಸಿಬಿಟ್ಟೆ" ಎಂದು ಹೇಳಿದಳು. ಇದರಂತೆ ಸ್ವರ್ಗ-ನರಕ ಏನೊಂದು ಹೇಳಿದರೂ ಎಲ್ಲವೂ ಸುಳ್ಳು, ಸುಮ್ಮನೆ ಅಜ್ಞಾನಿ ಜೀವನು ಭಾವದ ಬಳಿಕೆಯಲ್ಲಿ ಬಿದ್ದು ತೊಳಲಾಡುತ್ತಾನೆ. ಈ ಜಗತ್ತನ್ನು ಯಾರೂ ಮಾಡಿಲ್ಲ. ಅದು ಅಧ್ಯಾಸದಿಂದ ಆತ್ಮನಲ್ಲಿ ತೋರುತ್ತದೆ.

ಈ ಪ್ರಪಂಚವನ್ನು ಬ್ರಹ್ಮನು ಸೃಷ್ಟಿಸಿದನೆಂಬುವದು ಸುಳ್ಳು, ಇದನ್ನು ತಿಳಿಯಲೊಲ್ಲರು. ಸುಮ್ಮನೆ ಹಿಂದಿನವರ ಕಥೆ ಪುರಾಣಗಳನ್ನು ಹಚ್ಚಿ ಎಷ್ಟೋ ಖರ್ಚು ಮಾಡುತ್ತಾರೆ. ಪುಣ್ಯಶಾಲಿಗಳೆಂದು ಭಾವಿಸಿಕೊಳ್ಳುತ್ತಾರೆ. ಪಾಪವು ಪರಮಾರ್ಥ ವಿಚಾರದ ಕಡೆಗೆ ಹೋಗಗೊಡುವದಿಲ್ಲ.

ಕಂಡುದುದೆಲ್ಲವೂ ಸತ್ಯ ಎನ್ನುವರು. ಇದೆಲ್ಲವೂ ಭ್ರಮೆಯೇ ಇರುವದು. ಇಲ್ಲದ ಪದಾರ್ಥಗಳನ್ನು ದೊರಕಿಸಿಕೊಂಡರೇನು ಬಿಟ್ಟರೇನು? ನಾನು ಬಡವನಾದೆನೆಂಬುವವನೂ ಮತ್ತು ಶ್ರೀಮಂತನಾಗಿ ಸುಖದಿಂದ ಇರುವೆನೆಂಬುವವನೂ ಭ್ರಮಿಷ್ಠರೇ ಇರುವರು.

ನಾನು ಹಿಂದೂ ಇದ್ದೆನು, ಈಗಲೂ ಇದ್ದೇನೆ. ಮುಂದೆಯೂ ಇರುವೆನು ಎಂಬುದೇ ತ್ರಿಕಾಲ ಜ್ಞಾನವು. ಮುಂದೆ ಆಗುವ ಯಾವುದಾದರೊಂದು ಸುದ್ದಿಯನ್ನು ಹೇಳಿದರೆ ಅದು ತ್ರಿಕಾಲ ಜ್ಞಾನವಲ್ಲ, ಅದು ಚಾಟಕಿ ವಿದ್ಯೆಯೆನ್ನಬೇಕು.

ಸೂರ್ಯನು ವ್ಯಾವಹಾರಿಕ ಪ್ರಕಾಶಕನು, ಸ್ವಯಂ ಪ್ರಕಾಶಕನಲ್ಲ. ಅಜ್ಞಾನಿಗಳು ಸೂರ್ಯನು ಸ್ವಯಂ ಪ್ರಕಾಶಕನೆನ್ನುವರು, ಇದು ಸುಳ್ಳು.

ಗ್ರಂಥಗಳು ಆಗುವದಕ್ಕಿಂತ ಮುಂಚೆ ಅಧ್ಯಾತ್ಮ ವಿದ್ಯೆಯು ಒಂದೇ ಮಾತಿನಲ್ಲಿ ತಿಳಿಯುತ್ತಿತ್ತು. ಈಗ ಹಲವಾರು ಗ್ರಂಥಗಳನ್ನು ಓದಿ, ಕೇಳಿ, ವಿಪರೀತ ಭಾವವು ದೃಢಪಟ್ಟು ನಿಶ್ಚಯ ಜ್ಞಾನವಾಗಲೊಲ್ಲದು. ಬರೆದ ಗ್ರಂಥಗಳನ್ನು ನೋಡುವದಕ್ಕೆ ಆಯುಷ್ಯವೇ ಸಾಲುವದಿಲ್ಲ. ಮಾಯೆಯನ್ನು ಸುಳ್ಳೇ ಕಲ್ಪಿಸಿ ಇಷ್ಟೆಲ್ಲಾ ಶಾಸ್ತ್ರ, ಪುರಾಣ, ಉಪನಿಷತ್ತು ಬರೆಯುತ್ತ ಹೋಗುವರು. ಮೊದಲು ಪ್ರಕೃತಿಯಾಯಿತು, ಅದು ವಿಕರಿಸಿ ಅವಿದ್ಯೆಯಾಯಿತು. ಮುಂದೆ ಜೀವರಾದರು ಎಂದು ದಾದಿಯ ಕಥೆಯಂತೆ ಬೆಳೆಸಿ ಹೇಳುತ್ತ ಹೋಗುವರು. ಇದು ಎಂದೂ ಮುಗಿಯದಂಥ ರಾಮಾಯಣವು. ನೀನು ನಿಜವನ್ನು ತಿಳಿದುಕೊಂಡಾಗಲೇ ಇದೆಲ್ಲವೂ ಮುಗಿಯುವದು. ಭೂಮಿ, ಸೀಮಿ, ದ್ರವ್ಯ ಇವೆಲ್ಲ ಮಾಯೆಯ ಸಾಮಗ್ರಿಗಳು. ಮಾಯೆಯೆಂದರೆ ಹುಡುಗರಿಗೆ ಬವ್ ಬಂತು ಎಂದು ಹೆದರಿಸಲಿಕ್ಕೆ ಕಲ್ಪಿಸಿ ಹೇಳುವಂತೆ ದೊಡ್ಡದೊಂದು ಮಾಯೆ ಇದೆಯೆಂದು ಶಾಸ್ತ್ರವು ಕಲ್ಪಿಸಿ ಹೇಳುತ್ತದೆ. ಇದು ಹಿರಿಯ ಅಜ್ಞಾನ, ಎಷ್ಟು ಕಂತ್ರಾಟ ಮಾಡಿದರೂ ಮಾಯೆಯು ಇಲ್ಲದ್ದೇ.

ಗಾದೆಯ ಮಾತೆಂದರೆ ಎಲ್ಲ ಅನುಭವಿಗಳ ಅಭಿಪ್ರಾಯವು. ಸಾವಿರಾರು ಅನುಭವ ವಾಕ್ಯ ಹಿಂಡಿ ಒಂದು ಅನುಭವದ ಮುಖ್ಯ ಮಾತು ಮಾಡುತ್ತಾರೆ.

ಗ್ರಂಥಗಳಲ್ಲಿ ಸಂಧಿ ಸಮಾಸ, ಅಡಿ ಪ್ರಾಸು, ಯತಿ ಗಣಗಳಿಲ್ಲವೆಂದು ನಿರಾಶೆಯಾಗಬಾರದು. ಅರ್ಥವನ್ನು ಗ್ರಹಣ ಮಾಡಬೇಕು. ವ್ಯಾಕರಣ ಸಂಧಿ-ಸಮಾಸಗಳು ಮುಕ್ತಿಯನ್ನು ಕೊಡುತ್ತವೆಯೋ? ಇಲ್ಲ. ಪ್ರಾಸವಿದ್ದರೆ ಕಾವ್ಯವು ಚೆಂದವಾಗುತ್ತದೆಂದು ಮಾಡಿರುವರು. ಅಲಂಕಾರಿತ ಸ್ತ್ರೀಯಳು ರತಿಭೋಗ ಕೊಡುತ್ತಾಳೆ, ಅಲಂಕಾರವಿಲ್ಲದ ಸ್ತ್ರೀಯಳು ರತಿಭೋಗ ಕೊಡುವದಿಲ್ಲವೆ? ಕೊಡುತ್ತಾಳೆ. ಇದರಂತೆ ಆತ್ಮವಿಚಾರವಿಲ್ಲದೆ ಎಷ್ಟು ವ್ಯಾಕರಣ ಶಾಸ್ತ್ರ ಕಲಿತರೂ ಎಲ್ಲವೂ ಕಾಲ್ಪನಿಕವೇ. ತಿದ್ದಿ ಮಾತಾಡಿದರೆ, ತಿದ್ದಿ ಬರೆದರೆ ವ್ಯಾಕರಣ ಬಂದಂತಾಯಿತೇನು? ಎಷ್ಟು ಕಲಿತರೇನು, ಜನ್ಮದ ಶೋಕವನ್ನು ನೀಗಬೇಕಲ್ಲವೆ? ಆತ್ಮ ವಿದ್ಯೆಯು ಸ್ವಲ್ಪದರಲ್ಲಿಯೇ ಇರುವದು. ನಿಜಗುಣರು ಸರ್ವ ಉಪನಿಷತ್ತುಗಳ ಸಾರವನ್ನು ತೆಗೆದು ಕನ್ನಡದಲ್ಲಿ ಗ್ರಂಥವನ್ನು ಬರೆದಿದ್ದಾರೆ. ಕನ್ನಡದಲ್ಲಿ ಇದನ್ನು ಹಿಂದೆ ಹಾಕುವ ಗ್ರಂಥವು ಇನ್ನೊಂದಿಲ್ಲ ಎಂದು ತೋರುತ್ತದೆ. ಕನ್ನಡದಲ್ಲಿ ನಿಜಗುಣರ ಗ್ರಂಥವು ಶ್ರೇಷ್ಠವಾಗಿದೆ. ಕನ್ನಡ ಭಾಷೆಯನ್ನು ಕಲಿಯದವರು ಇದನ್ನು ಕೇಳಿ ತಿಳಿದು ಮುಕ್ತರಾಗಿದ್ದಾರೆ. ನಿಜಗುಣರ ಗ್ರಂಥದಲ್ಲಿ ಸಂಧಿ ಸಮಾಸವಿಲ್ಲದಿದ್ದರೂ ಅದರಲ್ಲಿ ವೇದಾಗಮಗಳ ಅರ್ಥಜ್ಞಾನವಿದೆ. ಸಂಸ್ಕೃತ ಕಲಿಯುತ್ತ ಹೋದರೆ, ಕಲಿಯದವರ ಮುಂದೆ ಡಬ್ಬು ಹೊಡೆದು, ರೊಕ್ಕ ಸುಲಿಯಲಿಕ್ಕೆ ಬರುವದು. ಆಯುಷ್ಯವು ವ್ಯರ್ಥ ವ್ಯಯವಾಗುವದು. ಕಲಿತ ವಿದ್ಯೆಯ





ಅಭಿಮಾನವಿದ್ದರಂತೂ ಗತಿಯಾಗುವದಿಲ್ಲ. ನಿರಕ್ಷರಿ ಜ್ಞಾನಿಗಳಲ್ಲಿ ಕಲಿತವರು ಹೇಗೆ ಹೋಗುತ್ತಾರೆ? ಅಭಿಮಾನಕ್ಕೊಳಗಾಗಿ ಜನ್ಮ ತಾಳುವದಕ್ಕೆ ಕಾರಣವಾಗುತ್ತಾರೆ. ಎಷ್ಟೇ ಕಲಿತರೂ ಎಷ್ಟೇ ಬಿರುದಾವಳಿಗಳನ್ನು ಪಡೆದರೂ ದುಃಖವು ಹೋಗುವದಿಲ್ಲ.

ಕೆಲವರು ಜಗತ್ತು ಸತ್ಯವೆಂದರು, ಕೆಲವರು ಸುಳ್ಳೆಂದರು. ಸಾಂಖ್ಯರು, ಬೌದ್ಧರು, ವೈಶೇಷಿಕರು, ಶೂನ್ಯವಾದಿಗಳು ತಮಗೆ ತಿಳಿದಂತೆ ಹೇಳಿದರು. ಕೆಲವರು ಶಕ್ತಿ ಮತ ದೊಡ್ಡದೆಂದರು, ಬುದ್ಧನ ನಾಲ್ಕು ಮಂದಿ ಶಿಷ್ಯರು ನಾಲ್ಕು ತರ ಹೇಳಿದರು. ಪ್ರತಿಯೊಂದು ಮತದವರು ಬೇರೆ ಬೇರೆ ತರ್ಕ, ಬೇರೆ ಬೇರೆ ಶಾಸ್ತ್ರಗಳಿಂದ ತಮ್ಮ ತಮ್ಮ ಮತ ಶ್ರೇಷ್ಠ ಮಾಡಿ ಹೇಳಲಿಕ್ಕೆ ಹತ್ತಿದರು. ಹೀಗೆ ಪ್ರತಿಯೊಂದು ಮತ ಕುರಿಯಂತೆ ಇವೆ.

ಒಂದಕ್ಕೆ ಅನೇಕ ಅರ್ಥ ಮಾಡುತ್ತ ವೇದಾಗಮಗಳ ಮರ್ಮ ಹೊಳೆಯದಿದ್ದುದರಿಂದ ಕೆಲವರು ದ್ವೈತಕ್ಕೆ ನಿಂತರು. ಆದ್ದರಿಂದ ಬಲ್ಲವರು ಸಿಕ್ಕ ಕೂಡಲೆ ಪಕ್ಕಾ ತಿಳಿದು ನಿಶ್ಚಿಂತನಾಗಿ ಆತ್ಮಜ್ಞಾನವನ್ನು ಮಾಡಿಕೊಳ್ಳಬೇಕು. ವೇದಾಂತ ಶಾಸ್ತ್ರ ಒಂದರಿಂದಲೇ ಆತ್ಮಜ್ಞಾನವು ದೊರೆಯುವದು.

ಶೂನ್ಯವಾದಿಗಳು ಏನೂ ಇಲ್ಲವೆನ್ನುವರು. ಏನೂ ಇಲ್ಲ ಅನ್ನುವವನು ಇದ್ದಾನೆ. ಶೂನ್ಯವನ್ನು ಅರಿತು ಹೇಳುತ್ತೀ, ಆದ್ದರಿಂದ ಶೂನ್ಯವನ್ನು ಅರಿಯುವವನಾದ ನೀನಿರುವಿ. ನಿನಗೆ ಕಾಣುವ ವಸ್ತುಗಳು ಇಲ್ಲವೆಂದು ನಿಶ್ಚಯವಾಗಬೇಕು.

ಕೆಲವರು ಬೈಲು ನಿತ್ಯವೆಂದು ತಿಳಿಯುವರು. ಇದು ಭ್ರಮೆಯ ತಿಳುವಳಿಕೆಯು. ಜಡತತ್ತ್ವವು ನಿತ್ಯವಲ್ಲ, ಜಡತತ್ತ್ವವು ನಿತ್ಯವೆಂದು ತಿಳಿಯುವದರಿಂದ ದುಃಖವು ತಪ್ಪುವದಿಲ್ಲ, ಗತಿಯಾಗುವದಿಲ್ಲ. ನ್ಯಾಯಶಾಸ್ತ್ರ ಓದಿ ಬುದ್ಧಿಕೆಟ್ಟು ಮಂದಿಯನ್ನು ಬೈಯುತ್ತ ಅಡ್ಡಾಡುತ್ತಾರೆ. ನ್ಯಾಯಶಾಸ್ತ್ರದವನು ಪರಮಾಣುಗಳು ಉಳಿಯುತ್ತವೆ, ಅವು ಸತ್ಯವಿವೆ ಎನ್ನುವನು. ಪರಮಾಣುಗಳು ಕಣ್ಣಿಗೆ ಕಾಣದಿದ್ದರೆ ಮನಸ್ಸಿಗೆ ಕಾಣುತ್ತವೆ. ಮನಸ್ಸಿಗೆ ಕಾಣದಿದ್ದರೆ ಬುದ್ಧಿಗೆ ಕಾಣುತ್ತವೆ. ಬುದ್ಧಿಗೆ ಕಾಣದಿದ್ದರೆ ಅರುವಿಗೆ ಕಾಣುತ್ತವೆ. ಆದ್ದರಿಂದ ಕಂಡದ್ದೆಲ್ಲ ದೃಶ್ಯವಾಯಿತು. ಇದು ನಾಶವಾಗುತ್ತದೆ. ಅಂದಮೇಲೆ ಪರಮಾಣುಗಳು ನಿತ್ಯ ಹೇಗೆ! ನ್ಯಾಯ ಮತದವರು ಎಷ್ಟೋ ಪರಮಾಣುಗಳು ಕೂಡಿ ಒಬ್ಬುಳಿಯಾಗಿ ಒಂದು ಪದಾರ್ಥವಾಗುತ್ತದೆ ಎನ್ನುವರು. ಇವುಗಳನ್ನು ಕೂಡಿಸಲಿಕ್ಕೆ ಒಬ್ಬ ಕರ್ತೃ ಈಶ್ವರ ಇದ್ದಾನೆಂದು ನಂಬುವರು. ಕೆಲವು ನಾಸ್ತಿಕ ಮತದವರು ದೇವರು ಇಲ್ಲವೆನ್ನುವರು. ನಮ್ಮ ಮತ ಹೆಚ್ಚು, ನಿಮ್ಮ ಮತ ಕಡಿಮೆ ಎಂದು ಹೇಳಿ, ನಮ್ಮ ಮತದಲ್ಲಿ ಕೂಡಿರಿ ನಿಮಗೆ ಸದ್ಗತಿಯಾಗುವದೆಂದು ಪ್ರೋತ್ಸಾಹಿಸುವರು.

ನ್ಯಾಯದವರು ಅಣುಗಳಿಂದ ಜಗತ್ತಾಗಿದೆ ಎನ್ನುವರು. ಸಾಂಖ್ಯದವರು ಮಾಯೆಯಿಂದ ಜಗತ್ತಾಗಿದೆ ಎನ್ನುವರು. ನ್ಯಾಯ ಸಾಂಖ್ಯಗಳಲ್ಲಿ ಪೂರ್ಣ ವಿಚಾರವು ಸಿಗುವದೇ ಇಲ್ಲ. ವೇದಾಂತಿಯು ದೃಶ್ಯವು ಮಿಥ್ಯಯೆನ್ನುವನು. ಇಲ್ಲದ ಪ್ರಕೃತಿ ಮುಂತಾದುವನ್ನು ತ್ಯಜಿಸುವದಕ್ಕಾಗಿಯೂ, ಅಹಂ ಭಾವನೆಯನ್ನು ಬಿಡಿಸುವದಕ್ಕಾಗಿಯೂ ಅನೇಕ ಶಾಸ್ತ್ರಗಳನ್ನು ಕಲ್ಪಿಸಿ ಹೇಳುತ್ತಾರೆ.

ಕೆಲವರು ಸ್ವಲ್ಪ ಗ್ರಂಥ ಓದಿ, ಗುರುಗಳ ಹತ್ತಿರ ವರ್ಷಾರು ತಿಂಗಳು ಇದ್ದು, ಒಂದೆರಡು ಮಾತು ಕೇಳಿಕೊಂಡು, ಪಾಪಕ್ಕೆ ಹೆದರದೆ, "ನಾನು ಸಾಕ್ಷೀ ಇರುವೆ, ಭವದೂರನಾಗಿರುವೆ, ಉಳಿದವರೆಲ್ಲ ಬದ್ಧರಿರುವರು" ಎನ್ನುವನು. "ತೊಗಲಿಗೆ ತೊಗಲು ಬಡಿದರೆ ಆಗುವದೇನು? ಇಂದ್ರಿಯಗಳು ತಮ್ಮ ಕಾರ್ಯ ಮಾಡುವವು. ಅವುಗಳ ಪಾಪ ಪುಣ್ಯ ನಮಗೇಕೆ ಹತ್ತುವವು" ಎಂದು ಅದ್ವೈತವನ್ನು ಬಳಿಸ್ಯಾಡುತ್ತ, ಗುರುಗಳ ಶಿಷ್ಯನೆಂದು ಹೇಳಲು ಸಹ ನಾಚುತ್ತ, ತಾನೂ ಗುರುಗಳಂತೆ ಪೂಜಾ ಕೊಟ್ಟು ಗುರುವಾಗಿ, ಕೆಂದೆತ್ತಿನಂತೆ ಕೆಲವು ಅರಿವೆಗಳನ್ನು ಧರಿಸಿ, ಪಾದಪೂಜೆಯನ್ನು ಮಾಡಿಸಿಕೊಳ್ಳುತ್ತ ಪಾಲಕಿ ತೇರುಗಳನ್ನೇರುತ್ತ, ತನಗೆ ಯಾವುದರಲ್ಲಿಯೂ ಯಾರೂ ಸರಿಹೋಲರು ಎಂದು ಉಳಿದವರನ್ನು ಧಿಕ್ಕರಿಸುತ್ತ, ಕುಳಿತರೂ ನಿಂತರೂ ಶಿವೋಹಂ ಎನ್ನುತ್ತ ತಿರುಗುವ ಜನರು ಹಂಜಕ್ಕಿಯಂತಾಗುವರು.

ನನ್ನ ಮಠ, ನನ್ನ ಪಟ್ಟ, ನನ್ನ ತೇರು, ನನ್ನ ಪಾಲಕಿ ಎಂದು ಭ್ರಮಿಷ್ಠರಾಗಿ ಹೊಸಮಾನಗಿತ್ತಿ ಆಭರಣ ಹಾಕಿಕೊಂಡಂತೆ ಕಿರೀಟ, ಸರ, ಉಂಗುರ, ಬಂಗಾರ ಟೋಪನದ ರುದ್ರಾಕ್ಷಿ, ಬೆಳ್ಳಿ ಬೆತ್ತ ಇತ್ಯಾದಿ ಧರಿಸುವರು.

ಗವಿಯಲ್ಲಿ ಹುಗಿಸಿಕೊಂಡು, ಮೇಲೆ ನಳ ಹಚ್ಚಿಸಿಕೊಂಡು ಅಭಿಷೇಕದ ನೀರು ತಲೆಯ ಮೇಲೆ ಬಿದ್ದರೆ ದೊಡ್ಡವರಾದೆವೆಂದು ತಿಳಿಯುತ್ತಾರೆ. ಇದೆಲ್ಲ ಭ್ರಮೆಯೇ.

ಕೇಳುತ್ತ ಹೋಗುವವರಿಗೆ ವಿಷಯಕ್ಕಾಗಿ ಹೇಳುವವರು ಹೇಳುತ್ತ ಹೋಗುತ್ತಾರೆ. ಇಬ್ಬರದು ವ್ಯವಹಾರ ಭ್ರಮೆಯು. ಹೇಳಲಿಕ್ಕೆ ಕಲಿತುಕೊಂಡು ಭ್ರಮೆಗೊಂಡು ತಿರುಗುತ್ತಾರೆ. ತಮ್ಮ ಉದರಪೋಷಣೆಗಾಗಿ ಬರೇ ಉಪಚಾರದ ಮಾತು, ಡಂಭಾಚಾರದ ಪೂಜೆಗಳನ್ನು ಬೆಳೆಸಿಕೊಂಡು ಆಡಂಬರ ಜೀವಿಗಳಾಗುವರು. ಇಂಥವರ ಕಡೆಗೆ ಲಕ್ಷ್ಯ ಕೊಡಬಾರದು. ಇಂಥವರು ಯಮಕಿಂಕರರು, ತಮಗೂ ಗತಿ ಇಲ್ಲ, ಜನರಿಗೂ ಗತಿ ಇಲ್ಲ.

ಸಲುಗೆ ಕೊಟ್ಟು, ಶಾಂತವೃತ್ತಿ ತೋರಿಸಿ ಗೆಳೆತನ ಮಾಡಿ ಬಾಳ್ವೆ ಹಾಳು ಮಾಡುವ ಗುರುಗಳೂ ಉಂಟು, ಇವರನ್ನು ನಂಬಬಾರದು.

ಬಾಯಿಂದ ವಿಷಯಗಳ ಸಂಗ ಬಿಡಬೇಕೆಂದು ಹೇಳುವದು, ಮನಸ್ಸಿನಲ್ಲಿ ಸ್ತ್ರೀ ಪುರುಷರ ಸಂಗದ ಆಶೆ ಮಾಡುವದು. ತೊಗಲಿಗೆ ತೊಗಲು ಕೂಡಿಸಿದರೆ ನಮಗೇನು ಎಂದು ಮಾತನಾಡುವದೇ ದುರುಳ ವೇದಾಂತವು.

ಗ್ರಹಸ್ಥರಾದವರು ಹೇಗಿರುತ್ತಾರೆಂದರೆ, ಒಬ್ಬ ಬ್ರಾಹ್ಮಣ ಪಿಂಡದ ಆಹಾರವನ್ನು ಕಾಗಿಗೆ ಕೊಡುತ್ತಿದ್ದ, ಇದನ್ನು ನೋಡಿ ಅವನ ಹೆಂಡತಿ "ಕಾಗೆ ಒದರುವದನ್ನು ನೋಡಿ ಅಂಜಿಕೆಯಾಗುತ್ತದೆ" ಎಂದಳು. ತಾನು ಮಾತ್ರ ಗಂಡನಿಗೆ ನಿದ್ರೆ ಹತ್ತಿದಾಗ ಹೊಳೆಯ ಆಚೆಗಿರುವ ಮಗ್ಗಲ ಹಳ್ಳಿಗೆ ಈಜಿಹೋಗಿ ತನ್ನ ವ್ಯಭಿಚಾರದ ಕೆಲಸವನ್ನು ಮುಗಿಸಿಕೊಂಡು ಮತ್ತೂ ಗಂಡನಲ್ಲಿ ಹಾಜರಿರುತ್ತಿದ್ದಳು.

ಜ್ಞಾನಿಗಳು ಸಿಗುವದು ದುರ್ಲಭ. ಯಾರಾದರೂ ಕೇಳಲಿಕ್ಕೆ ಬಂದರೆ ಅವರಿಗೆ ಏನಾದರೊಂದು ನೆವ ಹೇಳಿ, ಅವರು ಕೇಳಿದ್ದನ್ನು ಬಿಟ್ಟು ಇನ್ನುಳಿದದ್ದನ್ನೇ





ಹೇಳುವರು. ಮೊದಲು ಇದನ್ನು ಅದನ್ನು ನೋಡು. ನಂತರ ಎಲ್ಲವನ್ನೂ ಹೇಳುತ್ತೇವೆಂದು ಹೇಳುವರು. ಇಂಥ ಮಾತಿಗೆ ಮರಳಾಗುವ ಶಿಷ್ಯರನ್ನೇ ಹುಡುಕುವರು. ಅವರಿಗೆ "ನಿಮ್ಮಂಥ ಶಿಷ್ಯರನ್ನೇ ಹುಡುಕುತ್ತ ಬಂದಿದ್ದೇವೆ, ನಿಮಗೆ ಹೇಳದೆ ಇನ್ನಾರಿಗೆ ಹೇಳಬೇಕು?" ಎಂಬ ಉಪಚಾರದ ಮಾತುಗಳನ್ನು ಹೇಳಿ, ಬೇಳೆ ಬೇಯಿಸಿಕೊಂಡು ತಮ್ಮ ಉಪಜೀವನ ಮಾಡಿಕೊಳ್ಳುವರು. ಶಿಷ್ಯರ ಉದ್ಧಾರಕ್ಕಾಗಿ ಅವರು ಕೇಳುವದಕ್ಕಿಂತ ಮೊದಲೇ ಹಳ್ಳಿಗೆ ಏಕರಾತ್ರಿ, ಪಟ್ಟಣಕ್ಕೆ ಪಂಚರಾತ್ರಿ ಹೀಗೆ ಸಂಚಾರ ಮಾಡುತ್ತ ಬೋಧ ಮಾಡುವದನ್ನು ಬಿಟ್ಟು ಸುಮ್ಮನೆ ಕಾಲ ಕಳೆಯುವರು, ಖಾಲಿ ಕಾಲ ಕಳೆಯುವದನ್ನು ಬಿಟ್ಟು ಅಷ್ಟು ಬೋಧೆ ಮಾಡಿದ್ದಾದರೆ ಅಸಂಖ್ಯ ಜೀವಿಗಳು ಉದ್ಧಾರವಾಗುತ್ತಿದ್ದರು.

ಸತ್ತವರನ್ನು ಬದುಕಿಸಿದ ಕೂಡಲೇ ಭ್ರಮೆಗೊಂಡು ಸತ್ಯವೆಂದು ತಿಳಿದು ವೇದಾಂತಕ್ಕೆ ತುಚ್ಛ ಮಾಡುವರು. ಇದರ ಸಮೀಪಕ್ಕೆ ಬರುವದಿಲ್ಲ, ಬರುವವರನ್ನು ಬರಗೊಡುವದಿಲ್ಲ. ಕೆಲವರು ಆಸನ ಹಾಕುವವರನ್ನೂ ಪ್ರಾಣಾಯಾಮ ಮಾಡುವವರನ್ನೂ ಕಂಡು ಭ್ರಮಿಸುವರು. ಎಷ್ಟು ಪವಾಡ ಮಾಡಿ ತೋರಿಸಿದರೂ ನಾಟಕದ ರಚನೆಯಂತೆ ಸುಳ್ಳು. ಅಣಿಮಾದಿ ಸಿದ್ಧಿಗಳಿಗೂ ಬೆರಗಾಗಬಾರದು. ಇವು ಜಡವು. ಬಲ್ಲವರು ಇವುಗಳನ್ನು ನಂಬುವದಿಲ್ಲ. ಹಠಯೋಗದಿಂದ ಅಣಿಮಾದಿ ಸಿದ್ಧಿಗಳು ಬರುತ್ತವೆ. ಇವೆಲ್ಲವುಗಳೂ ಸುಳ್ಳೆಂದು ನಿರ್ಮೋಹದಿಂದ ಇರಬೇಕು.

ಏನಾದರೂ ಚಾಟಕಿ, ಘಾಟಕಿ ವಿದ್ಯೆಯು ಇದ್ದರೆ ನಂಬುವರು. ಪಿಶಾಚಿ ವಶಮಾಡಿಕೊಂಡು, ಕಾಕು ಪೋಕು ವಿದ್ಯೆಯವರು ಏನಾದರೂ ಚಮತ್ಕಾರ ತೋರಿಸಿದರೆ ಜನರು ಮೆಚ್ಚಿ ಅಲ್ಲಿಯೇ ಹೋಗುತ್ತಾರಲ್ಲದೆ, ಬ್ರಹ್ಮನಿಷ್ಠ ಗುರುಗಳಲ್ಲಿ ಶ್ರದ್ಧೆಯನ್ನು ಬೆಳೆಸಿಕೊಳ್ಳುವದಿಲ್ಲ. ಬ್ರಹ್ಮನಿಷ್ಠರು ಇದ್ದಕ್ಕಿದ್ದ ಹಾಗೆ ತಿಳಿಯಿರಿ ಎನ್ನುತ್ತಾರೆ. ಅವರು ಜಾದೂಗಾರ ಗುರುಗಳಂತೆ ಯಾವುದೇ ಚಮತ್ಕಾರಗಳನ್ನು ತೋರಿಸುವದಿಲ್ಲ. ವಿವೇಕಿಯು ಇವರನ್ನು ನಂಬಿ ಭಕ್ತಿಯುಕ್ತನಾಗಿ ಆತ್ಮವಿಚಾರ ತಿಳಿದುಕೊಳ್ಳುವನು. ಅವಿವೇಕಿಗಳು ಶರೀರವು ನೆಟ್ಟಗಿದ್ದಾಗ್ಗೆ ವಿಷಯಗಳಿಗಾಗಿ ಬಡಿದಾಡುವರು. ಸಾಯುವ ಕಾಲಕ್ಕೆ ಇವುಗಳನ್ನೇ ಬಡಬಡಿಸುವರು.

# ಕರ್ಮ, ಕರ್ಮಫಲ ಮತ್ತು ಪುನರ್ಜನ್ಮ

ಹಿಂದೆ ಮಾಡಿದಂಥ ಕರ್ಮದ ಫಲವನ್ನು ಉಂಡೇ ತೀರಿಸಬೇಕಾಗುವದು. ಹಿಂದಿನ ಜನ್ಮದಲ್ಲಿ ಕರ್ಮ ಮಾಡಿದ್ದರ ಫಲವನ್ನು ಈಗ ಉಣ್ಣುವದು, ಈಗ ಮಾಡಿದ ಕರ್ಮದ ಫಲವನ್ನು ಮುಂದಿನ ಜನ್ಮದಲ್ಲಿ ಉಣ್ಣುವದು. ಜೀವನು ಬರುವ ಕಾಲಕ್ಕೆ ಕರ್ಮದ ಬುತ್ತಿಯನ್ನು ಕಟ್ಟಿಕೊಂಡೇ ಬಂದಿರುವನು, ಅದನ್ನು ಉಣ್ಣುವದೇ. ನಾವು ಮಾಡುತ್ತೇವೆ ಅನ್ನುವದು ಸುಳ್ಳು, ಕರ್ಮವಿದ್ದಂತೆ ಆಗಿಯೇ ಆಗುತ್ತದೆ, ಇದನ್ನು ತಪ್ಪಿಸುವವರಾರು. ನಿನಗೆ ಬರತಕ್ಕ ಸುಖ-ದುಃಖಗಳು ಒದಗಿಯೇ ತೀರುತ್ತವೆ, ತಪ್ಪುವದಿಲ್ಲ. 'ಬಪ್ಪುದು ತಪ್ಪದು, ಬಾರದು ಬಪ್ಪದು'. ಹಿಂದಿನವರ ಚರಿತ್ರೆಯನ್ನು ಓದಿದರೆ ಯಾವ ಕಾಲಕ್ಕೆ ಏನು ಆಗಬೇಕಾಗಿದೆಯೋ ಅದು ಆಗಿಯೇ ತೀರುತ್ತದೆ. ಅನ್ಯರಿಗೆ ಒಮ್ಮೆ ಸುಖ, ಒಮ್ಮೆ ದುಃಖ ಕೊಟ್ಟರೆ ನಮಗೂ ಅದೇ ಮರಳಿ ಬರುತ್ತದೆ. ಆದ್ದರಿಂದ ಪುಣ್ಯಕರ್ಮ ಮಾಡಬೇಕು.

ಅಪೇಕ್ಷೆಯಿಂದ ಕರ್ಮವನ್ನು ಮಾಡುತ್ತಾನಾದ್ದರಿಂದ ಆ ಕರ್ಮದ ಫಲವನ್ನು ಉಣ್ಣಲೇಬೇಕಾಗುವದು. ಶರೀರವನ್ನು ತಾಳಿದ್ದು ಮಾಡಿದ್ದನ್ನು ಉಣ್ಣಲಿಕ್ಕೆಂದೇ ತಿಳಿಯಬೇಕು. ಶರೀರದಿಂದ ಸುಖವಾಗುವದೆಂದು ತಿಳಿದದ್ದರಿಂದ ಇಹಪರಕ್ಕೆ ತಿರುಗುತ್ತಾನೆ. ಆದರೆ ಶರೀರದಿಂದ ದುಃಖವೇ ಆಗುವದು ಎಂಬುವದು ತಿಳಿದಿಲ್ಲ. ಪ್ರಾಣಮಯ ಕೋಶವು ಶರೀರವನ್ನು ಹೊತ್ತುಕೊಂಡು ಕರ್ಮನಿಯಮದ ಪ್ರಕಾರ ಇದ್ದು ತನ್ನ ಕೆಲಸ ಮಾಡಿ ಬಿಟ್ಟು ಹೋಗುವದು. ಕರ್ಮವಿದ್ದಂತೆ ಶರೀರವು ಬದಲಾಗುವದು.

ಮೊದಲು ಮಾಡಿದ ಕರ್ಮವು ಸಂಚಿತವು, ಇದು ಅನೇಕ ಜನ್ಮಗಳನ್ನು ಪಡೆಯಲಿಕ್ಕೆ ಕಾರಣವಾಗಿ ಅಹಂಕಾರದಲ್ಲಿರುವದು. ತನ್ನ ಸ್ವರೂಪವನ್ನು ತಿಳಿದಕೂಡಲೆ ಸಂಚಿತ ಕರ್ಮವು ಕೆಟ್ಟು ಹೋಗುವದು. ಸ್ವಪ್ನದ ಸುಖ-ದುಃಖ ಎಚ್ಚರಾದಕೂಡಲೆ ಕೆಟ್ಟು ಹೋದಂತೆ ಸ್ವರೂಪ ಜ್ಞಾನವಾದ ಕೂಡಲೆ ಸಂಚಿತ ಕರ್ಮವು ಕೆಟ್ಟು ಹೋಗುವದು. ಆಗಾಮಿ ಕರ್ಮವೆಂದರೆ ದೇಹಪಾತವಾಗುವವರೆಗೆ ಮಾಡಿದ್ದು. ಅಜ್ಞಾನಿಗೆ ಆಗಾಮಿ ಕರ್ಮವು ಸಂಚಿತದಲ್ಲಿ ಕೂಡುತ್ತದೆ. ಹೀಗೆ ಗುಡ್ಡದಷ್ಟು ಸಂಚಿತ ಕರ್ಮವು ಹಾಗೆಯೇ ಇರುವದು. ಇನ್ನೂ ಎಷ್ಟು ಜನ್ಮ ಕೊಡುವದೋ ಏನೋ! ಜ್ಞಾನಿಯ ಸಂಚಿತ ಕರ್ಮವು ದಗ್ಧವಾಗಿರುವದು, ಪ್ರಾರಬ್ಧವನ್ನು ಉಣ್ಣದೆ ಬಿಡುಗಡೆ ಇಲ್ಲ. ಜ್ಞಾನಿಗೆ ಪುನರ್ಜನ್ಮವಿಲ್ಲ. ಯಾವ ಜ್ಞಾನಿಗೆ ಯಾವ ಕಾಲಕ್ಕೆ ಏನು ಆಗಬೇಕಾಗಿದೆಯೋ ಅದು ಆಗಿಯೇ ತೀರುವದು. ಜ್ಞಾನಿಯ ಸಂಚಿತ ಪುಣ್ಯಕರ್ಮದ ಫಲವು ವಂದಿಸಿದವರಿಗೆ ಮತ್ತು ಪಾಪದ ಫಲವು ನಿಂದಿಸಿದವರಿಗೆ ಹೋಗುವದು.

ಅಧಿಕ ಪಾಪ ಅಲ್ಪ ಪುಣ್ಯದಿಂದ ಗಿಡ-ಮರ, ಕ್ರಿಮಿ-ಕೀಟ, ಪಶು-ಪಕ್ಷಿಗಳ ಜನ್ಮವು ಬರುವದು. ಅರ್ಧ ಪಾಪ-ಅರ್ಧ ಪುಣ್ಯಗಳಿಂದ ಮಾನವ ಜನ್ಮವು ಬರುವದು. ಬಹಳ ಪುಣ್ಯ ಅಲ್ಪ ಪಾಪವಿದ್ದರೆ ಪುಣ್ಯಮಯ (ದೇವತರ) ಶರೀರವು ಬರುವದು.





ದೇವತರ ಶರೀರದಲ್ಲಿಯೂ ಪಾಪವು ಇದ್ದೇ ಇರುವದು. ಈ ಪಾಪವು ಎಳ್ಳಷ್ಟೂ ಇರಬಾರದೆಂದರೆ ಸ್ವರೂಪ ಜ್ಞಾನವನ್ನು ಮಾಡಿಕೊಳ್ಳಲೇ ಬೇಕು.

ಗಿಡ-ಮರ, ಪಶು-ಪಕ್ಷಿಗಳದು ಭೋಗಭೂಮಿಯು, ಅಂದರೆ ಹಿಂದೆ ಮಾನವ ಜನ್ಮದಲ್ಲಿ ಮಾಡಿದ್ದನ್ನು ಈಗ ಉಣ್ಣುವದು. ಮತ್ತೆ ದುಡಿಯಲಿಕ್ಕೆ ಮನುಷ್ಯ ಜನ್ಮಕ್ಕೆ ಬರುವವು. ಹಿಂದಿನ ಋಣ ತೀರಿಸಲಿಕ್ಕೆ ದುಡಿಯುತ್ತವೆ. ಅವು ಎರಡನೆಯವರಿಗೆ ಹಾಯುವದನ್ನು ಒದೆಯುವದನ್ನು ಮಾಡಿದರೆ ಅವುಗಳಿಗೆ ಪಾಪವಿಲ್ಲ, ಹತ್ತಿಸಿಕೊಂಡು ಹೋದರೆ ಪುಣ್ಯವಿಲ್ಲ. ಇವರ ಕರ್ಮದ ಪ್ರಕಾರ ಸುಖ-ದುಃಖ ಬರುವವು, ಹೊಸದಾಗಿ ಅವುಗಳಿಗೆ ದುಡಿದುಕೊಳ್ಳುವದಕ್ಕೆ ಬರುವದಿಲ್ಲ. ಏಕೆಂದರೆ ಅಲ್ಲಿ ಕರ್ತಾ ಬುದ್ಧಿಯು ಇರುವದಿಲ್ಲ. ಆದರೆ ಮಾನವನದು ಭೋಗಭೂಮಿಯೂ ಅಹುದು, ಕರ್ಮಭೂಮಿಯೂ ಅಹುದು. ಅಂದರೆ ಹಿಂದಿನ ಜನ್ಮದಲ್ಲಿ ಮಾಡಿದ ಕರ್ಮದ ಫಲವನ್ನು ಈಗ ಉಣ್ಣುವದು ಮತ್ತು ಈ ಜನ್ಮದಲ್ಲಿ ಮಾಡಿದ ಕರ್ಮದ ಫಲವನ್ನು ಮುಂದಿನ ಜನ್ಮದಲ್ಲಿ ಉಣ್ಣುವದು, ಮನುಷ್ಯ ಜನ್ಮ ಬಂದರೂ ಅಭಿಮಾನ ಬರುವ ತನಕ ಧರ್ಮಾದಿಗಳಿಲ್ಲ.

ಕೆಲವರು ಇಹದಲ್ಲಿ ಸ್ವಲ್ಪ ಸುಖ, ಪರದಲ್ಲಿ ಹೆಚ್ಚು ಸುಖವಿದೆ ಎಂದು ತಿಳಿದಿರುವರು. ರೊಟ್ಟಿಗಿಂತ ಹೋಳಿಗೆಯು ಹೆಚ್ಚು ಸುಖವೆಂದು ತಿಳಿದಂತೆ. ರೊಟ್ಟಿಯನ್ನು ಗಳಿಸುವದಕ್ಕೆ ಸ್ವಲ್ಪ ಕಷ್ಟ, ಹೋಳಿಗೆಯನ್ನು ಗಳಿಸುವದಕ್ಕೆ ಹೆಚ್ಚು ಕಷ್ಟ. ಪುಣ್ಯ ಮಾಡಿ ಸ್ವರ್ಗಕ್ಕೆ ಹೋಗುವದು, ಪುಣ್ಯ ತೀರಿದ ಮರುದಿನ ಚೆಂಡು ಹಿಡಿದು ಲೆಕ್ಕ ಮುಟ್ಟಿತೆಂದು ದಬ್ಬಿ ಬಿಡುವರು. ಆಗ ಮತ್ತೆ ಇಹಲೋಕಕ್ಕೆ ಬರುವದು. ಸ್ವರ್ಗಸುಖವನ್ನು ಗಳಿಸಲು ಜಡ ತಪಸ್ಸು, ಉಪವಾಸ ಹೀಗೆ ಕಷ್ಟ ಪಡಬೇಕು. ಆ ದೇವಲೋಕದಲ್ಲಿ ಒಬ್ಬರಿಗಿಂತ ಒಬ್ಬರು ಹೆಚ್ಚಿನ ಪದವಿಯವರು ಇರುವರು. ಅವರನ್ನು ನೋಡಿ ನಾನೂ ಅಂಥ ತಪಸ್ಸನ್ನು ಮಾಡಿದ್ದರೆ ಆ ಪದವಿ ಸಿಗುತ್ತಿತ್ತು ಎಂಬ ಚಿಂತೆ, ದಿನಗಳು ಕಡಿಮೆಯಾದಂತೆ ಸ್ವಲ್ಪ ಉಳಿಯಿತೆಂಬ ಚಿಂತೆ, ಅದು ತೀರಿದ ಮೇಲೆ ಗತಿಯೇನು ಎಂಬ ಚಿಂತೆ, ಹೀಗೆ ಸ್ವರ್ಗದಲ್ಲಿರುವದರಿಂದಲೂ ಸುಖವಿಲ್ಲ. ಆದ್ದರಿಂದ ಸಕಾಮ ಪುಣ್ಯವೂ ಪಾಪವೇ. ಆದಕಾರಣ ಕಡಿಮೆ ದುಡಿಕೆಯ ಶ್ರವಣಾದಿಗಳನ್ನು ಮಾಡಿಕೊಂಡರೆ ಮುಂದೆ ಹೆಚ್ಚಿನ ಲಾಭವಿದೆ.

ಇಂದ್ರಿಯಗಳು ವಿಷಯಗಳನ್ನು ಗ್ರಹಿಸುವವು. ಆಗ ಮನಸ್ಸು ಆಸಕ್ತಿಯನ್ನು ಹೊಂದುವದು. ಮನಸ್ಸಿನ ವಿಷಯಾಸಕ್ತಿಯೇ ಜನ್ಮಕ್ಕೆ ಕಾರಣವಾಗುವದು. ಅನಂತ ವಿಷಯಗಳನ್ನು ನೋಡಿದರೆ ಅನಂತ ವಾಸನೆಗಳು, ಅನಂತ ವಾಸನೆಗಳಿಂದ ಅನಂತ ಕರ್ಮಗಳು, ಅವುಗಳಿಂದ ಅನಂತ ಜನ್ಮಗಳು. ಎಷ್ಟು ದುಡಿದರೂ ಅನಂತ ಜನ್ಮ ಕೊಡುವ ಭವಾರಣ್ಯವನ್ನು ಸೇರುವದೇ, ಇಲ್ಲಿ ಕಾಮ ಕ್ರೋಧವೆಂಬ ಕಾಡುಮೃಗಗಳಿವೆ.

ಸಕಾಮಿಯು ಕೆರೆ ಕಡಿಸಿ ಪುಣ್ಯವನ್ನು ಬೇಡುತ್ತಾನೆ, ಸಕಾಮಿಯು ವ್ಯಾಪಾರಿಯು. ನಿಷ್ಕಾಮಿಯು ಯಾವುದಕ್ಕೂ ಆಶೆ ಮಾಡದೆ, ಬೇಡದೆ ತಾನೇ ತಾನೆಂದು ಸುಮ್ಮನಿರುವನು. ನಿಷ್ಕಾಮಿಗೆ ತತ್ತ್ವ ವಿಚಾರ, ವೇದ, ಗುರು ದೊರೆಯುವವು. ನಿಷ್ಕಾಮ ಪುಣ್ಯವಂತನಿಗೆ ಯೋಗೀಶ್ವರನ ಕೃಪೆಯಿಂದ ಮುಕ್ತಿಯು ಸೂರೆಗೊಳ್ಳುತ್ತದೆ.

ಯಾವುದನ್ನು ಮನಸ್ಸಿನಲ್ಲಿ ನೆನೆಯುತ್ತಾನೋ ಅದೇ ವಾಸನೆಯಿಂದ ಹುಟ್ಟುತ್ತಾನೆ. ಪ್ರಾಣ ಬಿಡುವ ಕಾಲದಲ್ಲಿ ವಿಷಯಗಳ ನೆನಪಿನಲ್ಲಿ ಇದ್ದದ್ದಾದರೆ ಜನ್ಮದ ಮೇಲೆ ಜನ್ಮ ಹೊಂದಿ ಭವದುಃಖಕ್ಕೆ ಗುರಿಯಾಗುತ್ತಾನೆ. ಯಾವ ವಿಷಯದ ಆಶೆಯು ಹೆಚ್ಚಿಗಿರುತ್ತದೆಯೋ ಅದೇ ವಾಸನೆಯೇ ಬೀಜವಾಗಿ ಭೋಗ ಮಾಡಲಿಕ್ಕೆ ಹುಟ್ಟಬೇಕಾಗುತ್ತದೆ. ಯಾವ ಪದಾರ್ಥವನ್ನು ಉಣ್ಣುವೆವೋ ಅದೇ ಡೇಗು ಬರುವಂತೆ ಅಸ್ತಿ ಭಾತಿ ಪ್ರಿಯದ ನೆನಪೇ ಆಗಬೇಕು. ಪ್ರಾಣ ಬಿಡುವ ಕಾಲಕ್ಕೆ ಆತ್ಮಾನುಭವದ ಸಂಸ್ಕಾರದಲ್ಲಿಯೇ ಇರಬೇಕು.

ಸಕಾಮವು ಭೋಗವನ್ನು ಉಣ್ಣಿಸುತ್ತದೆ. ನಿಷ್ಕಾಮವು ಶಿಲ್ಕು ಬಿದ್ದು ಪೂರ್ಣ ತುಂಬಿದಾಗ ವಿಚಾರಕ್ಕೆ ಹಚ್ಚುತ್ತದೆ. ಅದು ತಾನೇ ಎಬ್ಬಿಸಿ ಸದ್ಗುರು ಸನ್ನಿಧಿಗೆ ಒಯ್ಯುತ್ತದೆ. ನಿಷ್ಕಾಮ ಪುಣ್ಯವಿಲ್ಲದಿದ್ದರೆ ನೆರೆಮನೆಯಲ್ಲಿ ನಿತ್ಯ ಬ್ರಹ್ಮಜಿಜ್ಞಾಸೆ ನಡೆದರೂ ಅಲ್ಲಿಗೆ ಹೋಗಗೊಡುವದಿಲ್ಲ. ಪುಣ್ಯವಂತನಿಗೆ ದಾರಿಯಲ್ಲಿ ಬಂಗಾರದ ಸಾಮಾನು ಬಿದ್ದಿದ್ದರೆ ಅವು ಮಣಿಗಾರರ ಮಣಿಗಳೆಂದು ಉಪೇಕ್ಷಾ ಬುದ್ಧಿಯು ಹುಟ್ಟುವದು ಮತ್ತು ಬ್ರಹ್ಮಸ್ವರೂಪವು ಅಂಗೈಯಲ್ಲಿಯ ರತ್ನದಂತೆ ಸ್ಪಷ್ಟವಾಗಿ ತೋರುವದು.

ಸಕಾಮ ಪುಣ್ಯವಿದ್ದರೆ ಸಾಹುಕಾರ, ದೊರೆ, ರಾಜರು, ಚಕ್ರವರ್ತಿಗಳು ಆಗುತ್ತಾರೆ. ಇವರಿಗೆ ವಿಚಾರವಿರುವದಿಲ್ಲ. ವಿಷಯಗಳಲ್ಲಿಯೇ ಮುಳುಗುವರು. ಇವರಿಗೆ ವಿಚಾರವಿದ್ದರೆ ಪಾಪದ ಕೆಲಸವನ್ನು ಮಾಡುವದಿಲ್ಲ. ಅಂದರೆ ದ್ರವ್ಯ ಗಳಿಸಬೇಕು, ಎರಡನೆಯ ರಾಜರನ್ನು ಸೋಲಿಸಿ ಸಾಮಂತರನ್ನಾಗಿಸಬೇಕು, ಸುಂದರ ಸ್ತ್ರೀಯರನ್ನು ಭೋಗಿಸಬೇಕು ಇತ್ಯಾದಿ.

ಹುಟ್ಟಿದ ಬರೋಬರಿ ಕೂಸಿಗೆ ಸುಖ ದುಃಖ ಏಕೆ ಬರುತ್ತವೆ ಎಂದರೆ ಇದಕ್ಕೆ ಹಿಂದಿನ ಪಾಪ ಪುಣ್ಯವೇ ಕಾರಣ. ಅಂಗಜ ವಿಕಾರಗಳು ಪ್ರಾರಬ್ಧ ಸರಿಯಾಗಿ ಬಂದು ಸುಖ ದುಃಖಗಳನ್ನು ಕೊಟ್ಟು ತಾವೇ ಸರಿದು ಹೋಗುತ್ತವೆ.

ತಾಯಿ ತಂದೆ, ಬಂಧು ಬಾಂಧವರು, ಮಿತ್ರರು ಎಲ್ಲರೂ ಕೂಡಿಕೊಂಡು, ಅರಿಶಿಣ ಬಡಿದು, ಬಾಸಿಂಗ ಕಟ್ಟಿ ಮೆರೆಸಿ, ಕೊರಳಿಗೆ ಗುದ್ದಿ ಕಟ್ಟಿ ತೊಡರು ಮಾಡಿ, ಎತ್ತ ಹೋಗದಂತೆ ವಿಷಯದ ಬಲಿಗೆ ಹಾಕಿ ಸುತ್ತುವರೆದು ಕಾವಲುಗಾರರಾಗಿ ನಿಂತು, ವಿಚಾರಕ್ಕೆ ಹೋಗಗೊಡದೆ, ಹಿಂದಕ್ಕೆ ಜಗ್ಗಿ ದೊಡ್ಡ ಕೊಂಡಕ್ಕೆ ಹಾಕುತ್ತಾರೆ. ಇದು ತನ್ನ ಪಾಪ ಕರ್ಮವೇ.

ದೇವತರಿಗಾದರೂ ದುಃಖವು ಬಿಟ್ಟಿದ್ದಲ್ಲ. ಅವರು ಭೂಲೋಕಕ್ಕೆ ಬಂದು ನಿಷ್ಕಾಮ ಪುಣ್ಯ ಮಾಡಿಕೊಂಡು ವೈರಾಗ್ಯ ತಾಳಿ ವಿಚಾರಕ್ಕಾಗಿ ಬ್ರಹ್ಮನಿಷ್ಠರನ್ನು ಆಶ್ರಯಿಸಿ, ಅವರ ಸೇವೆ ಸಲ್ಲಿಸಿ ಸ್ವರೂಪದಲ್ಲಿ ತಲ್ಲೀನರಾಗಬೇಕು. ಅಂದರೆ ಜನನ ಮರಣಗಳಿಂದ ಬಿಡುಗಡೆಯಾಗುವರು.

ಯಾವುದಾದರೂ ಪದಾರ್ಥವು ಪ್ರಾಪ್ತಿಯಾಗಬೇಕಾದರೆ ಹಿಂದೆ ನೀನು ಕೊಟ್ಟಿದ್ದರೆ ಈಗ ಸಿಗುತ್ತದೆ. ಹಿಂದೆ ಕೊಡದೇ ಇದ್ದರೆ ಈಗ ಏನೂ ಸಿಗುವದಿಲ್ಲ. ಈಗ ಸುಮ್ಮನೆ ಜೋರು ಮಾಡಿ ಎರಡನೆಯವರ ಅನ್ನವನ್ನು ತೆಗೆದುಕೊಂಡರೆ





ಅದು ಋಣವಾಗುವದು. ಒಬ್ಬರ ಅನ್ನವನ್ನು ತೆಗೆದುಕೊಳ್ಳಬೇಕಾದರೆ ಅವರಿಗೆ ಯಾವ ತರದ್ದಾದರೂ ಉಪಕಾರವನ್ನು ಮಾಡಬೇಕು. ಇಲ್ಲವೆ ಬಂಧನದ ಬಿಡುಗಡೆಯಾಗುವಂಥ ಒಂದೆರಡು ವಿಚಾರದ ವಾಕ್ಯಗಳನ್ನು ತಿಳಿಸಿ ತಕ್ಕೊಳ್ಳಬೇಕು. ಹಾಗೇ ತೆಗೆದುಕೊಂಡರೆ ಋಣವಾಗುತ್ತದೆ. ಹೆಂಡಿರು ಮಕ್ಕಳು, ಎತ್ತು ಎಮ್ಮೆ ಇವೆಲ್ಲ ಋಣದಿಂದಲೇ ಕೂಡಿರುತ್ತಾರೆ. ಋಣ ತೀರಿಸಲಿಕ್ಕೆ ಬಂದಿರುವರು, ಇದು ತೀರಿದ ನಂತರ ಬಿಟ್ಟು ಅಥವಾ ಓಡಿ ಹೋಗುವರು ಅಥವಾ ಸಾಯುವರು. ಏನೇ ಒದಗಿದರೂ ಋಣ ಬಿಟ್ಟು ಆಗುವದಿಲ್ಲ. ನೀನಾದರೂ ಹೆಂಡಿರು ಮಕ್ಕಳು, ದನ ಕರಕ್ಕಾಗಿ ಋಣ ತೀರಿಸಲಿಕ್ಕೆ ಜನ್ಮ ತಾಳಿ ಅವರ ಸಲುವಾಗಿ ದುಡಿಯಲಿಕ್ಕೇ ಬೇಕು. ನಿನ್ನ ಋಣ ಅವರು ತಿಂದಿದ್ದರೆ ತೀರಿಸಲಿಕ್ಕೇ ಬೇಕು. ಬಿಡುಗಡೆ ಇಲ್ಲ. ಮನೆಯ ಪ್ರಪಂಚಕ್ಕೆ ಭಿಕ್ಷೆ ಮಾಡಿ ತಂದು ಹಾಕುವದು ಎಂಥ ಋಣವು. ಧನ–ವನಿತಾದಿ ಸಂಪತ್ತು ಇಲ್ಲದಿದ್ದರೆ ನಾವು ಹಿಂದೆ ಸಕಾಮ ಪುಣ್ಯವನ್ನು ಮಾಡಿಲ್ಲವೆಂದೇ ಅರ್ಥ. ಬಡತನ, ಚಿಂತೆ, ದುಃಖ ಬರಬೇಕಾದರೆ ಹಿಂದಿನ ಪಾಪ ಕರ್ಮವೇ ಕಾರಣ. ಆದ್ದರಿಂದ ಪುಣ್ಯ ಮಾಡುತ್ತ ಹೋದರೆ ಸುಖಮಯ ಫಲವು ದೊರೆಯುವದು. ಪಾಪಾದಿಗಳನ್ನು ಯಾವುದಾದರೂ ಯಂತ್ರದಿಂದ ನೋಡಲು ಸಾಧ್ಯವಿಲ್ಲ. ಚಿತ್ರಗುಪ್ತರು ನಮ್ಮ ಕರ್ಮದ ದಾಖಲೆಗಳನ್ನು ಇಡುವರು, ಮರೆಯುವದಿಲ್ಲ. ಸಂಪತ್ತಿದ್ದರೆ ಸಕಾಮ ಪುಣ್ಯ, ಬಡತನವಿದ್ದರೆ ಪಾಪ, ವೈರಾಗ್ಯ ಜ್ಞಾನಗಳಿದ್ದರೆ ನಿಷ್ಕಾಮ ಪುಣ್ಯ ಎಂದು ಸಿದ್ಧ ಮಾಡಬೇಕು. ಬುದ್ಧಿಯಲ್ಲಿ ಪಾಪ ಪುಣ್ಯವಿರುತ್ತವೆ. ಇವು ಇಹ ಪರ, ಲೋಕಾಂತರ ತಿರುಗಾಡಲಿಕ್ಕೆ ಹಚ್ಚುತ್ತವೆ. ನಿಷ್ಕಾಮ ಪುಣ್ಯವಂತನಿಗೆ ಶೃತಿ ಜ್ಞಾನವು ಒಮ್ಮಿಂದೊಮ್ಮೆಲೆ ತನ್ನಿಂದ ತಾನೇ ತಿಳಿಯುತ್ತದೆ. ಗ್ರಂಥ ನೋಡಿದ ಕೂಡಲೇ ಜ್ಞಾನವಾಗುತ್ತದೆ. ಅಂತಪ್ಪ ಗುರುಗಳೂ ದೊರಕುತ್ತಾರೆ. ಇವರಿಗೇನೇ ಯೋಗೀಶ್ವರನಲ್ಲಿ ಭಕ್ತಿಯು ಹುಟ್ಟುತ್ತದೆ. ಇವರು ಹಿಂದೆ ಗಂಡ ಹೆಂಡಿರು, ಮಕ್ಕಳು ದೊರಕಲೆಂದು ದುಡಿದವರಲ್ಲ. ಸಕಾಮಿಯು ಮಾತ್ರ ಬೇಡಿ ಭಕ್ತಿ ಮಾಡಿದ್ದರಿಂದ ಹೆಂಡಿರು, ಗಂಡರು, ಮಕ್ಕಳು, ಶ್ರೀಮಂತಿಕೆ ಮುಂತಾದವು ದೊರೆಯುವವು.

ದುಃಖವು ಯಾಕೆ ಬಂದಿತು? ಪಾಪ ಕರ್ಮದ ಫಲದಿಂದ ಬಂದಿತು, ಪಾಪ ಕರ್ಮ ಮಾಡಿ ಅದರ ಫಲರೂಪವಾದ ದುಃಖವನ್ನು ಹೊಂದಲೇ ಬೇಕಾಗುವದು. ಈ ಜನ್ಮದಲ್ಲಿ ಏನಾದರೊಂದು ಸಿದ್ಧಿಸದಿದ್ದರೆ ಅದು ಹಿಂದಿನ ಜನ್ಮದ ಪಾಪವೆಂದು ತಿಳಿಯಬೇಕು. ಪಾಪ ಮಡುವದಂತೂ ಬಿಡುವದಿಲ್ಲ, ದುಃಖವು ತಪ್ಪುವದಿಲ್ಲ. ದೇವರು ದುಃಖವನ್ನು ತಂದಿದ್ದಾನೆಂದು ದೇವರ ಮೇಲೆ ಹಾಕುವರು. ದೇವರಿಗೂ ಇವನಿಗೂ ದ್ವೇಷವೋ? ಇದು ಸುಳ್ಳು.

ದಾನಕ್ಕಿಂತ ಹೆಚ್ಚಿನ ಪುಣ್ಯವಿಲ್ಲ, ಲೋಭಕ್ಕಿಂತ ಹೆಚ್ಚಿನ ಪಾಪವಿಲ್ಲ. ದಾನದಿಂದ ಅಂತಃಕರಣವು ಶುದ್ಧವಾಗುವದು. ಆಶೆಯನ್ನು ಇಟ್ಟುಕೊಂಡು ದಾನವನ್ನು ಮಾಡಿದರೂ ಸಂಸ್ಕಾರವಾಗಿ ಪಾಪದಲ್ಲಿ ಒಂದಿಷ್ಟು ಕಡಿಮೆಯಾಗುವದು. ಆದರೆ ಇದು ಪುಣ್ಯವೇ ಅಲ್ಲ. ನನಗೆ ಯಾವುದೂ ಬೇಡ. ಹುಟ್ಟು ಸಾವು ಬೇಡ ಎಂದರೆ ಇದು ನಿಜ ಪುಣ್ಯವು. ಬೇಡುವದೇ ಪಾಪವು.

ನಮ್ಮ ಎದುರಿಗೆ ನಮ್ಮನ್ನು ಬೈದರೂ, ಹೊಡೆದು ಮಾಲು ಅಪಹರಿಸಿಕೊಂಡು ಹೋದರೂ ಅವರಿಗೆ ಕಳ್ಳರೆನ್ನಬಾರದು. ತಾನೇ ಕಳ್ಳನೆನ್ನಬೇಕು. ಪಾಪ ಮಾಡುವಾಗ ಬುದ್ಧಿಯು ಇರುವದಿಲ್ಲ. ಅದರ ಫಲವನ್ನು ಉಣ್ಣುವಾಗ ಅತಿ ದುಃಖವಾಗುವದು. ಪ್ರತ್ಯಕ್ಷ ಎರಡನೆಯವನು ತನ್ನ ಹೆಂಡತಿಯನ್ನು ಹಿಡಿದುಕೊಂಡು ಹೋದರೂ ನಾನು ಹಿಂದೆ ಹೀಗೆ ಮಾಡಿದ್ದೆ, ಅದರಿಂದಲೇ ಹೀಗಾಯಿತೆನ್ನಬೇಕು. ಇದರ ನೆನಪು ಸಹಿತ ಇರಬಾರದು. ಅನ್ಯವೆಂದು ತಿಳಿದು ಅನ್ಯರಿಗೇನಾದರೂ ಕೆಡಕು ಮಾಡಿದರೆ ನನಗೆ ನಾನೇ ಕೇಡು ಮಾಡಿಕೊಂಡಂತಾಗುವದು. ಬೇನೆ, ಬಡತನ, ಶಿಕ್ಷೆ, ದಂಡ ಏನು ಬಂದರೂ ಹಿಂದೆ ಮಾಡಿದ್ದು, ಹೀಗೆ ತಿಳಿದರೆ ಮುಂದೆ ಹೊಸ ಪಾಪ ಮಾಡಲಿಕ್ಕೆ ಸಂದು ಉಳಿಯುವದಿಲ್ಲ. ಎರಡನೆಯವರು ಮಾಡಿದ ಪಾಪ ಪುಣ್ಯಗಳು ನಮಗೆ ಎಂದೂ ತಟ್ಟುವದಿಲ್ಲ. ಏಕೆಂದರೆ ಅವರು ಮಾಡಿದ್ದು ಅವರಿಗೇ. ಗಂಡನಿಗೆ ಹೆಂಡತಿಯ ಪಾಪ, ಗುರುವಿಗೆ ಶಿಷ್ಯನ ಪಾಪ ಎಂದೂ ಹತ್ತುವದಿಲ್ಲ. ಆದ್ದರಿಂದ ಮೋಕ್ಷಾಪೇಕ್ಷಿಯು ಯಾರೇನು ಮಾಡಿದರೂ ತಾನೇ ಮಾಡಿರುವೆನೆಂದು ತಿಳಿದುಕೊಳ್ಳುವನು.

ಅಡವಿಯಲ್ಲಿ ಹುಲಿ ಬೆನ್ನಟ್ಟಿದಾಗ, ಹಡಗವು ಸಮುದ್ರದಲ್ಲಿ ಮುಳುಗುವಾಗ, ವೈರಿಗಳು ಮೈಮೇಲೆ ಏರಿ ಬರುವಾಗ ಪುಣ್ಯವಿದ್ದರೆ ರಕ್ಷಣೆಯಾಗುತ್ತದೆಂದು ತಿಳಿದು ಬಡತನವಿದ್ದರೂ ಅಥವಾ ಭೋಗವಿದ್ದರೂ ತ್ಯಜಿಸಿ ನಿರಾಶೆಯುತನಾಗಿ, ಶುದ್ಧ ಹೃದಯವಿಟ್ಟುಕೊಂಡು ಆತ್ಮಜ್ಞಾನವನ್ನು ಮಾಡಿಕೊಂಡರೆ ಭವದಿಂದ ಪಾರಾಗುವನು. ಇದುವೇ ಪರಮ ಸೌಭಾಗ್ಯ. ತಾನು ದುಡಿದು ಗಳಿಸಿದ್ದನ್ನು ಎರಡನೆಯವರನ್ನು ಕರೆದುಕೊಂಡು ಉಣ್ಣಬೇಕು, ವಂಚನೆ ಮಾಡಬಾರದು. ಆಳಿಗೊಂದು ತಮಗೊಂದು ತಿರುಕರಿಗೊಂದು ಮಾಡಿದರೆ ಮಹಾಪಾಪ. ತಾನು ದುಡಿದು ತಂದು ತಾನೇ ಉಂಡರೆ ಮಹಾರೌರವ ನರಕ. ಅಂದಮೇಲೆ ಎರಡನೆಯವರ ಪದಾರ್ಥಗಳನ್ನು ಉಪಭೋಗಿಸಿದರೆ ಎಷ್ಟು ಪಾಪ ನೋಡಿರಿ!

ರಾಜ್ಯದಲ್ಲಿ ಅನ್ಯಾಯ ನಡೆದದ್ದನ್ನು ನೋಡದೆ ಸುಮ್ಮನೆ ಬಿಟ್ಟಿದ್ದರಿಂದ ರಾಜನು ನರಕಕ್ಕೆ ಹೋಗುವನು. ಫೋಜದಾರನು ದರೋಡೆ ಕಳವು ಮೊದಲಾದವುಗಳನ್ನು ನೋಡದೆ ಇರುವದರಿಂದ ನರಕಕ್ಕೆ ಹೋಗುವನು. ಗೌಡರು ಅನ್ಯಾಯ ಮಾಡುವದರಿಂದಲೂ, ಅನ್ಯಾಯ ಮಾಡುವವರನ್ನು ನೋಡದೇ ಇರುವದರಿಂದಲೂ ಊರ ಪಾಪವು ಗೌಡರಿಗೆ ಬರುವದು.

ಇನ್ನೊಬ್ಬರಿಗೆ ತಿನ್ನಿಸದೇ ಎಷ್ಟೇ ದುಡ್ಡನ್ನು ಕೂಡಿಸಿದರೂ ಅದೆಲ್ಲವೂ ಪಾಪವೇ. ನಿತ್ಯದ ದುಡಿಮೆಯಲ್ಲಿ ಆ ದಿನದ ತಮ್ಮ ಖರ್ಚಿಗೆ ಇಟ್ಟುಕೊಂಡು ಉಳಿದುದೆಲ್ಲವನ್ನೂ ದಾನ ಮಾಡಬೇಕು. ತಾನು ಗಳಿಸಿ ಮಕ್ಕಳಿಗೆ ಇಡುವದರಿಂದ ಪಾಪಕ್ಕೆ ಗುರಿಯಾಗುವನು. ಏಕೆಂದರೆ ಮಕ್ಕಳು ಕೆಟ್ಟ ಕೆಲಸ ಮಾಡಿದರೆ ಅದಕ್ಕೆ ತಾನೂ ಭಾಗಿಯಾಗಿ ದುರ್ಗತಿಯನ್ನು ಹೊಂದಬೇಕಾಗುವದು. ಸ್ವತಃ ದುಡಿದು ತತ್ತ್ವ ಬಲ್ಲ ತತ್ತ್ವಜ್ಞಾನಿಗೆ ಅರ್ಧ ರೊಟ್ಟಿ ಕೊಟ್ಟರೆ ಸಾಕು, ದೊಡ್ಡ ಫಲವು. ಇದಕ್ಕಾಗಿ ಹೊಲ ಮನೆ ಮಾರಿದರೂ ಅಡ್ಡಿಯಿಲ್ಲ. ಭಿಕ್ಷೆ ಎತ್ತಿ ತಂದುಕೊಟ್ಟರೂ ಯೋಗ್ಯವೇ. ಹೀಗೆ ಮಾಡಿದರೆ ಯಮನ ಶಿಕ್ಷೆಗೆ ಸಿಗುವದಿಲ್ಲ. ಸ್ವರೂಪ ಜ್ಞಾನಕ್ಕೆ ಸಹಾಯವಾಗುವದು.





ಕೆಟ್ಟ ಕೆಲಸ ಮಾಡಿದರೆ ಯಮಲೋಕದಲ್ಲಿ ಶಿಕ್ಷೆಗೆ ಗುರಿಯಾಗಬೇಕಾಗುವದು. ಅನಂತ ಜನ್ಮಗಳ ಅತಿ ಪಾಪ ಕರ್ಮದಿಂದ, ಮರಣ ಕಾಲದಲ್ಲಿ ಭಯಂಕರ ದುಃಖಿಯಾಗುವನು. ಯಮನು ಪಾಪಿಷ್ಟರಿಗೆ ಭಯಂಕರನಾಗಿ ಕೆಂಜೆಡೆ, ಉರಿಗಣ್ಣು ತೆರೆದು ದೊಡ್ಡ ನಾಲಿಗೆ ಹಲ್ಲುಗಳುಳ್ಳವನಾಗಿ ಬಂದು ಪಾಶದಲ್ಲಿ ಬಿಗಿದೊಯ್ದು ಶಿಕ್ಷೆ ಕೊಡುವನು. ಧರ್ಮರೂಪದಿಂದ ಬಂದು ಶಿವದೂತರ ಮೇಲೆ ಹೊರಿಸಿಕೊಂಡು ಸ್ವರ್ಗಕ್ಕೆ ಪುಣ್ಯಾತ್ಮರನ್ನು ಒಯ್ಯುವನು. ಪುಣ್ಯ ತೀರುವವರೆಗೆ ದೇವತರಿಂದ ಪೂಜೆಯನ್ನು ಮಾಡಿಸಿ ಅಮೃತ ಕುಡಿಸುವನು. ಮುದ್ದತ ತೀರಿದ ಕೂಡಲೇ, ಅಲ್ಲಿಂದ ಹೊರಗೆ ಬರಬೇಕಾಗುವದು. ಇಹದಲ್ಲಿ ಅಪರಾಧ ಮಾಡಿದರೆ ಸ್ಥೂಲದೇಹಕ್ಕೆ ಶಿಕ್ಷೆ ಕೊಡುವರು. ಸೂಕ್ಷ್ಮ ಲೋಕದಲ್ಲಿ ಯಮನು ಸೂಕ್ಷ್ಮ ಶರೀರಕ್ಕೆ ಶಿಕ್ಷೆಯನ್ನು ಕೊಡುವನು.

ಯಾರು ತಮ್ಮ ಸಂಬಂಧಿಕರೇ ಉಣ್ಣಬೇಕೆನ್ನುವರೋ ಅವರಿಗೆ ಯಮಗೊಂಡ ತಪ್ಪದು. ಕಾಟ ಕೊಡುವವರು ಜಾಲಿ ಮರವಾಗಿ ಹುಟ್ಟುವರು. ಸತಿ ಸುತಾದಿಗಳಲ್ಲಿ ಅತಿ ಮೋಹಿತರು ಮಾವಿನ ಮರವಾಗಿ ಜನ್ಮ ತಾಳುವರು. ಹೊಲದ ಮೇಲೆ ಆಶೆಯುಳ್ಳವರು ಅನೇಕರಿಗೆ ತ್ರಾಸು ಕೊಟ್ಟಿದ್ದರಿಂದ ನರಿಯಾಗಿ ಹುಟ್ಟುವರು.

ಯಾರಿಂದ ಕಲಿತಿರುವರೋ ಅವರಿಗೇ ತಿರುಗಿ ಬಿದ್ದು ಅಹಂಕಾರದಿಂದ ಪಿಶಾಚಿ ಜನ್ಮ ತಾಳಿ ತಿರುಗುತ್ತಾರೆ. ಎಲ್ಲ ಜನರನ್ನು ಗೋಳಾಡಿಸುವದರಿಂದ ಚಾಂಡಾಲನ ಜನ್ಮವು ಬರುವದು. ಚಾಡಿ, ನಿಂದೆ, ಸುಳ್ಳು ಹೇಳಿ ಮೂಕನಾಗುತ್ತಾನೆ. ಮಂದಿಯನ್ನು ಒದ್ದು ಕುಂಟನಾಗುತ್ತಾನೆ. ಎರಡನೆಯವರ ಪದಾರ್ಥಗಳನ್ನು ಅವರನ್ನು ಕೇಳದೆ ತುಡುಗು ಮಾಡಿ ತಿಂದದ್ದರಿಂದ ಅವರ ಹೇಸಿಗೆಯಲ್ಲಿಯ ಹುಳು ಜಂತುಗಳಾಗಿ ಹುಟ್ಟಬೇಕಾಗುತ್ತದೆ.

ಪಾಪ ಮಾಡಿದರೆ ಗಿಡಗಂಟಿಯಾಗಿ ಹುಟ್ಟಬೇಕು. ನಮಗೆ ಬಾಯಿ ಮೇಲಿದೆ, ಅವುಗಳಿಗೆ ಕೆಳಗಿನ ಬೇರಿನ ಛಿದ್ರಗಳೇ ಬಾಯಿ. ಇದು ಪಾಪದ ಫಲ. ಅವು ಬೇರುಗಳಿಂದ ಮಣ್ಣನ್ನೂ ನೀರನ್ನೂ ಹೀರಿಕೊಳ್ಳುತ್ತವೆ. ಲೌಕಿಕದಲ್ಲಿಯಾದರೂ ನಿನ್ನನ್ನು ಗಜಂ ನಿಲ್ಲಿಸುತ್ತೇನೆ ಅನ್ನುವರು. ಹಣ್ಣು-ಹಂಪಲುಗಳು ಗಿಡದ ಗುದೇಂದ್ರಿಯದಲ್ಲಿ ಬರುತ್ತವೆ. ಅಂದರೆ ಹಣ್ಣು ಹಂಪಲು ಗಿಡಗಳ ಹೇಸಿಗೆ. ನಾವು ಹಣ್ಣುಗಳನ್ನು ಅಂದರೆ ಗಿಡಗಳ ಹೇಸಿಗೆಯನ್ನು ತಿನ್ನುತ್ತೇವೆ.

ಬಹಳ ಪಾಪ ಮಾಡಿದವರು ಗಿಡಗಂಟಿ ದನಗಳಾಗಿ ಜನಿಸುತ್ತಾರೆ. ಒಬ್ಬ ಮನುಷ್ಯನನ್ನು ಕಂಬಕ್ಕೆ ಕಟ್ಟಿ ಹಾಕಿದಂತೆ ದನ ಕರ, ನಾಯಿ ನರಿ, ಗಿಡಗಂಟಿಗಳು ದುಃಖ ಹೊಂದುವದನ್ನು ನೋಡಿ, ಪಾಪದಿಂದಲೇ ಈ ಸ್ಥಿತಿಯು ಬಂದಿದೆ ಎಂದು ತಿಳಿದುಕೊಳ್ಳಬೇಕು. ಆದ್ದರಿಂದ ಬಲ್ಲವರು ಇಂಥ ಪಾಪಕರ್ಮವನ್ನು ಮಾಡಬಾರದೆಂದು ನಿಶ್ಚಯಿಸಿದ್ದಾರೆ.

ಗಂಡ-ಹೆಂಡತಿ, ಮಕ್ಕಳು, ಹೊಲ, ಮನೆ, ವಸ್ತ್ರ, ಒಡವೆ ಮುಂತಾದ ವಿಷಯಗಳ ಮೋಹಕ್ಕೆ ಬಿದ್ದು, ಆಶೆಯನ್ನು ಇಟ್ಟು ತಿರುಗಿ ಹಂದಿ, ನಾಯಿ, ನರಿಯಾಗಿ ಹುಟ್ಟಿ, ಇದಕ್ಕಿಂತಲೂ ಹೀನ ಯೋನಿಯಲ್ಲಿ ಜನಿಸಿ ರೌರವ ನರಕದಲ್ಲಿ ಬಳಲುತ್ತಾರೆ.

ಪುಣ್ಯಹೀನರು ಮನುಷ್ಯರಾಗಿ ಹುಟ್ಟಿದಾಗಲೇ ಕೆಟ್ಟ ಮನಸ್ಸಿನಿಂದ ಕೆಟ್ಟ ಕೃತಿ ಮಾಡಿ ಮಾತ್ಸರ್ಯಯುತರಾಗಿ ಚಂಚಲ ಬುದ್ಧಿಯಿಂದ ಶಾಸ್ತ್ರವನ್ನು ಕೇಳಿದರೂ ದುಃಖವನ್ನು ಹೊಂದುತ್ತಾರೆ.

ಮದಾಂಧರಾಗಿ ತಾವೇ ತಿಂದು, ಇದ್ದೂ ಇಲ್ಲವೆಂದು ಹೇಳುತ್ತ ಗಳಿಸಿ ಹೂಳಿಟ್ಟು ಹೋದದ್ದಾದರೆ ಮುಂದೆ ಹೆಗ್ಗಣವಾಗಿ ಹುಟ್ಟಿ ಕೆದರುತ್ತ ಮನೆ ಹಾಳು ಮಾಡುವರು. ಪಾಪ ಕರ್ಮದಿಂದ ಒಂಟಿಯಾಗಿ ಬೇವಿನ ತೊಪ್ಪಲವನ್ನು ಸವಿ ಮಾಡಿಕೊಂಡು ತಿನ್ನಬೇಕಾಗುವದು. ಪಿಶಾಚಿ ಜನ್ಮವೆಂದರೆ ಗುಮಾನಿ ಇದ್ದಂತೆ, ಮುಂದೆ ಚೌಕಸಿ ಮಾಡಿ ಎಂಭತ್ನಾಲ್ಕು ಲಕ್ಷ ಜೀವರಾಶಿಗಳಲ್ಲಿ ಯಾವದಾದರೊಂದು ಜನ್ಮಕ್ಕೆ ಹಾಕುತ್ತಾರೆ. ದುಡಿದು ಗಳಿಸಿ ಹುಗಿದಿಡುವವನನ್ನು ಬಲು ಪಾಪಿಯೆಂದೆನಿಸಿ ನರಕಕ್ಕೆ ಚೆಲ್ಲುತ್ತಾರೆ.

ವಿಷಯಗಳು ಕೆಟ್ಟರೆ ಮನಸ್ಸಿಗೆ ಪೆಟ್ಟು ಹಚ್ಚಿಕೊಳ್ಳಬಾರದು, ನನಗೆ ಕೆಟ್ಟ ಬಯಸಿದ, ಆಗಲಿ, ಬರಲಿ ಪ್ರಸಂಗ ನೋಡಿಯೇ ಬಿಡುತ್ತೇವೆಂದು ಮನಸ್ಸಿನಲ್ಲಿ ಈ ಗಂಟು ಇಟ್ಟುಕೊಂಡು ಜೀವಿಸುತ್ತಿರುವವನು ಮನುಷ್ಯನಲ್ಲ. ಅವನು ಸತ್ತ ಬಳಿಕ ನಾಗರಹಾವು ಆಗುತ್ತಾನೆ.

ಮುಂದಿನ ಜನ್ಮದಲ್ಲಿ ಇದೇ ಆತ್ಮ, ಇದೇ ಲಿಂಗ ಶರೀರವಿರುವದು, ಸ್ಥೂಲ ಶರೀರವು ಒಂದೊಂದು ಜನ್ಮಕ್ಕೆ ನಾಶವಾಗುತ್ತದೆ. ಯಾವುದರ ಆಶೆ ಬಹಳ ಇದೆಯೋ ಅದೇ ಆಗಿ ಜನ್ಮ ತಾಳಬೇಕಾಗುತ್ತದೆ. ಆಶೆಯೇ ಜನ್ಮಕ್ಕೆ ಕಾರಣ. ಒಬ್ಬರಿಂದ ಇನ್ನೊಬ್ಬರು ಹುಟ್ಟುವದಿಲ್ಲ. ಈಗ ಹೊಲ ಇದ್ದವನು ಹಿಂದಿನ ಜನ್ಮದಲ್ಲಿ ಸತ್ಕಾರ್ಯಕ್ಕೆ ಹೊಲದ ದಾನ ಮಾಡಿದ್ದರಿಂದ ಆ ಭೂಮಿಯ ಒಡೆಯನಾಗಿ ಉಣ್ಣುತ್ತ ಬರುತ್ತಾನೆ. ಇನ್ನೊಬ್ಬನು ಏನೂ ದಾನ ಮಾಡದೆ ಆಶೆಯನ್ನು ಮಾಡಿ ಸತ್ತರೆ ಮುಂದೆ ತೋಳ, ನರಿ, ಇಲಿಯಾಗಿ ಭೂಮಿಯಲ್ಲಿ ವಾಸ ಮಾಡುತ್ತಾನೆ.

ಕನ್ಯಾದಾನ, ಭೂದಾನ, ಅನ್ನದಾನ, ಗೋದಾನ ಮಾಡದೇ ಹುಟ್ಟಿದರೆ ಈ ಲೋಕದಲ್ಲಿ ಏನೂ ದೊರೆಯದೆ ದುಃಖಿಗಳಾಗುವರು. ಪಾಪದಿಂದ ಅಕಾಲ ಮೃತ್ಯುವಾಗುತ್ತದೆ. ಪ್ಲೇಗು, ಮಾರಿಕಾ ಮುಂತಾದ ರೋಗಗಳಿಂದ, ವಿಷಸರ್ಪಗಳ ಕಡಿತದಿಂದ, ಗಾಡಿ ಮೋಟಾರಗಳ ಅಪಘಾತದಿಂದ ಸಾಯುವರು.



## ನೀತಿ

ಎಲ್ಲರೊಡನೆ ವೈರತ್ವ ತ್ಯಜಿಸುವದೇ ಚೆಂದ. ಎಂಭತ್ನಾಲ್ಕು ಲಕ್ಷ ಪ್ರಕಾರದ ಜೀವಿಗಳಲ್ಲಿ ಪ್ರೇಮದಿಂದಿರುವದು. ಹೊರಗೆ ಭೇದವಿದ್ದರೂ ಒಳಗೆ ಅಭೇದವಿರಬೇಕು. ಎಲ್ಲರೊಡನೆ ವೈರವಿಲ್ಲದೆ ಇರುವದು ಆಗುತ್ತದೋ? ಮನೆಯಲ್ಲಿ ಜಗಳವಿಲ್ಲವೆಂದರೆ ಊರಲ್ಲಿಲ್ಲ, ಊರಲ್ಲಿಲ್ಲವೆಂದರೆ ದೇಶದಲ್ಲಿಲ್ಲ. ಹೀಗೆ ನಡೆಯುವದು ಆಗುತ್ತದೋ? ಹೀಗೆ ನಡೆದರೆ ಸರಕಾರ ಸಹಿತ ಬೇಕಿಲ್ಲ, ಪೋಲೀಸ್ ಫೋಜದಾರರು ಮನೆಗೆ ಹೋಗಬಹುದು. ಈಗ ಎಲ್ಲಿಯಾದರೂ ಜಗಳವಿದ್ದುದೇ, ಸರಿಸಮತ್ವ ಇರುವದಿಲ್ಲ. ಅಂತೂ ಇಂತೂ ದ್ವೇಷವಿಲ್ಲದೆ ಬಾಳ್ವೆಯಿಲ್ಲ, ಹೀಗಿರಬಾರದು, ಎಲ್ಲೆಲ್ಲಿಯೂ ಸಮತ್ವವಿರಬೇಕು. ಸಮತ್ವ ಗಳಿಸದೆ ವೈರತ್ವ ಹೋಗುವದಿಲ್ಲ.

ನಿನ್ನ ಶರೀರಕ್ಕೆ ಹೇಗೆ ಉಪಚರಿಸುತ್ತಿಯೋ ಹಾಗೆ ಪರರನ್ನು ಉಪಚರಿಸು. ಕೆಡುವ ಶರೀರಕ್ಕೆ ಇದೇ ಮುಖ್ಯ ಫಲ. ಈಗ ಸಾಹುಕಾರನಲ್ಲಿ ಸಾಲ ತೆಗೆಯಬೇಕಾದರೆ ಎಷ್ಟು ಎಡತಾಕಬೇಕು, ಎಷ್ಟು ವಂದಿಸಬೇಕು, ಎಷ್ಟು ಅಂದದ್ದು ಅನ್ನಿಸಿಕೊಳ್ಳಬೇಕು, ಬೈದರೂ ಅಭಿಮಾನ ಹಿಡಿಯುವದಿಲ್ಲ. ಹಾಗೆಯೇ ಅಭಿಮಾನ ಹಿಡಿಯದೆ ಇವು ಪರಮಾತ್ಮನ ಒಡವೆಗಳು, ಇವುಗಳಲ್ಲಿ ಎಲ್ಲರದೂ ಹಿಸೆ ಇದ್ದುದ್ದೇ ಎಂದು ಭಾವಿಸು, ಪರರಿಗೆ ಹಿತ ತೋರಿಸು.

ಸರ್ವ ಪ್ರಾಣಿಗಳಿಗೂ ಸುಖ ಬಯಸಬೇಕು. ತನ್ನ ಗಂಡನಿಗೇ ಉಣ್ಣಿಸಬೇಕು. ತನ್ನ ಮಕ್ಕಳೇ ಉಣ್ಣಬೇಕು. ಅಂದರೆ ಆಕೆಗೆ ಯಮಗೊಂಡ ತಪ್ಪದು, ಸಮತಾಗುಣ ಸಮಾಧಾನಗುಣ ಇದ್ದರೆ ಅವನೇ ಶಿವನಾಗುವನು. ಸದ್ಗುಣದಿಂದ ಮಾತ್ರ ಎಲ್ಲಿ ಹೋದರೂ ಮನ್ನಣೆ, ಗುಣವಿಲ್ಲದಿದ್ದರೆ ಎಲ್ಲರಿಗೂ ಬೇಡವಾಗುತ್ತೇವೆ. ಜಗತ್ತಿನಲ್ಲಿ ಯಾರಿಗೂ ಕೇಡಾಗಬಾರದು ಎನ್ನುವವರಿಗೆ ಎಲ್ಲಿ ಹೋದರೂ ಸುಖವೇ ಸುಖ. ಎಲ್ಲರೂ ಸುಖದಿಂದಿರಲಿ, ಕೈಲಾದ ಮಟ್ಟಿಗೆ ಸಹಾಯ ಮಾಡೋಣ ಅಂದವರಿಗೆ ಮೋಕ್ಷ ಅಥವಾ ಇಹಪರದಲ್ಲಿ ಸೌಭಾಗ್ಯ. ಭೇದ ಬುದ್ಧಿ ಇರಬಾರದು, ಸಾಯುವ ಜನಕ್ಕೂ ಸುಖವಾಗುವ ಕೆಲಸ ಮಾಡಬೇಕು. ಗುಣಗೇಡಿಯು ಎಲ್ಲಿ ಹೋದರೂ ಜಗಳ ಮಾಡುತ್ತಾನೆ. ಇಂಥವನಿಗೆ ದುರ್ಗತಿ. ಪಾಪ ಪುಣ್ಯ ವಿಚಾರ ಮಾಡಿಯೇ ಪ್ರತಿಯೊಂದು ಕೆಲಸವನ್ನು ಮಾಡಬೇಕು.

ನಾವು ಪರೋಪಕಾರಕ್ಕಾಗಿ ದುಡಿಯಬೇಕು. ಅನ್ನ ಬಟ್ಟೆಗಳನ್ನು ಹಂಚಬೇಕು. ಅನ್ಯರಿಗೆ ಸುಖ ಮಾಡಿ ಅವರ ದುಃಖವನ್ನು ನಿವಾರಿಸಬೇಕು. ನಮಗಾಗಿ ಮಾಡಿಕೊಳ್ಳುವದು ಹೆಚ್ಚಿನದಲ್ಲ. ಅನ್ನ, ಅರಿವೆ, ಬಂಗಾರ, ಧನ-ಧಾನ್ಯಗಳನ್ನು ಸಂಗ್ರಹಿಸಿಕೊಳ್ಳುವವರು ಮಹಾಕಳ್ಳರೆಂದು ಶೃತಿಭಗವತಿಯು ಅಪ್ಪಣೆ ಕೊಡಿಸಿರುವದು. ಆದ್ದರಿಂದ ಪರಹಿತಕ್ಕಾಗಿ ದುಡಿಯುವವರೇ ಶಿವಶರಣರ ಮಾಲಿಕೆಯಲ್ಲಿ ಬರುವರು.

'ದಾತಾ' ಎಂದರೆ ಕೊಡತಕ್ಕ ಗುಣದವನು, ಈತನಿಗೆ ಕಷ್ಟವಿಲ್ಲ. ಯಾಕೆಂದರೆ ದಾನಕ್ಕಿಂತ ಹೆಚ್ಚಿನ ಪುಣ್ಯವಿಲ್ಲ. ಲೋಭಕ್ಕಿಂತ ಹೆಚ್ಚಿನ ಪಾಪವಿಲ್ಲ. ದಾನ ಧರ್ಮ

ಮಾಡುತ್ತಿರಬೇಕು. ಪ್ರಾಣಿಗಳಲ್ಲಿ ದಯೆ ಇರಬೇಕು. ಕುರುಡ-ಕುಂಟರಿಗೆ ದಯೆ ತೋರಿಸಬೇಕು. ಬಡವನು ಕಷ್ಟಪಡುವದನ್ನು ಕಂಡು ಅದನ್ನು ಪರಿಹಾರ ಮಾಡಬೇಕು. ಕುಲಗೋತ್ರ ಯಾವದೂ ನೋಡಬಾರದು. ಮಾರಿಕಾ ಪ್ಲೇಗ ಬಂದು ಹಾಸಿಗೆಯಲ್ಲಿ ಉರುಳಾಡುತ್ತಿದ್ದರೆ ಜಾತಿಯನ್ನು ಲಕ್ಷಿಸದೆ ಅವನನ್ನು ಉಪಚರಿಸಬೇಕು. ಯಾರು ಏನು ಅಂದರೂ ನಮ್ರತೆ ಇರಬೇಕು, ಬೈದರೂ ಬಡಿದರೂ ಸಿಟ್ಟಿಗೇಳಬಾರದು. ಬಿರುಸು ಮಾತನಾಡಬಾರದು.

ನೀತಿಯಿಂದ ನಡೆದರೆ ಎಲ್ಲವೂ ಸರಿಹೋಗುತ್ತದೆ. ಹರಿಶ್ಚಂದ್ರ, ಜನಕ, ನಿಜಗುಣ ಮೊದಲಾದ ಅರಸರು ವೇದಾಗಮಗಳನ್ನು ಓದಿ, ನೀತಿಯಿಂದ ನಡೆದು ಗತಿ ಕಂಡರು. ಎಲ್ಲಿ ನನ್ನ ನೀತಿ ಕೆಡುತ್ತದೋ ಎಂದು ಯಾರಿಗೆ ಯಾವಾಗಲೂ ಚಿಂತೆ ಇರುವದೋ, ಅವರೇ ಭಯಾನ್ವಿತರಾಗಿ ಅನ್ಯಥಾ ಕಾರ್ಯ ಮಾಡುವದಿಲ್ಲ, ಆತ್ಮಜ್ಞಾನ ಮಾಡಿಕೊಂಡು ಮುಕ್ತರಾಗುವರು. ತಮ್ಮ ಜೀವದ ಸರ್ತಿ ಬಂದ ಕಾಲಕ್ಕೆ ತಲ್ಲಣಿಸಿ ಗಾಬರಿಯಾಗಿ ನೀತಿಗೆಡುವರು. ಯಾರೇ ಆಗಲಿ ವಿಷಯಲೋಲುಪರು ನೀತಿಗೆಡುವದು ಬಹಳ, ಜೀವಸಹಿತ ಎಲ್ಲವೂ ಮಿಥ್ಯವೆಂದು ತಿಳಿದವರು ಏನು ಮಾಡಿದರೂ ಕೆಡುವದಿಲ್ಲ. ವಿಷಯದಾಸೆಯನ್ನು ಬಿಟ್ಟವನು ಎಲ್ಲವೂ ಹಾಳಾಗಿ ಹೋಗಿ ತಿರಿದುಂಡರೂ, ಕೊನೆಗೆ ಪ್ರಾಣ ಹೋದರೂ ನೀತಿಗೆಡುವದಿಲ್ಲ, ಜೀವದಾಸೆಯುಳ್ಳವರು ಮಾತ್ರ ಜೀವ ಸತ್ಯವೆಂದೂ ವಿಷಯ ಸುಖವೆಂದೂ ಭಾವಿಸಿ ಕೆಟ್ಟು ಹೋಗುವರು. ಒಳಗೆ ದುಡ್ಡು ಗಳಿಸಿಟ್ಟುಕೊಂಡು ಬರೇ ಸಾಲವನ್ನೇ ತೋರಿಸುವರು. ಹೀಗೆ ತಗಲು ಮಾಡಿ ಬೇರೆಯಾಗುವರು.

ಯಾರೇ ಆಗಲಿ ಬುಧ್ಯಾಪೂರ್ವಕ ನೀತಿ ತಪ್ಪಬಾರದು. ತಿಳಿಯದೇ ಮಾಡಿದ್ದು ದೊಡ್ಡ ಪಾಪವಲ್ಲ. ಇದಕ್ಕೆ ಒಂದು ಪಟ್ಟು ಪಾಪವೆಂದರೆ, ತಿಳಿದು ಮಾಡಿದ್ದಕ್ಕೆ ದುಪ್ಪಟ್ಟು. ನೀತಿಯಿಂದ ನಡೆಯುವದು ಅತಿ ಕಠಿಣ, ನೀತಿಯಿಂದ ನಡೆಯುವ ಕಾಲಕ್ಕೆ ಕಷ್ಟ ಬಂದರೂ ತಪ್ಪಿ ನಡೆಯಬಾರದು, ನಿಷ್ಠೆಯನ್ನು ತೊರೆಯಬಾರದು.

ಎಲ್ಲ ಆಸ್ತಿಯು ಹೋದರೂ ಗುಣ ಕಳೆದುಕೊಳ್ಳಬಾರದು. ಸತ್ವಗುಣವಿದ್ದಲ್ಲಿ ಜ್ಞಾನವು ಸಹಜವಾಗಿಯೇ ಆಗುತ್ತದೆ. ಗುಣ ಕೆಡಿಸಿಕೊಂಡು ವನದಲ್ಲಿ ಗವಿಯಲ್ಲಿದ್ದರೇನು, ಸನ್ಯಾಸಿಯಾದರೇನು, ಫಲ ದೊರಕಬಹುದೇ? ಗುಣವಿದ್ದವನು ಊರಲ್ಲಿದ್ದರೇನು, ಹೊಲಗೇರಿಯಲ್ಲಿದ್ದರೇನು? ಆತ ಮುಕ್ತನೇ ಸರಿ. ಒಬ್ಬ ಸತ್ಪುರುಷನಿಗೆ ಯಾರಾದರೂ ಕೇಡು ಮಾಡಿದರೆ ಇಹ ಪರದವರು ಕ್ಷೋಭೆಗೊಳ್ಳುತ್ತಾರೆ. ಆದ್ದರಿಂದ ಇದೇ ಶರೀರದಲ್ಲಿ, ಇದೇ ಮೃತ್ಯುಲೋಕದಲ್ಲಿ ಸತ್ಪುರುಷರು ಮೆಚ್ಚುವಂತೆ ನಡೆಯಬೇಕು. ಸತ್ತಮೇಲೆ ಏನಾಗುವದು? ಯಮಲೋಕವು ಮಾತ್ರ ಸಿಗುವದು.

ತಲ್ಲಣಿಸದೆ ನೀತಿಯಲ್ಲಿರಬೇಕು. ನೀತಿ ಬಂದರೆ ಮತಿಶುದ್ಧ, ಇಲ್ಲವಾದರೆ ಮತಿಹಾನಿ, ಮತಿನೀತಿ ಹಾನಿಯಾದರೆ ಗತಿಹಾನಿ. ಪರೋಪಕಾರ ಮಾಡಿಯೇ ತೀರುವೆನೆಂಬ ನಿಷ್ಠೆ ಬಲಿಸಬೇಕು. ಇಟ್ಟ ನಿಷ್ಠೆಯನ್ನು ಕಿತ್ತುಕೊಳ್ಳಬಾರದು. ಊಚ ನೀಚವೆಂಬುದು ಏನೂ ಇಲ್ಲ. ಎಲ್ಲರಲ್ಲಿಯೂ ಭಗವಂತ ಇದ್ದಾನೆ. ಆತನ ಕೈಗಳಿಂದಲೇ





ಜನಿಸಿದ ಜೀನಸುಗಳಿವು ಎಂದು ಭೇದಭಾವ ಮಾಡದೇ ಅಭೇದದಲ್ಲಿರುವದೇ ಅತಿ ನಿಷ್ಠೆಯು.

ಜೀವ ಹೋಗುವವರೆಗೂ ಏಕಪತ್ನಿ ವ್ರತಸ್ಥನಾಗುವೆನೆಂಬ ಸದಭಿಮಾನ ಮತ್ತು ಆತ್ಮ ವಿಚಾರ ಮಾಡಿಕೊಂಡೇ ತೀರುವೆನೆಂಬ ಅಭಿಮಾನ ಹೀಗೆ ಇವೆರಡೂ ಬೇಕು. ಹೆಂಡಿರು ಮಕ್ಕಳನ್ನು ಅಭಿಮಾನಿಸಿಕೊಂಡು ದುಷ್ಟ ಕೆಲಸಕ್ಕೆ ಕೈಹಾಕಬಾರದು. ಪ್ರಾಣಕ್ಕಿಂತಲೂ ಇದು ದೊಡ್ಡದು. ಮಾನಹೋದ ಮೇಲೆ ಆನೆ ಕೊಟ್ಟರೂ ಬಾರದೆಂಬ ಗಾದೆ ಇದೆ. ಇಂಥ ಮಾನದಿಂದ ನಡೆದರೆ ಸದ್ಗತಿ.

ಜಕ್ಕಲಿಯಲ್ಲಿ ಅಣ್ಣಯ್ಯ ತಮ್ಮಯ್ಯರೆಂಬ ಸಹೋದರರಿದ್ದರು. ಅವರ ಮನೆಯ ಮುಂದೆ ಇಕ್ಕಟ್ಟಾದ ರಸ್ತೆ ಇತ್ತು. ಒಬ್ಬ ಕುಸ್ತಿಯ ಹುಡುಗ ತುಂಬಿದ ಜೋಡುಗೊಡ ಹೊತ್ತುಕೊಂಡು ಅತ್ತಿಂದ ಬಂದ. ಇತ್ತಿಂದ ಬರಿಗೊಡದ ಕುಸ್ತಿಯ ಹುಡುಗ ಎದುರಾದ. ದಾರಿಯನ್ನು ಬಿಡಲಿಲ್ಲ, ನ್ಯಾಯವಾಯಿತು, ಕೊಡ ಚೆಲ್ಲಿ ಇಬ್ಬರೂ ಬಡಿದಾಡಲಿಕ್ಕೆ ನಿಂತರು, ಒಳಗಿದ್ದ ಅಣ್ಣಯ್ಯನು, ಹೇ ತಮ್ಮಯ್ಯನೇ, ಜಾಗೆಯ ಕೊರತೆಗೆ ನ್ಯಾಯ ನಡೆದಿದೆ. ನಮ್ಮ ಮನೆ ಕೆಡವಿ ರಸ್ತೆ ಇಂಬು ಮಾಡೋಣವೆಂದು ಭದ್ರವಾದ ಮನೆಯನ್ನು ಕೆಡವಿ ಇಂಬು ಮಾಡಿದರು, ನೋಡಿದಿರಾ ಈ ನೀತಿಯನ್ನು! ಎರಡನೆಯವರ ನ್ಯಾಯವನ್ನು ಸಹಿತ ನೋಡುವದಾಗಲಿಲ್ಲ.

ನುಡಿಯಂತೆ ನಡೆ, ನಡೆಯಂತೆ ನುಡಿಯಾದರೆ ಇದೇ ಜನ್ಮ ಕಡೆ. ಒಳಗೆ ಭೇದದ ಕಪಟ ಗುಣ ಇಟ್ಟುಕೊಂಡು ಮೇಲೆ ಉಪಚಾರದ ಮಾತುಗಳನ್ನಾಡುವವರಿಗೆ ಸುಖವಿಲ್ಲ. ಪಾಪಿಷ್ಟರಿಗೆ ಸಾಧ್ಯವಾದಷ್ಟು ಬುದ್ಧಿಯನ್ನು ಹೇಳಬೇಕು. ಪುಣ್ಯಾತ್ಮರನ್ನು ಪ್ರಭುತ್ವದ ಮಟ್ಟಕ್ಕೇರಿಸಬೇಕು. ಪರರ ದುರ್ಗುಣಗಳನ್ನು ಮರೆತು ಆದರಿಸುವದೇ ಚೆಂದ.

ಶುದ್ಧವಾಗಿ ಮಾತನಾಡಲಿಕ್ಕೆ ಬರುತ್ತದೆಂದು ವ್ಯಾಕರಣ ಕಲಿಯುತ್ತಾರೆ. ಶುದ್ಧವಾಗಿ ವ್ಯಾಕರಣಸೀರ ನಿಮ್ಮನ್ನು ಬೈದರೆ, ಅಂದರೆ "ಬನ್ನಿರಪ್ಪ ಕತ್ತೆಯ ಮಕ್ಕಳೆ" ಅಂದರೆ ಮನಸ್ಸು ಹಿಡಿಸುವದೋ ಹೇಗೆ? ನೋಯುತ್ತದೆ. ಆದ್ದರಿಂದ ಒಬ್ಬರ ಮನಸ್ಸು ನೋಯದಂತೆ ಮಾತನಾಡುವದೇ ವ್ಯಾಕರಣ, ಇದನ್ನೇ ಕಲಿಯಬೇಕು. ಸದ್ಗುಣದಿಂದ ನಡೆದು, ಬಲ್ಲವರಿಂದ ಕೇಳಿ ತಿಳಿದು ಜ್ಞಾನ ಮಾಡಿಕೊಂಡು ಎಲ್ಲರಿಗೂ ಆನಂದವಾಗುವಂತೆ ಮಾತನಾಡಲಿಕ್ಕೆ ಬಂದರೆ ವ್ಯಾಕರಣ ಕಲಿತ ಹಾಗಾಯಿತು.

ಲೋಭತ್ವವೇ ಎಲ್ಲ ದುರ್ಗುಣಗಳ ತವರುಮನೆ. ವರಗುಣವೆಂದರೆ ಉದಾರತ್ವ, ತಿನ್ನದೆ ತಿನ್ನಿಸದೆ ಎಷ್ಟು ಕೂಡಿಸಿದರೂ ಅಷ್ಟೂ ಪಾಪ ಕೂಡಿಸಿದಂತೆ. ವ್ಯಭಿಚಾರ ಕಳವು ಹಿಂಸೆಗಳನ್ನು ಮಾಡಬಾರದು. ಬಿರುಸಾಗಿ ಮಾತನಾಡಬಾರದು. ಸುಳ್ಳು ನಿಂದೆ ಚಾಡಿಗಳನ್ನು ಆಡಬಾರದು. ಚಾಡಿ ಹೇಳುವದೆಂದರೆ ನಾಲಿಗೆಯಿಂದ ಕಿವಿಯಲ್ಲಿ ಚುಚ್ಚಿದಂತೆ. ಹಾಸ್ಯದಲ್ಲಿ ಸಹ ಸುಳ್ಳು ನಿಂದೆ ಚಾಡಿ ನುಡಿಯಬಾರದು. ವಾಕ್ಕಾದಿ ಕರ್ಮೇಂದ್ರಿಯಗಳನ್ನು ಸತ್ಕಾರ್ಯದಲ್ಲಿ ಇಡಬೇಕು. ವಿಷಯದ ಆಶೆಯನ್ನು ಬಿಡುವದೇ ಮುಖ್ಯ ನಡತೆ, ಇದರಿಂದ ಸದ್ಗತಿ, ಇಂಥ ನೀತಿಯೇ ಇಲ್ಲ. ಉತ್ತಮನಾಗಬೇಕಾದರೆ ಸತ್ಪುರುಷರ ಸಂಗಬೇಕು.

ಆತ್ಮಜ್ಞಾನವಿಲ್ಲದವನು ಎಂಥ ಪಂಡಿತನಿರುವನೆಂದರೂ ಅವನಲ್ಲಿ ಸಮತ್ವವಿರುವದಿಲ್ಲ. ಅವನು ಒಳ್ಳೆಯವನಲ್ಲ. ದೇಶದಲ್ಲಿ ಒಬ್ಬನಿಗಿಂತ ಒಬ್ಬ ಒಳ್ಳೆಯವನಿರಬಹುದು. ಆದರೆ ಆತ್ಮಜ್ಞಾನ ಮಾಡಿಕೊಂಡವನು ಬಹಳ ಒಳ್ಳೆಯವನು. ಸಮತ್ವ ಗುಣವೇ ಒಳ್ಳೆಯದು.

ಹೆಂಡತಿ ಮಕ್ಕಳು ಸತ್ತರೂ, ಏನಾದರೂ ಹಾನಿಯಾದರೂ, ಹೊಡೆದಾಡಿದರೂ, ಏನಾದರೂ ತ್ರಾಸು ಕೊಟ್ಟರೂ ಶಾಂತಿಯಿಂದಿರಬೇಕು. ಜಗಳ ಬಂದಾಗ ಶಾಂತ ರೀತಿಯಿಂದ ಬಗೆಹರಿಸಿಕೊಳ್ಳಬೇಕು. ಇಲ್ಲದಿದ್ದರೆ ಪರಿತ್ಯಾಗ ಮಾಡಬೇಕು. ಜನರು ಬಣ್ಣಿಸಿದರೆ ಅಭಿಮಾನಿಸಿ ನಡೆಯಬಾರದು. ದುಷ್ಟ ನೀಚನೆಂದು ಛೀಮಾರಿ ಹಾಕಿದರೂ ನಗಬೇಕು. ಸುಮ್ಮನೆ ಬಹಳ ಉಪಚಾರ ಮಾಡಿದರೆ ಮುರಕೊಂಡು ತಿನ್ನುವದಕ್ಕೆಂದು ತಿಳಿದುಕೊಳ್ಳಬೇಕು, ಕೊಂಡಾಡುವವರನ್ನು ನಂಬಬಾರದು.

ಸ್ತ್ರೀಯರನ್ನು ತಾಯಿಯಂತೆ, ಅಕ್ಕ ತಂಗಿಯರಂತೆ ತಿಳಿಯಬೇಕು. ಆದರೆ ನಮ್ಮ ಅಪ್ಪನ ಹೆಂಡತಿಯೆಂದು ತಿಳಿಯಬಾರದು. ಒಂದು ವೇಳೆ ತಿಳಿದರೆ ಬಾಧೆಯಾಗುವದು. ಪುರುಷರನ್ನು ತಂದೆಯಂತೆ, ಅಣ್ಣ ತಮ್ಮಂದಿರಂತೆ ತಿಳಿಯಬೇಕು. ಸ್ತ್ರೀ ಪುರುಷರು ಕೆಟ್ಟವರಲ್ಲ. ಅವರಲ್ಲಿ ಮೋಹವನ್ನು ಉಂಟುಮಾಡಿ ದಾರಿ ಬಿಡಿಸುವವರೇ ಕೆಟ್ಟವರು. ನಮ್ಮ ಮನೆಯ ಹೆಣ್ಣುಮಕ್ಕಳ ಮರ್ಯಾದೆಯನ್ನು ಯಾರಾದರೂ ಕೆಡಿಸಿದರೆ ನಮಗೆ ಹೇಗಾಗುವದೋ, ಅದರಂತೆ ಅವರಿಗಾದರೂ ಹಾಗೇ ಆಗುವದೆಂದು ತಿಳಿಯಬೇಕು.

ತನ್ನ ನಸೀಬದ ಪ್ರಕಾರ ಏನು ದೊರಕುತ್ತದೆಯೋ ಅದರಲ್ಲಿಯೇ ಸಂತುಷ್ಟತೆಯನ್ನು ಹೊಂದಬೇಕು. ಪೂರ್ವದಲ್ಲಿ ದಾನ ಧರ್ಮ ಮಾಡಲಿಲ್ಲ. ಆದ್ದರಿಂದ ಈಗ ನಮಗೆ ಸುಖ ಸಿಕ್ಕಿಲ್ಲ. ಪ್ರಾರಬ್ಧವಿದ್ದಂತೆ ಆಯಿತೆಂದು ಸುಮ್ಮನಿರಬೇಕು. ನಾವು ದುಡಿದು ತಿನ್ನಬೇಕಲ್ಲದೆ ಪರರ ಪದಾರ್ಥಗಳ ಮೇಲೆ ಆಶೆಯನ್ನು ಮಾಡಬಾರದು. ಪ್ರಪಂಚದಲ್ಲಿ ತಾನು ತಿಳಿದದ್ದನ್ನು ಉಳಿದವರಿಗೆ ತಿಳಿಸಿ ಸನ್ಮಾರ್ಗಕ್ಕೆ ಹಚ್ಚಬೇಕು.

ಉಳಿದವರಿಗೆ ಹಿತ ಮಾಡುವದು ಅವರಿಗಲ್ಲ, ಅದು ತನ್ನ ಹಿತವು, ಇದನ್ನು ತಿಳಿಯಲಿಕ್ಕೆ ಬರಲೊಲ್ಲದು. ಕೈಯಿಂದಲೂ ಬಾಯಿಂದಲೂ ಮನಸ್ಸಿನಿಂದಲೂ ಪಾಪವನ್ನು ಪೂರ್ಣ ಬಿಡಲಿಕ್ಕೆ ಬಂದರೆ ಮಾತ್ರ ಪುಣ್ಯವನ್ನು ಮಾಡಲು ಬರುವದು. ಯಾವಾಗಲೂ ಪುಣ್ಯದ ಚಿಂತೆಯೇ ಇರಬೇಕು. ಐಶ್ವರ್ಯ ಬಂದ ಕಾಲಕ್ಕೆ ವಿನಯದಿಂದ ದಾನ ಮಾಡಬೇಕು. ಕೈಲಾದ ಪ್ರಯತ್ನ ಮಾಡಿ ಜೀವ ಹೋಗುವವರೆಗೂ ಪರೋಪಕಾರ ಮಾಡಬೇಕು. "ಪರೋಪಕಾರಾರ್ಥಂ ಇದಂ ಶರೀರಂ" ಎಂದಿರುವರು. ಸರ್ವರಿಗೂ ಹಿತವಾಗುವಂಥಾದ್ದನ್ನೇ ಮಾಡಬೇಕು.

ದುರಿತದೊಳು ಅಧಿಕವಾವುದು, ನಿಂದೆ. 'ನಿಂದೆ' ಎಂದರೆ ಹಿಂದೆ ಮುಂದೆ ಆಡಿಕೊಳ್ಳುವದು. "ಹಿಂದೆ ಆಡಿಕೊಳ್ಳುವವ ಹಿಂದಿನದು ತಿಂಬುವವ ಸಮ" ಎಂಬ ಗಾದೆ ಮಾತು ಇದೆ. ಇದನ್ನು ಎಂದೂ ಮಾಡಬಾರದು. ಇದು ಬಹು ಪಾಪದ ಬೀಜ, ನಿಂದಿಸಿದರೆ ಲಾಭವೇನು? ತಾಯಿಯು ತನ್ನ ಮಕ್ಕಳ ಮಲವನ್ನು





ತೆಗೆಯಬೇಕಾದರೆ ಕರಗಳಿಗೆ ತಾಗದಂತೆ ಶೆಗಣೆಯನ್ನು ಹಚ್ಚಿ, ಸೆರಗಿನಿಂದ ಮೂಗು ಮುಚ್ಚಿ ತೆಗೆದು ತಿಪ್ಪಿಗೆ ಎಸೆಯುತ್ತಾಳೆ. ಪುನಃ ಮಣ್ಣನ್ನು ಹಚ್ಚಿ ಕೈ ತೊಳೆದುಕೊಳ್ಳುವಳು. ಈ ನಿಂದಕನು ಪರರ ಮಲವನ್ನು ನಾಲಿಗೆಯಿಂದಲೇ ತೆಗೆದುಬಿಡುತ್ತಾನೆ, ಇದು ಬಲು ಹೇಯ. ಒಬ್ಬರನ್ನು ನಿಂದಿಸಿದರೆ ಪರಮಾತ್ಮನನ್ನು ನಿಂದಿಸಿದಂತೆಯೇ, ನಾವು ಇನ್ನೊಬ್ಬರನ್ನು ನಿಂದಿಸಿದರೆ. ಅವರಂತೆ ಆಗಿಯೇ ತೀರುವೆವು.

ಆಭರಣವೆಂದರೆ ಬ್ರಹ್ಮವಿದ್ಯೆ, ಇದು ಜೀವನ ಬಗೆಯನ್ನು ಕೆಡಿಸಿ ಶಿವನನ್ನು ಮಾಡುವದು. ಎಲ್ಲವೂ ನಾಶವಾದರೂ ಇದು ನಾಶವಾಗುವದಿಲ್ಲ. ಮಿಥ್ಯಾ ಜಗತ್ತಿನಲ್ಲಿ ಇದನ್ನು ಖರ್ಚು ಮಾಡದಿದ್ದರೆ ಕಡಿಮೆಯಾಗುವದು, ಖರ್ಚು ಮಾಡಿದರೆ ಹೆಚ್ಚಾಗುವದು. ಆದ್ದರಿಂದ ನಿರಪೇಕ್ಷೆಯಿಂದ ಆತ್ಮವಿದ್ಯೆಯನ್ನು ಎರಡನೆಯವರಿಗೆ ತಿಳಿಸುತ್ತಿರಬೇಕು.

ಮೃದುವಚನವೆಂದರೆ ಮಾತಿನಲ್ಲಿ ಆತ್ಮವಿಚಾರವಿರಬೇಕು, ಇದೇ ಅಮೃತ, ಅಂದರೆ ಸುಧಾರಸಧಾರೆ. 'ತತ್ತ್ವಮಸಿ' ವಾಕ್ಯವೇ ಮುಖ್ಯ ಮೃದುವಚನ. ಲೌಕಿಕದ ಮೃದುವಚನಗಳು ಸರಿಯಲ್ಲ. ಜೀವ-ಪರಮಾತ್ಮರ ಐಕ್ಯವೇ ಅಮೃತವೆಂದು ನಂಬಿ ಮೊದಲು ಇದನ್ನು ಪಡೆಯಬೇಕು.

ಮತಿಗೆ ಮಂಗಳವೀಯುವದು ಯಾವುದು? ಉತ್ತಮರ ಸಂಗ. ಉತ್ತಮರೆಂದರೆ ತಾವು ಕಂಡುಕೊಂಡಂಥ ಆತ್ಮ ವಿಚಾರವನ್ನು ತಿಳಿಸಿ ಮುಕ್ತರನ್ನಾಗಿ ಮಾಡುವವರು.

ಚೆಂದವಿರಬೇಕೆಂದರೆ ನಮ್ಮನ್ನು ನಾವು ತಿದ್ದಿಕೊಳ್ಳಬೇಕು. ಇದೇ ಹಿತವು, ಇದಾಗಲೊಲ್ಲದು. ಅರಿವೆ ಅಂಚಡಿ ದಾಗೀನ ಧರಿಸಿ ತಿದ್ದಿಕೊಂಡು ಚೆಂದವಾಗಬೇಕೆನ್ನುತ್ತೇವೆ. ಇವೆಲ್ಲ ಚೆಂದಗೇಡಿ, ಎಷ್ಟು ತಿದ್ದಿದರೂ ಸರಿಯಾಗುವದಿಲ್ಲ. ಗುಣಗಳು ಸಹಿತ ಕೆಡುತ್ತವೆ. ಭೇದಭಾವ ಎಲ್ಲವೂ ಚೆಂದಗೇಡಿಯೇ. ಸೌಂದರ್ಯತೆ ಎಂದರೆ ಮುಖದ ಚೆಂದವಲ್ಲ. ಹೃದಯದಲ್ಲಿ ಯಾವಾಗಲೂ ಆನಂದದಿಂದಿರುವದು. ಇದೇ ಮುಖದ ಮೇಲೆ ಕಳೆ ತರುವದು.

ಗಳಿಸುವದಾದರೆ ಸತ್ಕಾರ್ಯಕ್ಕೆ ಗಳಿಸಬೇಕು. ಹೀನ ಕಾರ್ಯಕ್ಕೆ ಉಪಯೋಗಿಸಬಾರದು. ದುಡಿದು ಗಳಿಸಿದ್ದೆಲ್ಲವನ್ನು ಹೆಂಡಿರು ಮಕ್ಕಳಿಗೆ ಕೊಡಬಾರದು, ಹುಗಿದಿಡಬಾರದು, ಸತ್ಕಾರ್ಯಕ್ಕೆ ಉಪಯೋಗಿಸಬೇಕು. ಹೀಗೆ ಮಾಡದಿದ್ದಲ್ಲಿ ದುಡಿದದ್ದೆಲ್ಲ ವ್ಯರ್ಥ ಮತ್ತು ಪಾಪವು ಬರುವದು. ಗಳಿಸಿದ್ದನ್ನು ಮರಣ ಕಾಲಕ್ಕೆ ಬಿಟ್ಟು ಹೋಗಬೇಕಾಗುತ್ತದೆ. ಆಶೆ ಇಟ್ಟರಂತೂ ಪಿಶಾಚಿ ಜನ್ಮ ಬರುವದು. ಬರೇ ದುಡ್ಡು ಗಳಿಸಿ, ಬಡ್ಡಿ ಖಾತೆ ಇಟ್ಟು ಮಹಲು ಕಟ್ಟಿಸಿಕೊಂಡು, ಭೂಮಿ ಸಂಪಾದನೆ ಮಾಡಿ, ಹೆಂಡಿರು ಮಕ್ಕಳ ವ್ಯಾಮೋಹದಲ್ಲಿ ಬಿದ್ದು, ಅವರಿಗೆ ಖರ್ಚು ಮಾಡಿ, ಕಿಂಚಿತ್ ಸುಖಕ್ಕಾಗಿ ಪರಮಾನಂದವನ್ನು ಕಳೆದುಕೊಳ್ಳುವರು. ತಾನು ಗಳಿಸಿ ಮಕ್ಕಳಿಗೆ ಇಡುವದರಿಂದ ಪಾಪಕ್ಕೆ ಗುರಿಯಾಗುತ್ತಾನೆ. ಏಕೆಂದರೆ ಮಕ್ಕಳು ಕೆಟ್ಟ ಕೆಲಸ ಮಾಡಿದರೆ ತಾನು ಭಾಗಿಯಾಗಿ ದುರ್ಗತಿಯನ್ನು ಹೊಂದಬೇಕಲ್ಲವೇ? ದ್ರವ್ಯವು ಇತ್ತ ಪರರ ಪಾಲಾಗಿ

ಹಾಳಾಗಿ ಹೋಗುವದು. ಆದ್ದರಿಂದ ಲೋಭದಿಂದ ಸರ್ವರೂ ನರಕಕ್ಕೆ ಪಾತ್ರರಾಗುವರು. ದುಡ್ಡು ದುಗ್ಗಾನಿ ಗಳಿಸಬಾರದು. ಯಾಕೆಂದರೆ ದುಡ್ಡು ಇರುವವರೆಗೆ ಅಣ್ಣ ತಮ್ಮಂದಿರು ಬಂಧು ಬಳಗದವರು ಶರಣಾಗತರಾಗಿ ಬರುವರು. ತಮಗೆ ಸಿಗುವದನ್ನೇ ನೋಡುವರು. ತಾವು ಮಾತ್ರ ಯಾರೂ ಕೈಯಿಂದ ಕೊಡುವದಿಲ್ಲ. ಸದ್ಗುರು ಮಾತ್ರ ನಮ್ಮ ಭವದ ಬೇರನ್ನು ಕಿತ್ತು ಒಗೆಯುತ್ತಾನೆ.

ಶರೀರದಿಂದ ಬೆವರು ಸುರಿಸಿ ಹಸಿದಿರುವೆನೆಂಬುವವರಿಗೆ ಅನ್ನ ಕೊಟ್ಟರೆ ಜಳಕವಾಯಿತು. ಇದಕ್ಕಾಗಿ ಹೊಲ ಮನೆ ಮಾರಿದರೂ ಅಡ್ಡಿ ಇಲ್ಲ, ತಿರಿದು ತಂದುಕೊಟ್ಟರೂ ಯೋಗ್ಯ.

ಸರ್ವರಿಗೂ ಹಿತವಾಗುವಂಥಾದ್ದನ್ನೇ ಮಾಡಬೇಕು. ಒಂದು ಧರ್ಮಶಾಲೆಯನ್ನಾಗಲಿ, ಕೆರೆ ಬಾವಿಯನ್ನಾಗಲಿ, ಅನ್ನಛತ್ರವನ್ನಾಗಲಿ ಮಾಡಿದರೆ ಸಾಕು. ಸಾಹುಕಾರರಿಗೆ ಪುಣ್ಯ ಬರುತ್ತದೆ, ಬಡವರಿಗಿಲ್ಲವೆಂದು ಭಾವಿಸಬಾರದು. ಒಂದು ದೇಹವಿದ್ದರೆ ಸಾಕು. ಬಡವನು ದುಡಿದು ತನ್ನ ಬೆವರು ಸುರಿಸಿ ಅನ್ಯರಿಗೆ ಅರ್ಧ ಭಕ್ಕರಿ ಕೊಟ್ಟದ್ದೂ, ರಾಜನು ಕೋಟಿ ರೂಪಾಯಿ ಖರ್ಚು ಮಾಡಿ ಅನ್ನ ಕೊಟ್ಟದ್ದೂ, ಸಮವಾಗುವದಿಲ್ಲ. ಯಾಕೆಂದರೆ ರಾಜನು ಶರೀರದಂಡನೆಯನ್ನು ಮಾಡಿಲ್ಲ.

ಗೃಹಸ್ಥನ ಧರ್ಮವೆಂದರೆ ಹಸಿದಿರುವೆನು ಅನ್ನುವ ಒಬ್ಬ ಸತ್ಪುರುಷನಿಗಾದರೂ ಉಣ್ಣಿಸಿ, ತಾನೂ ಊಟ ಮಾಡಬೇಕು. ಶಾಸ್ತ್ರ ಕೇಳುವದಕ್ಕೆ ಸ್ಥಳವನ್ನು ಮಾಡಿಕೊಡಬೇಕು. ಅಂದರೆ ಪಾಪ ನಾಶವಾಗಿ ಪುಣ್ಯ ಒದಗಿ ಮುಂದೆ ಬೋಧೆ ದೊರೆಯುತ್ತದೆ. ಅಲ್ಲಿ ಹೆಂಡಿರು ಮಕ್ಕಳನ್ನು ತಂದು ಇಡಬಾರದು, ಕ್ಷಯರೋಗಿಗಳನ್ನು ತಂದು ಇಡಬಾರದು. ಹೀಗೆ ಮಾಡಿ ಫಲವನ್ನು ಬಯಸಬಾರದು. ಹೆಂಡಿರು ಮಕ್ಕಳಿಗಾಗಿ ದಾಗೀನುಗಳನ್ನು, ಹೆಚ್ಚಿಗೆ ಹೊಲ ಮನೆಗಳನ್ನು ಗಳಿಸದೆ ನಿರಾಶೆಯಿಂದ ಸತ್ಕಾರ್ಯ ಮಾಡಿದರೆ ಹಿತವಾಗುವದು. ಏನೂ ಪ್ರತಿಫಲ ಬಯಸದೇ ಪುಣ್ಯ ಪರೋಪಕಾರ ಮಾಡಿದರೆ ಸಜ್ಜನರ ಸಂಗ ದೊರೆಯುವದು. ಸ್ವತಃ ದುಡಿದು ತತ್ತ್ವಬಲ್ಲ ತತ್ತ್ವಜ್ಞಾನಿಗೆ ಅರ್ಧ ರೊಟ್ಟಿ ಕೊಟ್ಟರೆ ಸಾಕು ದೊಡ್ಡ ಫಲ. ಇದರ ಸಮಾನ ಯಾವದೂ ಅಲ್ಲ. (ಬಡ್ಡಿ ದಾನ ಮಾಡುವದು, ವ್ಯಾಪಾರ ಮಾಡಿ ಆದ ಲಾಭದಿಂದ ಅನ್ನದಾನ ಮಾಡುವದು) ಹತ್ತು ಸಾವಿರ ಜನರಿಗೆ ಉಣ್ಣಿಸುವದಕ್ಕಿಂತ ತತ್ತ್ವಬಲ್ಲ ತತ್ತ್ವಜ್ಞಾನಿಗೆ ಊಟ ಕೊಡಬೇಕು. "ಹತ್ತು ಸಾವಿರ ಮಂದಿಗೆ ಇಕ್ಕಿದೆ ಎನಬೇಡ ತತ್ತ್ವಬಲ್ಲ ತತ್ತ್ವಜ್ಞಾನಿಗೆ ತುತ್ತು ಅನ್ನವನ್ನು ಇಕ್ಕಿದಡೆ ಕೈಲಾಸ ಒತ್ತಿ ಬಿದ್ದಿಹುದು ಸರ್ವಜ್ಞ" ಎಂದಿರುವರು. ಸಂತರ ಮಾತು ಕೇಳು. ಮನಸ್ಸನ್ನು ನಿರ್ಮಲ ಮಾಡಿಕೊ, ಮುಂದೆ ವಿಚಾರ ಹುಟ್ಟಿ ಜ್ಞಾನವಾಗಿ ಮುಕ್ತನಾಗುತ್ತೀ.

ನೀನು ಉದ್ಯೋಗ ಮಾಡಿದರೂ ನಿನ್ನ ಸಲುವಾಗಿ ಸ್ವಲ್ಪ ಇಟ್ಟುಕೊಂಡು ಉಳಿದದ್ದನ್ನು ದಾನ ಮಾಡಬೇಕು. ಏನು ಮಾಡಿದರೂ ಸಜ್ಜನರಿಗೆ ಹಿತವಾಗಬೇಕು. ಅನ್ನವನ್ನು ಕೊಡಬೇಕಾದರೂ ದುರಾತ್ಮರಿಗೆ ಕೊಡಬಾರದು. ಮೂರು ದಿನಗಳವರೆಗೆ ಯಾರಿಗಾದರೂ ಅನ್ನವನ್ನು ಕೊಡು, ನಾಲ್ಕನೇ ದಿನ ಬಂದರೆ ಅವನು ಸತ್ಕಾರ್ಯ ಮಾಡುವನೋ, ದುಷ್ಕಾರ್ಯ ಮಾಡುವನೋ, ಶ್ರವಣಾದಿಗಳನ್ನು ಮಾಡುವನೋ





ಇಲ್ಲವೋ ಎಂಬುದನ್ನು ವಿಚಾರಿಸಿ ಅನ್ನ ಕೊಡಬೇಕು. ಹೋಳಿ ಹುಣ್ಣಿಮೆ, ಮೋಹರಂಗಳಲ್ಲಿ ಖುಷಿ ಕೊಟ್ಟರೆ ಪಾಪ ಬರುತ್ತದೆ.

ಏನೂ ಇಲ್ಲದಿದ್ದರೂ ಗುರುಸೇವೆ, ಸಾಧು ಸಂತರ ಸೇವೆ ಮಾಡಬೇಕು. ಇಂತು ಮಾಡಿದವನ ಸರಿ ಕೋಟಿ ಮಂದಿಗೆ ಉಣ್ಣಿಸಿದವನೂ ಅಲ್ಲ, ಏಕೆಂದರೆ ಇವನ ದೇಹ ದಂಡನೆಯಾಗಿರುತ್ತದೆ. ಇದೇ ಹೆಚ್ಚು ಪುಣ್ಯವು. ಜನರಲ್ಲಿ ಶಿಫಾರಸು ಪಡೆಯಬೇಕೆಂದು ಯಾರು ಖರ್ಚು ಮಾಡುವರೋ ಅವರು ಎಷ್ಟು ಖರ್ಚು ಮಾಡಿದರೂ ವ್ಯರ್ಥವು.

ಕೆಲವರು ನಿಜಭಕ್ತಿ ಮಾಡುತ್ತಿರಲು ಜನರು ಅವರಿಗೆ "ನೋಡು, ಎಲ್ಲವನ್ನು ಕಳೆದುಕೊಂಡು ಕುಳಿತ, ಬಾಳ್ವೆ ಮಾಡಲಿಕ್ಕೆ ಬರುವದಿಲ್ಲವೆಂದು ಛೀಮಾರಿ ಮಾಡಿ, ತಾವೂ ಮಾಡದೇ, ಮಾಡುವವರಿಗೂ ಮಾಡಗೊಡದೇ ನಿಂದಿಸುವರು. ಇವರು ಮಹಾ ನರಕಕ್ಕೆ ಬೀಳುವರು.

ತನ್ನ ಲಾಭದ ಸಲುವಾಗಿ ಅನ್ಯರಿಗೆ ತ್ರಾಸು ಕೊಡಬಾರದು. ಅನ್ಯರಿಗೆ ಸುಖವಾಗಲೆಂದು ಎಷ್ಟು ತ್ರಾಸು ಕೊಟ್ಟರೂ ಬೈದರೂ ಉತ್ತಮವು.

ಪ್ರಪಂಚ ಮಾಡಬೇಕಾದರೂ ಹೆಂಡತಿ ಉತ್ತಮ ಇರಬೇಕು. ಅಡಮುಟ್ಟಿ ಇರಬಾರದು. ಸಜ್ಜನರನ್ನು ಮಹಾತ್ಮರನ್ನು ಊಟಕ್ಕೆ ಕರೆದುಕೊಂಡು ಬಂದರೆ ಗಂಡನಿಗೆ ಛೀಮಾರಿ ಹಾಕಿ ಜಗಳಾಡಿ ಬೈಯ್ಯುವವಳಾಗಬಾರದು. ಗಂಡನಿಗೆ ಅನ್ನ ಹಾಕದೆ ವಟವಟ ಅನ್ನುತ್ತ ಹೊಟ್ಟೆ ತುಂಬ ಉಣ್ಣಲಿಕ್ಕದೆ ಸೇರದಿರುವವಳು ಇರಬಾರದು. ಇಂಥಾಕೆ ಇದ್ದರೆ ಮನೆ ಬಿಟ್ಟು ಹೋದರೂ ಪಾಪ ಬರುವದಿಲ್ಲ. ಯಾರಾದರೂ ಜಗಳವಾಡುವಲ್ಲಿ, ದುಷ್ಟರ ಮಾತಿನಲ್ಲಿ ಸಾಕ್ಷಿ ಪುರಾವೆಗಳ ವಾದದಲ್ಲಿ ಸಿಲುಕಬಾರದು. ಅದು ಜ್ಞಾನಕ್ಕೆ ಪ್ರತಿಕೂಲವಾಗುತ್ತದೆ.

ಗೆಣಸು, ಬಾಳೆಹಣ್ಣು, ಹಲಸಿನ ಹಣ್ಣು ನಂಜಿನ ಪದಾರ್ಥಗಳನ್ನು ತಿಂದರೆ ಹೇಗೆ ದೊಡ್ಡರೋಗ ಬರುತ್ತದೋ ಹಾಗೆ ಎರಡನೆಯವರಿಗೆ ದೇಹ, ಮಾತು, ಮನಸ್ಸಿನಿಂದ ದುಃಖವನ್ನುಂಟು ಮಾಡಿದರೆ ಭವದ ಬೇನೆ ಬರುತ್ತದೆ.

ವಂಚನೆ ಮಾಡಬಾರದು, ಗಂಟು ಮುಳುಗಿಸುವದು, ಲಂಚ ತಿನ್ನುವದು, ದಂಡ ಕಟ್ಟುವದು, ಕಳ್ಳತನ ದರೋಡೆಗಳಿಂದ ಗಳಿಸುವದು ಪಾಪವೇ.

ಪರಸ್ತ್ರೀಯ ಯೋನಿಯಲ್ಲಿ ಬಿಂದುವನ್ನು ಬಿಡಬಾರದು, ಮಲಮೂತ್ರಗಳನ್ನು ಜಲಾಶಯದ ಸಮೀಪ ಬಿಡಬಾರದು. ಕೆರೆ ಕಾಲುವೆ ಬಾವಿ ಬಿಟ್ಟು ದೂರ ಹೋಗಬೇಕು. ಹಣ್ಣುಗಳುಳ್ಳ ಗಿಡ, ಪತ್ರಿ ಪುಷ್ಪಗಳ ಬಳಿಯಲ್ಲಿಯೂ ಮಲಮೂತ್ರ ಬಿಡಬಾರದು.

# ವಿಷಯ ವೈರಾಗ್ಯ

ವಿಷಯಗಳನ್ನು ಎಷ್ಟು ಭೋಗಿಸಿದರೂ ಸುಖದ ಆಸೆಯು ಹೆಚ್ಚಾಗುತ್ತಲೇ ಇದೆ. ರಾಗದ ವಿಷಯವು ಸಿಕ್ಕಾಗ ಅಂತಃಕರಣವು ಚಂಚಲತೆಯನ್ನು ಬಿಟ್ಟು ಸ್ಥಿರವಾಗಿ, ಆತ್ಮನ ಪ್ರಕಾಶವು ಅದರಲ್ಲಿ ಬಿದ್ದು ಸುಖವಾಗುವದು. ನಂತರ ವಿಷಯ ಭೋಗವು ಬೇಸರವಾಗುವದು. ಗಂಡು ಹೆಣ್ಣು ಮುಂತಾದ ವಿಷಯಗಳಲ್ಲಿ ರುಚಿಯಿಲ್ಲ (ಸುಖವಿಲ್ಲ) ಸ್ವರೂಪದಲ್ಲಿಯೇ ಸುಖವಿರುವದು. ಬೇರೆ ಕಡೆಗೆ ಹುಡುಕಿದರೆ ಸಿಗುವದಿಲ್ಲ. ವಿಷಯವಿದ್ದಲ್ಲಿ ಸುಖವು ತೋರಲಾರದು. ವಿಷಯಗಳ ಸಂಬಂಧವಿಲ್ಲದ್ದರಿಂದಲೇ ನಿದ್ರೆಯ ಸುಖವು ದೊಡ್ಡದು.

ವಿಷಯಗಳ ಮೋಹವೇ ದುಃಖವು. ಈ ಮೋಹವನ್ನು ಕಳೆದುಕೊಳ್ಳಬೇಕು. ಇಲ್ಲದಿದ್ದರೆ ಇವುಗಳ ಆಶೆಯನ್ನು ಇಟ್ಟು ತಿರುಗಿ, ಹಂದಿ, ನರಿ ನಾಯಿಯಾಗಿ ಹುಟ್ಟಿ, ಇದಕ್ಕಿಂತಲೂ ಹೀನ ಯೋನಿಯಲ್ಲಿ ಜನಿಸಿ, ರೌರವ ನರಕದಲ್ಲಿ ಬಿದ್ದು ಬಳಲುತ್ತಾರೆ. ವಿಷಯಗಳ ಸಲುವಾಗಿಯೇ ಅಸಂಖ್ಯ ಜನ್ಮ ಪಡೆದರೂ ನಾಚಿಕೆಯಿಲ್ಲ.

ಕಾಮಾಂಧ ಕವಿಗಳು ಸುಮ್ಮನೇ ಸ್ತ್ರೀಯನ್ನು ವರ್ಣಿಸಿ ಮೋಹವನ್ನು ಬೆಳೆಸಿದರು. ಸ್ತ್ರೀಯು ಕೆಟ್ಟವಳಲ್ಲ, ಸ್ತ್ರೀಯರನ್ನು ತಾಯಿಯಂತೆ, ಅಕ್ಕ ತಂಗಿಯರಂತೆ ತಿಳಿಯದೆ ವಿಷಮ ಭಾವಕ್ಕೆ ಬಿದ್ದರೆ ಇವನೇ ಕೆಟ್ಟವನಲ್ಲದೆ ಸ್ತ್ರೀಯು ಕೆಟ್ಟವಳಲ್ಲ. ಆಕೆಯಲ್ಲಿ ಮೋಹವನ್ನುಂಟು ಮಾಡಿ ಬಿಡಿಸುವಾತನೇ ಈತ. ಹೆಂಡತಿಯನ್ನು ಮಾಡಿಕೊಳ್ಳಬೇಕೆಂದರೆ ಆ ವ್ಯಸನವು ಮನಸ್ಸಿನಲ್ಲಿ ಕುದಿಯುವದು.

ಲಗ್ನವಾಗುವಾಗ ದುಃಖ, ಲಗ್ನವಾದ ಮೇಲೆ ದುಃಖ, ರೂಪವತಿ ಹೆಂಡತಿ ಇದ್ದರಂತೂ ಬಹು ದುಃಖ. ಮಂದಿ ಎಲ್ಲಿ ಇಣಿಕಿ ಹಾಕುತ್ತಾರೋ ಎಂದು ಹಗಲಿರುಳು ಕಾಯುವ ದುಃಖ. ಒಮ್ಮೆ ರಜಪೂತರಲ್ಲಿ ಸುಂದರವಾದ ಪದ್ಮಿನಿ ಜಾತಿಯ ಹೆಣ್ಣು ಹುಟ್ಟಿತ್ತು. ಅದರ ಲಗ್ನವೂ ಆಗಿತ್ತು. ಅದನ್ನು ಕಂಡು ಮುಸಲ್ಮಾನರು ಇವಳನ್ನು ಕೊಡುತ್ತೀಯೋ, ಇಲ್ಲವೋ? ಎಂದು ಗಂಡನನ್ನು ಕೇಳಿದರು. ಅವನು ಕೊಡಲಿಲ್ಲ. ಕಡೆಗೆ ದೊಡ್ಡ ಲಡಾಯಿ ಮಾಡಿ ಅವನನ್ನು ಕೊಂದು ಅವಳನ್ನು ತೆಗೆದುಕೊಂಡು ಹೋದರು. ಯಾರಾದರೂ ಸಜ್ಜನರು ಮನೆಗೆ ಬಂದರೆ ದೋಷಾರೋಪವೇ. ಮಂದಿಯ ಕೂಡ ಮಾತನಾಡಿದರಂತೂ ಸಂಶಯವೇ ಸಂಶಯ.

ಹೆಂಡತಿಯ ಮುಖವನ್ನು ಕಂಡಕೂಡಲೇ ಮೋಹದಿಂದ ಎಲ್ಲರನ್ನೂ ಮರೆತು ಆಕೆಯನ್ನು ಕಟ್ಟಿಕೊಂಡು ಬೇರೆ ಇರುವಂತಾಗುವದು. ಧ್ಯಾನಕ್ಕೆ ಕುಳಿತಾಗ ತನ್ನ ಹೆಂಡತಿಯು ಯಾರ ಕೂಡ ಮಾತನಾಡುತ್ತಾಳೋ ಅಥವಾ ಕೂಡುತ್ತಾಳೋ ಎಂಬ ಸಂಶಯವು ಧ್ಯಾನಕ್ಕೆ ವಿಘ್ನವಾಗುವದು. ಹೆಂಡತಿಯು ಬಸುರಾದರೆ, ಹಡೆದರೆ ಚಿಂತೆ, ದೊಡ್ಡ ಬೇನೆ ಸೇರಿ ಯದ್ವಾತದ್ವಾ ಆಗಿ ವಿಕಾರದಿಂದ ರಾಕ್ಷಸಿಯಂತೆ ತೋರುವಳು. ಆಕೆಯು ಸತ್ತರಂತೂ ಅತಿ ಚಿಂತೆಯು. ಇದರಂತೆ ಮಕ್ಕಳ ಮೇಲೆ ಪ್ರೇಮವಿಟ್ಟಲ್ಲಿ ಅವರ ಲಗ್ನದ ಚಿಂತೆ, ಹೊಲ ಮನೆ ಹಿಡಿದುಕೊಡುವ ಚಿಂತೆ. ಅವರಿಗೆ ಏನೇ ಆದರೂ ತನಗೇ ದುಃಖ, ಕಡೆಗೆ ಸತ್ತರಂತೂ ಬಹಳ ಚಿಂತೆ.





ವಿಷಯ ದೊರೆತರೂ ದುಃಖ, ದೊರೆಯದಿದ್ದರೂ ದುಃಖ. ವಿದ್ಯೆ ಕಲಿತರೂ ದುಃಖ, ಕಲಿತು ನಂತರ ಪಾಸಾಗಿ ಕೆಲಸವು ಸಿಗುವದೋ ಇಲ್ಲವೋ ಎಂಬ ದುಃಖ. ಇದರಂತೆ ಹೆಂಡಿರು ಮಕ್ಕಳು ತನ್ನ ಅಪೇಕ್ಷೆಯಂತೆ ಸಿಕ್ಕರೂ ದುಃಖ, ಸಿಗದಿದ್ದರೂ ದುಃಖ. ಆದ್ದರಿಂದ ಈ ಲೋಕದಲ್ಲಿ ಆಶೆಯನ್ನು ಮಾಡಬೇಡಿರಿ. ಒಂದು ಊರ ಗೌಡಕಿ ಏಕೆ, ಇಡೀ ಬ್ರಹ್ಮಾಂಡಕ್ಕೆ ಒಡೆಯನಾದರೂ ದುಃಖ.

ದ್ರವ್ಯವನ್ನು ಬಹಳ ಗಳಿಸಿದವರಿಗೆ, ವಿದ್ಯೆಯನ್ನು ಹೆಚ್ಚು ಕಲಿತವರಿಗೆ, ದೇಹದ ಮೋಹ ಬಹಳ ಹೆಚ್ಚಿಗೆ ಇರುತ್ತದೆ. ಆತ್ಮ ವಿಚಾರವನ್ನು ಅದು ಹುಟ್ಟುಗೊಡುವದಿಲ್ಲ. ಹೀಗಾಗುವದರಿಂದ ವಾಸನಾ ಬೆಳೆಯುತ್ತದೆ. ಮುಂದೆ ಜನನ-ಮರಣಕ್ಕೆ ಕಾರಣವಾಗುತ್ತದೆ.

ಸ್ತ್ರೀಯನ್ನು ಗಳಿಸಬೇಕಾದರೆ ಎಷ್ಟು ಕಷ್ಟ ಪಡುವರು. ಆಕೆಯನ್ನು ಮೋಹಿಸಿ ಅಪಹರಿಸುವರು. ಸ್ತ್ರೀಯಲ್ಲಿ ಮೋಹಿಸುವಂತೆ ಆಕೆಯ ಹೇಸಿಗೆಯೂ ಕೂಡ ಮೃಷ್ಟಾನ್ನವಾಗುವದು. ಅದನ್ನು ತಿನ್ನಲೂ ಒಪ್ಪುವರು.

ಗಂಡನು ತಾನು ತನ್ನ ತಿಂಡಿಗಾಗಿ ಬಡಕೊಳ್ಳುವನು. ಆಕೆಯು ತನ್ನ ತಿಂಡಿಗಾಗಿ ಬಡಕೊಳ್ಳುವಳು. ಆದ್ದರಿಂದ ಇಬ್ಬರೂ ತಿಂಡಿಯ ಹುಳುಗಳು.

ಈಚಲ ಮರಕ್ಕೆ ಮಗಿ ಕಟ್ಟಿ ಹೆಂಡವನ್ನು ಬಸಗೊಂಡಂತೆ ಸ್ತ್ರೀಯಲ್ಲಿ ಬಿಂದುವನ್ನು ಕಳೆದುಕೊಂಡು ಬಸ್ತು ಶಕ್ತಿ ಕಳೆದುಕೊಂಡು ಶರೀರಕ್ಕೆ ಹುಳ ಹಚ್ಚಿಕೊಳ್ಳುತ್ತಾರೆ.

ಹಂದಿಯು ಹೇಸಿಗೆಗೆ ಗಂಟು ಬಿದ್ದಂತೆ ವಿಷಯಕ್ಕೆ ಮೋಹಪಟ್ಟು ದುಃಖಕ್ಕೆ ಗುರಿಯಾಗುತ್ತೇವೆ. ವಿಷಯಾದಿಗಳ ಚಿಂತೆಯಲ್ಲಿ ಅಗ್ನಿಯಲ್ಲಿ ಕಾಳು ಕುದಿಯುವಂತೆ ಕುದಿಯುವರು, ವಿಷಯಗಳನ್ನು ಗಳಿಸಬೇಕೆಂಬ ನೆನಪು ಮಾಡಿದ ಮಾತ್ರಕ್ಕೆ ದುಃಖ ಬಂದಿತು, ಆದ್ದರಿಂದ ಬುದ್ಧಿವಂತರು ವಿಷಯಗಳನ್ನು ನೆನಪು ಮಾಡುವದೇ ಇಲ್ಲ. ಹೆಣ್ಣು ಹೊನ್ನು ಮಣ್ಣು ಮುಂತಾದ ವಿಷಯಗಳನ್ನು ಕಾಯ್ದುಕೊಂಡು ಕೂಡ್ರುವವನು ಅವಿವೇಕಿಯು.

ಲೌಕಿಕರು ಜಗತ್ತಿನಲ್ಲಿಯ ನಾಮ ರೂಪಕ್ಕೆ ಮೆಚ್ಚಿ, ಸತ್ಯವೆಂದು ತಿಳಿದು, ಅಲ್ಲಿ ಸುಖವಿದೆಯೆಂದು ತಿಳಿದು ಹೊನ್ನು ಹೆಣ್ಣು ಮಣ್ಣು ಕಚ್ಚಿ ಬಡಿದಾಡುವರು. ವ್ಯಾಪಾರ ಹೊಲ ಮನೆ ಹಿಡಿದು ಗಳಿಸುವರು. ಸುಖದಿಚ್ಛೆಯಿಂದ ದುಡಿಯುತ್ತ ಉಣ್ಣುವರು, ಚರಗಿ ತಕ್ಕೊಂಡು ಕೂಡ್ರುವರು. ಇದನ್ನೇ ದಿನಾಲು ಮಾಡುವರು. ವಿದ್ಯೆ ಕಲಿಯುವದು, ನೌಕರಿಯನ್ನು ಹಿಡಿಯುವದು, ಲಗ್ನ ಮಾಡಿಕೊಳ್ಳುವದು, ಮಕ್ಕಳನ್ನು ಹಡೆಯುವದು, ಮಗನು ದೊಡ್ಡವನಾಗಿ ದುಡಿದು ಹಾಕಿದಾಗ, ಲಗ್ನ ಮಾಡಿಕೊಂಡಾಗ ಸುಖವಾದೀತು ಎನ್ನುವರು. ಮೇಲಿಂದ ಮೇಲೆ ಇದನ್ನೇ ಮಾಡುತ್ತ ಹೋಗುವರು. ದಿನಾಲು ಸಾವಿರ ರೂಪಾಯಿ ದುಡಿದರೂ ವಿಷಯದಲ್ಲಿ ದುಃಖವೇ ಇರುತ್ತದೆ. ಯಾವುದರಲ್ಲಿಯೂ ಸುಖವಿಲ್ಲ. ವೈರಾಗ್ಯವಿದ್ದರೆ ಮಹಾಸುಖವುಂಟು.

ಜನ್ಮ ತಾಳಿದ್ದೇ ದುಃಖವಿರುವದು. ಐಶ್ವರ್ಯ ಬಂದರೆ ಸುಖವೆಂದು ತಿಳಿದಿರುವರು. ಇದರಿಂದ ವಿಪರೀತ ದುಃಖವಾಗದೆ ಹೋಗುವದಿಲ್ಲ. ಶ್ರೀಮಂತಿಕೆಯ ಕೊಬ್ಬಿನಿಂದ ಬಹಳ ಪಾಪ ಜರುಗುತ್ತದೆ. ವಿಚಾರ ಮಾಡಿದರೆ ಈ ಲೋಕದಲ್ಲಿ ಒಂದು ಕ್ಷಣವಿರದಂತೆ ಆಗುವದು.

ಹೆಣ್ಣು ಹೊನ್ನು ಮಣ್ಣು ಈ ಮೂರರಿಂದ ಹಿಂದೆ ಎಂಥೆಂಥ ಜನರು ಕೆಟ್ಟು ಹೋದರು ಮತ್ತು ಅಂಥ ಕಥೆಗಳನ್ನು ಬರೆದಿರುತ್ತಾರೆ, ಆದರೂ ತಿಳಿಯಲೊಲ್ಲದು.

ಹಾವು, ಚೇಳು, ಹುಲಿ, ಕರಡಿ, ಎಷ್ಟು ದುಃಖವನ್ನು ಕೊಡುತ್ತವೆಯೋ ಇವುಗಳಿಗಿಂತ ಹೆಚ್ಚಿನ ದುಃಖವನ್ನು ಹೆಂಡಿರು ಮಕ್ಕಳು ಕೊಡುವರು. ಮಗನು ದೊಡ್ಡವನಾದರೆ ದುಡಿದು ಹಾಕುವನು, ಆಗ ಸುಖವಾದೀತು ಎನ್ನುವನು, ಮುಂದಿನ ದುಃಖ ಗೊತ್ತಿಲ್ಲದೇ ಸುಖ ಎನ್ನುವನು.

ಪಿಶಾಚಿ ಬಡಿದವನು ಊಟಕ್ಕೆ ಕೂತರೆ ತಿಂದೇ ತಿನ್ನುತ್ತಾನೆ, ಸಾಕು ಅನ್ನುವದೇ ಇಲ್ಲ. ನೀಡುವವರೇ ದಣಿಯುತ್ತಾರೆ. ಹೀಗೆ ಆಶೆಗೆ ಅಳತೆಯೇ ಇಲ್ಲ, ಎಷ್ಟು ಗಳಿಸಿದರೂ ಸಾಕೇ ಇಲ್ಲ.

ತಾಯಿ ಗರ್ಭದ ದುಃಖವನ್ನು ಎಷ್ಟು ವರ್ಣಿಸಿದರೂ ತೀರದು. ಏಕೆಂದರೆ ಈ ಹೇಸಿ ಸಂಸಾರ ವಿಷಯಕ್ಕೆ ಸುಖವೆಂದು ತಿಳಿದದ್ದರಿಂದ ಈ ವಾಸನೆಯಿಂದಲೇ ತಾಯಿಯ ಗರ್ಭಕ್ಕೆ ಬರುತ್ತಿರುವೆವು, ಇಹ ಪರಕ್ಕೆ ತಿರುಗುತ್ತಿರುವೆವು. ಇದರ ವಾಸನೆಯೇ ಬೀಜವು.

ದುಡಿದು ದುಡ್ಡು ಗಳಿಸಬೇಕಾದರೂ ದುಃಖ, ಅದನ್ನು ಕಾಯುವ ದುಃಖ, ಆಶೆ ಇಟ್ಟುಕೊಂಡು ಸತ್ತರಂತೂ ಕೋಣನಾಗಿ, ಸರ್ಪವಾಗಿ, ಪಿಶಾಚಿಯಾಗಿ ಕಾಯಲು ಬರುತ್ತಾನೆ.

ದುಡಿದು ತಿನ್ನುವದು, ತಿಂದು ದುಡಿಯುವದು. ಇದೇ ಕರ್ಮದ ಆಟ. ವಿಷಯ ಹಿಡಿದರೆ ದುಃಖ, ಅಂದರೆ ಕೈಯಲ್ಲಿ ಹೇಸಿಗೆ ಹಿಡಿದು ನಾರಬೇಡವೆಂದರೆ ಕೇಳುವದೇ?

ಇಹಲೋಕ ಪರಲೋಕದ ಭೋಗವು ವಿಷ ತುಂಬಿದ ಹೋಳಿಗೆಯಂತೆ ಇರುವದು. ಹೋಳಿಗೆಯೊಳಗಿನ ವಿಷವು ಹೇಗಿದೆಯೆಂದರೆ ವಿಷಯವಾಸನೆಯನ್ನು ಕಳೆದುಕೊಳ್ಳದ ಹೊರ್ತು ವಿಷವು ಬಿಡುವದಿಲ್ಲ. ಈ ವಿಷವು ಜನನ ಮರಣ ದುಃಖಕ್ಕೆ ಕಾರಣವಾಗಿರುತ್ತದೆ.

ಹೊಲ, ಮನೆ, ಮರ್ಯಾದೆ ಚೆನ್ನಾಗಿರಬೇಕೆಂದರೆ ಸುಖವು ಸಿಗುವದಿಲ್ಲ. ದೇಹ ಮೊದಲುಗೊಂಡು ಬಿಂದು ತತ್ವದವರೆಗಿನ ವಸ್ತುಗಳು ನಾಶವಾಗಿ ಜೀವನಿಗೆ ದುಃಖ ಕೊಡುವವು, ಆತ್ಮವು ಪರಮ ಪ್ರೀತಿಯ ವಿಷಯವು, ಇದುವೇ ಹಿತವು.

ಬ್ರಹ್ಮನು ಇನ್ನೊಂದು ಸೃಷ್ಟಿ ಮಾಡಿಟ್ಟರೂ ಕೊರತೆ ತಪ್ಪುವದಿಲ್ಲ. ಏನಿದ್ದರೂ ಮನಸ್ಸಿಗೆ ಸಾಕಾಗುವದೇ ಇಲ್ಲ. ಕೊರತೆಯೇ ಕೊರತೆ, ಇದನ್ನು ಪೂರೈಸಿಕೊಂಡವರಾರು. ಯಾವ ದೇಶದಲ್ಲಿ ಏನಿದೆ? ಏನಾದರೂ ಚಮತ್ಕಾರದ ಸುದ್ದಿ ಕೇಳಿ ನೋಡಲಿಕ್ಕೆ ಹೋದರೆ ಅದರ ನಾಮ ರೂಪ ನೋಡಿ, ಅಲ್ಲಿ ಆಶೆಯು ಹುಟ್ಟಿ, ವಾಸನೆಯು ಉಳಿದು ಅದೇ ಬೀಜವಾಗಿ ಜನ್ಮ ಕೊಡುತ್ತದೆ.

ಜನ್ಮ ತಾಳಿದ್ದು ಸುಖವೆಂದು ಭಾವಿಸಿದ್ದೇವೆ. ಮುಂದೆ ರಾಜನಾಗಬೇಕು. ದೊಡ್ಡ ಶ್ರೀಮಂತನಾಗಿ ಹುಟ್ಟಬೇಕು ಎಂಬ ಪ್ರವರ್ತನೆಯು ನಡದೇ ಇದೆ. ಇದೇ ದುಃಖ. ಇದರ ನಿವೃತ್ತಿಗೆ ಉಪಾಯ ಹುಡುಕುವದಿಲ್ಲ. ರಾಟಾಳದಂತೆ ಭವದಲ್ಲಿ ಇಹ ಪರಕ್ಕೆ ಮೇಲಿಂದ ಮೇಲೆ ತಿರುಗುವದು ನಡೆದಿದೆ. ಸ್ವರೂಪಜ್ಞಾನವನ್ನು ಮಾಡಿಕೊಂಡರೆ ಹುಟ್ಟು ಸಾವು ತಪ್ಪುವದು.





ವಿಷಯಗಳಿಗಾಗಿಯೇ ನಾನಾ ಪ್ರಕಾರದ ಕರ್ಮಗಳು ನಡೆದಿವೆ. ಅನಂತ ಜನ್ಮಗಳು ಇದಕ್ಕಾಗಿಯೇ ಸವೆದಿವೆ. ಹೋಳಿಗೆಯಲ್ಲಿ ರುಚಿಯಿದೆಯೆಂದರೆ, ದುಃಖವಿದೆ. ಕಮರಡೇಗು ಅಜೀರ್ಣ ಒದಗಿದರೆ ದುಃಖವಲ್ಲವೇ? ಎಲ್ಲ ವಿಷಯಗಳು ದುಃಖದವುಗಳೇ, ಅವು ಪದೇ ಪದೇ ದುಃಖ ಕೊಟ್ಟರೂ ತಿಳಿಯುವದಿಲ್ಲ.

ಎಷ್ಟು ದುಡಿದರೂ ಜನ್ಮ ಕೊಡುವ ಭವಾರಣ್ಯವನ್ನು ಸೇರುವದೇ, ಇಲ್ಲಿ ಅನೇಕ ಕಾಮ ಕ್ರೋಧಾದಿ ಕಾಡುಮೃಗಗಳಿವೆ.

ಲೌಕಿಕ ಶ್ರವಣವು ಇಲ್ಲಿಯವರೆಗೆ ಆನಂದವನ್ನು ಕೊಟ್ಟಿಲ್ಲ, ಕೊಡುವದೂ ಇಲ್ಲ. ಒಮ್ಮೆ ಲೌಕಿಕ ಶ್ರವಣವಾದರೆ ಸಾಕು, ನಂತರ ಬಗ್ಗುವದೇ ಇಲ್ಲ. ಕೇವಲ ಭವಿಗಳಾಗಿ ವರ್ತಿಸುವರು. ಅದಕ್ಕಾಗಿ ವೇದಾಂತ ಶ್ರವಣ ಬೇಕು.

ಬಂಗಾರದ ಕಿರೀಟವನ್ನು ಕಂಡು ಹಿಗ್ಗಬೇಡ. ಅದರಲ್ಲಿ ಮುಳ್ಳು ಚುಚ್ಚಿದೆ, ಹೂಮಾಲೆಯನ್ನು ಕೊರಳಿಗೆ ಹಾಕಿಕೊಂಡು ನಲಿಯಬೇಡ, ಅದು ಪಶುವನ್ನು ಕಟ್ಟುವ ಪಾಶದಂತೆಂದು ತಿಳಿ. ಜರದ ಮಡಿ ಹೊತ್ತುಕೊಂಡು ಉಬ್ಬಬೇಡ, ಹುಳದ ಹೇಸಿಗೆ ಹೊತ್ತಿರುವಿ ಎಂದು ತಿಳಿ. ತೇರು ಪಾಲಿಕೆಯನೇರಿ ದೊಡ್ಡವನಾದೆ ಎಂದೆನ್ನಬೇಡ, ಎತ್ತರದ ಮೇಲೆ ಕಾಗೆ ಕುಳಿತರೆ ಗರುಡನಾಗಬಹುದೇ? ಈ ಸಂಸಾರವು ಹೇಸಿಗೆಯ ಸ್ವರೂಪವೆಂದು ತಿಳಿದುಕೊಳ್ಳು. ಏನು ಕೊಟ್ಟರೂ ಒಲ್ಲೆ ಅನ್ನುವದರಲ್ಲಿಯೇ ಇರು. ಒಲ್ಲೆ ಅನ್ನುವವರು ಸಿಗುವದು ದುರ್ಲಭ.

ಹೆಂಡಿರು ಮಕ್ಕಳನ್ನು ಉಡಾ ಹಿಡಿದಂತೆ ಗಟ್ಟಿಯಾಗಿ ಹಿಡಿದಿರುತ್ತೇವೆ. ಇವುಗಳಲ್ಲಿಯ ರಾಗ-ದ್ವೇಷಾದಿಗಳು ನಮ್ಮನ್ನು ಹಿಡಿದು ಮಾಡಬಾರದ ಕೆಲಸ ಮಾಡಿಸಿ ಹುಟ್ಟುಟ್ಟಿ ಸಾಯಲು ಹಚ್ಚಿರುವವು. ಯಮದೂತರು ಎಷ್ಟು ಕಷ್ಟ ಕೊಟ್ಟರೂ ನಾಚಿಕೆಯೇ ಇಲ್ಲ.

ಜಗತ್ತಿನಲ್ಲಿ ದೊಡ್ಡವರೆಂಬುವವರು ಒಂದು ಹೆಸರಿಗೆ ಎಷ್ಟು ಬಡಕೊಂಡು, ಎಷ್ಟು ಹಣ ಖರ್ಚು ಮಾಡಿ ಇಲ್ಲದಂಥ ಸಿಗದಂಥ ಹೆಸರಿಗೆ ಬಡಿದಾಡುತ್ತಾರೆ. ನಾಮಕ್ಕೆ ಇಷ್ಟಾದ ಬಳಿಕ, ರೂಪಕ್ಕೆ ಎಷ್ಟು? ಈ ರೂಪದ ಮೋಹ ಬಹಳ, ಅಭಿಮಾನವೂ ಬಹಳ. ಇಲ್ಲದಂಥ ನಾಮ ರೂಪಕ್ಕೆ ಎಷ್ಟು ಶೃಂಗಾರ ಮಾಡುವರು.

ಒಬ್ಬನು ಲಗ್ನವು ದುಃಖಕರವೆಂದು ಕೈ ಬಿಟ್ಟರೂ ಮನೆಯ ಹಿರಿಯರು, ಓಣಿಯವರು, ಬೀಗರು, ಪರ ಊರವರು ಸಹಿತ ಯಾವುದಾದರೊಂದು ತಂದು ಗಂಟು ಹಾಕಿ, ಗುದ್ದಿ ಕಟ್ಟಿ ನರಕದ ಕೊಂಡಕ್ಕೆ ಎಳೆಯುತ್ತಾರೆ.

ವಿಷಯ ಸುಖವು ದೇಹವನ್ನು ಕೆಡಿಸುತ್ತದೆ. ನಿದ್ರೆಯ ಸುಖವು ದೇಹವನ್ನು ಕೆಡಿಸುವದಿಲ್ಲ. ಸುಷ್ಪ್ತಿಯಲ್ಲಿ ಒಂದೂ ವಿಷಯವಿಲ್ಲ. ಸುಖವೊಂದೇ ಇರುವದು. ಜಾಗ್ರ ಕನಸುಗಳಲ್ಲಿ ವಿಷಯಗಳಿವೆ, ದುಃಖವಿದೆ.

ಮುಪ್ಪಿನಲ್ಲಿ ಆಶೆಯು ಯೌವನಕ್ಕೆ ಬರುತ್ತದೆ. ದೇಹವು ಮುಪ್ಪಾದರೂ ಆಶೆಯು ಮುಪ್ಪಾಗುವದಿಲ್ಲ. ತಿನ್ನುಣ್ಣುವ ಆಶೆಯು ಆಗ ಬಹಳ. ಪಚನವಾಗದಿದ್ದರೂ ಮುದುಕರು ಕಮರಡೇಗು ಹಾಯ್ದು, ಹೊಟ್ಟೆಯನ್ನು ಕೆಡಿಸಿಕೊಂಡು ಅಪರಾತ್ರಿಯೊಳಗೆ ತಮ್ಮ ಬಂಡಿಯನ್ನು ಹಾರ ಹೊಡೆಯುತ್ತಾರೆ. ನೋಡಿದವರು ಬೈಯ್ಯುವದೇ, ಸವಿ ಹತ್ತಿತೆಂದು ನಾಲಿಗೆಯನ್ನು ಸಡಿಲು ಬಿಟ್ಟರೆ ಈ ಫಜೀತಿ, ಅನೇಕ ಜಡ್ಡು.

ಈ ಜೀವ ತಿಳಿವಳಿಕೆಯು ಬಹಳ ಹುಚ್ಚು. ಒಮ್ಮೆ ನಗುವದು, ಒಮ್ಮೆ ಅಳುವದು, ಒಮ್ಮೆ ಸಿಟ್ಟಿಗೇಳುವದು, ಒಮ್ಮೆ ಶಾಂತವಾಗುವದು. ಜಗತ್ತೇ ಹುಚ್ಚರ ಆಸ್ಪತ್ರೆ, ಮೂರು ಲೋಕದವರೆಲ್ಲರೂ ಹುಚ್ಚರೇ ಹುಚ್ಚರು. ಸುಮ್ಮ ಸುಮ್ಮನೇ ಅಳುತ್ತಾರೆ ನಗುತ್ತಾರಲ್ಲವೇ? ಓಣಿಯಲ್ಲಿ ಮದುಮಗನ ಮೆರವಣಿಗೆ ಹೊರಟಾಗ್ಗೆ ಏನದು ಆನಂದೋತ್ಸವ. ಸನಾದಿ, ಬೆಂಡಬಾಜಿಗಳ ಸುನಾದಗಳೂ, ಸುಮಂಗಲೆಯರ ಸೋಬಾನಗಳೂ, ನಾನಾ ತರದ ಉಡುಪಿನ ಹೊಳಪುಗಳೂ ರಾರಾಜಿಸುತ್ತವೆ. ಅದೇ ಸಮಯಕ್ಕೆ ಸಿದಿಗೆಯ ಮೇಲೆ ಒಂದು ಹೆಣ ಹೇರಿಕೊಂಡು ಹಲಿಗೆ ಬಾರಿಸುತ್ತ ಗೊಳೋ ಎಂದು ಅಳುತ್ತ, ಹಳೆಯ ಅರಿವೆ ಉಟ್ಟುಕೊಂಡು, ವ್ಯಥಿತ ಮನಸ್ಕರಾಗಿ ಕೆಲವರು ಹಾಯ್ದು ಹೋಗುತ್ತಾರೆ. ಇದೇ ಅಲ್ಲವೆ ಜೀವನ ಬಾಳ್ವೆ!

ವಿಷಯಗಳು ಎಂದೂ ಸುಖಕ್ಕೆ ಕಾರಣವಲ್ಲ. ಕೇವಲ ಹಿತಶತ್ರುವಿನಂತೆ ಮೋಹಕರೂಪವನ್ನು ಧರಿಸಿ ತಮ್ಮ ಕಡೆಗೆ ನಮ್ಮನ್ನು ಎಳೆದುಕೊಂಡು ನರಕಕ್ಕೋ, ಜನ್ಮಾಂತರಕ್ಕೋ ಓಡಾಡಿಸುತ್ತವೆ. ಉದಾ: ಯಾವನಾದರೊಬ್ಬನು ಮಗನು ಹುಟ್ಟುವ ಪೂರ್ವದಲ್ಲಿ ದಾನ ಧರ್ಮ ಪರೋಪಕಾರ ಮಾಡುತ್ತ, ಗುರುಗಳ ಹತ್ತಿರ ಹೋಗಿ ಶಾಸ್ತ್ರ ಶ್ರವಣ ಮಾಡುತ್ತಾನೆ. ಅವನೇ ಒಬ್ಬ ಮಗನು ಹುಟ್ಟಿದ ಕೂಡಲೇ ಅವನ ಮಲ ಮೂತ್ರ ಬಳಿಯುತ್ತ ಅವನ ಸೇವೆಯಲ್ಲಿಯೇ ತೊಡಗಿ ದಾನ ಧರ್ಮ ಮೊದಲಾದವುಗಳ ಬಾಗಿಲಿಗೆ ಕಲ್ಲು ಬಡಿಯುತ್ತಾನೆ. ಎಲ್ಲ ಉತ್ತಮ ಕ್ರಿಯೆಗಳು ನಿಂತು ಹೋಗುತ್ತವೆ. ಆದರೆ ಜಾಣರು ನಾಳಿನ ಕಾಳಜಿ ಮಾಡದೆ, ಮನೆಗೆ ಬಂದ ಅತಿಥಿ ಅಭ್ಯಾಗತರ ಸತ್ಕಾರ್ಯಕ್ಕೆ ಎಲ್ಲ ದುಡ್ಡು ಖರ್ಚು ಮಾಡಿ ಯೋಗ್ಯ ಗತಿಯನ್ನು ಹೊಂದುತ್ತಾರೆ. ದೇಹದ, ಹೆಂಡಿರು ಮಕ್ಕಳ ಚೈನಿಗಾಗಿ (ಅಪಾತ್ರ ದಾನಕ್ಕಾಗಿ) ಒಂದು ಪೈಸೆ ಸಹ ಖರ್ಚು ಮಾಡುವದಿಲ್ಲ.

ಮಾನವನು ಧನ ಕನಕಗಳನ್ನು ಗಳಿಸಲು ಅನೇಕ ಪ್ರಕಾರದ ಪ್ರಯತ್ನ ಮಾಡುತ್ತಿರುವನು. ಇದರ ಗಳಿಕೆಯ ದೆಸೆಯಿಂದ ನೀತಿ, ಧರ್ಮ, ಅಭಿಮಾನ ಬಿಟ್ಟು ಧನಿಕರ ಹತ್ತಿರ ನೀಚ ಸೇವೆಗೈಯ್ಯುವನು. ಒಂದು ವೇಳೆ ಕಷ್ಟತನದಿಂದ ಹಣ ಸಿಕ್ಕರೆ ಅದರ ರಕ್ಷಣೆಗಾಗಿ ಕುದಿಯುತ್ತಿರುವನು. ಅಕಸ್ಮಾತಾಗಿ ಕಳ್ಳರಾಗಲಿ, ರಾಜರಾಗಲಿ, ದುಷ್ಟ ಮಕ್ಕಳಾಗಲಿ, ಬಾಂಧವರಾಗಲಿ ಅಪಹರಿಸಿದರೆ ಎದಿ ಎದಿ ಬಡಿದುಕೊಂಡು ಅಳುತ್ತಾನೆ. ಹೀಗೆ ಗಳಿಸುವ ಮುಂಚೆ, ಗಳಿಸುವಾಗ, ಕಟ್ಟಕಡೆಗೂ ದ್ರವ್ಯವು ಅನರ್ಥಕಾರಿ ಯೆಂದು ತಿಳಿದು ಬ್ರಹ್ಮನಿಷ್ಠರ ಸಂಗ ಹೊಂದಿ, ವೈರಾಗ್ಯ ತಾಳಿ, ವಿಷಯತ್ಯಾಗ ಮಾಡಿ ವೇದಾಂತ ವಿಚಾರ ಶ್ರವಣ ಮನನ ನಿಧಿಧ್ಯಾಸನ ಮಾಡಿ ಮುಕ್ತನಾಗಬಹುದು.

ಯಾವ ಸ್ತ್ರೀ ದೇಹವನ್ನು ಮಾನವನು ಪ್ರೀತಿಸುವನೋ ಆ ದೇಹವು ಕೇವಲ ಮಾಂಸಪಿಂಡವು. ಯಾವ ಕೇಶ ಪಾಶವನ್ನು ನೋಡಿ ಮೋಹಿಸುತ್ತಾನೆಯೋ ಅದು ಕೂದಲಿನ ಗುಂಪು. ದೇಹದೊಳಗೆ ಎಲುಬು, ಮಾಂಸ, ರಕ್ತ, ಮಜ್ಜೆ, ಸ್ನಾಯು, ಮಲ, ಮೂತ್ರ, ವೀರ್ಯ, ಸಿಂಬಳ, ಪಿಚ್ಚು, ಜೊಲ್ಲು, ಕಫ ಪಿತ್ತ, ಕೂಕಣಿ ಮುಂತಾದ ಹೊಲಸು ಪದಾರ್ಥಗಳಿರುವವು. ದೇಹದ ಮೇಲೆ ಚರ್ಮದ ಹೊದಿಕೆ ಇದ್ದದ್ದರಿಂದ ಬಾಹ್ಯ ಸೌಂದರ್ಯಕ್ಕೆ ಮೆಚ್ಚಿ ಕುದಿಯುವರು. ಸ್ತ್ರೀಯ ಪ್ರಾಪ್ತಿಗಾಗಿ ಧನಿಕರ ಬಳಿಯಲ್ಲಿ ಸಾಲ ಮಾಡಿ, ಜೀತದ ಆಳಾಗಿ ದುಡಿದು, ಮದುವೆಯಾಗಿ ಅನ್ನ ವಸ್ತ್ರಕ್ಕಾಗಿ ಹಗಲಿರುಳು ದುಡಿಯುವಿ. ಒಂದು ವೇಳೆ ಹೆಂಡತಿಯನ್ನು ಬಲಿಷ್ಠ ದುರ್ಜನರು ಅಪಹರಿಸಿಕೊಂಡು





ಹೋದಾಗ ಕಷ್ಟಕ್ಕೆ ಗುರಿಯಾಗುವಿ. ಹೆಂಡತಿಯು ಒಳ್ಳೆಯ ನಡತೆಯವಳಿದ್ದರೆ ಮಕ್ಕಳಾಗಲಿಲ್ಲವಲ್ಲ ಎಂದು ಮರಗುವಿ. ದೈವವಶದಿಂದ ಮಕ್ಕಳಾಗಲು ಅವರ ಬೇನೆ ಬೇಸರಿಕೆ ಅನ್ನ ವಸ್ತ್ರ ವಿದ್ಯೆ ನೌಕರಿಗಾಗಿ ಕುದಿಯುತ್ತಿರುವಿ. ದೈವಯೋಗದಿಂದ ನಿನ್ನ ಪ್ರೀತಿಯ ಹೆಂಡತಿಯು ಮೃತಳಾದರೆ ಅತ್ಯಂತ ಶೋಕಾಗ್ನಿಯನ್ನು ಹೊಂದುವಿ. ಇಂಥ ಮಲದ ಭಾಂಡದಂತಿರುವ ಸ್ತ್ರೀಯ ಮೋಹವನ್ನು ಬಿಟ್ಟು ಸುಖಿಯಾಗು. ಸ್ತ್ರೀಯು ನಿನ್ನ ಸುಗುಣ ಸಮೂಹವನ್ನೂ (ಸತ್ಯ, ಪ್ರಾಮಾಣಿಕತನ) ನಿನ್ನ ದೇಹದ ಆರೋಗ್ಯವನ್ನೂ ಹಿಂಗಿಸುವಳು. ಸಜ್ಜನರ ಒಲುಮೆ, ರಾಜರ ಪೂಜೆ, ತಪಸ್ಸಿನ ಸಿದ್ಧಿಗಳನ್ನೂ, ಪರಲೋಕದಲ್ಲಿಯ ಸದ್ಗತಿಯನ್ನೂ ಅಪಹರಿಸುವ ಸ್ತ್ರೀ ವ್ಯಾಮೋಹವನ್ನು ವಿವೇಕದಿಂದ ತೊರೆದು ಆತ್ಮಧ್ಯಾನದಿಂದ ಮುಕ್ತಿ ಪಡೆಯಬೇಕು.

ಹೊಲ ಮನೆ ಶಾಶ್ವತವೆಂದು ಎಲ್ಲ ಧನ ಧಾನ್ಯ, ವಸ್ತ್ರ, ಹಣ್ಣು ಹಂಪಲು ಕಾಯಿಪಲ್ಲೆಗಳನ್ನು ಸುಖಕರವೆಂದು ಮೂಢ ಮಾನವನು ಗಳಿಸುವ ಉಪಾಯಗಳನ್ನು ಮಾಡಿ ಬಳಲಿ ಗಳಿಸುವನು. ಇಂಥ ಭೂಮಿಯನ್ನು ಎಷ್ಟೋ ಅರಸರು ಕೆಲವು ಕಾಲ ಆಳಿ ಎಲ್ಲವನ್ನೂ ಬಿಟ್ಟು ಹೋಗಿರುವರು. ಹದಿನಾಲ್ಕು ಲೋಕಗಳಲ್ಲಿ ಮಾನವರು ವಾಸಿಸುವರು. ಭರತಖಂಡವೂ ಒಂದು ಲೋಕವು. ಅದರಲ್ಲಿ ಅನೇಕ ಪ್ರಾಂತ ಪಟ್ಟಣ ಗ್ರಾಮಗಳಿರುವವು. ಅವುಗಳಲ್ಲಿ ಯಾವುದೋ ಒಂದು ಹಳ್ಳಿಯಲ್ಲಿ ನಿನ್ನದು ಒಂದು ಮುರುಕು ಸೋರುವ ಮನೆಯು. ಇದರಲ್ಲಿ ದಾಯಾದಿಗಳು ಪಾಲುಗಾರರು. ಇದರಂತೆಯೇ ನಿನ್ನ ಹೊಲವು. ಹೀಗೆ ನಿನಗಿರುವ ಗೇಣು ಸ್ಥಳಕ್ಕಾಗಿ ಬಡಿದಾಡಿ ಸಾಯುವದು ಒಳಿತಲ್ಲ. ಸಜ್ಜನರ ವಿಚಾರ ಮಾರ್ಗ ಹಿಡಿದು ಹೆಣ್ಣು ಮಣ್ಣು ಹೊನ್ನಿನ ಆಶೆಯನ್ನು ತೊರೆದು ಜ್ಞಾನ ಪಡೆದು ಸುಖಿಯಾಗಬೇಕು.

ಒಬ್ಬನು ವೇಶ್ಯಾಂಗನೆಯ ಮನೆಗೆ ಹೋಗುವನು. ಅವಳೊಡನೆ ಭೋಗಿಸಿ ಆಕೆಯ ಸಂಗವೇ ರುಚಿಯೆಂದು ಭಾವಿಸುವನು. ಹೊಲಸು ಗೊಬ್ಬರದಂತೆ ಚಿಂಗನಾರುವ ಹೇಸಿ ಹೆಂಗಸಿನ ಬೆನ್ನು ಹತ್ತುವನು. ಆಕೆಯಿಂದ ಹುಣ್ಣು ಹಚ್ಚಿಕೊಂಡು ಕೊಳೆತು ನಾರಿದರೂ, ಆ ವೇಶ್ಯೆಯ ಬೆನ್ನು ಹತ್ತಿ ಮನೆಮಾರು ಕಳೆದುಕೊಂಡು ಕೆಟ್ಟು ಹೋಗುವನು. ಬರೇ ಆಕೆಯ ರಂಜನೆಗೆ ಮರುಳಾಗುತ್ತ, ಔಷಧವನ್ನು ತೆಗೆದುಕೊಳ್ಳುತ್ತ ಮೈ ಹುಳುಕು ಮಾಡಿಕೊಳ್ಳುತ್ತಿರುವನು. ಜಗತ್ತು, ಸ್ತ್ರೀ ಪುರುಷರು ಬರೇ ರಂಜನೆಯಿಂದ ಹೊಳೆಯುತ್ತಿರುವರು.

ಲೌಕಿಕದಲ್ಲಿ ದುಡಿಯುವದು ಊಟಕ್ಕೆ ಕೂಟಕ್ಕೆ ಅಲ್ಲದೇ ಬೇರೆ ಅಲ್ಲ. ನಾಲಿಗೆಯ ರುಚಿಯನ್ನು ತೀರಿಸಿ ಬಿಡೋಣವೆಂದರೆ ಅದು ಎಂದಿಗೂ ಸಾಧ್ಯವಿಲ್ಲ, ಏನು ಮಾಡಿದರೂ ಹೊಟ್ಟೆಯ ಸಲುವಾಗಿ, ನಾಲಿಗೆಯ ರುಚಿಯ ಸಲುವಾಗಿ ಭೋಗಗಳ ಸಲುವಾಗಿ ಮತ್ತೇನಿದೆ?

ಶೆರೆ ಕುಡಿದ ಮನುಷ್ಯನು ಹೇಗೆ ಏನೇನೋ ಮಾತನಾಡುತ್ತಾನೆ, ಒದರಾಡುತ್ತಾನೆ, ಹೊಲಸು ಗಟಾರದಲ್ಲಿ ಬೀಳುತ್ತಾನೆ, ಅರಿವೆ ಅಂಚಡಿ ಕಳೆದಿರುತ್ತಾನೆ. ಇದರಂತೆ ಸಂಸಾರವೆಂಬ ಸಕಲ ಹೇಸಿಗೆಯ ಗಟಾರದಲ್ಲಿ ಅಂದರೆ ಹೆಣ್ಣು ಹೊನ್ನು ಮಣ್ಣು, ದೇಹದಿಂದ ಆತ್ಮನವರೆಗೆ ಇರುವ ಎಲ್ಲ ವಸ್ತುಗಳಲ್ಲಿ ಬಿದ್ದಿರುತ್ತಾನೆ. ಅಂದರೆ ಎಷ್ಟು ನಿಶೆಯಾಗಿರಬಹುದು.

## ದೇಹದ ವೈರಾಗ್ಯ

ದೇಹ ಭಾವವು ದುಃಖವನ್ನು ಕೊಡುವದು, ದೇಹವು ಹುಟ್ಟುವಾಗ ದುಃಖ, ಇರುವಾಗ ದುಃಖ, ಸಾಯುವಾಗ ದುಃಖ, ಹಸಿವಾಗಿ ಯಾವಾಗ ಕೂಳು ಸಿಗುವದೆಂಬ ಚಿಂತೆ, ನೀರಡಿಕೆಯ ಬಳಲಿಕೆ, 360 ಬೇನೆಯ ದುಃಖಗಳು ನರಳಿಸುತ್ತವೆ, ಅಳಿಸುತ್ತವೆ, ಶಕ್ತಿಯನ್ನು ಕಳೆಯುತ್ತವೆ. ಇವು ದರಿದ್ರನಿಗೂ, ರಾಜನಿಗೂ, ಯೋಗಿಗೂ ಭೋಗಿಗೂ ಬಿಡುವದಿಲ್ಲ. ವಿಷಯಗಳ ವ್ಯಾಮೋಹವನ್ನು ಮಾಡಬೇಕಾದರೆ ದೇಹವೇ ಕಾರಣವು. ದೇಹಭಾವವಿದ್ದಾಗಲೇ ಎಲ್ಲ ಭಯವು. ಎಷ್ಟು ಡೌಲು ಮಾಡಿದರೂ ದೇಹಕ್ಕೆ ಮುಪ್ಪು ಸಾವುಗಳು ಬರುವವೇ. ದೇಹಭಾವವನ್ನು ಕಳೆದುಕೊಂಡಾಗ ಭಯವು ಪೂರ್ಣ ನಾಶವಾಗುವದು.

ಮಾನವನು ಮಲಮೂತ್ರವಿದ್ದಲ್ಲಿ ಕೂಡ್ರುವದಿಲ್ಲ. ಆದರೆ ಹಲವು ಹೇಸಿಗೆಗಳಿಂದ ಕೂಡಿರುವಂಥ ಈ ದೇಹದಲ್ಲಿ ಏಕೆ ವಾಸಿಸುತ್ತಾನೆ? ರಕ್ತ, ಮಾಂಸ, ಅಸ್ಥಿ, ನರ, ಸಿಂಬಳ, ಪಿಚ್ಚು, ಜೊಲ್ಲು, ಕೂಕಣಿ, ಉಗುಳು, ಮಲಮೂತ್ರ, ವೀರ್ಯ ಮುಂತಾದ ಹೊಲಸುಳ್ಳ ದೇಹದಲ್ಲಿದ್ದು ಉಣ್ಣಬೇಕಾದರೆ ಪರಮಾತ್ಮನ ಜ್ಞಾನವು ದೊರೆಯುವದು ಹೇಗೆ ಸಾಧ್ಯ? ಶರೀರಕ್ಕೆ ಏನನ್ನೇ ತಿನ್ನಿಸಿದರೂ ಅದು ಅದನ್ನು ಮಲವನ್ನಾಗಿಯೇ ಮಾಡುತ್ತದೆ.

ಮೊದಲಿಗೆ ಪಾಯಖಾನೆಯ ಸ್ಥಳವು ಸ್ವಚ್ಛವಿತ್ತು. ದೇಹವು ಹೇಸಿಗೆ ಮಾಡಿದ ಬಳಿಕ ಪಾಯಖಾನೆಯು ತಯಾರಾಯಿತು. ಆದ್ದರಿಂದ ಈ ದೇಹವು ಪಾಯಖಾನೆಯ ತಾಯಿಯು. ಹೀಗಿದ್ದೂ ಈ ದೇಹದ ಸಲುವಾಗಿ ಮಾಡಬಾರದ್ದನ್ನು ಮಾಡುವರು.

ದೇಹದಲ್ಲಿ ಪಂಛೇರು ಹೇಸಿಗೆ, ಮೂರು ಸೇರು ಮೂತ್ರ, ಸವ್ವಾಸೇರು ಬಿಂದು ಯಾವತ್ತೂ ತುಂಬಿದೆ. ಮುಟ್ಟಿಗಿಟ್ಟೇರಿ ಅಂತ ಜಿಗಿಯಬೇಕಾದರೆ ಇವುಗಳನ್ನು ಕಟ್ಟಿಕೊಂಡೇ ಜಿಗಿಯುವನು.

ಹೊಲಸು ರಾಡಿಯಲ್ಲಿ ಹುಟ್ಟಿದ ಹುಳದಂತೆ ಹೇಸಿಗೆಯಲ್ಲಿ ದೇಹವೆಂಬ ಹುಳವು ಹುಟ್ಟುವದು. ದೇಹಗಳೆಲ್ಲವೂ ಹೇಸಿಗೆಯ ಹುಳುಗಳೇ. ಅವ್ವನದಷ್ಟು ಅಪ್ಪನದಷ್ಟು ಕೂಡಿ ಹೊಲಸಿನ ಹುಳಗಳಾಗಿವೆ. ದೇಹವು ಕಸದ ತಿಪ್ಪೆ, ಅನ್ನದ ಕುಟ್ರಿ.

ಕೆಂಪು ಹೆಂಡತಿ ಬೇಕೆಂದು ಹುಡುಗ ಓಡಾಡುವನು, ಕೆಂಪು ಹೇಸಿಗೆ ಬೇಕೆನ್ನುವನೆಂದೇ ತಿಳಿದುಕೊಳ್ಳಬೇಕು. ಬಂಗಾರವು ಕೆಂಪು ಕಲ್ಲು, ಬೆಳ್ಳಿಯು ಬಿಳಿಯ ಕಲ್ಲು, ನಾಯಿ ಕಕ್ಕಿದ್ದನ್ನು ತಿನ್ನಲು ಹೇಗೆ ಮನಸ್ಸಿಲ್ಲವೋ ಹಾಗೆ ವಿಷಯಗಳಿಗಾಗಿ ಓಕರಿಕೆಯು ಬರಬೇಕು.

ದೇಹವು ಬೇನೆಯ ತೋಟ, ಹನ್ನೆರಡೂ ತಿಂಗಳು ಬೆಳೆಯು ತಪ್ಪಿದ್ದಲ್ಲ. ಹಸಿವು ತೃಷೆಗಳೆಂಬ ಬೇನೆ ನಿರಂತರ ಇರುತ್ತವೆ. ರೋಗವು ಬರಬಾರದೆಂದರೆ ದೇಹವು ಬರಬಾರದಂತೆ ಮಾಡಿಕೊಳ್ಳಬೇಕು.





ಶರೀರವು ಕಟ್ಟಕಡೆಗೆ ಕೆಟ್ಟು ಹೋಗುತ್ತದೆ. ಮಣ್ಣಿನಲ್ಲಿ ಕರಗಿ ಹೋಗುತ್ತದೆ. ಶರೀರವು ನಿಜವಾದ ವಸ್ತುವಲ್ಲ. ಶರೀರವು ಮಿಂಚಿನಂತೆ ತೋರಿ ಅಡಗುವದು. ದೇಹವು ಕಲ್ಪಿತವು, ಇದು ಆತ್ಮನ ಆಧಾರದ ಮೇಲೆ ತೋರುವದು. ಇದು ನೀರ ಮೇಲಿನ ಗುಳ್ಳೆಯು. ಯಾವ ಕ್ಷಣಕ್ಕೆ ದೇಹಕ್ಕೆ ಏನಾಗುತ್ತದೆಂಬ ನಿಯಮವಿಲ್ಲ.

ಈ ಅನ್ನಮಯ ಕೋಶವು ಸಣ್ಣದಿದ್ದು ನಾಶವನ್ನು ಹೊಂದುತ್ತದೆ. ಇಂಥ ತೊಗಲಿನ ಅಂಗಿ ಎಷ್ಟೋ ಹರಿದು ಹೋಗಿವೆ. ಈ ಶರೀರವು ಅನ್ನದ್ದಿದ್ದು ರೂಪಾಂತರ ಹೊಂದುತ್ತದೆ. ಧಾನ್ಯಗಳು ವರ್ಷ ವರ್ಷ ಉತ್ಪತ್ತಿ ಮತ್ತು ನಾಶ ಹೊಂದುತ್ತವೆ. ಇವುಗಳನ್ನು ತಿನ್ನುವ ಶರೀರವಾದರೂ ನಾಶವಾಗುತ್ತದೆ. ಶರೀರವು ಮಣ್ಣಿನಲ್ಲಿ ಉಣ್ಣೆಯಂತೆ ಹೊರಳಾಡುವದು. ಮಣ್ಣನ್ನೇ ತಿಂದು ಮಣ್ಣಿನಲ್ಲಿ ಅಡಗುವದು.

ಕರ್ಮದಿಂದಲೂ ದುಃಖ, ಕರ್ಮದಿಂದ ಜನಿಸಿದ ಶರೀರದಿಂದಲೂ ದುಃಖ. ಶರೀರದಲ್ಲಿ ತಿಂಡಿ ಏಳುತ್ತದೆ, ಈ ತಿಂಡಿಗೆ ಹೆಂಡತಿ ಬೇಕು. ಇದರಿಂದ ದುಃಖವೇ ಹೆಚ್ಚು, ಇದು ಪಶುವಿನ ಪ್ರಪಂಚವಾದಂತಾಯಿತು.

ಪ್ರಕೃತಿ ಹಿಡಿದು ನಮ್ಮ ಶರೀರದವರೆಗೆ ಎಲ್ಲವೂ ಕೊಳೆತು ಮಣ್ಣಾಗುವದು. ಮಣ್ಣು ಹೋಗಿ ಕಾಳು ಆಗಿ, ಕಾಳು ಹೋಗಿ ಜೀವ ಆಗಿ, ಮುಂದೆ ಎಲ್ಲವೂ ಮಣ್ಣಾಗುವದು. ಹೀಗೆ ಏನೂ ಇಲ್ಲೆಂದು ತಿಳಿಯಬಹುದು.

ಒಂದು ಸಾರೆ ಮರಣವನ್ನು ಹೊಂದಬೇಕಾದರೆ ಎಷ್ಟೊಂದು ದುಃಖವಾಗುತ್ತದೆ. ಅಂದಮೇಲೆ ಅನಂತ ಜನ್ಮಗಳಲ್ಲಿ ಸತ್ತಿರುವರು, ಎಷ್ಟು ಕಷ್ಟವಾಗಿರಬಹುದು. ಇದನ್ನು ತಿಳಿಯದೆ ಸತ್ತ ಮೇಲೆ ನೋಡುತ್ತೇವೇನು ಬಿಡು ಎನ್ನುವರು.

ಹೆಚ್ಚಿನ ತನುಮೋಹಿಗಳು ತನುವನ್ನು ಅಲಂಕರಿಸುವದರಲ್ಲಿಯೇ ತೊಡಗುವರು. ಕಲ್ಪವೃಕ್ಷದ ಹೂವು ಮುಡಿದುಕೊಂಡರೂ, ಚಿಂತಾಮಣಿಸರ ಕೊರಳಲ್ಲಿ ಹಾಕಿಕೊಂಡರೂ ಶಾಂತರಾಗಿರುವದಿಲ್ಲ.

## ಅಧ್ಯಾತ್ಮ ಪ್ರಸಾರ

ತನಗೆ ಶುದ್ಧ ರೀತಿಯಿಂದ ನಡೆಯಲಿಕ್ಕೆ ಬಂದರೆ ಮತ್ತೊಬ್ಬರಿಗೆ ಹೇಳಲಿಕ್ಕೆ ಬರುತ್ತದೆ. ವೇದಾಂತ ಕೇಳಲಿಕ್ಕೆ ಯಾರು ಬಂದಾರೆಂದು ಪರೀಕ್ಷೆ ಮಾಡಿದರೆ ಎಲ್ಲರೂ ಓಡಿ ಹೋಗುತ್ತಾರೆ. ಮಠದಲ್ಲಿ ಕಸ ಹೊಡೆಯುವ ಪಾಳೆ ನನಗೇ ಬರುತ್ತದೆ.

ತಾನಾಗಿಯೇ ಊರೂರಿಗೆ ಹೋಗಿ ಬೋಧಿಸಬೇಕು. ನಿಷ್ಪೃಹನಾಗಿ, ನಿರಹಂಕಾರಿಯಾಗಿ ಏನೂ ಕೇಳದೆ, ತಕ್ಕೊಳ್ಳದೆ ತಾನೇ ಐದು ಮನೆ ತಿರಿದುಂಡು ಊರೂರಿಗೆ ಹೋಗಿ ಬೋಧೆಯನ್ನು ಮಾಡತಕ್ಕದ್ದು.

ಸಾಧನ ಚತುಷ್ಟಯ ಸಂಪನ್ನರಿದ್ದರೆ ಹೇಳಬೇಕು. ಎಷ್ಟೋ ಜನರಿಗೆ ಪಾಪ ಬಿಡಲಿಕ್ಕೆ ಬರಲೊಲ್ಲದು, ಪುಣ್ಯ ಮಾಡಲಿಕ್ಕೆ ಬರಲೊಲ್ಲದು. ಇಂಥವರಿಗೆ ಹೇಗೆ ಶಾಸ್ತ್ರ ಹೇಳಬೇಕು. ಶಾಸ್ತ್ರಕ್ಕೆ ಬೆಲೆಯೇ ಇಲ್ಲವೆ? ಕಂಡ ಕಂಡವರು ಹತ್ತಲಿಕ್ಕೆ ವಿಧವೆಯರ ಹೊರಸೇ ಅದು. ಕರ್ಮರಹಿತವಾದ ಈ ಜ್ಞಾನವನ್ನು ವಿರಕ್ತನಿಗೇ ತಿಳಿಸಬೇಕು. ಇಲ್ಲದಿದ್ದರೆ ನಪುಂಸಕನಿಗೆ ಸುಂದರ ಸ್ತ್ರೀಯನ್ನು ಲಗ್ನಮಾಡಿದಂತಾಗುವದು.

ವೇದಾಂತ ಪ್ರವಚನ ನಡೆದಲ್ಲಿ ಮನು ಮುನಿಗಳು ಪಂಡಿತೋತ್ತಮರು ಬ್ರಹ್ಮಾದಿಗಳು ಸಹ ಕೈ ಮುಗಿದು ನಿಂತು ಕೇಳಿಕೊಂಡು ಹೋಗುತ್ತಾರೆ. ಅವರು ಬಂದದ್ದು ಬಾಕಿ ಜನರಿಗೆ ಕಾಣುವದಿಲ್ಲ. ದೇವಾನುದೇವತರು ಯಮ ಮೊದಲಾದವರು ಬಂದು, ದಿವ್ಯ ಶರೀರ ತಾಳಿ ನಮಸ್ಕರಿಸಿ ಕೇಳಿಕೊಳ್ಳುವರು. ಆದ್ದರಿಂದ ಬ್ರಹ್ಮಬೋಧೆಯ ಶ್ರವಣ ಮಾಡುವವರು ದೊಡ್ಡ ಪುಣ್ಯವಂತರು.

ತಮ್ಮ ಸ್ವರೂಪವನ್ನು ತಿಳಿದೇ ತೀರಬೇಕೆಂಬ ಲವಲವಿಕೆಯುಳ್ಳವರಿಗೆ ತಿಳಿಸಬೇಕು. ತಾಮಸಹಂಕಾರಿಗಳಿಗೆ ಹೇಳಬಾರದು. ಗರ್ವದಿಂದ ಹೇಳಿದರೆ ಫಲವಿಲ್ಲ. ನಾನು ಹೇಳಿದ್ದು ಈತನಿಗೆ ತಿಳಿಯಿತೋ ಇಲ್ಲವೋ ಎಂಬ ಲವಲವಿಕೆಯಿಂದ ಇದನ್ನು ತಿಳಿಸಬೇಕು.



## ಸಾಧನೆ

ದೇಹಾದಿಗಳ ಆತ್ಮಬುದ್ಧಿಯನ್ನು ಗಟ್ಟಿಗೊಳಿಸುವವನು ಗುರುವರನಲ್ಲ, ಯಮನು. ದುಃಖವನ್ನು ಅನುಭವಿಸಲಿಕ್ಕೆ ಹಚ್ಚುವವನು ಯಮಕಿಂಕರನೆಂದು ತಿಳಿ. ದೇಹಾತ್ಮ ಬುದ್ಧಿಯನ್ನು ತೆಗೆದು ಹಾಕಿ ಆತ್ಮಬುದ್ಧಿಯನ್ನು ನೆಲೆಗೊಳಿಸುವವರೇ ಗುರುಗಳು, ಪೂರ್ಣ ದುಃಖ ನಿವಾರಣೆ ಮಾಡಿ ನಿತ್ಯ ಸುಖವನ್ನುಂಟು ಮಾಡುವವನೇ ಗುರು. ಸ್ವರೂಪದ ಅಜ್ಞಾನವನ್ನು ಕಳೆಯುವವರೇ ಗುರುಗಳು. ವಿಷಯಗಳಿಗೆ ಬಾಗದವರೇ ಗುರುಗಳು. ವಿಷಯಗಳಿಗೆ ಸೋತವರು ಗುರುಗಳೆನಿಸಿಕೊಂಡರೆ ಹಲ್ಗುರು ಎಂದು ತಿಳಿದುಕೊಳ್ಳಬೇಕು.

ಬ್ರಹ್ಮನಿಷ್ಠರ ಶಾಸ್ತ್ರಶ್ರವಣದಿಂದ ಆತ್ಮವಿಚಾರವು ಹುಟ್ಟುವದು. ಅವರು ಭವದ ಬೇರನ್ನೇ ಕಿತ್ತುತ್ತಾರೆ. ಮೂರು ಲೋಕದವರಾದರೂ ಬ್ರಹ್ಮಜ್ಞಾನಿಯಲ್ಲಿಯೇ ಬಂದು ಮುಕ್ತರಾಗುವರು. ಗುರುಗಳು ಎಲ್ಲ ವೇದ, ಶಾಸ್ತ್ರ, ಪುರಾಣ, ಆಗಮ, ಉಪನಿಷತ್ತುಗಳ ಅರ್ಕ ತೆಗೆದು ಹೇಳುತ್ತಾರೆ. ಅವರು ಹೇಳುವದನ್ನು ಏನೂ ಉಳಿಸುವದಿಲ್ಲ. ಅವರು ಪುಕ್ಕಟೆಯಾಗಿ ಹೇಳುವರು. ಐದು ಮನೆಗಳ ಭಿಕ್ಷೆಯನ್ನು ಬೇಡಿಯಾದರೂ ಹೇಳುವರು. ಅವರು ಬೇಡುವ ಚಾಳಿಯವರಲ್ಲ. ಗುರುವಿನ ಮಾತನ್ನು ಜಗತ್ತಿನಲ್ಲಿ ಯಾರೂ ತೆಗೆದು ಹಾಕಲಾರರು. ದೇವಾನುದೇವತರೂ ಇವರ ಮಾತಿಗೆ ಎದುರಾಗುವದಿಲ್ಲ. ಇವರ ನುಡಿಗಳನ್ನು ವೇದ ಆಗಮಗಳು ಹುಡುಕುತ್ತವೆ.

ಆದ್ದರಿಂದ ಬ್ರಹ್ಮನಿಷ್ಠರನ್ನು ಹುಡುಕಬೇಕು. ಗುರುಗಳು ಸಿಗುವದು ದುರ್ಲಭ. ಮೊದಲು ಬ್ರಹ್ಮಜ್ಞಾನಿಗಳಲ್ಲಿ ಹೋಗಿ ಸ್ವರೂಪ ತಿಳಿದುಕೊಂಡು ಪ್ರಾರಬ್ಧಾನುಸಾರ ವರ್ತಿಸಬೇಕು. ಬಂಧನಿವೃತ್ತಿಗಾಗಿ ವಿವೇಕ, ವೈರಾಗ್ಯ, ಶಮ ದಮಾದಿ ಷಟ್‌ಸಂಪತ್ತು, ಮುಮುಕ್ಷುತ್ವವುಳ್ಳ ಉತ್ತಮಾಧಿಕಾರಿಯು ಬ್ರಹ್ಮನಿಷ್ಠ ಗುರುಗಳ ಹತ್ತಿರಹೋಗಿ ಗುರುಗಳ ಜಾತಿ, ವಯಸ್ಸು, ರೂಪ ಮೊದಲಾದ ಬಾಹ್ಯಗುಣಗಳನ್ನು ಪರೀಕ್ಷೆ ಮಾಡದೇ ಗುರುವಿನ ಸನ್ನಿಧಿಯಲ್ಲಿ ಶುಶ್ರೂಷಾಪರನಾಗಿ ಇರಬೇಕು. ಶ್ರೀಗುರುವಾದರೂ ಶಿಷ್ಯನ ಜಾತಿ, ಸಂಪತ್ತು, ದಾರಿದ್ರ್ಯ ಮೊದಲಾದ ಬಾಹ್ಯ ಗುಣಗಳ ಕಡೆಗೆ ಲಕ್ಷ್ಯ ಕೊಡದೆ, ವಿರಕ್ತಿಯು ಆತನಲ್ಲಿ ಪೂರ್ಣವಿದೆಯೋ ಇಲ್ಲವೋ ನೋಡಿ, ಅವನಲ್ಲಿ ಮಲ ವಿಕ್ಷೇಪಗಳು ಹೋಗಿ ಆವರಣ ಒಂದೇ ಉಳಿದಿರಬೇಕು. ಮಲವೆಂದರೆ ವಿಷಯದ ಆಶೆ, ವಿಕ್ಷೇಪವೆಂದರೆ ವಿಷಯಾಸಕ್ತಿಯಿಂದ ಮನಸ್ಸು ಚಂಚಲವಾಗುವದು. ಇವೆರಡೂ ಇದ್ದರೆ ಅವನಿಗೆ ವಿವೇಕದಿಂದ ಕಳೆದುಕೊಳ್ಳಲು ಹಚ್ಚಬೇಕು.

ಬಹಳ ವೇದಾಂತ ಪುಸ್ತಕಗಳಿವೆ, ಓದಿ ತಿಳಿದುಕೊಳ್ಳಲು ಬರುವದಿಲ್ಲ. ಆದ್ದರಿಂದ ಬ್ರಹ್ಮನಿಷ್ಠರಿಂದಲೇ ಕೇಳಬೇಕು. ಉತ್ತಮಾಧಿಕಾರಿಯು ಗುರುವಾಕ್ಯವೇ ಮುಖ್ಯ ಕಾರಣವೆಂದು ನಂಬಿರುತ್ತಾನೆ. ವೇದ, ಆಗಮಾದಿ ಯಾವ ಶಾಸ್ತ್ರವನ್ನೂ ನೋಡುವದಿಲ್ಲ. ಗುರುವಾಕ್ಯವೇ ಎಲ್ಲ ಶ್ರುತಿ, ವೇದ, ಆಗಮ, ಸರ್ವವೂ ಗುರುವೇ ಎಂದು ತಿಳಿದುಕೊಂಡಿರುತ್ತಾನೆ.

ಜೀವನ್ಮುಕ್ತನನ್ನು ಸಾಕ್ಷಾತ್ ದೇವರೆಂದು ತಿಳಿದುಕೊಳ್ಳಬೇಕು. ಜೀವನ್ಮುಕ್ತನ ಹೊರತು ಅನ್ಯ ದೇವರಿಲ್ಲ. ತೀರ್ಥಕ್ಷೇತ್ರ, ಯಾತ್ರೆ ಎಲ್ಲವೂ ಗುರುಪಾದದಲ್ಲಿವೆಯೆಂದು ತಿಳಿದುಕೊಳ್ಳಬೇಕು. ಗುರುಗಳು ಹೇಳಿದ ಮಾತಿನಲ್ಲಿ ನಂಬಿಕೆ ಇರಬೇಕು.

ಯಾವನಾದರೊಬ್ಬನು ತನ್ನ ಹೆಂಡಿರು ಮಕ್ಕಳ ಸಲುವಾಗಿ ಹೇಗೆ ದೇಹವನ್ನು ಸವೆಸುವನೋ, ನೌಕರಿಯ ಆಶೆಯುಳ್ಳವನು ಕಾಮದಾರರ ನೀಚ, ಹೀನವಾದ ನಡವಳಿಕೆಗೆ ಲಕ್ಷ್ಯ ಕೊಡದೆ ಜೀ ಎಂದು ಅವರ ಬೂಟು ಹೇಗೆ ಒರೆಸುವನೋ ಹಾಗೆಯೇ ವಿವೇಕಿ ಅಧಿಕಾರಿಯು ಜ್ಞಾನದಾತನಾದ ಗುರುವಿನ ಸೇವೆಯಲ್ಲಿ ತನ್ನ ಶರೀರವನ್ನು ದಣಿಸುವನು. ಬ್ರಹ್ಮನಿಷ್ಠರ ಮನಸ್ಸನ್ನು ಸಂತೋಷಗೊಳಿಸಬೇಕು. ನೀನು ತಿನ್ನುವದನ್ನಾದರೂ ಬಿಟ್ಟು ಅವರಿಗೆ ತಿನ್ನಿಸಬೇಕು. ಗುರು ಶರೀರವೇ ತನ್ನ ಶರೀರವೆಂದು ತಿಳಿದುಕೊಳ್ಳಬೇಕು. ಯಾವಾಗಲೂ ಸತ್ಪುರುಷರ ಸಹವಾಸದಲ್ಲಿರಬೇಕು. ಸತತ ಬ್ರಹ್ಮನಿಷ್ಠರೊಡನೆ ಇದ್ದರೆ ಧೈರ್ಯ ಬರುತ್ತದೆ. ಅವರು ಎಷ್ಟೇ ಉಪದ್ರವ, ಕಿಟಿಕಿಟಿ, ತ್ರಾಸು ಕೊಟ್ಟರೂ ಸಹಿಸಿಕೊಳ್ಳಬೇಕು. ಪ್ರಾರಬ್ಧವೇ ಹೀಗಿದೆಯೆಂದು ಸುಮ್ಮನಿರಬೇಕು. ನಾಗಲಿಂಗಪ್ಪನವರು ಜನರಿಗೆ ಕಲ್ಲು ಒಗೆಯುವದನ್ನು ಮಾಡುತ್ತಿದ್ದರು. ಏಷ್ಟಾದರೂ ಏನಾದರೂ ಅಲ್ಲಿಯೇ ಇರಬೇಕು. ಪ್ರಾಣದ ಹಂಗು ತೊರೆದು ಗುರುವಿನ ಸೇವೆಯನ್ನು ಮಾಡಬೇಕು. ಗುರುಗಳು ಸುಡುಗಾಡದಲ್ಲಿದ್ದರೂ ಅವರ ಸೇವೆಯನ್ನು ಮಾಡುತ್ತ ಶ್ರವಣ ಮಾಡಬೇಕು. ಹಗಲು ರಾತ್ರಿ, ಉಣ್ಣುವಾಗ, ತಿನ್ನುವಾಗ ಎಲ್ಲಿ ಹೋದರೂ ಅವರ ಬೆನ್ನು ಕಾಯಲೇಬೇಕು. ಅಂದರೆ ಎಲ್ಲವನ್ನು ಹುಡುಕಿ ಹೇಳುತ್ತಾರೆ. ಯಾವ ಕಾಲಕ್ಕೆ ಯಾವ ಮಹಾವಾಕ್ಯ ಹೊರಡುವದೋ ಹೇಳಲಿಕ್ಕೆ ಬರುವದಿಲ್ಲ. ಕಾಯ್ದುಕೊಂಡು ಕೂಡ್ರಬೇಕು, ಅಂದರೆ ಸಿಗುತ್ತವೆ. ಜ್ಞಾನವಾಗುವವರೆಗೆ ಸ್ವರೂಪದ ಬಗ್ಗೆ ಕೇಳುವದನ್ನು ಬಿಡಬಾರದು. ಕೇಳುವವನ ಪುಣ್ಯ ಒದಗಿದ್ದರಿಂದ ಜ್ಞಾನಿಗಳು ಬೋಧಿಸುತ್ತಾರೆ. ಗುರುಸೇವೆಯೆಂದರೆ ಗುರುವಿನ ವಾಕ್ಯವನ್ನು ತಿಳಿದುಕೊಳ್ಳುವದು. ಶೃತಿ ಗುರುಗಳಿಂದ ಶ್ರವಣ ಮನನ ನಿದಿಧ್ಯಾಸನ ಮಾಡಿ ಸದಾ ಬ್ರಹ್ಮ ಚಿಂತನೆಯಲ್ಲಿರಬೇಕು. ಆತ್ಮಜ್ಞಾನಿ ಗುರುಗಳ ಸಂಗವನ್ನು ಹೊಂದಿ ಅವರಿಂದ ವೇದಾಂತ ಶ್ರವಣ ಮಾಡುವದೇ ಮುಖ್ಯ ಕರ್ತವ್ಯವು.

ಒಮ್ಮೆ ಪ್ರಸಂಗ ಬಂದಾಗ್ಗೆ ಗುರುಗಳು ಪರೀಕ್ಷೆಗಾಗಿ ಏನು ಹೇಳುವರೋ ಅದಕ್ಕೆ ಪ್ರತಿಕೂಲವಾಗದೆ ಅನುಕೂಲವಾಗಬೇಕು. ಪ್ರಾಣ ಹೋಗುವ ಪ್ರಸಂಗ ಬಂದರೂ ಆಜ್ಞೆಯನ್ನು ಮೀರಬಾರದು.

ಈ ಹೊತ್ತು ಎಷ್ಟು ಪಾಪದ ಕೆಲಸ ಮಾಡಿದೆ, ಎಷ್ಟು ಪುಣ್ಯದ ಕೆಲಸ ಮಾಡಿದೆ ಎಂಬ ಜಮಾಖರ್ಚನ್ನು ಇಟ್ಟರೆ ಮಾಯೆಯನ್ನು ಗೆದೆಯಬಹುದು. ಸುಮ್ಮನೆ ದುಡ್ಡಿನ ಜಮಾಖರ್ಚನ್ನಿಟ್ಟು ಕೊರಗುವದೇಕೆ? ಮರಗುವದೇಕೆ?

ನೀತಿ ವೈರಾಗ್ಯಗಳಿಲ್ಲದೆ ಆತ್ಮಜ್ಞಾನವಾಗುವದು ಸಾಧ್ಯವಿಲ್ಲ. ಶಾಸ್ತ್ರವು ಪಾಪಿಷ್ಟರಿಗೆ ಬಲು ಕಠಿಣವಾಗುತ್ತದೆ. ಪುಣ್ಯಾತ್ಮರಿಗೆ ಬಹಳ ಸುಲಭವಾಗುತ್ತದೆ. ಕೆಲವರು ಕೂಲಿ ಕೊಡುವದನ್ನು ತಪ್ಪಿಸಿ ಶಾಸ್ತ್ರಕ್ಕೆ ಬರುವರು, ಇಂಥವರಿಗೆ ವೇದಾಂತವು ತಿಳಿಯುವದಿಲ್ಲ. ತನ್ನ ಮೈ ಕೈ ಅರಿವೆ ಅಂಚಡಿ ಇವುಗಳನ್ನು ತಿದ್ದಿ ತೀಡಿಕೊಳ್ಳುತ್ತ





ಡಂಭಾಚಾರದಿಂದಿದ್ದರೆ ಅಧ್ಯಾತ್ಮವು ತಿಳಿಯುವದಿಲ್ಲ. ಯಾವಾಗಲೂ ಜಗಳವಾಡುವದರಲ್ಲಿಯೇ, ಎರಡನೆಯವರ ಸುದ್ಧಿಯನ್ನು ಮಾತನಾಡುವದರಲ್ಲಿಯೇ ಇರುವವರಿಗೆ ಬ್ರಹ್ಮವಿದ್ಯೆಯು ತಿಳಿಯಲಾರದು. ನುಡಿಯಂತೆ ನಡೆ, ನಡೆಯಂತೆ ನುಡಿ ಇದ್ದರೆ ಇದೇ ಜನ್ಮ ಕಡೆ, ನೀತಿ ಇಲ್ಲದವನು ಎಂಥ ಪಂಡಿತನಿದ್ದರೂ ಒಳ್ಳೆಯವನಲ್ಲ. ಬರೇ ನಾಲ್ಕು ಮಾತು ಕೇಳಿ ಹೇಳಿದರೆ ಅಲ್ಲ, ಬಲವಾದ ನೀತಿಯಿಲ್ಲದಿದ್ದರೆ ತಿಳಿಯುವದಿಲ್ಲ. ಸುಮ್ಮನೆ ಮಾತನಾಡಿದರೆ ಏನಾಗುವದು. ಮಾತಿನ ಜ್ಞಾನ, ತೂತಿನ ಗಡಿಗೆ, ಪಾತಕರ ಸಂಗ ಯಾತಕ್ಕೂ ಬೇಡ. ನೀತಿ ಇದ್ದರೆ ವಿರಕ್ತಿ, ವಿರಕ್ತಿ ಇದ್ದರೆ ಜ್ಞಾನ, ಹಗಲಿ ಸಾಧು, ರಾತ್ರಿ ಬಾದು ಆಗಬಾರದು.

ಅಹಂಕಾರ, ನಿಷ್ಠುರ, ಕ್ರೋಧ, ತಾಮಸ ಬುದ್ಧಿಯನ್ನು ಬಿಡಬೇಕು. ಅಷ್ಟ ಮದಗಳನ್ನು ಅಳಿಯಬೇಕು. ಇವುಗಳಲ್ಲಿಯ ಒಂದರಲ್ಲಿ ಮುಳುಗಿದರೆ ಸಾಕು, ಪಡಲಾರದ ಬವಣೆಯನ್ನು ಪಡುತ್ತೇವೆ. ಅನ್ನದ ಮದವೊಂದಿದ್ದರೆ ಏನೂ ತಿಳಿಯುವದಿಲ್ಲ. ಕುಸ್ತಿಯಾಡುವದು, ದುಂಡಿ ಎತ್ತುವದು, ಬಡಿದಾಡುವದು ಇತ್ಯಾದಿಗಳನ್ನು ಅನ್ನವೇ ಮಾಡಿಸುವದು. ಅದು ವಿನಯ ಶಾಂತಿಗಳನ್ನು ಬಿಡಿಸುವದು. ನಿದ್ರೆ, ಮೋಹ, ಮದ ಈ ಮೂರಕ್ಕೂ ಅನ್ನವೇ ಕಾರಣವು. ಗರ್ವ ನಿಗರ್ವಕ್ಕೂ ಇದೇ ಕಾರಣ. ಪ್ರಪಂಚದಲ್ಲಿಯ ದುಷ್ಟತ್ವ ಶಿಷ್ಟತ್ವಗಳಿಗೆ ಇದೇ ಮುಖ್ಯ. ಅನ್ನದಿಂದ ಕೊಬ್ಬಿದ ಮನಸ್ಸು ವಿಷಯದಲ್ಲಿ ತೊಡಗಿ ಮಹಾ ದುಃಖಕ್ಕೆ ಈಡು ಮಾಡಿ ಭವದ ಸಂತಾಪವನ್ನು ಹೆಚ್ಚಿಸುವದು.

ಎರಡನೆಯವರನ್ನು ನೋಯಿಸದೆ, ತನ್ನಂತೆ ಪರರೆಂದು ತಿಳಿದವ ಕೈಲಾಸದಲ್ಲಿ ಇದ್ದಂತೆ ಎಂದು ತಿಳಿದುಕೊಳ್ಳಬೇಕು.

ಮುಕ್ತಿಯಾಗಬೇಕಾದರೆ ಶಮೆ, ದಮೆ, ತಿತಿಕ್ಷೆ ಮುಂತಾದ ಎಲ್ಲ ಗುಣಗಳು ಅತ್ಯವಶ್ಯ. ಇದರಂತೆ ಅಹಂಕಾರ ನಿಗ್ರಹ, ಅಪಕಾರ ಮಾಡಿದವರಿಗೆ ಉಪಕಾರ ಮಾಡುವದು, ಕಾಮ ಕ್ರೋಧ ಮೋಹಗಳ ಜಯ ಇವು ಬೇಕೇ ಬೇಕು.

ದುಷ್ಟ ಜನರ ಸಂಸರ್ಗವೆಂಬ ಗಾಳಿ ಬಡಿಯಬಾರದು, ವೈರಾಗ್ಯವೆಂಬ ಬಿಸಿನೀರನ್ನು ಕುಡಿಯಬೇಕು. ಶಾಂತಿ ಎಂಬ ಅಕ್ಕಿ ಗಂಜಿಯನ್ನು ಕುಡಿಯಬೇಕು. ನಾನು ನೀನು, ಅವಳು ಇವಳು ಎಂದು ಹೆಚ್ಚು ಮಾತನಾಡುವಂತಿಲ್ಲ. ಈ ಪ್ರಕಾರ ಸರಿಯಾಗಿ ಪಥ್ಯಾ ಮಾಡಿದರೆ ಭವರೋಗದ ಮೂಲವೇ ಕಿತ್ತು ಹೋಗುತ್ತದೆ.

ಮೋಕ್ಷಾಪೇಕ್ಷಿಯು ಅನ್ಯರಿಗೆ ಕೇಡು ಮಾಡುವದಿಲ್ಲ. ಏನಾದರೂ ದುಃಖವಾದರೆ ಅದು ತನ್ನ ಅಪರಾಧವೇ ಎಂದು ತಿಳಿದುಕೊಳ್ಳುತ್ತಾನೆ. ತನ್ನ ಪಾಪವೇ ಹೀಗೆ ಮಾಡಿಸುತ್ತದೆ ಎನ್ನುವನು. ಇವರು ನನ್ನನ್ನು ಕೆಡಿಸಿದರು, ನನ್ನ ಮಾನ ಮರ್ಯಾದೆ ಕಳೆದರು ಎನ್ನುವದಿಲ್ಲ. ಎರಡನೆಯವರದು ತಪ್ಪಲ್ಲ, ಇದು ತನ್ನ ಪೂರ್ವ ಕರ್ಮ, ನನ್ನದೇ ತಪ್ಪು ಎನ್ನುವನು, ಇವರು ನನಗೆ ಅಪಕಾರ ಮಾಡಿದರು, ಇವರಿಗೆ ನಾನು ಕೇಡು ಮಾಡಬೇಕು ಎಂಬ ನೆನಪೂ ಸಹ ಇರುವದಿಲ್ಲ, ಇದು ನಾನೇ ಮಾಡಿದ್ದು. ನನ್ನ ಪಾಪವೇ ಎದುರಾಳಿಯಾಗಿರುವದು ಎನ್ನುವನು. ಈಗ

ನಾನು ಏನಾದರೂ ಮಾಡಿದರೆ ಮುಂದೆ ನನಗೆ ಬರುತ್ತದೆ ಎನ್ನುವನು. ಪ್ರತ್ಯಕ್ಷ ಕುತ್ತಿಗೆ ಕೊಯ್ದರೂ ನನ್ನ ಕರ್ಮ ಎನ್ನುವನು. ಬಣವಿಗೆ ಬೆಂಕಿ ಹಚ್ಚಿದರೆ ನನ್ನ ಕರ್ಮ, ನಾನೇ ಹಚ್ಚಿರುವೆನೆಂದು ನಿಶ್ಚಿತ ತಿಳಿದುಕೊಳ್ಳಬೇಕು. ದುಷ್ಟ, ನೀಚ ಎಂದು ಛೀಮಾರಿ ಹಾಕಿದರೂ ನಗಬೇಕು.

ಸಾಧಕನು ಎಲ್ಲರಿಗೂ ಹೆದರಿ ಕಿರಿದಾಗಿ ವಿನಯದಿಂದ ನಡೆದುಕೊಳ್ಳುವನು. ಆದರೂ ತಾನು ಎಲ್ಲವನ್ನು ಬಲ್ಲನು, ಅಹಂಕಾರವನ್ನು ತ್ಯಜಿಸಿ ಒಳಗೆ ಎಳ್ಳಷ್ಟೂ ಹೆದರಿಕೆ ಇಲ್ಲದಿರುವನು, ಇದನ್ನು ಯಾರಿಗೂ ತೋರಗೊಡುವದಿಲ್ಲ.

ಉತ್ತಮರು ಹಿತವಚನವೆಂಬ ಆಭರಣವನ್ನು ಧರಿಸುತ್ತಾರೆ. ಮೋಕ್ಷ ಕೊಡುವ ಶೃತಿ ವಾಕ್ಯಗಳನ್ನು ಬಿಟ್ಟೂ ಬಿಡದೆ ಕೇಳುವ ಪ್ರೀತಿಯನ್ನು ಬೆಳೆಸಿಕೊಳ್ಳುತ್ತಾರೆ. ಮೂರು ಲೋಕದವರೂ ಹೊಗಳುವಂಥ ಪರಮಾತ್ಮನ ಪ್ರಾಪ್ತಿಗಾಗಿ ಹಗಲಿರುಳು ಪ್ರಯತ್ನಿಸುತ್ತಿರುತ್ತಾರೆ. ಧನವ ಗಳಿಸಬೇಕೆಂಥಾದ್ದು ಬ್ರಹ್ಮಾದಿಗಳು ಹೌದೌದು ಎನ್ನುವಂಥಾದ್ದು. ಅವರು ಕೋಪದ ಸಂಸರ್ಗವಿಲ್ಲದ ತಪವನ್ನು ಸಾಧಿಸುತ್ತಾರೆ. ಪರಸ್ತ್ರೀ, ಪರದ್ರವ್ಯ ಮೊದಲಾದ ಹೀನ ವಿಷಯಗಳ ಬಗ್ಗೆ ವೈರಾಗ್ಯವನ್ನು ತಾಳಿ ಹಿಂದೆ ಸರಿಯುತ್ತಾರೆ. ಅಕಸ್ಮಾತಾಗಿ ಪರಸ್ತ್ರೀಯರನ್ನು ನೋಡಿದರೆ ತಾಯಿಯಂತೆ ಭಾವಿಸುತ್ತಾರೆ.

ಜಾಣನು ಮದ ಮತ್ಸರಗಳ ತೊಡಕನ್ನು ಬಿಡಿಸಿಕೊಂಡು, ದೊರಕಲೇನು ಅದರೊಳು ಪರಿಣತೆಗೊಂಡು ತಿರುಗಿ ಜನಿಸಬಾರದೆಂದು ಪರಮಾತ್ಮನ ನೆನಪಿನಲ್ಲಿರುವನು. ವಿಷಯಗಳಿಗಾಗಿ ಕುದಿಯುವದಿಲ್ಲ. ಕುದಿಯುವ ಮನಸ್ಸನ್ನು ಎಳೆದು ತಂದು ಸ್ವರೂಪದಲ್ಲಿ ನಿಲ್ಲಿಸುವನು.

ವಿಘ್ನಗಳು ಬಂದಲ್ಲಿ ಶಾಂತವಾಗಿ ಬಗೆಹರಿಸಿಕೊಳ್ಳಬೇಕು. ಇಲ್ಲವೆಂದರೆ ಪರಿತ್ಯಾಗ ಮಾಡಿ ಹೊರಡಬೇಕು, ಕೇಳಿ ಕೇಳಿ ಮಾತಿನ ಮಲ್ಲರಾಗಬಾರದು. ಅನುಭವಕ್ಕೆ ತಂದು, ಅನಾಚಾರಕ್ಕೆ ನಾಚಿ ಅಭ್ಯಸಿಸಬೇಕು.

ಗುಡ್ಡದಷ್ಟು ಬಂಗಾರದ ಮೂರ್ತಿ ಎದುರಿಗಿದ್ದರೂ ನೋಡಬಾರದು. ಸುಂದರ ಸ್ತ್ರೀಯು ತಾನಾಗಿಯೇ ಎದುರಿಗೆ ಬಂದು ನಿಂತರೂ ನೋಡದೆ, ತಾಯಿಯ ಸಮಾನವೆಂದು ತಿಳಿದು ಬುದ್ಧಿ ಹೇಳಿ ನಮಸ್ಕಾರ ಮಾಡಿ ಕಳಿಸಬೇಕು. ವಿಷಯದಲ್ಲಿ ಪ್ರೀತಿ ಇಟ್ಟುಕೊಂಡು ಸುಖವನ್ನು ಪಡೆಯಬೇಕೆಂದರೆ ಎಂದೂ ಸಾಧ್ಯವಿಲ್ಲ.

ವಿಷಯದಲ್ಲಿ ದುಃಖವಿದೆಯೆಂದು ತಿಳಿದವನು ಸಾಧಕನು (ಪುಣ್ಯವಂತನು). ರಾಜನಿದ್ದರೂ ವಿಷಯದಲ್ಲಿ ಸುಖವಿದೆಯೆಂದು ತಿಳಿದರೆ ಅವನೇ ಮಹಾಪಾಪಿಯು. ಮೂರು ಲೋಕದ ಸಾರ್ವಭೌಮತ್ವ ಪಡೆದರೂ ಲಾಭವಿಲ್ಲ.

ಎಷ್ಟು ಕಷ್ಟವಿದ್ದರೂ ಸಹನ ಮಾಡಿಕೊಂಡು ಬ್ರಹ್ಮಬೋಧ ಶ್ರವಣ ಮಾಡಿ ತಿಳಿದುಕೊಂಡರೆ ಮುಕ್ತರಾಗುವರು. ಹೆಂಡಿರು ಮಕ್ಕಳು ಸತ್ತರೂ, ಏನೇ ಲುಕ್ಸಾನ್ ಆದರೂ, ಹೊಡೆದರೂ, ಬಡೆದರೂ, ಏನೇ ತ್ರಾಸುಕೊಟ್ಟರೂ ಶಾಂತಿಯಿಂದಿರಬೇಕು.

ಸದ್ಗುಣವುಳ್ಳವರಾಗಿ ಶಾಂತಿ ವಿರಕ್ತಿಯಿಂದ ಇದ್ದರೆ ತನ್ನ ನಿಜವನ್ನು ನೋಡಿಕೊಳ್ಳಲು ಬರುತ್ತದೆ.





ಪಶು ಪಕ್ಷಿಗಳಿಗೆ ಬುದ್ಧಿರೂಪ ಸಾಧನವಿಲ್ಲ. ನರನಿಗೆ ಮಾತ್ರ ಬುದ್ಧಿರೂಪ ಸಾಧನವಿದೆ. ಪಶು ಪಕ್ಷಿಗಳು ಬರೇ ಭೋಗ ಉಣ್ಣುತ್ತವೆ. ಆದರೆ ಮಾನವನಿಗೆ ಹೊಸ ಪ್ರಯತ್ನದಿಂದ ಜ್ಞಾನವಾಗುತ್ತದೆ. ಮಾನವ ಜನ್ಮವು ಬಹು ಪುಣ್ಯದಿಂದ ಬಂದಿದೆ. ಈಗ ಕರ್ಮದಿಂದ ಪಾರಾಗುವಂಥ ಪ್ರಯತ್ನ ಮಾಡು, ಇದೇ ಪುರುಷಾರ್ಥವು. ಸುಮ್ಮನೆ ಮಾನವ ಜನ್ಮ ಕೆಡಿಸಿಕೊಂಡು ಮತ್ತೆ ಮತ್ತೆ ಇಹ-ಪರಕ್ಕೆ ತಿರುಗಾಡಿಕೊಂಡು ಭವಚಕ್ರಕ್ಕೆ ಗುರಿಯಾಗಬಾರದು. ಮಾನವನಿಗೆ ಮೂರು ಅವಸ್ಥೆಗಳಿವೆ. ಆದ್ದರಿಂದ ಜ್ಞಾನವನ್ನು ಮಾಡಿಕೊಳ್ಳಲು ಬರುವದು. ಯಾಕೆಂದರೆ ಸ್ವಪ್ನ, ಸುಪ್ತಿಗಳ ದೃಷ್ಟಾಂತಗಳಿಂದ ತಿಳಿದುಕೊಳ್ಳಲು ಬರುವದು. ದೇವತರಿಗೂ ಸಹ ಮೂರು ಅವಸ್ಥೆಗಳಿಲ್ಲ, ಜಾಗ್ರವೊಂದೇ ಇರುವದು. ಆದ್ದರಿಂದ ತಿಳಿದುಕೊಳ್ಳಲು ಬಿಗಿಯಾಗುವದು.

ಅಕಾಲ ಮೃತ್ಯುವು ಯಾವಾಗ ಬರುತ್ತದೆಯೋ ಹೇಳಲಿಕ್ಕೆ ಬರುವದಿಲ್ಲ. ಮಾರಿಕಾ, ಪ್ಲೇಗು ಯಾವಾಗ ಬರುತ್ತದೆ ಗುರುತಿನದಲ್ಲ. ಇನ್ನೊಂದು ಕ್ಷಣವಿರುತ್ತೇನೆಂದರೆ ಯಾರ ಸ್ವತಂತ್ರವೂ ಅಲ್ಲ. ವೈದ್ಯರು ನಿನ್ನನ್ನು ಉಳಿಸುವದಿಲ್ಲ. ಅವರೇ ಸಾಯುವರು, ನಿನ್ನದೇನು ಗತಿ, ಶರೀರವು ಅಡಿಗೆಯನ್ನು ಮಾಡುವ ಗಡಿಗೆಯಂತೆ ಒಡೆದರೆ ತೀರಿತು. ನನ್ನ ಮುಕ್ಕ ಪರ್ಯಾಣ ಎನ್ನುವಂತಿದೆ. ನಿನ್ನ ಶರೀರವು ನೀರ ಗುರುಳೆಯಂತೆ, ಕನಸಿನಂತೆ ಇರುವದು. ಇದನ್ನು ನಂಬಬೇಡ. ಮುಂದೆ ಇದೇ ಮಾನವ ಜನ್ಮ ಸಿಗುತ್ತದೆಂಬ ಖಾತ್ರಿಯಿಲ್ಲ. ನಾಳೆ ಮಾಡಿಕೊಂಡರಾಯಿತೆಂದು ಬಿಡಬೇಡ. ಆಲಸ್ಯ ಮಾಡಿ ಭವಸಾಗರದ ದುಃಖದಲ್ಲಿ ಕೂಡ್ರಬೇಡ. ಸುಮ್ಮನೆ ಮಾಯೆಯ ಬಲಿಗೆ ಸಿಗಬೇಡ. ಈ ಶರೀರವೆಂಬ ಗಡಿಗೆಯು ಇರುವದರೊಳಗೆ ಅಮೃತವೆಂಬ ಅನುಭವದಡಿಗೆಯನ್ನು ಮಾಡಿಕೊಂಡು ಊಟಮಾಡು, ಅಂದರೆ ನೀನು ಮುಕ್ತನಾಗುವಿ.

ನೀನು ಬಾಲ್ಯದಲ್ಲಿಯೋ ಅಥವಾ ಯೌವನದಲ್ಲಿಯೋ ಬ್ರಹ್ಮನಿಷ್ಠ ಗುರುವನ್ನಾಶ್ರಯಿಸಿ ಬಂಧ ಮುಕ್ತಿ ವಿಚಾರ ಮಾಡು. ಮುಪ್ಪಿನ ಕಾಲದಲ್ಲಿ ಸಾಧನೆಯನ್ನು ಮಾಡಿದರಾಯಿತೆಂದರೆ ಆಗ ಹುಚ್ಚು, ಮಬ್ಬು ಕೂಡಿ ಒದರಾಡುವದೇ ನಡೆಯುವದು. ಬಾಲ್ಯದಲ್ಲಿ ಏನೂ ತಿಳಿಯುವಂತಿಲ್ಲ. ಹರೆಯದಲ್ಲಿ ಸಂಭೋಗ, ಮುಪ್ಪಿನಲ್ಲಿ ಕೇಳಬೇಕೆಂದರೆ ಕಿವಿ ಮಂದವಾಗಿರುವವು, ಕಣ್ಣು ಮಂದವಾಗಿರುವವು. ಯೌವನ ಕಾಲವೇ ಅಧ್ಯಾತ್ಮ ಸಾಧನೆಗೆ ಉತ್ತಮ, ಮೈ ಕೈ ಗಟ್ಟಿ ಇರುವವು. ಯೌವನ ಕಾಲದಲ್ಲಿ ಅನೇಕ ಕಾರ್ಯಗಳು ಬಂದು ನಿಂತರೂ ಅವನ್ನು ಹಿಂದಕ್ಕೆ ಸರಿಸಿ, ಅಧ್ಯಾತ್ಮ ಶ್ರವಣ ಮಾಡಿ, ಅಧ್ಯಾತ್ಮ ಸಾಧನೆಯಲ್ಲಿ ತೊಡಗಬೇಕು.

ಜೀವನಿಗೆ ಏನೂ ಭಯವಿಲ್ಲದ ನಿಜಧೈರ್ಯವಿರಬೇಕು, ಸಾವಿನ ಭಯ ಹೋಗದೆ ಕೇವಲ ಅದ್ವೈತವು ಹೇಗೆ ತಿಳಿಯುವದು. ಹುಟ್ಟಿದವರಿಗೆ ಮೃತ್ಯುವಿನ ಭಯ, ಹುಟ್ಟದೇ ಇದ್ದವರಿಗೆ ಅಥವಾ ಹುಟ್ಟದೇ ಇರುವಂಥ ಪ್ರಯತ್ನ ಮಾಡುವವರಿಗೆ ಎಲ್ಲಿಯ ಭಯ? ತಾನು ಹುಟ್ಟಿಯೇ ಇಲ್ಲವೆಂದಮೇಲೆ ಭಯವೆಲ್ಲಿಯದು? ಏನೂ ಇನ್ನೊಂದಿಲ್ಲ, ಇದ್ದರೂ ಸ್ವಪ್ನದಂತೆ ಸುಳ್ಳು, ಇಂದ್ರಿಯಗಳಿಗೆ ಕಾಣಿಸುವದು ವ್ಯಾವಹಾರಿಕ

ಸುಳ್ಳು, ಮನಸ್ಸಿಗೆ ಕಾಣಿಸುವದು ಪ್ರಾತಿಭಾಷಿಕ ಸುಳ್ಳು, ದೇಹವೇ ಸುಳ್ಳೆಂದು ತಿಳಿದರೆ ಯಮನ ಹೆದರಿಕೆ ಸಹ ಇಲ್ಲ. ದೇಹವೇ ಸುಳ್ಳು ಎಂಬುವವನು ಭೂಮಿ ಸೀಮೆ ಹೋದರೆ, ಬಡತನ ಬಂದರೆ, ಹೆಂಡಿರು ಮಕ್ಕಳು ಉಪದ್ರವ ಕೊಟ್ಟರೆ, ರೋಗಾದಿಗಳಿಂದ ಒದ್ದಾಡಿದರೆ ದುಃಖವಾಯಿತೆಂದು ಹೆದರುವದಿಲ್ಲ. ದೇಹವೇ ನಾನೆಂದು ತಿಳಿದುಕೊಳ್ಳುವದೇ ತಪ್ಪು. ಇದೇ ಅಂಜಿಕೆ. ನಾನು ಸಾಯುತ್ತೇನೆ ಎಂಬ ಹೆದರಿಕೆ ದೇಹಭಾವದಿಂದಲ್ಲವೇ? ಹುಲಿ ಸರ್ಪಗಳು ಭಯವನ್ನುಂಟು ಮಾಡುವ ಪ್ರಾಣಿಗಳಲ್ಲ, ದೇಹದ ಆಶೆಯನ್ನು ಬಿಟ್ಟರೆ ಯಾವುದಕ್ಕೆ ಹೆದರುತ್ತಾನೆ? ಅರಣ್ಯದಲ್ಲಿದ್ದು ರಾತ್ರಿ ಭಯದಿಂದ ಪಿಶಾಚಿ ಇದೆ ಎಂಬ ಭೇದಜ್ಞಾನವಾದ ಕೂಡಲೆ ಭಯವುಂಟಾಗುತ್ತದೆ. ದೇಹಾದಿ ನಾಮ ರೂಪ ಸುಳ್ಳೆಂದು ನಿಶ್ಚಿತ ತಿಳಿದರೆ ಯಾವುದರ ಭಯ? ನಾನು ಬೇರೆ, ಜಗತ್ತು ಬೇರೆ ಎಂದು ತಿಳಿದರೆ ಭಯವುಂಟಾಗುವದು. ನಾಮರೂಪಗಳನ್ನು ಕಳೆದು ನೋಡಲಾಗಿ ನೀನೇ ಇರುವೆ. ನಾನು ಎಂದೂ ಹುಟ್ಟಿಲ್ಲ, ಸಾಯುವದಿಲ್ಲ. ಯಾವಾಗಲೂ ಇರತಕ್ಕವನು ಎಂಬುದನ್ನು ಗಟ್ಟಿಯಾಗಿ ತಿಳಿದುಕೊಂಡರೆ ಸಾಕು. ಇದು ತಿಳಿಯಬೇಕಾದರೆ ತನ್ನ ಶರೀರವನ್ನು ಕಡಿದು ಅರ್ಪಿಸಲಿಕ್ಕೆ ತಯಾರಿರಬೇಕು. ಇಂಥ ಧೀರ ವೈರಾಗ್ಯ ಪುರುಷರಿಗೆ ಬ್ರಹ್ಮಾಂಡ ಪ್ರಳಯವಾದರೂ ಅವರಿಗೆ ಹೆದರಿಕೆ ಇಲ್ಲ. ಹುಲಿಯು ತನ್ನ ಶರೀರವನ್ನು ತಿಂದರೂ ಭಯವಿರುವದಿಲ್ಲ. ಅಕಸ್ಮಾತ್ ಒಂದು ಭಯಂಕರ ಸರ್ಪ ಬಂದಾಗ ಹೆದರಿ ಓಡಿದರೆ ಏನು ಕೇಳಿದ ಹಾಗಾಯಿತು, ಸ್ವಪ್ನದಲ್ಲಿಯೂ ಸಹ ಹೆದರಬಾರದು. ಇವತ್ತೇ ದೇಹ ಹೋದರೆ ಮಾಸಿದ ಬಟ್ಟೆಯಂತೆ ಕೈ ಬಿಡಲು ಒಪ್ಪಬೇಕು. ಅಕ್ಷರ ಕಲಿತರೆ, ತಿದ್ದಿ ಮಾತಾಡಿದರೆ, ಸಂಸ್ಕೃತ ಶ್ಲೋಕ, ಕನ್ನಡ ಇಂಗ್ಲೀಷ್ ಬೆರೆಸಿ ಹೇಳಿದರೆ ತಿಳಿಯುವದಿಲ್ಲ. ಶಾಸ್ತ್ರ ಸಂಸ್ಕೃತ ವೇದ ಏನೂ ಬೇಡ, ಜಗತ್ತು ಮಿಥ್ಯೆಯೆಂದು ತಿಳಿದರೆ ಸಾಕು. ಇದಕ್ಕಿಂತ ಹೆಚ್ಚಿನ ವಿದ್ಯೆ ಇಲ್ಲ, ಇವನಿಗಿಂತ ಹೆಚ್ಚು ಕಲಿತವರು ಕೂಡಿದರೆ ಇವನ ತಪ್ಪನ್ನು ತೆಗೆದೇ ತೆಗೆಯುತ್ತಾರೆ.

ಚಿಂತೆಯೇ ಮರಣವು, ಮರಣ ಕಾಲಕ್ಕೂ ಇದು ಬಿಡುವದಿಲ್ಲ. ಉರಿಯುತ್ತಿರುತ್ತದೆ, ಆತ್ಮವಿಚಾರದ ಚಿಂತೆ ಇರಬಹುದು, ವಿಷಯದ ಚಿಂತೆ ಏಕೆ? ಚಿಂತೆ ಇದ್ದವರು ಸತ್ತಂತೆ, ಚಿಂತೆ ಇಲ್ಲದಿರುವಿಕೆಯೇ ಮುಕ್ತಿಯು, ಚಿಂತೆಯೇ ಮುಪ್ಪು, ಸಂತೋಷವೇ ಯೌವನ. ಬೆಂಕಿಯು ಕಟ್ಟಿಗೆಯನ್ನು ಸುಟ್ಟಂತೆ ಚಿಂತೆಯು ಅಸ್ಥಿ, ಮಜ್ಜೆ, ಮಾಂಸಗಳನ್ನು ದಹಿಸಿ ಸೊರಗಿಸಿ ಕ್ಷಯಕ್ಕೆ ಗುರಿ ಮಾಡಿ ಯೌವನಸ್ಥರನ್ನು ಜರಠರನ್ನಾಗಿಸುತ್ತದೆ. ಚಿಂತೆಗೆ ಚಿತೆಯನ್ನು ಹಚ್ಚುವವರಿಲ್ಲ, ಕೊನೆಗೆ ಜೀವನ ಅಂತ್ಯ ಚಿಂತೆಯಲ್ಲಿಯೇ, ಜ್ಞಾನಿಯೋರ್ವನೇ ಹಾಗೆ ಮಾಡುವನು.

ನಿಜವಾಗಿ ಮುಕ್ತಿ ಪಡೆಯಬೇಕೆಂಬ ಮುಮುಕ್ಷುವಿಗೆ ಮೂರು ಜನ್ಮಕ್ಕೆ ಮುಕ್ತಿ ಹೇಳಿದ್ದಾರೆ. ಅಂದರೆ ವಿಷಯ ಬಡಕನಿಗೆ ಆಗುವದಿಲ್ಲವೆಂದೇ ಹೇಳಬೇಕು. ವಿಷಯ ಕಂಡರೆ ತೃಣಸಮಾನವೆಂದು ತಿಳಿಯಬೇಕು. ಈ ಜನ್ಮವು ಎಂದಿಗೆ ಬಾರದಹಾಗೆ ಆದೀತು! ಹೇಸಿಗೆ ತಯಾರು ಮಾಡುವ ಯಂತ್ರಕ್ಕೆ ಆಳಾದೆನಲ್ಲ! ಎಂಬ ಚಿಂತೆ ಹತ್ತಬೇಕು. ಸಿಕ್ಕರೆ ಉಣ್ಣುವದು, ಇಲ್ಲದಿದ್ದರೆ ಇಲ್ಲ. ವಿಷಯಗಳು ಹೋಗುವವಿದ್ದರೆ ಹೋಗಲಿ, ಇರುವವಿದ್ದರೆ ಇರಲಿ, ಒಳಿತೇ ಎನ್ನಬೇಕು. ಪರೀಕ್ಷೆಗೆ





ಬಹಳ ವಿಘ್ನ, ಸಂಕಟ, ಕಂಟಕ, ಇಲ್ಲದಂಥ ತೂಫಾನಿ ಬರುತ್ತವೆ. ಆದರೂ ಹೆದರದೆ ಧೈರ್ಯದಿಂದಿದ್ದರೆ ಜನನ ಮರಣದ ಭೀತಿ ಸಹ ಹೋಗುತ್ತದೆ. ಇಂಥವನನ್ನು ಕೊಲ್ಲುವವರು ಯಾರು? ನಾವು ಯಾವ ವಾಸನೆಯನ್ನು ಬಲಿಸುವೆವೋ ಅದೇ ಮುಂದೆ ಫಲಿಸುತ್ತದೆ. ವಿಷಯದ ನೆನಪು ಇದ್ದರೆ ವಿಷಯ ಪ್ರಾಪ್ತಿಯಾಗುತ್ತದೆ. ಆದಕಾರಣ ಯಾವಾಗಲೂ "ನನಗೆ ಪರಮಾತ್ಮ ಜ್ಞಾನವಾಗಲಿಲ್ಲವಲ್ಲ, ಹೇಗಾದರೆ ಜ್ಞಾನವಾದೀತು?" ಎಂಬ ವಾಸನೆ ಇದ್ದರೆ, ಅದು ಬೆಳೆದು ಮುಂದಿನ ಜನ್ಮದಲ್ಲಿ ಜ್ಞಾನಿ ಗುರುಗಳ ಸಂಗ ಹೊಂದಿಸಿ ಜ್ಞಾನ ಹುಟ್ಟುವಂತೆ ಮಾಡುತ್ತದೆ.

ಮೊದಲು ದೇಹದ ಆಸೆಯನ್ನು ಬಿಡಬೇಕು. ಇದು ಒಂದು ಜನ್ಮದಲ್ಲಿ ಆಗುವದು ದುರ್ಲಭವು. ಇದಕ್ಕೆ ಅನೇಕ ಜನ್ಮಗಳು ಬೇಕು. ಸಿಡಿಲು ಬಂದು ಬಡಿದರೂ, ಹಾವು ಬಂದು ಕಡಿದರೂ, ಅಭ್ಯಾಸವನ್ನು ಬಿಡಬಾರದು. ಇವನು ಇನ್ನೂ ಧೀರನಾಗಿ ನಿಂತರೆ, ಒಂದು ವೇಳೆ ಘಟ ಬಿದ್ದರೂ ಅವನು ಮುಂದೆ ಜ್ಞಾನಿಯಾಗುತ್ತಾನೆ. ಬ್ರಹ್ಮಾಂಡವು ಹೊರಳಿ ಬಿದ್ದರೂ ಹೆದರಬಾರದು. ಮನೆಗೆ ಬೆಂಕಿ ಹತ್ತಿದರೆ ಎಷ್ಟು ದುಃಖವಾಗುತ್ತದೋ ಹಾಗೆ ಈ ಭವದ ಸಂಗತಿ ಕೇಳಿ ಬಲ್ಲವರಲ್ಲಿ ಇದ್ದು ತಿಳಿಯಬೇಕು.

ಜನ್ಮವಿರುವವರೆಗೆ ನಾನಾರು ಎಂಬುದನ್ನು ಹೇಗೆ ತಿಳಿದುಕೊಂಡೇನು ಎಂಬ ಚಿಂತೆ ಹತ್ತಿದರೆ, ಮುಂದಿನ ಜನ್ಮದಲ್ಲಿ ಜ್ಞಾನಾಧಿಕಾರಿಯಾಗಿ ವಿರಕ್ತಿ ಜ್ಞಾನ ಅಳವಟ್ಟು ಸ್ವರೂಪಾವಸ್ಥಿತಿ ಹೊಂದುವನು. ಹುಟ್ಟಿದ ಕೂಡಲೇ ಕೆಲವರಿಗೆ ವೈರಾಗ್ಯವಿರುತ್ತದೆ. ನಂತರ ಅವರಿಗೆ ಜ್ಞಾನವಾಗುತ್ತದೆ.

ಉತ್ತಮನು ಸ್ತ್ರೀ ಸಂಗವನ್ನೇ ಬಿಡುವನು. ಮಧ್ಯಮನು ಒಮ್ಮೆ ಭೋಗಿಸಿ ಮರಣಾಂತ್ಯ ಬಿಡುವನು. ಕನಿಷ್ಠನು ತಿಂಗಳಿಗೊಮ್ಮೆ, ಅದಕ್ಕೂ ಕನಿಷ್ಠನು ಹದಿನೈದು ದಿನಗಳಿಗೊಮ್ಮೆ, ಅದಕ್ಕೂ ಕನಿಷ್ಠನು ವಾರಕ್ಕೊಮ್ಮೆ, ಇಲ್ಲಿಗೆ ಮುಗಿಯಿತು. ದಿನಂಪ್ರತಿ ಭೋಗಿಸುವವನು ಕತ್ತೆ.

ಒಂದು ಅನ್ನದ ಆಶೆಯಾಗಲಿ, ದನ, ಕರ, ವಸ್ತ್ರ, ಆಭರಣ, ಹೆಂಡಿರು, ಮಕ್ಕಳು ಇತ್ಯಾದಿಗಳ ಆಶೆ ಇದ್ದರೆ ವಾಸನೆಯು ಉಳಿದಂತೆ, ಇದು ಉಳಿಯಬಾರದು. ಆದ್ದರಿಂದ ಯಾವಾಗಲೂ ನಿರಾಶೆಯಿಂದ ಅನ್ನ ಸಿಕ್ಕರೇನು, ಸಿಗದಿದ್ದರೇನು, ಅದರ ಆಶೆಯನ್ನು ಎಷ್ಟು ಮಾತ್ರಕ್ಕೂ ಮಾಡದೇ ನಿರಾಶೆಯಿಂದ ಇದ್ದು ಕಾಲಕ್ಷೇಪ ಮಾಡಬೇಕು. ಜೀವವು ಇಂದೇ ಹೋಗಲಿ ಅಡ್ಡಿಯಿಲ್ಲ, ಆದರೆ ವಾಸನೆಯನ್ನು ಉಳಿಸಿಕೊಳ್ಳಬಾರದು. ಅದೇನು ಬ್ರಹ್ಮವಿದ್ಯೆಯೇನು ಬಿಡು ಎನ್ನುವರು. ಇದು ಇನ್ನುಳಿದ ವಿದ್ಯೆಯಂತೆ ಕಲಿತರೆ ಬರುವದಿಲ್ಲ, ಜೀವದಾಶೆಯನ್ನು ನೀಗಿದರೆ ಬರುವದು. ದೇಹ ಮತ್ತು ಜಗತ್ತಿನ ನಿರ್ಮೋಹ ಅಥವಾ ನಿರಾಶೆಯಿಂದ ಇರಬೇಕು. ರಾಗದಿಂ ಬೇರಿನ್ನು ಭವಬೀಜಮುಂಟೆ.

ಸಾಧನೆಯೆಂದರೆ ತಾನು ಮಲಮೂತ್ರ ಮಾಡಿದ್ದು ತನಗೆ ಗುರ್ತಿರುವದಿಲ್ಲ. ಹಾವು ಪರಿ ಬಿಟ್ಟಿದ್ದು ಅದಕ್ಕೆ ಗುರ್ತಿರುವದಿಲ್ಲ. ಅದರಂತೆ ಜ್ಞಾನಿಗೆ ತಾನು ಸತ್ತಿದ್ದು ಗುರ್ತಿರುವದಿಲ್ಲ.

ಜಗದ್ವಿಷಯಗಳಿಗೆ ಮನಸ್ಸು ಹೋಗಬಾರದು, ಹೋದರೆ ಆಯುಷ್ಯವು ಸುಮ್ಮನೆ ಹೋಗುತ್ತದೆ. ಮನವು ಹಲವು ಕಡೆಗೆ ಹರಿಯುವದರಿಂದ ಅದರ ಸಾಮರ್ಥ್ಯ ಕಡಿಮೆಯಾಗಿ ಚಂಚಲವಾಗುತ್ತದೆ. ಊಟಕ್ಕೆ ವಿಷಯಕ್ಕೆ ಆಶೆಪಟ್ಟು ಕೂಳುಬಕ್ಕನಾದರೆ ಅವನಿಂದ ಯಾವ ಕೆಲಸವೂ ಆಗುವದಿಲ್ಲ. ಒಡಕು ಗಡಿಗೆಯಲ್ಲಿ ಅಡಿಗೆಯನ್ನು ಮಾಡಿದಂತೆ ಯಾವುದೂ ಆಗುವದಿಲ್ಲ. ದೊರಕಲಿ, ದೊರಕದೆ ಇರಲಿ ಅದರ ಕಡೆಗೆ ಲಕ್ಷ್ಯವೇ ಇರಬಾರದು. ಅವುಗಳ ಕಡೆಗೆ ಲಕ್ಷ್ಯ ಕೊಟ್ಟರೆ ಇಹ ಪರಕ್ಕೆ ತಿರುಗುವದು ತಪ್ಪುವದಿಲ್ಲ.

ನಿನ್ನ ತೂಕ ಬಂಗಾರ ಕೊಡುತ್ತೇವೆ, ಮನೆಗೆ ಬಾ, ಲಗ್ನವಾಗು, ಈ ಮಾರ್ಗದಲ್ಲಿ ಏನಿದೆಯೆಂದು ಸವಿಸವಿ ನುಡಿದರೂ ಅತ್ತ ಲಕ್ಷ್ಯವಿಡದೆ, ಇವರೆಲ್ಲ ಅನಿಮಿತ್ಯ ವೈರಿಗಳೆನ್ನಬೇಕು.

ಹೆಂಡತಿ ಮಗ ಸತ್ತರೂ, ಮನೆಗೆ ಬೆಂಕಿ ಹತ್ತಿದರೂ, ಎಂಥ ಕಠಿಣ ಪ್ರಸಂಗ ಬಂದರೂ ಹೋಗಬಾರದು. ತಿಳಿದುಕೊಳ್ಳುವ ಮುಮುಕ್ಷುಗಳು ಹೇಳತಕ್ಕ ಗುರುಗಳು ಎಲ್ಲಿದ್ದರೂ, ಸುಡುಗಾಡದಲ್ಲಿದ್ದರೂ ಅಲ್ಲಿಗೆ ಹೋಗಿ ಅವರ ಸೇವೆ ಮಾಡುತ್ತ ಅವರ ಆಜ್ಞೆ ಪರಿಪಾಲಿಸುತ್ತ ಶ್ರವಣ ಮಾಡಿಕೊಳ್ಳಬೇಕು, ಅಂದರೆ ತಿಳಿಯುತ್ತದೆ. ಉದಾಸೀನ ಮನಸ್ಸಿನವನಿಗೆ, ಚಂಚಲ ಗುಣದವನಿಗೆ, ಅತ್ಯಂತ ಲೋಭಿಗೆ, ಮತ್ಸರ ಬುದ್ಧಿಯವನಿಗೆ, ತಿಳಿಹೇಳತಕ್ಕವರಲ್ಲಿ ಭಕ್ತಿ ವಿನಯ ವಿಶ್ವಾಸವಿಲ್ಲದವನಿಗೆ ತಿಳಿಯುವದೇ ಇಲ್ಲ. ಆದ್ದರಿಂದ ಧೀರ ವಿರಕ್ತಿ ಬೇಕು. ಯಾವಾಗಾದರೊಮ್ಮೆ ಶಾಸ್ತ್ರ ಕೇಳಿದರೆ ಸಮುದ್ರದಲ್ಲಿ ಒಂದು ಹನಿ ಹಾಲು ಹಾಕಿದಂತಾಗುವದು, ಏನೂ ತಿಳಿಯುವದಿಲ್ಲ.

ವಿರಕ್ತಿ ಮತ್ತು ಭಕ್ತಿ ಎರಡೂ ಕೂಡಿದರೆ ಚಕಮಕಿ ಕಟಿದರೆ ಬೆಂಕಿ ಬೀಳುವಂತೆ ಜ್ಞಾನವಾಗುತ್ತದೆ. ವಿರಕ್ತಿಯೆಂದರೆ ಎಲ್ಲ ವಿಷಯಗಳನ್ನು ತೃಣಸಮಾನವೆಂದು ಒಗೆಯುವದು. ಭಕ್ತಿಯೆಂದರೆ ಪರಮಾತ್ಮನ ನೆನಪಿನಲ್ಲಿರುವದು.

ಎರಡನೆಯವರು ಒಳ್ಳೆಯದನ್ನು ಅಥವಾ ಕೆಟ್ಟದ್ದನ್ನು ಏನೇ ಮಾಡಿದರೂ ಅದರ ಕಡೆಗೆ ಲಕ್ಷ್ಯ ಕೊಡದೆ ತನ್ನ ಸ್ವರೂಪದ ನೆನಪಿನಲ್ಲಿರಬೇಕು. ಜಗತ್ತಿನ ಜನರೆಲ್ಲರೂ ಒಳ್ಳೆಯ ರೀತಿಯಿಂದ ನಡೆಯಬೇಕೆಂದರೆ ಹೇಗೆ ಸಾಧ್ಯ?

ವಿಷಯಗಳೆಲ್ಲವೂ ಕೆಡುತ್ತವೆ. ಆದರೆ ಸ್ವರೂಪವು ಮಾತ್ರ ಕೆಡುವದಿಲ್ಲ, ಕೆಡಿಸುವದೂ ಇಲ್ಲ. ಎಂದೆಂದೂ ಕೆಡದಂಥ, ಯಾವುದರ ಕಲಂಕವೂ ಇಲ್ಲದಂಥ, ಆತ್ಮವನ್ನು ತಿಳಿದು, ಸಕಲ ಸಂಸಾರದ ಅತ್ಯಂತ ದುಃಖವನ್ನು ಕಳೆದುಕೊಳ್ಳಬೇಕು. ಎಂದೂ ಕೆಟ್ಟಿರಬಾರದು, ನಿತ್ಯ ಇರಬೇಕು, ಕಾಯಬಾರದು, ಕಾಡಬಾರದು, ಸವೆಯಬಾರದು, ಕೂಡಿದ ಮೇಲೆ ಅಗಲಬಾರದು, ಸಾಯಬಾರದು, ಇಂಥ ಬ್ರಹ್ಮಜ್ಞಾನವಾದರೆ ಅವರು ಎಂದೂ ವಿಷಯಗಳನ್ನು ಹೊರಳಿ ನೋಡುವದಿಲ್ಲ.

ಕರಣಾದಿಗಳನ್ನು ಸಂಸಾರದಿಂದ ಸೆಳೆಯಬೇಕು. ಮನಸ್ಸು ವಿಷಯಗಳ ಕಡೆಗೆ ಹೋದರೆ, ಆ ವಿಷಯ ಮನಸ್ಸನ್ನು ಅಲ್ಲಿಯೇ ಎಳೆದುಕೊಳ್ಳುತ್ತದೆ. ಇದೊಂದೇ





ಲೋಕವೇಕೆ ಮೂರು ಲೋಕ ನೋಡಿದರೂ ಎಳೆದುಕೊಳ್ಳುತ್ತವೆ. ಏಕೆಂದರೆ ಅದಕ್ಕೆ ವಿಷಯದ ವಾಸನೆ ಇರುತ್ತದೆ. ಅನೇಕ ಪದಾರ್ಥಗಳನ್ನು ನೋಡುವದರಿಂದ ವಾಸನೆಯು ಬೆಳೆಯುತ್ತದೆ. ಅದರಿಂದ ಸ್ವಪ್ನ ಬೀಳುತ್ತದೆ. ಕಣ್ಣು ಮೊದಲು ವಿಷಯಗಳನ್ನು ನೋಡುವದು. ಇದೇ ಬ್ಯಾಟಾ ಮಾಡುವದು. ಆಗ ಮನಸ್ಸು ಧಾವಿಸಿ ಹೊರಗೆ ಬಂದು ವಿಷಯವನ್ನು ಕೂಡುವದು. ಯಾವುದನ್ನು ಮನಸ್ಸಿನಿಂದ ನೆನೆಯುತ್ತಾನೋ ಅದೇ ವಾಸನೆಯಿಂದ ಆ ಜೀವನಾಗಿ ಹುಟ್ಟುತ್ತಾನೆ. ಆದ್ದರಿಂದ ವಿಷಯ ವಾಸನೆಯನ್ನು ಚೆನ್ನಾಗಿ ತೆಗೆದು ಹಾಕಬೇಕು. ಕಣ್ಣನ್ನು ಮತ್ತು ಮನಸ್ಸನ್ನು ನಿಗ್ರಹಿಸಿ, ಪರಮಾತ್ಮನನ್ನು ನೆನೆಯಲು ಹಚ್ಚಿದರೆ, ಜೀವ ಪರಮರು ಒಂದಾಗಿ ನಿಲ್ಲುವರು, ಆಗ ಸುಖ.

ಬಾಹ್ಯೇಂದ್ರಿಯಗಳು ಮತ್ತು ಅಂತರೇಂದ್ರಿಯಗಳು ಬೆನ್ನುಹತ್ತಿ ಜೀವನನ್ನು ಹೊರಗೆ ಎಳೆತಂದು ಸಂಸಾರದ ಬಜಾರದಲ್ಲಿ ಕೆಡವಿ ಮೆರೆಯುತ್ತಿರುವವು. ಮುಂದೆ ಗತಿಯೇನಾದೀತೆಂಬುವದು ಅವಕ್ಕೆ ತಿಳಿದಿಲ್ಲ. ತಮಗೂ ದುಃಖ, ತಮ್ಮನ್ನು ನಂಬಿದ ಜೀವನಿಗೂ ದುಃಖ. ಆದ್ದರಿಂದ ಅಖಿಳ ಕರಣಗಳನ್ನು ಸೆಳೆಯಬೇಕು. ಇಂದ್ರಿಯಗಳು ನಾಮರೂಪಗಳಲ್ಲಿ ಸೇರಬಾರದೆಂದೂ, ಅಲ್ಲಿ ಸಿಕ್ಕಿಕೊಂಡರೆ ಹೊರಳಿ ಬರುವದಿಲ್ಲವೆಂದೂ ಅರಿತ ಜ್ಞಾನಿಗಳು ಗುಡ್ಡ-ಗಂವ್ಹರ ಸೇರಿದರು. ಲೌಕಿಕರು ಮಾತ್ರ ಇಂಥ ನಾಮರೂಪಗಳನ್ನು ನೋಡಲಿಕ್ಕೆ ಅಂದರೆ ಸಿನಿಮಾ ನಾಟಕಗಳನ್ನು ದುಡ್ಡುಕೊಟ್ಟು, ನಿದ್ರೆಗೆಟ್ಟು ನೋಡಲು ಹೋಗುತ್ತಾರೆ. ನಾವೇ ದುಡ್ಡು ಕೊಡುತ್ತೇವೆ ನೋಡಲು ಬನ್ನಿರೆಂದು ಒತ್ತಾಯ ಮಾಡಿದರೂ ವಿಚಾರವಂತರು ಬರುವದೇ ಇಲ್ಲ. ಏಕೆಂದರೆ ಕರಣಗಳು ನಾಮರೂಪಾದಿ ವಿಷಯಗಳಲ್ಲಿ ಸಿಕ್ಕು, ಭವದ ರಾಡಿಯ ಕಳಕು ಎಬ್ಬಿಸುತ್ತವೆಂಬುದು ಅವರಿಗೆ ಗೊತ್ತು. ಆದಕಾರಣ ಇಂದ್ರಿಯಗಳನ್ನು ವಿಷಯಗಳ ಕಡೆಗೆ ಹಚ್ಚಬಾರದು, ತತ್ವ ತಿಳಿಯುವದಕ್ಕಾಗಿ ಹಚ್ಚಬೇಕು.

ವಿಷಯಗಳನ್ನು ನೆನೆಯಬೇಡ, ಆತ್ಮನನ್ನು ಮರೆಯಬೇಡ, ಕಿವಿಗೆ ಶಾಸ್ತ್ರ ಶ್ರವಣ ಹಚ್ಚು, ವಿಷಯ ಶ್ರವಣವನ್ನು ಹಚ್ಚಬೇಡ. ನೀತಿಪರ ವಾಕ್ಯಗಳನ್ನು ಕೇಳು, ಸರ್ವೇಂದ್ರಿಯಗಳನ್ನು ಆತ್ಮವಿಚಾರಕ್ಕೆ ಹಚ್ಚಬೇಕು, ಬಾಹ್ಯ ವಿಷಯಗಳಿಗೆ ಹಚ್ಚಬಾರದು. ಜ್ಞಾನೇಂದ್ರಿಯಗಳನ್ನು, ಮೂರು ಅವಸ್ಥೆಗಳನ್ನು, ಮೂರು ಶರೀರ, ಮೂರು ಗುಣಧರ್ಮಗಳನ್ನು ವರ್ಜಿಸಿ, ಮನಸ್ಸು ಪ್ರತ್ಯಗಾತ್ಮನ ನೆನಪು ಮಾಡುತ್ತಿರಲಿ. ಮೂರು ಜೀವತ್ತ್ವ ಮೀರಿ, ಹೊರಗಿನ ಎಲ್ಲ ವಿಷಯಗಳನ್ನು ಹಾಳುಗೆಡವಿ ಒಳಗೆ ಸೇರಿಬಿಡು, ಅಂದರೆ ಇಂದ್ರಿಯಗಳು ಕೈಬಿಟ್ಟವೆಂದು ತಿಳಿ. ಇದರಿಂದ ಅರುವಿನ ಅರುವನ್ನು ತಿಳಿದುಕೊಳ್ಳಲಿಕ್ಕೆ ಬರುತ್ತದೆ. ಹೊರಗೆ ರೂಪಗಳನ್ನು ನೋಡಬಾರದು, ಮನಸ್ಸಿನೊಳಗೆ ಅವುಗಳನ್ನು ನೆನೆಯಬಾರದು. ವಿಷಯಗಳನ್ನು ನೋಡಿದರೂ ಉದಾಸೀನತೆಯಿಂದ ಇದ್ದು ಆತ್ಮನ ಕಡೆಗೆ ಲಕ್ಷ್ಯವಿಡು, ಅಂದರೆ ಸ್ವರೂಪವನ್ನು ಹೊಂದುತ್ತೀ. ಅಕಸ್ಮಾತ್ ದೇಹಪಾತವಾದರೆ ಅದೇ ಇರುವು ಲಭಿಸುವದು. ಯಾವ ಪದಾರ್ಥ ಉಂಡಿರುತ್ತಾನೋ ಅದೇ ಡೇಗು ಬಂದಂತೆ, ಆತ್ಮನ ನೆನಪೇ ಆಗಬೇಕು. ಪ್ರಾಣ ಬಿಡುವ ಕಾಲದಲ್ಲಿ ಆತ್ಮಾನುಭವ ಸಂಸ್ಕಾರದಲ್ಲಿಯೇ ಇರಬೇಕು. ಇದು ಸಕಲ ನಿಗಮಾರ್ಥವು, ಯೋಗಿಗಳ ಮಾರ್ಗವು, ಗುರೂತ್ತಮರ ಮತವು, ಮರೆಯದೆ ಯಾವಾಗಲೂ ಗುರುಪದದ ಧ್ಯಾನದಲ್ಲಿರು.

ತನುವನ್ನು ಇಂದ್ರಿಯಗಳಲ್ಲಿ, ಇಂದ್ರಿಯಗಳನ್ನು ಮನಸ್ಸಿನಲ್ಲಿ, ಮನಸ್ಸನ್ನು ಬುದ್ಧಿಯಲ್ಲಿ ಲಯಪಡಿಸಬೇಕು. ತನುವಿನ ಅಭಿಮಾನ ಬಿಟ್ಟರೆ ಇಂದ್ರಿಯಗಳು ಲಯವಾಗುವವು. ಇಂದ್ರಿಯಗಳನ್ನು ಹೊರಗೆ ಕಳಿಸುವದನ್ನು ಬಿಟ್ಟರೆ ಮನಸ್ಸು ಸಂಕಲ್ಪ ವಿಕಲ್ಪ ಮಾಡುವದನ್ನು ಬಿಟ್ಟು ಲಯವಾಗುವದು. ಮನಸ್ಸು ಲಯವಾದರೆ ಬುದ್ಧಿಯು ಏನನ್ನೂ ನಿಶ್ಚಯ ಮಾಡದೆ ಲಯವಾಗುವದು. ಬುದ್ಧಿಯು ನಿಂತ ಮೇಲೆ ಅಹಂಕಾರವು ಕೆಟ್ಟು ಹೋಗುವದು. ಆಗ ಅಜ್ಞಾನ ಮಾತ್ರ ಉಳಿದಿರುವದು. ಆಗ ತಾನು ತಿಳಿಯುವವನು (ಸಚ್ಚಿದಾನಂದನು) ಎಂಬ ಭಾವವನ್ನು ನೆಲೆಗೊಳಿಸಿದಾಗ ಅಜ್ಞಾನವು ನಾಶವಾಗುವದು. ತಾನೇ ತಾನು ಉಳಿಯುವನು.

ವಿಷಯಾದಿಗಳ ಕಡೆಗೆ ಹರಿಯುವ ಮನಸ್ಸನ್ನು ಬೈದು, ಸದಾ ಆತ್ಮ ಚಿಂತನೆಯಲ್ಲಿ ಇರಿಸತಕ್ಕದ್ದು. ಇದರ ಸಲುವಾಗಿಯೇ ಶ್ರವಣಾದಿಗಳು ಬೇಕಾಗಿವೆ. ನಿತ್ಯ ಶ್ರವಣದ ಬಲ ಬೇಕು, ಅಂದರೆ ನೂರಾರು ಜನ್ಮಕ್ಕಾದರೂ ಮುಕ್ತಿಯಾಗುವದು. ದಿನಂಪ್ರತಿ ಮೂರು ವೇಳೆ ಶಾಸ್ತ್ರ ಕೇಳಬೇಕು. ಅಲಕ್ಷ್ಯ ಆಲಸ್ಯಾದಿಗಳಿಂದ ಮುಂದೂಡಬಾರದು. ಜ್ಞಾನವು ದೃಢಾಪರೋಕ್ಷವಾಗುವವರೆಗೆ ಶ್ರವಣಾದಿಗಳು ಬೇಕು. ಹಿಂದಿನ ಜನ್ಮದ ಸಂಸ್ಕಾರವು ನಾವು ಮರೆತರೂ ಮರೆಯದಂತೆ ಬುದ್ಧಿಯಲ್ಲಿದ್ದುಕೊಂಡು ರಿಕಾರ್ಡಿನಂತೆ ಕೆಲಸ ಮಾಡುತ್ತದೆ. ಈ ಬುದ್ಧಿಯು ಭೇದತ್ವವನ್ನು ನಿಶ್ಚಯ ಮಾಡಿದ್ದನ್ನು ಮರೆತು, ಬ್ರಹ್ಮಾಕಾರದ ಒಂದೇ ನಿಶ್ಚಯ ಮಾಡಿದರೆ ಜಗತ್ತು ಮತ್ತು ದೇಹ ತಮ್ಮಿಂದ ತಾವೇ ಅಡಗುತ್ತವೆ. ತಿಳಿದು ಬ್ರಹ್ಮಾಕಾರವೃತ್ತಿ ನಿಂತರೆ ಎಲ್ಲವೂ ನಾಶವಾಗಿ ಹೋಗುತ್ತದೆ.

ಮಿತ ಆಹಾರವಿಲ್ಲದೆ ಬ್ರಹ್ಮ ಚಿಂತನೆ ಮಾಡಲಿಕ್ಕೆ ಬರುವದಿಲ್ಲ. ಹೊಟ್ಟೆತುಂಬ ಸಹ ಎಂದೂ ಉಣ್ಣಬಾರದು. ಮಿತಿಮೀರಿ ತಿನ್ನುವದು ವೈರಾಗ್ಯಕ್ಕೆ ಹಾನಿ. ಜಠರಾಗ್ನಿಯ ಸಲುವಾಗಿ ಮಿತವಾದ ಪಚನವಾಗುವ ಹಗುರಾದ ಆಹಾರವನ್ನು ಸೇವಿಸಬೇಕು. ದಿನಕ್ಕೊಮ್ಮೆ ಊಟದ ಹೊರತು, ಇತರ ವೇಳೆಯಲ್ಲಿ ಏನನ್ನೂ ತಿನ್ನಬಾರದು. ಇಲ್ಲದಿದ್ದರೆ ಸ್ವಲ್ಪ ತಕ್ಕೊಂಡು ಗುಟುಕು ನೀರು ಕುಡಿಯಬೇಕು. ಆಹಾರವನ್ನು ಬಹಳ ತಕ್ಕೊಂಡರೆ ನಿದ್ರೆ ಬಂದು ವಿಚಾರ ಮಾಡಗೊಡದೆ ಬುದ್ಧಿಯನ್ನು ತನ್ನ ಸ್ವಾಧೀನ ತೆಗೆದುಕೊಳ್ಳುವದು. ಗುರು, ಶೃತಿ, ಆರೋಗ್ಯ ಶಾಸ್ತ್ರ ಹೇಳಿದಂತೆ ಮಿತ ಆಹಾರವಿದ್ದರೆ ಇಂದ್ರಿಯಗಳು ಸ್ವಾಧೀನವಾಗುತ್ತವೆ. ಇಲ್ಲದಿದ್ದರೆ ದುರ್ಗುಣಗಳು ಹೆಚ್ಚು ವಾಸಮಾಡಿ ಘೋರ ನರಕಕ್ಕೆ ಹಾಕುತ್ತವೆ. ಮಿತವಾಗಿ ಸಾತ್ವಿಕ ಆಹಾರವನ್ನು ಸೇವಿಸಿ ಸ್ವರೂಪದ ತಿಳುವಳಿಕೆಯಲ್ಲಿ ತಲ್ಲೀನನಾಗಬೇಕು.

ಏಕಾನ್ನ ವ್ರತವನ್ನು ಸಾಧಿಸಬೇಕು. ಬರೀ ಅಕ್ಕಿ ಅನ್ನವನ್ನಾಗಲಿ, ಬರೀ ಜೋಳದ ರೊಟ್ಟಿಯನ್ನಾಗಲಿ ತಿನ್ನಬೇಕು, ಉಪ್ಪು ಕೂಡಿಸಬಾರದು, ಖಾರ ತಿನ್ನಬಾರದು. ಹೆಸರು, ಆಕಳ ಹಾಲು, ತುಪ್ಪ ಇವು ಸಾತ್ವಿಕ ಆಹಾರವು. ಗೆಣಸು, ಬಾಳೆಹಣ್ಣು, ಗಿಣ್ಣ, ಕಡಲೆ ಇವುಗಳನ್ನು ಹೆಚ್ಚಿಗೆ ಸೇವಿಸಿದರೆ ಪ್ಲೇಗು ಆಗುವದು. ಉಂಡುಂಡಂತೆ ಕುಂಡಿಯೊಳಗೆ ಚೇಳು ಕಡಿಯುತ್ತವೆ. ಅಂದರೆ ಅತ್ಯಂತ ವಿಷಯಬಡಕನಾಗುವನು. ಮೇಲಿನ ಗಂಟೆ ಅಲುಗಾಡಿದರೆ ಕೆಳಗಿನ ಗಂಟೆಯೂ ಅಲುಗಾಡುವದು. ಬಿನ್ನಹ ಹೇಳಿದರೆ ಆನಂದವಾಗುವದು, ಭಕ್ತಿವಂತರೆಂದು ಹೊಗಳುವರು, ವಿಚಾರಿಸಿದರೆ ಆ





ಬಿನ್ನಹ ಅವರಿಗಲ್ಲ, ಅವರೊಳಗಿರುವ ಕಾಮಾದಿಗಳಿಗೆ, ಏಕೆಂದರೆ ಅತಿ ಕಡಬು, ಗೋದಿ ಹುಗ್ಗಿ, ಕಟ್ಟಿನ ಅಂಬರ ಜಡಿದರೆ ಇಂದ್ರಿಯ ತಾಳಲಾಗುವದಿಲ್ಲ. ಆಗ ಎಲ್ಲ ವಿಚಾರಗಳು ಅಡಗಿ ಅನಾಚಾರವಾಗಬಹುದು. ಬೇಡಿದ ಪದಾರ್ಥಗಳನ್ನು ಕೊಟ್ಟರೆ ಇಂದ್ರಿಯಗಳು ಕೆಡುತ್ತವೆ. ವಿಷಯವಾಸನೆಯು ಬೆಳೆಯುತ್ತದೆ. ಎಷ್ಟು ಭೋಗಿಸಿದರೂ ವಾಸನೆಯು ಹೋಗುವದಿಲ್ಲ. ಆದ್ದರಿಂದ ಬಂಧ ಬಿಡುಗಡೆ ಇಲ್ಲ. ಎಲ್ಲ ವಿಷಯಗಳ ವಾಸನೆ ಬಿಡದ ಹೊರತಾಗಿ ಬಂಧವು ಬಿಡುವದಿಲ್ಲ. ನಾಲಿಗೆಗೆ ಸವಿ ಇರುವ ಜೀನಸಿನಲ್ಲಿ ರೋಗವಿರುವದೆಂಬುವದು ನಿಶ್ಚಿತವು.

ಅಮಲಿನ ಪದಾರ್ಥ, ಸಿಂದಿ, ಶೆರೆ, ಉಳ್ಳೇಗಡ್ಡಿ ತಿನ್ನುವದರಿಂದ ತಾಮಸ ಬುದ್ಧಿಯು ಬೆಳೆದು ವಿಚಾರಕ್ಕೆ ಮನಸ್ಸಾಗುವದಿಲ್ಲ.

ಶೃತಿಗಳು ಮದ್ಯ, ಮಾಂಸ ಸೇವನೆಯ ಮಾತನ್ನೇ ಆಜ್ಞಾಪಿಸುವದಿಲ್ಲ. "ಯಜ್ಞಾದಿಷು ವಿಧಿಃ ಅಸ್ತು ನಿವೃತ್ತಿರಿಷ್ಟಾ" (ಭಾಗವತ) ಇವುಗಳಿಂದ ನಿವೃತ್ತಿ ಮಾಡಿಸುವದೇ ಅವುಗಳ ತಾತ್ಪರ್ಯ.

ಯೋಗಾಭ್ಯಾಸ ಮಾಡುವ ಯೋಗೀಶ್ವರನು ಭಿಕ್ಷಾನ್ನವನ್ನು ತೆಗೆದುಕೊಳ್ಳಲಿಕ್ಕೆ ಯೋಗ್ಯನಿರುತ್ತಾನೆ. ಹೆಂಡಿರು-ಮಕ್ಕಳ ಸಲುವಾಗಿ ಭಿಕ್ಷಾನ್ನ ಬರೋಬರಿ ಅಲ್ಲ. ಆತ್ಮಜ್ಞಾನ ಮಾಡಿಕೊಳ್ಳುವವರು ಭಿಕ್ಷಾನ್ನಕ್ಕೆ ಯೋಗ್ಯ ಅಧಿಕಾರಿಗಳು. ಯಾಕೆಂದರೆ ಬ್ರಹ್ಮಚಿಂತನೆ ಮಾಡುವವನಿಗೆ ವೇಳೆ ಸಿಗುವದಿಲ್ಲ. ಕುಕ್ಷಿಗೀ ಜನರು ತಿರಿದುಂಡರೆ ನರಕವ ಹೊಕ್ಕಾಡುತಿಹರು.

ಬೇಸರಿಲ್ಲದೆ ಅಭ್ಯಾಸ ಮಾಡುವವನು ಜಠರಾಗ್ನಿಯ ಸಲುವಾಗಿ ಭಿಕ್ಷೆಯನ್ನಾಚರಿಸಬೇಕು. ಇಂಥವನು ಭಿಕ್ಷೆಗೆ ಹೋದಾಗ್ಗೆ ಬೈದರೂ, ಸ್ತುತಿ ಮಾಡಿದರೂ, ಹಿಗ್ಗದೆ ಕುಗ್ಗದೆ ಸಮತೆಯಿಂದ ಇದ್ದರೆ, ಅವನು ಭಿಕ್ಷೆಗೆ ಅಧಿಕಾರಿಯು. ಪರಮ ಸಜ್ಜನರ ಮನೆಯಲ್ಲಿ ಭಿಕ್ಷೆಯನ್ನು ಬೇಡಬೇಕು. ದುಷ್ಟರ ಮನೆಯ ಅನ್ನವನ್ನು ತಕ್ಕೊಳ್ಳಬಾರದು. ಹೆಚ್ಚಿಗೆ ತರಬಾರದು, ಪಾತ್ರೆ ಸಹಿತ ಇರಬಾರದು. ಕೈಯಲ್ಲಿಯೇ ತೆಗೆದುಕೊಂಡು ತಿಂದರೆ ಬಹಳ ಉತ್ತಮವು. ಲೋಹ ಮತ್ತು ಕಟ್ಟಿಗೆಯ ಪಾತ್ರೆಗಳನ್ನು ಕಳ್ಳರು ಒಯ್ಯುತ್ತಾರೆ. ಮಣ್ಣಿನವು ಒಡೆದು ಹೋಗುತ್ತವೆ. ಎಲ್ಲಿ ಭಿಕ್ಷಾನ್ನವನ್ನು ಕೊಡುತ್ತಾರೆಯೋ ಅಲ್ಲಿಯೇ ನಿಂತಮೆಟ್ಟಿನ ಮೇಲೆ ತಿಂದು ತೃಪ್ತಿ ಹೊಂದುತ್ತ ಹೋಗಬೇಕು, ತಂಗಳ ಅನ್ನವನ್ನು ನೀಡಿದರೂ ಸೇವಿಸಿ ಅಭ್ಯಾಸ ಮಾಡಬೇಕು, ಅಭಿಮಾನವನ್ನಂತೂ ದೂರೀಕರಿಸಬೇಕು.

ಪರಪೀಡನೆ ಮಾಡದಿದ್ದರೂ ಜ್ಞಾನವಾಗುವದಿಲ್ಲ. ಹಾಗಾಗಿದ್ದರೆ ಯಾರಿಗೂ ಪೀಡೆ ಕೊಡದ ಗಿಡಗಂಟಿಗಳಿಗೆ ಜ್ಞಾನವಾಗುತ್ತಿತ್ತು. ಕೆಲವು ಸಜ್ಜನರು ಈಗಲೂ ಇದ್ದಾರೆ. ಅವರ ಜನನ ಮರಣದ ದುಃಖ ಹೋಗಿಲ್ಲ. ಏಕೆಂದರೆ ವಿಕ್ಷೇಪವು ಅಡ್ಡವಾಗಿರುತ್ತದೆ. ಎಂಥ ಪರೋಪಕಾರ ಪುಣ್ಯ ಮಾಡಿದರೂ ಇದು ಹೋಗುವದಿಲ್ಲ. ಜ್ಞಾನಾಗ್ನಿಯ ಹೊರತು ಅನ್ಯದ್ದಕ್ಕೆ ಹೋಗುವದಿಲ್ಲ. ಅಹಂಕಾರವಿಲ್ಲದೆ ಕರ್ಮವು ನಡೆಯಲಾರದು. ಅಹಂಕಾರದಿಂದಲೇ ದುಃಖ. ಕರ್ಮ ಮಾಡಿದ್ದರಿಂದಲೇ ಜನ್ಮ. ಆತ್ಮಜ್ಞಾನದಿಂದ ಅಹಂಕಾರವು ನಾಶವಾಗುವದು. ಆದ್ದರಿಂದ ಆತ್ಮಜ್ಞಾನವೇ ಪಾಪವನ್ನು

ಸಂಪೂರ್ಣವಾಗಿ ನಾಶಮಾಡಬಲ್ಲದು. ಆದ್ದರಿಂದ ತಲ್ಲಣಗೊಳ್ಳದೆ ಸ್ವರೂಪಜ್ಞಾನವನ್ನು ಮಾಡಿಕೊಂಡು ಪಾಪವನ್ನು ಕಳೆದುಕೊಳ್ಳಬೇಕು.

ನನಗೆ ದುಃಖವು ಸ್ವಸ್ವರೂಪದ ಮರವೆಯಿಂದ ಬಂದಿದೆ. ಸ್ವರೂಪಜ್ಞಾನದಿಂದಲೇ ದುಃಖ ನಾಶವಾದೀತಲ್ಲದೆ ಮತ್ತಾವ ವಿಚಾರದಿಂದಲೂ ಬಂಧ ವಿಮೋಚನೆಯಾಗಲಾರದು. ನಾವು ಹೊಸೆದು ಒಕ್ಕೊಟ್ಟ ಹಗ್ಗದ ಮೇಲೆ ಮೂರು ಸಂಜೆಯಲ್ಲಿ (ಮಂದಾಂಧಕಾರದಲ್ಲಿ) ಹಗ್ಗದ ಮರವೆಯಿಂದ ಹಾವನ್ನು ಕಂಡು ಭಯ, ಕಂಪನ ಹೊಂದುವಂತೆ ನಮ್ಮ ಸ್ವರೂಪವನ್ನು ಮರೆತು ಬಾಧೆಗೆ ಒಳಗಾಗುತ್ತೇವೆ. ವಿಸ್ಮರಣರೂಪ ಅಜ್ಞಾನವು ಸ್ವರೂಪ ಚೈತನ್ಯದಿಂದಲೇ ಬೆಳಗಿಸಿಕೊಂಡು, ಅದನ್ನೇ ಆವರಿಸಿ, ಅದನ್ನು ಕಾಣಗೊಡದಂತೆ ಮಾಡಿದೆ. ಈ ಅಜ್ಞಾನ, ಇದರ ಕಾರ್ಯರೂಪ ಜನನ–ಮರಣಗಳು, ಜಗತ್ತು, ದುಃಖ ಹೇಗೆ ಹೋಗುವದೆಂದರೆ ಯಾವುದರ ಅಜ್ಞಾನದಿಂದ ಭ್ರಾಂತಿ ಬಂದಿರುವದೋ, ಅದರ ಜ್ಞಾನವನ್ನು ಮಾಡಿಕೊಳ್ಳುವದರಿಂದ ಅಜ್ಞಾನದ ಕಾರ್ಯವು ತನ್ನಿಂದ ತಾನೇ ನಾಶವಾಗುತ್ತದೆ. ಅವಿದ್ಯೆಯೆಂದರೆ ಇಲ್ಲದ್ದು. ಅವಿದ್ಯೆಯಿಂದ ಅಥವಾ ಮರವೆಯಿಂದ ಆದ ಜಗತ್ತಿದು. ಇದರೊಳಗೆ ಇಲ್ಲದಂಥ ಜನನ ಮರಣಗಳನ್ನು ಕಳೆಯಲಿಕ್ಕೆ ಬರುವದಿಲ್ಲ. ಅವು ಇಲ್ಲವೆಂದು ತಿಳಿಯಲಿಕ್ಕೆ ಬರುತ್ತದೆ.

ದೇಹ, ನಾಮ, ರೂಪ, ಕುಲ, ಗೋತ್ರ, ಶರೀರದ ದುಃಖ, ಜಡಜಗತ್ತು ಎಲ್ಲಿಯವರೆಗೆ ಕಾಣುವವೋ ಅಲ್ಲಿಯವರೆಗೆ ಸ್ವರೂಪವನ್ನು ವಿಚಾರಿಸು, ಅನ್ಯಭಾವನೆ ಯಾವನಲ್ಲಿರುವದೋ ಅವನಿಗೆ ಜನನ ಮರಣ ದುಃಖವು ತಪ್ಪುವದಿಲ್ಲ, ಇಹಪರಕ್ಕೆ ತಿರುಗುವನು. ಅನ್ಯ ಭಾವನೆಯಿಂದ ದೇವರು ಬೇರೆ ಇದ್ದಾನೆಂದು ತಿಳಿದರೆ ಭವದುಃಖದಲ್ಲಿ ಬಳಲುವದು ತಪ್ಪುವದಿಲ್ಲ. ಯಾವನು ಅನ್ಯ ದೇವರನ್ನು ಪೂಜಿಸುವನೋ ಅವನು ಭವಕ್ಕೆ ಬರುವನೆಂದು ಶೃತಿಭಗವತಿಯು ಸಾರಿ ಹೇಳುತ್ತಾಳೆ.

ಸದಾ ಬ್ರಹ್ಮ ಚಿಂತನೆಯಲ್ಲಿಯೇ ಇರಬೇಕು. ತೋರಾನುತೋರಿಕೆಯ ಜಗದ್ವಸ್ತುಗಳನ್ನು ಮಿಥ್ಯೆಯೆಂದು ಬಗೆದು ಸಚ್ಚಿನ್ಮಾತ್ರ ಪರಬ್ರಹ್ಮವೇ ನಾನು ಎಂದು ತಿಳಿದುಕೊಂಡರೆ ಅದೇ ಜೀವನ್ಮುಕ್ತಿಯು.

ಚಿದಾಭಾಸನನ್ನು ಬಿಟ್ಟು ಪೂರ್ಣ ಚಿತ್ಸ್ವರೂಪದವನಾಗಬೇಕು. ದೃಕ್ ದೃಶ್ಯವಿಲ್ಲದ ಅರುವಿನಲ್ಲಿಯೇ ಉಳಿಯಬೇಕು. "ನಾನು ಆನಂದ" ಎನ್ನುವ ತಿಳಿವಳಿಕೆಯೂ ಹೋಗಬೇಕು. ಒಂದು ಪಿಂಡದಲ್ಲಿರುವ ಚೈತನ್ಯಕ್ಕೆ ಜೀವಾತ್ಮವೆನ್ನುತ್ತಾರೆ. ವ್ಯಾಪಕ ಚೈತನ್ಯಕ್ಕೆ ಬ್ರಹ್ಮವೆನ್ನುತ್ತಾರೆ. ಬ್ರಹ್ಮನಲ್ಲಿ ಐಕ್ಯ ಹೊಂದುವ ಚಿಂತನ ಮಾಡು. ಸ್ವರೂಪವು ಸಾಕ್ಷಾತ್ಕಾರವಾಗದ ವಿನಃ ಮಾಯೆಯು ನಾಶವಾಗುವದಿಲ್ಲ. ತನ್ನ ಸ್ವರೂಪದ ಕಡೆಗೆ ಲಕ್ಷ್ಯ ಕೊಟ್ಟರೆ ಮಾಯೆಯು ಇಲ್ಲವೇ ಇಲ್ಲ.

ದೇಹ, ಇಂದ್ರಿಯ ಕರಣಗಳ (ಮನ ಇಂದ್ರಿಯ) ತಾದ್ಯಾತ್ಮ ಪಡೆಯುವದೇ ಬಂಧವು. ಆಗ ದೇಹದ ಮೂಲಕ ಸ್ವರೂಪದ ನೆನಪು ಇಲ್ಲ. ಜಡದೇಹವೇ ತನ್ನ ಸ್ವರೂಪವೆಂದು ತಿಳಿದುಕೊಂಡು ಅದರ ವಿಕಾರ ಮತ್ತು ನಾಶಕ್ಕೆ ಬಳಲಿ ಜನ್ಮ





ಮರಣಕ್ಕೆ ಜೀವನು ಗುರಿಯಾಗುತ್ತಾನೆ. ಜನ್ಮ ಬಿಡಿಸಿಕೊಳ್ಳುವದಕ್ಕೆ ಯಾವ ಸಾಧಕನು ದೇಹಗೇಹಗಳ ಮೇಲೆ ವಿರಕ್ತನಾಗಿ ಗುರುವಿನ ಹತ್ತಿರ ಹೋಗಿ ಜ್ಞಾನಕ್ಕಾಗಿ ಸೇವೆ ಮಾಡುತ್ತಿರುವನೋ ಅವನೇ ಅಧಿಕಾರಿಯು. ಅಧಿಕಾರಿಗಳಲ್ಲಿ ಮೂರು ವಿಧ. ಉತ್ತಮ, ಮಧ್ಯಮ, ಕನಿಷ್ಠ. ತತ್ತ್ವಮಸ್ಯಾದಿ ವಾಕ್ಯ ಶ್ರವಣವಾದರೂ ಉತ್ತಮನಿಗೆ ತೀವ್ರ ಜ್ಞಾನ, ಮಧ್ಯಮನಿಗೆ ಎರಡು ದಿನ ತಡ, ಕನಿಷ್ಠನಿಗೆ ಮೂರು ದಿನ ತಡವಾಗುವದು ಇಷ್ಟೇ ಫರ್ಕು. ಕೇಳಿದ ಕೂಡಲೇ ಒಪ್ಪಿಗೆಯಾಗದ್ದರಿಂದ ಬಹಳ ಶ್ರವಣ ಬೇಕಾಗುವದು.

ಮೂರ್ತಿಯು ಕಾಲ್ಪನಿಕವಿರುವದರಿಂದ ಅದರ ಧ್ಯಾನದಿಂದ ಸ್ವರೂಪಜ್ಞಾನವಾಗುವದಿಲ್ಲ. ಎಲ್ಲ ಮತದವರು ಮೋಕ್ಷ ಪಡೆದುಕೊಳ್ಳಲಿಕ್ಕೆ ಅನೇಕ ಮೂರ್ತಿಗಳನ್ನು ಕಲ್ಪಿಸಿಕೊಂಡು ಧ್ಯಾನಿಸುತ್ತಾರೆ. ಇವರಿಗೆ ಸ್ವರೂಪದ ಜ್ಞಾನವಾಗುವದಿಲ್ಲ. ಬ್ರಹ್ಮ, ವಿಷ್ಣು, ಮಹೇಶ್ವರ ದೇವತರು ಭ್ರಮೆಯೇ ಹೊರತು ಬೇರೆ ಏನೂ ಅಲ್ಲವು.

ಮಾನವನು ಯಾವಾಗಲೂ ಮೋಕ್ಷದ ದೆಸೆಯಿಂದ ಪ್ರಯತ್ನಿಸಬೇಕು. ಇದೇ ಮಾನವನ ಮುಖ್ಯ ಪುರುಷಾರ್ಥವು. ಅಣಿಮಾದಿ ಸಿದ್ಧಿ ಪಡೆಯುವದು, ಪರರ ಇಂಗಿತ ತಿಳಿಯುವದು, ತಮ್ಮ ಮತ್ತು ಅನ್ಯರ ಸ್ವಪ್ನಸಂಗತಿ ಜ್ಞಾನವು ಹೇಗೆ ಜಾಗ್ರಾವಸ್ಥೆಯಲ್ಲಿ ಸಹಾಯಕವಲ್ಲವೋ ಹಾಗೆ, ಪೂರ್ವ ಜನ್ಮದ ಸಂಸ್ಮರಣೆಯು ಪುರುಷಾರ್ಥವಲ್ಲ. ಪೂರ್ಣ ಯೋಗ ಬಲ್ಲವನು ತನ್ನ ಶರೀರವನ್ನು ಬಿಟ್ಟು ಮತ್ತೊಂದು ಶರೀರಕ್ಕೆ ಹೋಗುತ್ತಾನೆ, ಸತ್ತವರನ್ನು ಬದುಕಿಸುತ್ತಾನೆ. ಸಿದ್ಧಿ ಮಾಡುವವನಿಗೆ ಬಲು ಕಷ್ಟವು. ಜಗತ್ತಿನ ಜನರೇ ಅಲ್ಲಿ ಬಂದು ಮುಕುರುವರು. ಈ ನರಕದ ಡಬ್ಬಿಯನ್ನೇ ನೆಟ್ಟಗಿರಿಸಿರೆಂದು ಕೇಳುವರು. ನಾನು ಯಾರು ಎಂಬುದನ್ನು ತಿಳಿಸೆಂದು ಬರುವವರು ಅತಿ ವಿರಳ. ಅಣಿಮಾದಿ ಸಿದ್ಧಿಸಹಿತನಾಗಿದ್ದು, ಮೂರು ಲೋಕದಲ್ಲಿ ದೊಡ್ಡವನೆಂದು ಡಂಗುರ ಸಾರಿದರೂ ನಿರರ್ಥಕವೇ. ಯಾಕೆಂದರೆ ಜನ್ಮವಿರುವದರೊಳಗೆ ಸಚ್ಚಿದಾನಂದನೇ ತಾನೆಂದು ತಿಳಿದುಕೊಳ್ಳಲಿಲ್ಲ. ಸುಖವನ್ನು ಕಾಣಲಿಲ್ಲ. ಸ್ವರೂಪದ ಪ್ರಾಪ್ತಿಗಾಗಿ ಅಣಿಮಾದಿ ಸಿದ್ಧಿಗಳನ್ನೂ, ದೊಡ್ಡ ದೊಡ್ಡ ಪದವಿಗಳನ್ನೂ ಲೆಕ್ಕಿಸದೆ ತೃಣಸಮಾನವೆಂದು ತಿಳಿದು ಸ್ವರೂಪದ ಅಭ್ಯಾಸವನ್ನು ಬಲಿಸಬೇಕು. ಬ್ರಹ್ಮನಿಷ್ಠರನ್ನು ಹೊಂದಿ ಸ್ವರೂಪ ಜ್ಞಾನದ ಅಭ್ಯಾಸದಲ್ಲಿ ತೊಡಗಿ ಸ್ವರೂಪ ಜ್ಞಾನವನ್ನು ಹೊಂದುವದೇ ಪರಮಾರ್ಥವು.

ಬಹಳ ಶಾಸ್ತ್ರ ಓದುವಿಕೆ ಹೇಳುವಿಕೆಗಳು ಮಂದಿಯ ಒಜ್ಜೆಯನ್ನು ಹೊತ್ತುಕೊಂಡು ತಿರುಗಿದಂತೆ. ನೀನೊಬ್ಬ ಬಿಟ್ಟಿಯ ಆಳು. ಅವರಿಗೆ ಕಲಿಯಲು ಹೊತ್ತಿಲ್ಲ, ನಿನಗೆ ಕಲಿಸಿದ್ದಾರೆ. ನೀನೊಬ್ಬ ಕಲಿತ ಕತ್ತೆ. ನೀನು ಬಲ್ಲವನಾದರೆ ಮಂದಿಯ ಗೊಡವೆ ಏತಕೆ? ನಿನ್ನನ್ನೇ ನೀನು ಉದ್ಧರಿಸಿಕೋ. ನಿನ್ನ ಉದ್ಧಾರ ಮೊದಲಿಲ್ಲ, ಮಂದಿಯ ಉದ್ಧಾರದ ಗೊಡವೆಯೇತಕೆ? ಆ ಹುಚ್ಚು ಭ್ರಾಂತಿಯೇಕೆ? ಸಂಸ್ಕೃತ ಕಲಿಯುತ್ತ ಹೋದರೆ ಕಲಿಯದವರ ಮುಂದೆ ಡಬ್ಬು ಹೊಡೆದು ರೊಕ್ಕ ಸುಲಿಯಲಿಕ್ಕೆ ಬರುವದು, ಆಯುಷ್ಯವು ಹರಣವು. ನಿರಕ್ಷರ ಜ್ಞಾನಿಗಳು ಇದ್ದಲ್ಲಿ ಕಲಿತವರು ಹೇಗೆ ಹೋಗುತ್ತಾರೆ. ಅಭಿಮಾನಕ್ಕೊಳಗಾಗಿ ಜನ್ಮ ತಾಳಲಿಕ್ಕೆ ಕಾರಣರಾಗುತ್ತಾರೆ. ಏನೂ ಕಲಿಯುವದೇ ಬೇಡ, ಶಾಸ್ತ್ರ, ವೇದ, ಸಂಸ್ಕೃತ ಏನೂ ಬೇಡ, ಏನೇ ಕಲಿತರೂ

ಇವನಿಗಿಂತ ಹೆಚ್ಚು ಕಲಿತವರು ಇವನ ತಪ್ಪನ್ನು ತೆಗೆದೇ ತೆಗೆಯುತ್ತಾರೆ. ಆತ್ಮವಿಚಾರವಿಲ್ಲದೆ ಎಷ್ಟು ವ್ಯಾಕರಣ ಶಾಸ್ತ್ರ ಕಲಿತರೂ ಪ್ರಯೋಜನವಿಲ್ಲ. ಸಂಸ್ಕೃತ ಶಬ್ದ ಕಲಿತುಕೊಂಡು, ಶ್ಲೋಕ ಅಂದು, ಶಬ್ದಶಃ ಅರ್ಥಮಾಡಿ ಹೇಳಬೇಕಾದರೆ ಬಹಳ ವೇಳೆ ಬೇಕು. ಖರೇ ವಸ್ತು ತ್ರಿಕಾಲದಲ್ಲಿ ಹಾಗೇ ಇರುತ್ತದೆಂದು ತಿಳಿದರೆ ಸಾಕು. ಈ ಜಗತ್ತು ಸುಳ್ಳು ಎಂದು ತಿಳಿದರೆ ಸಾಕು. ಇದಕ್ಕಿಂತ ಶ್ರೇಷ್ಠ ವಿದ್ಯೆ ಯಾವದೂ ಇಲ್ಲ. ಆರು ಶಾಸ್ತ್ರ, ಹದಿನೆಂಟು ಪುರಾಣ, ನಾಲ್ಕು ವೇದ ಓದುವದೆಂದರೆ ದಣಿವೇ ಸರಿ. ಅಸತ್‌ಖ್ಯಾತಿ, ಅನ್ಯಥಾಖ್ಯಾತಿ, ಆತ್ಮಖ್ಯಾತಿ ಮುಂತಾದ ನಾಲ್ಕು ಮತಗಳಿಂದ ಕೇಳಿ ನೋಡಿದರೂ ಪೂರ್ಣ ವಿಚಾರವು ತಿಳಿಯುವದೇ ಇಲ್ಲ. ನ್ಯಾಯಶಾಸ್ತ್ರ ಮುಂತಾದ ಗ್ರಂಥಗಳನ್ನು ಸಾಕಷ್ಟು ಕಲಿಯಬಹುದು, ಹೇಳಬಹುದು. ಬಾಯಿಲೆ ಬ್ರಹ್ಮಜ್ಞಾನ, ಒಳಗೆ ಜೀವಭಾವವು ಹೋಗಿರುವದಿಲ್ಲ. ವೈದ್ಯಕೀಯ ಪುಸ್ತಕ ನೋಡಿ ಔಷಧ ಕೊಡುತ್ತೇವೆಂದರೆ ಬರುವದಿಲ್ಲ. ಬಲ್ಲವರಲ್ಲಿ ಕೇಳಲೇ ಬೇಕು. ವ್ಯಾಸರು ವೇದಾಂತವನ್ನು ಪ್ರಕಟ ಮಾಡಿ ಮುಗಿಸಿದರು. ಬಾಕಿ ಜನರು ತಾವೇ ಸ್ವತಃ ವೇದ ನೋಡಿಕೊಂಡು ತಿಳಿದಷ್ಟು ಅರ್ಥಮರ್ಥ ಬರೆದರು.

ಬರೇ ಬಾಹ್ಯ ಜಡಕ್ರಿಯೆಯು ಮೋಕ್ಷಕ್ಕೆ ಸಾಧನವಾಗಲಾರದು. ಸುಮ್ಮನೆ ಅಷ್ಟಾವರಣಗಳ ಜಡಕ್ರಿಯೆ ಹಿಡಿದು ದುಃಖಿಯಾಗುವರು. ಜೀವನಿಗೆ ಕರ್ಮವು ಯಾವ ತರದಿಂದಲೂ ಸುಖವನ್ನು ಕೊಡುವದಿಲ್ಲ. ಕರ್ಮ ಮಾಡುತ್ತ ಹೋದಂತೆ ದುಃಖವೇ ಹೆಚ್ಚಾಗುವದು. ಎಷ್ಟು ಜನ್ಮ ಕರ್ಮ ಮಾಡಿದರೂ ದುಃಖವು ಬಿಡುವದಿಲ್ಲವು. ಕರ್ಮ ನಾಶವಾದರೆ ಸುಖದ ದಾರಿ ಗೊತ್ತಾಗುತ್ತದೆ. ಕರ್ಮವನ್ನೇ ಬೆಳೆಸುತ್ತ ಹೋದರೆ ಮತ್ತೆ ಕರ್ಮದ ಶರೀರವೇ ಉತ್ಪತ್ತಿಯಾಗುವದು. ಆದ್ದರಿಂದ ಕರ್ಮ ಮಾಡುತ್ತ ತಾನು ಮುಕ್ತನಾದೆನೆಂಬ ಹಂಬಲವನ್ನು ಬಿಟ್ಟುಬಿಡಬೇಕು. ಜ್ಞಾನವೇ ಮುಕ್ತಿಗೆ ಮೂಲವು. ಇದೇ ಸುಖವನ್ನು ಕೊಡುವದು. ಜ್ಞಾನಕ್ಕೂ ಕರ್ಮಕ್ಕೂ ಸಮುಚ್ಚಯವಾಗುವದಿಲ್ಲ. ಹೀಗಾಗಿ ಕರ್ಮ ಮಾಡುವದು ಬಲು ದಡ್ಡತನ, ವೇದಾಂತ ಶ್ರವಣಾದಿಗಳಿಂದ ಚಿತ್ತ ಶುದ್ಧಿಯು ಆಗಿಯೇ ಆಗುತ್ತದೆ, ಪಾಪ ಹೋಗಿಯೇ ಹೋಗುತ್ತದೆ. ಮೊದಲೇ ಕೈಗೆ ರಾಡಿಯನ್ನು ಹಚ್ಚಿಕೊಳ್ಳಬೇಡ, ತೊಳೆದುಕೊಳ್ಳುವದು ತಪ್ಪುವದು, ಹೀಗೆಂದು ತಿಳಿ. ಸತ್ಕರ್ಮದಿಂದ ಪುಣ್ಯವರ್ಧನವಾಗಿ ಪರಲೋಕ ಪ್ರಾಪ್ತಿಯಾಗುವದು. ಅದಾದರೂ ಉಂಡೇ ತೀರುವದು. ಪುನಃ ಜನ್ಮಕ್ಕೆ ಬರಲೇ ಬೇಕು. ಇದೆಲ್ಲವನ್ನು ನೋಡಿದರೆ ಕರ್ಮವು ಕಷ್ಟಕರವೆಂದು ಸಿದ್ಧವಾಗುವದು. ನಿಜದ ಮರ್ಮ ಅರಿತವರು ಇದನ್ನು ಸ್ವಪ್ನದಲ್ಲಿಯೂ ನೆನೆಸುವದಿಲ್ಲ. ಮಂದಮತಿಗಷ್ಟೇ ಪ್ರೇಮವಿದು. ಮೂರು ಅವಸ್ಥೆಗಳಲ್ಲಿ ಕರಣಾದಿಗಳಿವೆ, ನೆನಪೂ ಇದೆ, ಅಲ್ಲಿ ದುಃಖವಿರುವದು.

ವೇದಗಳು ಕರ್ಮನಿವೃತ್ತಿ ಮಾಡಲೋಸುಗ ಹೊರಹೊರಟಿರುತ್ತವೆ. ವಿವೇಕದಿಂದ ಮನಸ್ಸಿನಲ್ಲಿಯ ರಾಗ-ದ್ವೇಷಗಳನ್ನು ಕಳೆದುಕೊಂಡು, ಅಂತಃಕರಣವನ್ನು ಶುದ್ಧ ಮಾಡಿಕೊಂಡು, ಅದರಲ್ಲಿ ತನ್ನ ಸ್ವರೂಪವನ್ನು ಕಂಡುಕೊಳ್ಳಬೇಕಲ್ಲದೆ ಕರ್ಮ ಮಾಡುತ್ತ ಕುಳಿತರೆ ಎಂದಿಗೂ ಮುಕ್ತಿಯಾಗುವದಿಲ್ಲ.

ಜೀವನಿಗೆ ಕರ್ಮವು ಯಾವ ತರದಿಂದಲೂ ಸುಖ ಕೊಡುವದಿಲ್ಲ. ಸತ್ಕರ್ಮವು ಆರಂಭದಲ್ಲಿ ಸ್ವರ್ಗ ಸುಖವನ್ನು ಉಣಿಸಿ ಅಂತ್ಯದಲ್ಲಿ ಪುಣ್ಯ ತೀರಿದಾಗ





ದುಃಖ ಕೊಡುತ್ತದೆ. ದುಷ್ಕರ್ಮವು ಆರಂಭದಲ್ಲಿ ನರಕ ಫಲ ಕೊಟ್ಟು, ನರಕದಿಂದ ಬಿಡುಗಡೆಯಾಗುವಾಗ್ಗೆ, ಅಪರಾಧಿಯು ಜೇಲಿನಿಂದ ಬಿಡುಗಡೆಯಾದಾಗ ಹೇಗೋ ಹಾಗೆ ಸುಖ ಪ್ರಾಪ್ತಿಯಾಗುತ್ತದೆ. ಅಂದಮೇಲೆ ಧರ್ಮಾಧರ್ಮಗಳ ಪರಿಣಾಮವು ಒಂದೇ. ಪುಣ್ಯದಿಂದ ಮೊದಲು ಸುಖ ನಂತರ ದುಃಖ, ಪಾಪದಿಂದ ಮೊದಲು ದುಃಖ ಆಮೇಲೆ ಸುಖ. ಅಂದರೆ ಎರಡೂ ದುಃಖಕ್ಕೆ ಕಾರಣವಾದ ಜನ್ಮವನ್ನು ಕೊಟ್ಟೇ ಕೊಡುತ್ತವೆ. ಆದ್ದರಿಂದ ಪುಣ್ಯ ಪಾಪಗಳೆರಡೂ ದುಃಖಮಯವಿದ್ದದ್ದರಿಂದ ಯೋಗೀಶ್ವರನು ಇವುಗಳನ್ನು ಬಿಟ್ಟು ತನ್ನ ಸ್ವರೂಪ ವಿಚಾರದಲ್ಲಿಯೇ ಮಗ್ನವಾಗಿರತಕ್ಕದ್ದು. ಒಂದು ವೇಳೆ ಕರ್ಮ ಮಾಡಿದರೆ ಎಂಥ ಪುಣ್ಯ ಮಾಡುವವನಾದರೂ ಪಾಪಕರ್ಮದ ಬೇರಾದ ಅಹಂಕಾರವು ಬೇಕೇಬೇಕು. ಅಹಂಕಾರವು ಪಾಪದ ಗಡ್ಡೆ, ಅದು ಕರ್ಮದಿಂದ ಬೆಳೆದು ಹಬ್ಬಿ ದುಃಖ ಕೊಡುತ್ತ ಹೋಗುತ್ತದೆ.

ದೇಹವೇ ನಾನು, ಜಗತ್ತು ಸತ್ಯವೆಂದು ತಿಳಿದ ಮೂಢ ಮನುಷ್ಯನಿಗೆ ಕರ್ಮವು ಕರಣೀಯವು, ನಾನು ಸಾಕ್ಷೀ ಸ್ವಯಂಜ್ಯೋತಿ, ನಿಷ್ಕ್ರಿಯ ನಿರ್ಗುಣವಾದ ಆತ್ಮನೆಂದು ತಿಳಿದವನಿಗೆ ಕ್ರಿಯೆಯು ಹೇಗೆ ಅವಶ್ಯವು? ಒಂದು ವೇಳೆ ಕರ್ಮವು ದುರಿತಹರವು ಕರಣೀಯವೆಂದರೆ ಅದು ಸುಳ್ಳು. ಕರ್ಮ ಮಾಡುತ್ತ ದೇಹದಲ್ಲಿ ಅಹಂಕಾರವು ಬೆಳೆದು ಪಾಪವೂ ಬೆಳೆಯುತ್ತದೆ. ಆದ್ದರಿಂದ ಕರ್ಮದಿಂದ ಎಂದಿಗೂ ಜನ್ಮ ಮರಣ ಬಿಡುಗಡೆ ಇಲ್ಲ. ಯಾವನಾದರೂ ಬೆಂಕಿಯಿಂದ ಮೈ ಸುಟ್ಟುಕೊಂಡು, ಬೆಂಕಿಮಾಡಿ ಕಾಸಿಕೊಂಡರೆ ಹೇಗೆ ದಾಹವು ಹೆಚ್ಚಾಗುವದೋ ಹಾಗೆ, ಕರ್ಮದಿಂದ ಕರ್ಮವು ಹೆಚ್ಚಾಗುತ್ತದೆ, ಸಂಚಿತವು ಕೂಡಿ ಬೀಳುತ್ತ ಹೋಗುತ್ತದೆ. ಆದ್ದರಿಂದ ಕರ್ಮವು ನಿಜವರಿದ ಯೋಗಿಗೆ ಅನವಶ್ಯವು. ಕರ್ಮದಿಂದ ಭವಬಂಧ ಹೆಚ್ಚುತ್ತದೆ ಎಂದು ತಿಳಿದ ಯೋಗಿಯು ಹೇಗೆ ಕರ್ಮ ಮಾಡುವನು? ಕರ್ಮದ ಮೂಲ ಅಹಂಕಾರ. ಮೊದಲಿಗೆ ಅಹಂ ಉಂಟಾಗಿ ಮುಂದೆ ಜಗತ್ತು ತೋರಿ ಬಂಧನವುಂಟಾಗುತ್ತದೆ. ಜೀವನ ಕರ್ಮಾವಳಿಯನ್ನು ಉಣ್ಣಿಸಲಿಕ್ಕೆ ಜೀವಾತ್ಮ ಜಗತ್ತು ಉಂಟಾಗಿದೆ. ಅಜ್ಞಾನ ಇರುವವರೆಗೆ ಜಗತ್ತಿಗೆ ನಾಶವಿಲ್ಲ. ಅಜ್ಞಾನದಿಂದ ಇಹಪರಕ್ಕೆ ತಿರುಗಾಡುವದೇ ಬಂಧನವು. ತಾನಾರು ಎಂದು ತಿಳಿಯುವದೇ ಸ್ವಾತಂತ್ರ್ಯವು. ಅಲ್ಲಿ ಜನನ ಮರಣಗಳಿಲ್ಲ.

ಕರ್ಮ ಮಾಡುವವನು ತಾನು ಯಾರೆಂದು ತಿಳಿದರೆ, ತಾನು ಯಾವಾಗಲೂ ಸಾಕ್ಷೀ ನಿರ್ವಿಕಾರಿ ಶುದ್ಧ ಚಿನ್ಮಾತ್ರನೆಂದೂ, ಕರ್ಮದ ಕಾಟವು ತನಗೆ ಎಂದೂ ಇಲ್ಲವೆಂದೂ ತಿಳಿಯುವದು, ಅಂದಮೇಲೆ ಕರ್ಮದ ಪ್ರಯೋಜನವಿಲ್ಲ. ಬ್ರಹ್ಮಜ್ಞಾನವಿಲ್ಲದೆ ಬ್ರಹ್ಮನಿಗೆ ಕರ್ಮವನ್ನು ಅರ್ಪಿಸುವದು ಹೇಗೆ? ಅಂತೂ ಬ್ರಹ್ಮವನ್ನು ತಿಳಿದರೂ ತಿಳಿಯದಿದ್ದರೂ ಕರ್ಮವು ವ್ಯರ್ಥ. ಆದ್ದರಿಂದ "ನಂಬು ಜ್ಞಾನವನೆ ಕರ್ಮವೆಂಬ ಜಾಲದೊಳು ಸಿಲುಕಿ ಹಂಬಲಿಸದಿರು ಮುಕ್ತಿಯಂ ಬಯಸಿ ಮನುಜ. ಈಗ ಜ್ಞಾನೋದಯವಾಗಲು ದಾನ ಜಪಯೋಗ ಮೊದಲಾದ ಕರ್ಮಗಳು ಜ್ಞಾನದ ಕೋಟಿ ಭಾಗೆಯೊಳು ಒಂದಕ್ಕೆ ಸಮನಾಗುತಿರವು". ಆದ್ದರಿಂದ ಜ್ಞಾನವನ್ನು ನಂಬಿ ಮುಕ್ತನಾಗು. ತಾನೇ ಪರಮಾತ್ಮನೆಂಬುದನ್ನು ನಂಬಿ, ಒಳಗೂ ಹೊರಗೂ ಪೂರ್ಣ

ತಾನೇ ಅಲ್ಲದೆ ತನ್ನ ಹೊರತು ಯಾವುದೂ ಇಲ್ಲವೆಂದು ನಂಬಿದರೆ ಮಾತ್ರ ಮುಕ್ತಿಯಾಗುತ್ತದೆ. ತಾನೇ ತನ್ನನ್ನು ಚೆನ್ನಾಗಿ ಅರಿಯತಕ್ಕದ್ದು ಎಂಬುವದೇ ವೇದದ ತಾತ್ಪರ್ಯವು. ದುಃಖವು ಕರ್ಮದಿಂದ ಉಂಟಾಗಿದ್ದರೆ ಕರ್ಮದಿಂದ ಹೋಗಬಹುದಾಗಿತ್ತು. ಜೀವನಿಗೆ ತನ್ನ ಸ್ವರೂಪದ ಮರವೆಯಿಂದ ದುಃಖವು ಬಂದಿದೆ. ಆದ್ದರಿಂದ ಕರ್ಮ ಕೋಟಿಯಿಂದಾದರೂ ಮುಕ್ತಿಯಾಗುವದಿಲ್ಲ. ಸ್ವರೂಪದ ಜ್ಞಾನದಿಂದಲೇ ಮುಕ್ತಿಯಾಗುವದು.

ಕರ್ಮದಿಂದ ನಾಲ್ಕು ಫಲಗಳು ಉಂಟಾಗುವವು. ಉತ್ಪಾದ್ಯ, ಪ್ರಾಪ್ಯ, ವಿಕಾರ್ಯ, ಸಂಸ್ಕಾರ್ಯ. ಈ ನಾಲ್ಕೂ ಕರ್ಮಗಳು ಆತ್ಮನನ್ನು ಉಂಟು ಮಾಡಲಾರವು. ಒಂದು ವೇಳೆ ಕರ್ಮದಿಂದ ಮುಕ್ತಿ ಉಂಟೆಂದರೆ ಜಾತ ಕರ್ಮವಾದ ಕೂಡಲೇ ಮುಕ್ತಿಯಾಗಬೇಕು. ಸ್ವರೂಪದ ಮರವೆಯಿಂದ ಅನಾತ್ಮಭೂತವಾದ (ಆತ್ಮವಲ್ಲದ) ದೇಹಾದಿಗಳಲ್ಲಿ ಆತ್ಮತ್ವವನ್ನು ಕಂಡು, ಪ್ರಿಯ ಅಪ್ರಿಯ ವಿಷಯ ಹೊಂದಿ, ಜೀವನು ದುಃಖಗಳಿಗೆ ಈಡಾಗಿದ್ದಾನೆ. ಹೇಗೆ ಕೊರಡಿನ, ಸಿಂಪಿನ ಜ್ಞಾನವಿಲ್ಲದೆ ಯಾವನೊಬ್ಬನೂ ಭಯ ಮೋಹ ರಹಿತನಾಗಲಾರನೋ, ಹಾಗೆಯೇ ಜೀವನು ತನ್ನ ಅಧಿಷ್ಠಾನಭೂತ ಆತ್ಮಜ್ಞಾನದಿಂದ ಭಯ ಮೋಹಗಳಿಂದ ದೂರಾಗಬಲ್ಲನೆ ಹೊರತು, ಮತ್ತಾವ ಕರ್ಮದಿಂದಲೂ ಸಾಧ್ಯವಿಲ್ಲ. ಹೇಗೆ ಅಧಿಷ್ಠಾನವಾದ ಕೊರಡಿನ ಸಿಂಪಿನ ಜ್ಞಾನವಾದ ಕೂಡಲೆ ಚೋರಭಯ ಮತ್ತು ಬೆಳ್ಳಿಯ ಭ್ರಾಂತಿ ಹೊರಟು ಹೋಗುವವೋ, ಹಾಗೆಯೇ ಸಚ್ಚಿದಾನಂದ ನಿರ್ಮಲ ಸಾಕ್ಷೀರೂಪ ಪ್ರತ್ಯಗಾತ್ಮನ ಜ್ಞಾನವಾದ ಕೂಡಲೇ ದೇಹಾದಿ ದುಃಖಗಳು ಹರಿದು ನಿತ್ಯ ಸುಖವು ಪ್ರಾಪ್ತವಾಗುವದು.

ಸಗುಣಾದಿ ಯೋಗ ಮಾಡಿ ಸಿದ್ಧಿಗಳನ್ನು ಪಡೆದು ಲೌಕಿಕದಲ್ಲಿ ಪೂಜ್ಯತೆಯನ್ನು ಪಡೆದು, ಆಡಂಬರವೆಬ್ಬಿಸಿ ಸಾಹುಕಾರ ಶಿಷ್ಯರನ್ನೂ, ಜಯಂತಿ ಮಹೋತ್ಸವಗಳನ್ನೂ ಮಾಡುತ್ತ ಕಾಲಕ್ಷೇಪ ಮಾಡಿದರೆ ನಿಜಯೋಗವೆನಿಸಲಾರದು. ಸಗುಣ ಯೋಗದಿಂದ ಬರುವ ಸಿದ್ಧಿಗಳನ್ನು, ರುದ್ರಾದಿ ಪದವಿಗಳನ್ನು ಆಶಿಸದೆ ತೃಣಪ್ರಾಯವಾಗಿ ಕಂಡವನೇ ಶಿಷ್ಯನು.

ತಾವು ತಮ್ಮ ನಿಜವನ್ನು ಅರಿಯುವದನ್ನು ಬಿಟ್ಟು ಯೋಗ, ಜಪ, ತಪಗಳಲ್ಲಿ ಸುಮ್ಮನೆ ದೇಹದಂಡನೆ ಮಾಡಿ ಸಾಯುವರು. ಜಪ, ತಪ, ಯೋಗ ಮೊದಲಾದವುಗಳೆಲ್ಲ ಸುಳ್ಳು, ಮನಸ್ಸನ್ನು ಸುಜ್ಞಾನವೆಂಬ ಅರುವಿನಲ್ಲಿ ಹಾಕಿ ಸುಟ್ಟುಬಿಡು, ಇದೇ ಯಜ್ಞ, ಸ್ವಲ್ಪ ಮನಸ್ಸು ಉಳಿದರೆ ಜಗತ್ತು ಉಳಿದಂತಾಯಿತು. ಆಗ ಪೂರ್ಣ ದುಃಖ ನಿವೃತ್ತಿಯಾಗುವದಿಲ್ಲ. ತಿಳಿಯದಲೆ "ಶಿವ ಶಿವ" ಎಂದರೆ ಪ್ರಯೋಜನವೇನು?

ಗೃಹಸ್ಥಾಶ್ರಮಿಯಾದವನು ಪ್ರಾಣಧಾರಣೆಗೆ ಅವಶ್ಯವಾದ ಕೇವಲ ಅನ್ನ ವಸ್ತ್ರ ದೊರಕಿಸಿ ಪುಣ್ಯ ಕಾರ್ಯಗಳನ್ನು ಮಾಡುತ್ತ, ಶ್ರವಣ ಮನನ ನಿಧಿಧ್ಯಾಸನಗಳಿಂದ ಜ್ಞಾನ ಹೊಂದಬಹುದು, ಇದು ಪಿಪೀಲಿಕಾ ಮಾರ್ಗವು. ಈ ಮಾರ್ಗದಿಂದ ಹೋದವನಿಗೆ ಬಹುಜನ್ಮದಿಂದ ಮುಕ್ತಿಯಾಗುತ್ತದೆ. ಇನ್ನೊಂದು ವಿಹಂಗಮ ಮಾರ್ಗವು. ಇವನು ಭಿಕ್ಷಾನ್ನ ಸೇವಿಸಿ ಯಾವಾಗಲೂ ಹಿತಾಹಿತ ವಿಚಾರದಲ್ಲಿ ತೊಡಗಿ ಆತ್ಮಜ್ಞಾನವನ್ನು ಸಂಪಾದಿಸುವನು.





ಶರೀರ ಮೊದಲಾದ ತೋರಾನುತೋರಿಕೆ ಸುಳ್ಳಿದ್ದರೂ ನಿಜವನ್ನು ತಿಳಿಯಲಿಕ್ಕೆ ಸಾಧನವಾಗಿರುತ್ತದೆ. ಸ್ವಪ್ನದಲ್ಲಿಯ ಭೋಗವು ಸುಳ್ಳಾದರೂ ಇಂದ್ರಿಯ ಪತನವು ಸತ್ಯವಿರುವದು. ಇದರಂತೆ ಶರೀರ ಮೊದಲಾದವುಗಳು ನಿನ್ನ ಅರುವಿನ ಗುರ್ತು ಹಚ್ಚಿ, ತಮ್ಮಿಂದ ತಾವೇ ನಾಶವಾಗುತ್ತವೆ.

ಕರ್ಮದಲ್ಲಿ ಎರಡು ವಿಧ. ಪ್ರವೃತ್ತಿ ಕರ್ಮ, ನಿವೃತ್ತಿ ಕರ್ಮ. ಏನಾದರೊಂದು ವಿಷಯದ ಆಶೆ ಇಟ್ಟುಕೊಂಡು ಮಾಡಿದ ಕರ್ಮ, (ಜಪ, ಹೋಮ, ಪೂಜೆ, ಸೇವೆ ಮುಂತಾದವು) ಪ್ರವೃತ್ತಿ ಕರ್ಮ. ಅದು ನೋಡಲಿಕ್ಕೆ ನಿವೃತ್ತಿ ಕರ್ಮದಂತೆ ಇದ್ದರೂ ಅದು ಪ್ರವೃತ್ತಿ ಕರ್ಮವೇ. ಯಾಕೆಂದರೆ ಕಾಮನೆಯು ಜನ್ಮಕ್ಕೆ ಬೀಜಭೂತವಾಗಿದ್ದು, ನಿವೃತ್ತಿ ಕರ್ಮವು ಎಲ್ಲ ಆಶೆ, ಭೇದಭಾವನೆಯನ್ನು ನಾಶಮಾಡುವದು. ಶ್ರವಣ, ಮನನ, ನಿದಿಧ್ಯಾಸನ, ಸಮಾಧಿ. ಇವು ಜೀವನನ್ನು ಸಕಲ ದುಃಖದಿಂದ ಉಳಿಸುತ್ತವೆ.

ಎಲ್ಲರೂ ವಿಷಯಗಳಲ್ಲಿ ಸುಖಬುದ್ಧಿಯನ್ನು ಇಟ್ಟುಕೊಂಡು ಇವುಗಳಿಗಾಗಿ ದುಡಿಯುವರು. ಆದರೆ ಇವುಗಳಲ್ಲಿ ಸುಖವಿರುವದಿಲ್ಲ. ಇಷ್ಟ ವಿಷಯವು ಸಿಕ್ಕಾಗ, ಕಿಂಚಿತ್ ಕಾಲ ಮನಸ್ಸು ನಿಶ್ಚಲವಾಗಿ ಆತ್ಮನ ಆನಂದವು ಹೊಳೆಯುವದು. ಆಗ ಅಜ್ಞಾನಿ ಜೀವನು ವಿಷಯ ಪ್ರಾಪ್ತಿಯಿಂದ ತನಗೆ ಸುಖವಾಯಿತೆಂದು ತಿಳಿಯುತ್ತಾನೆ. ಇದು ಮಿಥ್ಯಾನುಭವವು. ಯಾಕೆಂದರೆ ವಿಷಯವು ನಿಜವಾಗಿ ಸುಖರೂಪವಿದ್ದರೆ ಅವನು ಆ ವಿಷಯ ಬಿಟ್ಟು ಇರಬಾರದಾಗಿತ್ತು. ಆದರೆ ಮತ್ತೊಂದು ಕ್ಷಣಕ್ಕೆ ಅವನ ಮನಸ್ಸು ಮತ್ತೊಂದು ವಿಷಯಕ್ಕೆ ಹರಿಯುತ್ತದೆ. ಅದೇ ವಿಷಯವು ಹೆಚ್ಚು ಪ್ರಮಾಣದಿಂದಿದ್ದರೆ ಅದರ ಭೋಗಕ್ಕೆ ಹೇಸಿಕೆಯನ್ನುಂಟು ಮಾಡುವದು. ಅಂದಮೇಲೆ ವಿಷಯವು ಸುಖರೂಪವಲ್ಲ. ಆತ್ಮನೋರ್ವನೇ ಸುಖರೂಪನು. ಇದು ಸತ್ಯಾನುಭವವು. ಹೆಂಡತಿಗೆ ಗಂಡನು ಸುಖ ಕೊಡುತ್ತಾನೆ, ಗಂಡನಿಗೆ ಹೆಂಡತಿಯು ಸುಖ ಕೊಡುತ್ತಾಳೆಂಬ ತಿಳಿವಳಿಕೆಯು ಕೇವಲ ಭ್ರಾಂತಿಯಿಂದಲ್ಲದೆ ಯಥಾರ್ಥ ಜ್ಞಾನವಲ್ಲ. ಹೀಗೆ ಎಲ್ಲ ವಿಷಯಜನಿತ ಸುಖಗಳು ನಿಜವಲ್ಲ. ಜಗತ್ತು ಸುಖವೆಂದು ಸತ್ಯವೆಂದು ತಿಳಿದವರು ಅತಿ ದುಃಖದಿಂದ ಬೆಂದು ಹೋಗುವರು. ವಿಷಯದಿಂದ ಕಿಂಚಿತ್ ಸುಖ ತೋರಿ ಭವದುಃಖಕ್ಕೆ ಗುರಿಮಾಡುತ್ತದೆ. ಆತ್ಮವಿಚಾರವು ಭವದ ಬೇರನ್ನು ಕಿತ್ತು ಹಾಕುತ್ತದೆ. ಆದ್ದರಿಂದ ಸದಾ ಆತ್ಮವಿಚಾರದಲ್ಲಿ ಇರಬೇಕು. ವಿಷಯದ ಆಶೆ ಇಟ್ಟುಕೊಂಡು ಮಾಡಿದ ಕರ್ಮದಲ್ಲಿ ಗುಡ್ಡದಷ್ಟು ದುಃಖ, ಸಾಸಿವೆ ಕಾಳಿನಷ್ಟು ಸುಖವಿದೆ. ವಿಷಯದಲ್ಲಿ ಲಾಭ ಅಥವಾ ಲುಕ್ಸಾನ ಆದರೂ ಸಮಬುದ್ಧಿ ಇದ್ದರೆ ವಿಷಯ ವ್ಯಾಮೋಹವನ್ನು ಬಿಟ್ಟಂತಾಯಿತು.

ಇದರಂತೆ ಯೋಗದವನು ಮನಸ್ಸನ್ನು ನಿಲ್ಲಿಸುತ್ತಾನೆ. ಅಲ್ಲಿಯೇ ಆನಂದವಿದೆಯೆಂದು ತಿಳಿದುಕೊಳ್ಳುವನು. ಇದೂ ಭ್ರಮೆಯೇ. ಏಕೆಂದರೆ ಇದು ನಿರುಪಾಧಿಕ ಆನಂದವಲ್ಲ. ಏಕೆಂದರೆ ಯೋಗದಿಂದ ಉತ್ಥಾನವಾದಾಗ ಆನಂದವು ತೋರುವದಿಲ್ಲ. ಸ್ವರೂಪ ತಿಳಿದರೆ ಪೂರ್ಣ ಸುಖ. ಸುಖವನ್ನು ವಿಷಯಗಳಲ್ಲಿ ಹುಡುಕಿದರೆ ಸಿಗುವದಿಲ್ಲ, ತನ್ನ ಸ್ವರೂಪದಲ್ಲಿ ಸಿಗುವದು. ನಾನು ದೇಹ ಬಿಟ್ಟು

ಬೇರೆ ಇದ್ದೇನೆಂದು ತಿಳಿದರೆ ಸುಖವಾಗಬಹುದು. ಸುಖವು ತಾನೇ ಇದ್ದಾನೆಂದು ತಿಳಿದುಕೊಳ್ಳಲಿಕ್ಕೆ ಬರಲೊಲ್ಲದು. ದೇಹದಲ್ಲಿ ಎಷ್ಟು ಸುಖಬುದ್ಧಿ ಇರುವದೋ ಅಷ್ಟು ದುಃಖ.

ಲೋಕವಾಸನೆ, ಶಾಸ್ತ್ರವಾಸನೆ, ದೇಹವಾಸನೆ ಇರಬಾರದು. ನೌಕರಿ ಹೊಲ-ಮನೆ ಹಿರಿತನ, ರಾಜತನ, ಸ್ವರ್ಗ ಇವೆಲ್ಲ ಲೋಕವಾಸನೆಗಳು. ಶಾಸ್ತ್ರವಾಸನೆಯೆಂದರೆ ಅದಷ್ಟು ಇದಷ್ಟು ಶಬ್ದ ಕಲಿತುಕೊಂಡು ಶಾಸ್ತ್ರ ಹೇಳಬೇಕೆಂಬುವದು. ದೇಹವಾಸನೆಯೆಂದರೆ ದೀರ್ಘಕಾಲ ಬದುಕುವ ಆಶೆಯು. ದೇಹವು ಯಾವಾಗಲೂ ಇರಬೇಕೆಂದು ಅಜ್ಞಾನಿಯು ಬಯಸುವನು. ವಿಚಾರವಂತನು ದೇಹವು ದುಃಖಮಯವೆಂದು ತಿಳಿದುಕೊಳ್ಳುತ್ತಾನೆ. ಯೋಗಮಾಡಿ ಎಷ್ಟು ದಿವಸ ಬಾಳಿದರೇನು! ಹದ್ದು ಒಂದು ಸಾವಿರ ವರ್ಷ, ಕಾಗಿ ಏಳುನೂರು ವರ್ಷ, ಹಾವು ಸಾವಿರ ವರ್ಷ ಬಾಳಿದರೇನು ಫಲ? ತನ್ನ ಸ್ವರೂಪ ಗೊತ್ತಿಲ್ಲದೆ ಮಾಡಿದ್ದು ಹಾನಿಯು. ಬೇಕಾದಂಥ ಕಠಿಣ ಕೆಲಸವನ್ನು ಮಾಡಬಹುದು. ಆದರೆ ವಿಷಯಗಳ ವ್ಯಾಮೋಹ ತೆಗೆದು ಹಾಕುವದು ಅತಿ ಕಷ್ಟ. ಮನಸ್ಸು ಸ್ವಾಧೀನವಾದರೆ ದುಃಖವೇ ಇಲ್ಲ, ಮನಸ್ಸು ಜಡವಿದ್ದರೂ ಚೈತನ್ಯ ಜೀವನನ್ನು ಹಿಡಿದು ಎಳೆದಾಡುತ್ತದೆ. ಆಶೆಯನ್ನು ಬಿಟ್ಟರೆ ಒಂದೇ ಕ್ಷಣದಲ್ಲಿ ಪರಮಾತ್ಮನಾಗಲು ಬರುತ್ತದೆ.

ಭಕ್ತಿಯೆಂದರೆ ಪರಮಾತ್ಮನ ನೆನಪಿನಲ್ಲಿರುವದು. ಕ್ರಿಯೆಯೆಂದರೆ ಎರಡನೆಯವರಿಗೆ ಕೇಡು ಬಗೆಯದಿರುವದು. ಹೊಲಸು ದೇಹವನ್ನು ಎಷ್ಟು ತೊಳೆದರೇನು? ಹೊಲಸು ಬುದ್ಧಿಯನ್ನು ತೊಳೆಯಬೇಕು. ಬುದ್ಧಿಗೆ ಹೊಲಸು ಹತ್ತದಂತೆ ಎಚ್ಚರಿರಬೇಕು, ಉಣ್ಣುವ ಎಡೆಯಲ್ಲಿ ಏನಾದರೂ ಬಿದ್ದರೆ ಎಷ್ಟು ಲಕ್ಷ್ಯ ಕೊಟ್ಟು ನೋಡುತ್ತೇವೆಯೋ, ಅದರಂತೆ ಬುದ್ಧಿಯಲ್ಲಿ ಕಸರು ಬೀಳದಂತೆ ನೋಡಿಕೊಳ್ಳಬೇಕು. ಏಕೆಂದರೆ ಮತಿಕೆಟ್ಟರೆ ಗತಿ ಕೆಡುವದು. ನಮ್ಮ ಬುದ್ಧಿ ಕೆಟ್ಟ ಕೆಲಸ ಮಾಡಿತೋ, ಒಳ್ಳೆಯ ಕೆಲಸ ಮಾಡಿತೋ ಎಂಬುದನ್ನು ನೋಡುತ್ತ ಇದ್ದು ವಿಚಾರ ಮಾಡಬೇಕು.

ಜನ್ಮಾಂತರ ಸಂಸ್ಕಾರಗಳಿರುತ್ತವೆ. ಎಂದೂ ಆ ಕರ್ಮದಲ್ಲಿರದವನಿಗೆ ದುಷ್ಟ ಸ್ವಪ್ನವು ಬೀಳುತ್ತದೆ. ಇದು ಹಿಂದಿನ ಜನ್ಮದ ಸಂಸ್ಕಾರದಿಂದ ಬಿದ್ದಿತು ಎನ್ನಬೇಕು. ಒಬ್ಬ ಅತ್ಯಂತ ಕೆಟ್ಟವನಿಗೆ ಶೀಘ್ರ ಅಧ್ಯಾತ್ಮದ ಕಡೆಗೆ ಲಕ್ಷ್ಯವಾದರೆ, ಅದು ಹಿಂದಿನ ಜನ್ಮದ ಫಲವೆಂದೇ ತಿಳಿದುಕೊಳ್ಳಬೇಕು. ಇಂಥವರಿಗೆ ಶಾಸ್ತ್ರ ಕಲಿಯದಿದ್ದರೂ ತಾನೇ ಬರುತ್ತದೆ. ನಂತರ ಆತ್ಮಾಭ್ಯಾಸಕ್ಕೆ ಕಾರಣವಾಗುವದು. ಈಗ ಮಹಾಕೆಟ್ಟವನಿದ್ದರೂ ಜ್ಞಾನವಾದರೆ ಅದು ಅವನ ಹಿಂದಿನ ಜನ್ಮದ ಅಭ್ಯಾಸದ್ದೇ.

ನಿಜಗುಣಾರ್ಯರು ಸಕಲ ವೇದ ಉಪನಿಷತ್ತುಗಳ ಅರ್ಕವನ್ನೇ ಹಿಂಡಿ ತೆಗೆದಿರುವರು. ಇದನ್ನು ಓದಬೇಕು, ಮರೆಯಬಾರದು, ತಿಳಿಯುವದಿಲ್ಲವೆಂದು ಸುಮ್ಮನೆ ಕೂಡ್ರಬಾರದು. ಕನ್ನಡದಲ್ಲಿ ನಿಜಗುಣರ ಗ್ರಂಥ ಮಿಗಿಲಾದದ್ದು ಇದೆ. ಭವದುಃಖ ಕಳೆದುಕೊಳ್ಳಲಿಕ್ಕೆ ಈ ಗ್ರಂಥದ ಅರ್ಥ ಕೇಳಿ ತಿಳಿದು ಜ್ಞಾನಿಗಳಾಗಬಹುದು. ಕನ್ನಡ ಭಾಷೆಯನ್ನು ಕಲಿಯದವರು ಸಹಿತ ಕೇಳಿ ತಿಳಿದು ಜ್ಞಾನಿಗಳಾಗಿದ್ದಾರೆ.





ಅಭ್ಯಾಸದಲ್ಲಿ ತೊಡಗಿದಾಗ ಹಿಂದಿನ ಪಾಪ ವಿಶೇಷವು ವಿಘ್ನವಾಗಿ ಬರುವದು. ಅವುಗಳಿಗೆ ಹೆದರದೆ ವಿವೇಕ ವೈರಾಗ್ಯಗಳಿಂದ ಅವುಗಳನ್ನು ಹಿಂದೆ ಸರಿಸಬೇಕು. ವಿವೇಕವಿದ್ದರೆ ಏನೂ ಆಗುವದಿಲ್ಲ. ಅವಿವೇಕಿಯಾದರೆ ವಿಘ್ನಕ್ಕೆ ಹೆದರಿ ಬಿಟ್ಟುಹೋಗುತ್ತಾನೆ. ತಾನು ಪೂರ್ಣ ಸಿದ್ಧನಾಗದ ಹೊರ್ತು ಅಭ್ಯಾಸವನ್ನು ಬಿಡಬಾರದು. ಏನೇ ಬರಲಿ, ದೇಹವು ನಾಶವಾದರೂ ಲೆಕ್ಕಿಸದೆ ಭಯಪಡದೆ ಧೀರನಾಗಿ, ಅಭ್ಯಾಸವನ್ನು ಮುಂದುವರೆಸಿದರೆ ಅವು ಏನೂ ಮಾಡುವದಿಲ್ಲ. ತನ್ನ ಪರೀಕ್ಷೆಗಾಗಿ ಅನೇಕ ದುಃಖದ ಪ್ರಸಂಗಗಳು ಬಂದು ಘಟಿಸುತ್ತವೆ ಎಂದು ತಿಳಿದು ಎಲ್ಲದರ ಆಶೆಯನ್ನು ಬಿಡಬೇಕು. ನಾನು ಚಲೋ ಮಾಡಬೇಕೆಂದರೆ ಎಂಥ ಕೆಟ್ಟಾಯಿತೆಂದು ಬಿಡಬಾರದು. ಇವು ಹಿಂದಿನ ಪಾಪಗಳೆಂದು ತಿಳಿಯಬೇಕು. ಒಮ್ಮೆಗೇ ಪಾಪ-ಪುಣ್ಯ ಮಾಡಿರುವೆವು. ಆದ್ದರಿಂದಲೇ ಈ ಅಭ್ಯಾಸಗಳೂ, ಇದರ ವಿಘ್ನಗಳೂ ಕೂಡ ಬಂದಿರುತ್ತವೆಂದು ತಿಳಿದುಕೊಳ್ಳಬೇಕು. ನನಗೆ ಅನ್ನ ದೊರೆಯಲೊಲ್ಲದು, ನೌಕರಿಯು ಸಿಗಲೊಲ್ಲದು, ಸಿದ್ಧಿಗಳು ದೊರೆಯಲಿಲ್ಲ ಎಂದು ಬೇಸರ ಮಾಡಿಕೊಂಡು ಅಭ್ಯಾಸವನ್ನು ಬಿಡಬಾರದು, ಅಣಿಮಾದಿ ಸಿದ್ಧಿಗಳು ತೃಣಪ್ರಾಯವೆಂದು ತಿಳಿದುಕೊಳ್ಳಬೇಕು. ಈ ಅಧ್ಯಾತ್ಮ ಅಭ್ಯಾಸವನ್ನು ಮಾಡುವದರಿಂದಲೇ ಹೀಗಾಗುತ್ತದೆ ಎಂಬ ಸಂಶಯ ಬರುತ್ತದೆ. ವಿಘ್ನವು ಅನುಸಂಧಾನವನ್ನು ಕೆಡಿಸಲಿಕ್ಕೆ ಬಂದಿದೆ ಎಂದು ತಿಳಿದುಕೊಳ್ಳಬೇಕು. ರಾತ್ರಿ ಸ್ವಲ್ಪ ಊಟ ಮಾಡಿ ಅಥವಾ ಊಟವನ್ನು ಬಿಟ್ಟಾದರೂ ಅಭ್ಯಾಸ ಮಾಡಬೇಕು.

ಜೀವನು ಪರಮಾತ್ಮನ ಧ್ಯಾನ ಮಾಡಿದರೆ ತಾನೇ ಪರಮಾತ್ಮನಾಗುತ್ತಾನೆ. ಸಮುದ್ರ, ನದಿ ತಟಾಕ, ಗಿರಿಯ ತುದಿ, ಕಟ್ಟಕಡೆಗೆ ತನ್ನ ಮನೆಯಲ್ಲಿ ಏಕಾಂತ ಕೋಣೆಯಲ್ಲಿ ದಿನಾಲೂ ಬ್ರಾಹ್ಮೀ ಮುಹೂರ್ತದಲ್ಲಿ (ನಸುಕಿನ ನಾಲ್ಕು ಗಂಟೆ) ಎದ್ದು ಒಂದೆರಡು ತಾಸುಗಳಂತೆ ನಾಲ್ಕು ಐದು ಸಾರೆ ಸುಖಾಸನದ ಮೇಲೆ ಕುಳಿತು ಸ್ವರೂಪಾನುಸಂಧಾನ ಮಾಡಬೇಕು. ಒಂದು ದಿನಕ್ಕೆ ಐದು ವೇಳೆ ನೇಮವಿದ್ದು ಒಂದು ವೇಳೆಯಾದರೂ ಮಾಡಬೇಕು. ಹೀಗೆ ಮಾಡುವವನ ಸಮಾನ ದೇವತರೂ ಅಲ್ಲ, ಕಾಶಿಯಲ್ಲಿ ಓದಿದ ಪಂಡಿತರೂ ಅಲ್ಲ. ಇದನ್ನು ಬಿಟ್ಟು ಅನ್ಯ ಕೆಲಸದಲ್ಲಿ ತೊಡಗಿದ್ದಾದರೆ ಮುಂದೆ ಪಶು ಜನ್ಮಕ್ಕೆ ಹೋಗುತ್ತೀ. ಇಲ್ಲಿಯವರೆಗೆ ಎಷ್ಟು ಜನ್ಮ ತಾಳಿರುವೆವು ಲೆಕ್ಕ ಮಾಡಲಿಕ್ಕೆ ಬರುವದಿಲ್ಲ. ಅಭ್ಯಾಸ ಮಾಡಿದರೆ ಕೆಲವು ಜನ್ಮಕ್ಕಾದರೂ ಮುಕ್ತರಾಗಬಹುದು. ಧ್ಯಾನ ಮಾಡುವಾಗ ಮನಸ್ಸನ್ನು ಅತ್ಯಂತ ವಿರಕ್ತಿಯುಳ್ಳದ್ದು ಮಾಡಿ ಬ್ರಹ್ಮಾಕಾರ ಮಾಡಬೇಕು. ಸಾಧಕನು ನಾಲಿಗೆ ಮತ್ತು ಗುಹ್ಯೇಂದ್ರಿಯಗಳ ಲೋಲುಪತೆಯನ್ನು ಜಯಿಸಿ, ಪೂರ್ಣ ವಿರಕ್ತನಾಗಿ ಬ್ರಹ್ಮಾಕಾರವೃತ್ತಿಯ ಅಭ್ಯಾಸ ಮಾಡುತ್ತ ಸಮಾಧಿ ಮಾಡಬೇಕು. ಇದನ್ನು ಬಿಟ್ಟೂ ಬಿಡದೆ ಸಿದ್ಧಿಯಾಗುವವರೆಗೆ ಮಾಡಬೇಕು. ಬಿಟ್ಟಿದ್ದಾದರೆ ಸಿದ್ಧಿಸಲಾರದು. ತಪ್ಪದೇ ನಿತ್ಯ ಅದರಲ್ಲಿಯೇ ಮುಳುಗಬೇಕು. ಹಾದಿಗುಂಟ ಅಡ್ಡಾಡುತ್ತ, ಕುಳಿತಾಗ, ನಿಂತಾಗ, ಅದೇ ಧ್ಯಾನದಲ್ಲಿರಬೇಕು. ಏಕೆಂದರೆ ಬ್ರಹ್ಮನಿಷ್ಠರ ವಾಣಿಯನ್ನು ಕೇಳುವದು ದುರ್ಲಭವು, ಕೇಳಿದ್ದನ್ನು ತಿಳಿಯುವದು ದುಲರ್ಭವು, ತಿಳಿದಂತೆ ಅನುಭವಿಸುವದು ಅದಕ್ಕೂ ದುರ್ಲಭವು. ಸಂಪೂರ್ಣ ವಿಷಯ ಪ್ರೀತಿಯನ್ನು ಬಿಟ್ಟು, ನಿರ್ಗುಣ ಪರಮಾತ್ಮನಲ್ಲಿ ಮನಸ್ಸನ್ನು ಲೀನ ಮಾಡುವದು ಅದಕ್ಕೂ ದುರ್ಲಭವು.

ಲೌಕಿಕರು ಹೇಗೆ ಹಗಲೆಲ್ಲ ದುಡಿಯುವದೂ, ರಾತ್ರಿಯಲ್ಲಿ ಆಲೋಚನೆ ಮಾಡುವದು ಮಡುವರೋ, ಅಂದರೆ ನಿದ್ರೆಗೆಟ್ಟು ಪ್ರಕೃತಿಕೆಟ್ಟು ಅಜೀರ್ಣವಾಗಿ ರೋಗಿಯಾದರೂ ತಮ್ಮ ಪ್ರಯತ್ನವನ್ನು ಹೇಗೆ ವಿಮುಖ ಮಾಡಿಕೊಳ್ಳುವದಿಲ್ಲವೋ ಹಾಗೆ ವೇದಾಂತಕ್ಕೆ ಪ್ರಯತ್ನಿಸಬೇಕು. "ಆಸುರಾಮೃತೇಃ ಕಾಲಂ ಯೇದ್ವೇದಾಂತ ಚಿಂತಯಾ"(ಶೃತಿ). ಮಾನವನು ನಿದ್ರೆ ಹತ್ತುವವರೆಗೆ, ಮರಣ ಬರುವತನಕ, ಆತ್ಮಜ್ಞಾನವಾಗುವವರೆಗೆ ಆತ್ಮಸ್ವರೂಪ ವಿಚಾರವನ್ನು ಮಾತ್ರ ಮಾಡತಕ್ಕದ್ದು, ಅನ್ಯವೇನೂ ವಿಚಾರ ಮಾಡತಕ್ಕದ್ದಲ್ಲ. ಇದೊಂದೇ ನಿನ್ನ ಕರ್ತವ್ಯ ಕರ್ಮವು. ಎಲೆ ಜೀವನೇ, ನೀನು ನಿತ್ಯ ಮಲಗಿ, ನಿದ್ರೆ ಮಾಡಿ, ಎದ್ದ ಕೂಡಲೇ ಊಟ ಉಪಚಾರ, ದ್ರವ್ಯಾರ್ಜನೆಯ ಉಪಾಯ, ದೇಹದ ಬೇನೆ ಬೇಸರಿಕೆ ಮೊದಲಾದ ಚಿಂತೆ ಮಾಡದೆ, "ನಾನು ಯಾರು?" ಎಂದು ವಿಚಾರ ಮಾಡಿದರೆ, ನೀನು ನಿತ್ಯ ಸುಖಿಯಾಗುವಿ ಎಂದು ನಿಜಗುಣಾರ್ಯರು ಹೇಳಿದ್ದಾರೆ. ಒಂದೇ ಸವನೆ ಮನನ ನಿದಿಧ್ಯಾಸನಗಳು ಸುರುವಿರಬೇಕು. ಯಾವ ಪ್ರಕಾರ ಚಕಮಕಿಯ ಕಲ್ಲನ್ನು ಕಟಿಯುತ್ತಿರಲು ಒಮ್ಮಿಲ್ಲೊಮ್ಮೆ ಬೆಂಕಿಯು ಹೇಗೆ ಹುಟ್ಟುವದೋ ಹಾಗೆ, ಜ್ಞಾನಾಗ್ನಿಯನ್ನು ಕೆಡವಿಕೊಂಡು ವಿಷಯ ವಾಸನೆಯನ್ನು ಸುಡಬೇಕು. ಏನು ಉದ್ಯೋಗ ಮಾಡಿದರೂ ಉಣ್ಣುವಾಗ, ತಿನ್ನುವಾಗ, ಅಡ್ಡಾಡುವಾಗ, ಕೆಲಸ ಮಾಡುವಾಗ, ನಿಂತಾಗ, ಕುಳಿತಾಗ ತನು ಮೊದಲುಮಾಡಿಕೊಂಡು ಮೂವತ್ತಾರು ತತ್ತ್ವದವರೆಗೂ, ಪ್ರಾಣವಾಯು ಹೋಗುವ ಕಾಲಕ್ಕಾದರೂ ನಾನು ಸಾಕ್ಷೀ ಸ್ವರೂಪವೆಂದು ತಿಳಿಯಬೇಕು. ವಿಷಯಾಸಕ್ತಿ ಮತ್ತು ದೇಹಭಾವ ಗಟ್ಟಿಯಾಗಿರುವದರಿಂದ, ವಿಷಯಗಳು ಸುಖವಲ್ಲ, ದೇಹವು ನಾನಲ್ಲವೆಂದು ಎಷ್ಟು ಹೇಳಿದರೂ ವಿಷಯಾಸಕ್ತಿ ಮತ್ತು ದೇಹಾತ್ಮ ಬುದ್ಧಿಯು ಹೋಗಲೊಲ್ಲದು. ಎಷ್ಟು ರೀತಿಯಿಂದ ತಿಳಿಸಿ ಹೇಳಿದರೂ ಮನಸ್ಸು ವಿಷಯ ಮತ್ತು ದೇಹಗಳ ಕಡೆಗೇ ಹರಿಯುತ್ತದೆ, ಹೇಸಿಗೆಯ ರಾಶಿಗೆ ಹಂದಿ ತಿರುಗಿದಂತೆ ತಿರುಗುತ್ತದೆ. ಮನಸ್ಸಿನ ಸಂಕಲ್ಪ ವಿಕಲ್ಪಗಳನ್ನು ತುಚ್ಛೀಕರಿಸಿ ಉದಾಸೀನದಿಂದ "ಎಲೇ ಮನಸ್ಸೇ, ವಿಷಯಾದಿಗಳ ಕಡೆಗೆ ಹೋಗಿ ದುಃಖಕ್ಕೆ ಕಾರಣವಾಗುತ್ತೀ" ಎಂದು ಬೈದು, ಅದನ್ನು ಸದಾ ಆತ್ಮಚಿಂತನೆಯಲ್ಲಿ ಇಡತಕ್ಕದ್ದು. ದಿನಂಪ್ರತಿ ಆಶೆಯನ್ನು ಕೊಲ್ಲುತ್ತ ಹೋಗಬೇಕು. ಭವಸಾಗರದ ದುಃಖವನ್ನು ಕಳೆದುಕೊಳ್ಳಲು ಶ್ರವಣ ಮನನ ನಿದಿಧ್ಯಾಸನ ಇವೇ ಸಾಧನಗಳು. ಶ್ರವಣವು ಶಬ್ದ ಪ್ರಮಾಣವು, ಮನನವು ಅನುಮಾನ ಪ್ರಮಾಣವು, ನಿದಿಧ್ಯಾಸನವು ಅನುಭವ ಪ್ರಮಾಣವು.

ಜ್ಞಾನ ಕ್ರಿಯೆಗೆ ಯಾವ ಕಟ್ಟಳೆಗಳೂ ಇರುವದಿಲ್ಲ. ಅಡ್ಡಾಡುತ್ತ ಮಾಡಲಿ, ಮಲಗಿ ಮಾಡಲಿ, ಕೂತು ಮಾಡಲಿಕ್ಕೂ ಬರುವದು. ಇದಕ್ಕೆ ದೇಶ ವಸ್ತು ಕಾಲ ಕಟ್ಟಳೆಗಳಿಲ್ಲ, ಕೇಳಿ ತಿಳಿಯತಕ್ಕದ್ದಷ್ಟೇ, ಜ್ಞಾನವಾಗುವವರೆಗೆ ಕೇಳುವದನ್ನು ಬಿಡಬಾರದು, ಮುಂದಿನ ಜನ್ಮಕ್ಕಾದರೂ ಜ್ಞಾನವಾಗುತ್ತದೆ, ಕೇಳುವದನ್ನು ಮಾತ್ರ ಬಿಡಬಾರದು. ಆತ್ಮಾನಾತ್ಮ ವಿಚಾರ ಮಾಡುವದೇ ಸ್ವರೂಪದ ಕರ್ಮ. ಇದಕ್ಕೆ ಪತ್ರಿ, ಹೂ, ಗಂಧ, ಅಕ್ಷತೆ ಬೇಡ. ಇದು ಆತ್ಮವಿಚಾರರೂಪ ಕರ್ಮ. ದೇಹದ ನಾಮರೂಪ ಹೇಗೆ ಗಟ್ಟಿಯಾಗಿರುತ್ತದೋ, ಅದರಂತೆ ಪಾರಮಾರ್ಥ ಜ್ಞಾನವು ಗಟ್ಟಿಯಾಗಬೇಕು. ತನ್ನ ದೇಹವು ತನಗೆ ಕಾಣದಂತಾಗಬೇಕು. ತಾನು ಹುಟ್ಟಿರುವೆ ಎನ್ನುವ ನೆನಪು ಅಡಗಬೇಕು.





ಗುರುವು ಒಂದು ಅನುವಿನಿಂದ ಹೇಳುತ್ತಾನೆ, ತಾನು ಒಂದು ಅನುವಿನಿಂದ ತಿಳಿದುಕೊಳ್ಳಬೇಕು. ತಿಳಿಯುತ್ತ ಹೋದ ಹಾಗೆ ಭಗ್ಗನೆ ಹೊಳೆದರೆ ಹೊಳೆಯಿತು, ಇಲ್ಲದಿದ್ದರೆ ಇಲ್ಲವೇ ಇಲ್ಲ.

ಗುರು, ವೇದ, ದೈವ ಇವು ಮೂರೂ ತನ್ನ ನಿಜವನ್ನೇ ಅನುಸರಿಸುವವು. ತನ್ನ ನಿಜ ಮತ್ತು ಇವು ಮೂರೂ ಏಕವಿರುತ್ತವೆ. ಆದ್ದರಿಂದ ದೇವರು ಗುರು ವೇದ ನೋಡಲಿಕ್ಕೆ ಹೋಗಬೇಡ, ನಿನ್ನ ನಿಜವನ್ನು ಮಾತ್ರ ನೋಡು.

ವಿಚಾರವಂತ ಜೀವನು ತನು ಮನ ಧನಗಳನ್ನು ಬಲ್ಲ ಗುರುವಿಗೆ ಒಪ್ಪಿಸಿ ಸುವಿಚಾರದಲ್ಲಿ ತೊಡಗುವನು. ಗುರುಗಳು ಪ್ರಸನ್ನ ಚಿತ್ತರಿದ್ದಾಗ ಉಪಹಾರ ಪಾಣಿಯಾಗಿ ಸಾಷ್ಟಾಂಗ ನಮಸ್ಕಾರ ಹಾಕಿ ವಿನಯದಿಂದ ತನಗಿರುವ ದುಃಖದ ಬಿಡುಗಡೆಯ ಮಾರ್ಗವನ್ನು ಕೇಳುವನು. ಶಿಷ್ಯನು ಕಜ್ಜಾಯವನ್ನು ತಂದು ಗುರುವಿಗೆ ಒಪ್ಪಿಸಿ, ಗುರು ಕೊಟ್ಟಷ್ಟು ಊಟ ಮಾಡಬೇಕು. ಪುನಃ ಊರೊಳಗೆ ಕಜ್ಜಾಯಕ್ಕೆ ಹೋಗಬಾರದು.

ಹಿತಾಹಿತ, ನಿತ್ಯಾನಿತ್ಯ ವಿವೇಕ ಹುಟ್ಟಿತೆಂದರೆ ವಿಷಯದಲ್ಲಿ ವಿರಕ್ತಿಯು ಹುಟ್ಟುವದು, ಅಂದರೆ ಹೇಸಿಕೆ ಹುಟ್ಟುವದು. ವಿರಕ್ತಿ ಹುಟ್ಟಿದ ನಂತರ ಶಮೆ ಅಂದರೆ ಪ್ರಸಿದ್ಧವಾದ ಮನಶಾಂತಿ ಹುಟ್ಟುವದು, ಅದರಿಂದ ಮೋಕ್ಷದ ಮೇಲೆ ಅಪೇಕ್ಷೆ ಹುಟ್ಟುವದು, ಅದು ಗುರುಸೇವೆಯನ್ನು ಎಡೆಬಿಡದೇ ಮಾಡಿಸುವದು, ಗುರುಸೇವೆಯಿಂದ ವೇದಾರ್ಥ ಜ್ಞಾನವಾಗುವದು, ಅದರಿಂದ ಶರೀರಾದಿಗಳು ಎಂದೆಂದಿಗೂ ಇಲ್ಲವೆಂದು ಜ್ಞಾನವಾಗುವದು ಮತ್ತು ತಾನು ಆತ್ಮನೆಂಬ ತಿಳುವಳಿಕೆಯುಂಟಾಗುವದು, ಆಗ ಪ್ರಮಾಣಾತೀತ ಸುಖವುಂಟಾಗುವದು. ಜಗತ್ತು ಮಿಥ್ಯವೆಂದು ಮತ್ತು ದುಃಖವೆಂದು ವಿರಕ್ತಿ ತಾಳಿ, ಮನಸ್ಸನ್ನು ಎತ್ತೂ ಹರಿಯಗೊಡದೆ ಆತ್ಮನಲ್ಲಿ ನಿಲ್ಲಿಸುವ ಅಭ್ಯಾಸ ಮಾಡಿದರೆ ಮುಕ್ತಿ ಲಭಿಸುವದು. ಶ್ರವಣ ಮನನ ನಿದಿಧ್ಯಾಸನ ಮಾಡುವಾಗ ಮೂರು ವಿಘ್ನಗಳು ಬಂದು ಕಾಡುವವು. ಶ್ರವಣ ಮಾಡುವಾಗ ಪೂರ್ವ ಕಾಲದಲ್ಲಿ ತನಗಿದ್ದ ಹೆಂಡತಿ, ಮಕ್ಕಳು, ಹೊಲಮನೆ ನೌಕರಿ, ಅಧಿಕಾರ, ಮಾನ ಮರ್ಯಾದೆ ಮುಂತಾದವುಗಳ ನೆನಪು ಬಂದು ಆತ್ಮಜ್ಞಾನವಾಗಗೊಡುವದಿಲ್ಲ. ಅವು ಮನಸ್ಸಿಗೆ ಇರಿದು ಕಾಡಹತ್ತುವವು. ಈ ಹಿಂದಿನ ನೆನಪನ್ನು ಸತ್ಸಂಗ, ವಿವೇಕದಿಂದ ಕಳೆದುಕೊಳ್ಳಬೇಕು. ವಿಷಯವೆಂದರೆ ದುಃಖ, ಆತ್ಮನೆಂದರೆ ಸುಖವೆಂದು ತಿಳಿದುಕೊಳ್ಳಬೇಕು. ಇದೇ ಕ್ರಿಯೆ.

ಒಬ್ಬರನ್ನೂ ಹತ್ತಿರ ಬರಗೊಡಬಾರದು. ತಾನು ಒಬ್ಬರ ಹತ್ತಿರ ಹೋಗಬಾರದು. ಸತತ ಅರುವಿನಾಕಾರವೃತ್ತಿಯನ್ನು ಮಾಡಬೇಕು, ಸತತ ಬ್ರಹ್ಮಚಿಂತನೆ ನಡೆಸುವವರು ನಿಷ್ಕಂಟಕ ಸ್ಥಾನದಲ್ಲಿರಬೇಕು. ತನ್ನ ಹಸಿವು ತನಗೆ ತಿಳಿಯದಂತಾಗಬೇಕು. ಶಾಸ್ತ್ರವನ್ನು ಹೇಳುತ್ತಾರೆ, ಆದರೆ ಅದನ್ನು ಅನುಭವಕ್ಕೆ ತೆಗೆದುಕೊಳ್ಳುವದು ತನ್ನೊಬ್ಬನದೇ ಕೆಲಸ. ಸಾಧನ ಚತುಷ್ಟಯ ಸಂಪನ್ನನಿಲ್ಲದಿದ್ದರೆ ಇದು ತಿಳಿಯುವದಿಲ್ಲ, ತಿಳಿಸಿ ಹೇಳುವದು ಗುರುಗಳ ಕೆಲಸ, ತಿಳಿದು ಅನುಭವಿಸುವದು ಶಿಷ್ಯನ ಕೆಲಸ. ತನ್ನ ನಿಜದ ಬಗ್ಗೆ ವಿಚಾರ ಮಾಡುವಾಗ ಮನಸ್ಸು ಪೂರ್ಣ ನಿರ್ಮಲವಿದ್ದರೆ, ಚಕಮಕಿಯ ಕಿಡಿಯು ದೂದಿಯ ಮೇಲೆ ಕುಳಿತ ಹಾಗೆ ಜ್ಞಾನವಾಗುವದು.

ಜಗತ್ತಿನಲ್ಲಿ ಮೋಹಿಸದೆ ಎಲ್ಲವನ್ನು ಬಿಡಬಹುದು. ಆದರೆ 'ನಾನು' ಎಂಬ ಅಹಂಕಾರವನ್ನು ಬಿಡುವದು ಅತಿ ಕಠಿಣವಿದೆ. ಇದು ಯಾರಿಗೆ ಸಾಧ್ಯವಿದೆಯೋ ಅವರಿಗೆ ಪರಮಾತ್ಮನೆನ್ನಬೇಕು. ಹೊತ್ತಿಗೆ ಬೇಡಿದ್ದನ್ನು ತಯಾರು ಮಾಡುವ ಆಳುಗಳೂ, ಹೆಂಡಿರು ಮಕ್ಕಳು, ಕೈಕಾಲು ಹಿಚುಕುವ ಬಂಧುಬಾಂಧವರೂ, ಸರಿಯಾದ ಔಷಧ ಕೊಟ್ಟು ರೋಗವನ್ನು ಗುಣಮಾಡುವ ವೈದ್ಯರೂ, ಅನುವು ಆಪತ್ತುಗಳಲ್ಲಿ ದುಡ್ಡಿನ ಸಹಾಯ ಮಾಡುವ ಗೆಳೆಯರೂ, ದೇವಲೋಕದ ಅಪ್ಸರೆಯನ್ನು ಹಿಂದೂಡುವಂಥ ನವತರುಣಿ, ಪತಿವ್ರತೆಯರಲ್ಲಿ ಶಿಖಾಮಣಿ, ಕಲಿತ, ನುರಿತ ಜಾಣ ಹೆಂಡತಿ ಇದ್ದರೂ, ಇವೆಲ್ಲವನ್ನು ವೈರಾಗ್ಯ ತಾಳಿ ಹುಲ್ಲಿಗೆ ಸಮವಮಾಡಿ ಬಿಡಬಹುದು, ಆದರೆ ಅಹಂಕಾರವನ್ನು ಬಿಡುವದು ಕಠಿಣವಿದೆ. ಯೋಗಮಾಡಿ ಅಣಿಮಾದಿ ಸಿದ್ಧಿಪಡೆದು ಅನೇಕ ಪವಾಡಗಳನ್ನು ಮಾಡಿ ತೋರಿಸಬಹುದು, ಶಾಪಾನುಗ್ರಹಶಕ್ತಿಯನ್ನು ಉಪಯೋಗಿಸಬಹುದು. ಆದರೆ ಒಳಗಿರುವ ಅಹಂಕಾರವನ್ನು ಬಿಡುವದು ಅತಿ ಕಠಿಣವಿದೆ. ಜ್ಞಾನವಿದ್ದಲ್ಲಿ ಅಹಂಕಾರವಿರುವದಿಲ್ಲ, ಅಹಂಕಾರವಿದ್ದಲ್ಲಿ ಜ್ಞಾನವಿರುವದಿಲ್ಲ. ಎಲ್ಲವನ್ನು ಬಿಡಬಹುದು. ಆದರೆ ನಾನು ಬಿಟ್ಟಿರುವೆ, ತಿಳಿದಿರುವೆ ಅನ್ನುವದನ್ನು ಬಿಡುವದು ಕಠಿಣವಿದೆ. ಶಾಸ್ತ್ರ ಕಲಿತು ಅಹಂಕಾರಿಯಾಗಬಾರದು. ಇದರಿಂದ ಮೊದಲಿನಂತೆ ಕತ್ತೆ, ನರಿ, ನಾಯಿ ಜನ್ಮ ಬರುತ್ತವೆ. ಓದಿದ ಕತ್ತೆಯಾಗುವನು. ಜಗತ್ತನ್ನು ಮರೆ, ಸತ್ಯವನ್ನು ಅರಿ.

ಕಲಿತರೆ ಲೌಕಿಕ ವಿದ್ಯೆಗಳು ಬಂದೇ ಬರುವವು. ಬ್ರಹ್ಮವಿದ್ಯೆಯು ಮಾತ್ರ ದೇವಾನುದೇವತರಿಗೂ ಸಾಧ್ಯವಿಲ್ಲ. ವಿಷಯದಲ್ಲಿ ದುಃಖವಿದೆಯೆಂದು ತಿಳಿದರೆ ನಿಜವಾದ ವೈರಾಗ್ಯವು, ಇಂಥ ನಿಜವಿರಕ್ತರ ಸಂಪತ್ತಿನಲ್ಲಿ ಕೋಟಿ ಭಾಗದೊಳಗೆ ಒಂದು ಭಾಗವಾದರೂ ರಾಜ ಮಹಾರಾಜರ ಸಂಪತ್ತು ಸರಿ ಎನಿಸುವದಿಲ್ಲ, ನಿಜವಾದ ವೈರಾಗ್ಯ ಸಂಪತ್ತಿದ್ದರೆ ಯಾರ ಭಯವೂ ಇಲ್ಲ. ಆತ್ಮಜ್ಞಾನದಿಂದಲೇ ದುಃಖವು (ಪಾಪವು) ಪೂರ್ಣ ನಾಶವಾಗುವದು. ಆತ್ಮಜ್ಞಾನವಿಲ್ಲದೆ ಮುಕ್ತನಾಗುವದಿಲ್ಲ. ವೇದಾಂತ ಶಾಸ್ತ್ರವೊಂದರಲ್ಲಿಯೇ ಆತ್ಮಜ್ಞಾನವು ದೊರೆಯುವದು. ಅಪುತ್ರಸ್ಯ ಗತಿರ್ನಾಸ್ತಿ ಎಂದಿರುವರು. ಅಂದರೆ ತಾನು ಗುರುಪುತ್ರನಾದರೆ, ಜ್ಞಾನಪುತ್ರನನ್ನು ಹಡೆದರೆ ಗತಿ.

ಜಡವೆಂದರೆ ಜೀವನು, ಜಡಾಜಡವೆಂದರೆ ಅಂತರಾತ್ಮನು, ಅಜಡವೆಂದರೆ ಪರಮಾತ್ಮನು. ಆತ್ಮಧ್ಯಾನವನ್ನು ಮಾಡಬೇಕಾದರೆ ವಿಷಯಾಪೇಕ್ಷೆಯನ್ನು ಕಳೆದುಕೊಳ್ಳಬೇಕು. ನೀನು ಶರೀರವಲ್ಲೆಂದು, ಆತ್ಮನೇ ನೀನೆಂದು ಧ್ಯಾನಿಸು, ಮನ ಬುದ್ಧಿ ಚಿತ್ತ ಅಹಂಕಾರಗಳು ತಾನಲ್ಲವೆಂದು ತಿಳಿದು, ಅವುಗಳನ್ನು ಬಿಟ್ಟು, ಆತ್ಮನ ಧ್ಯಾನವನ್ನು ಮಾಡುವ ಮನಸಾದಿಗಳನ್ನು ಅರಿಯುವ ಅರಿವು ನೀನು, ಅರಿವಿನ (ಚೈತನ್ಯದ) ಧ್ಯಾನದಿಂದಲೇ ಮುಕ್ತಿಯಾಗುವದು. ಅಂತಃಕರಣವನ್ನು ಕೇವಲ ಚೈತನ್ಯದಲ್ಲಿಯೇ ಮುಳುಗಿಸಬೇಕು. ಮನಸ್ಸು ವಿಷಯಗಳ ಕಡೆಗೆ ಹೋಗದೇ ಆತ್ಮನಲ್ಲಿಯೇ ನೆಲೆನಿಲ್ಲಬೇಕು. ಇದೇ ಸುಖಾಸನವು. ಬ್ರಹ್ಮಚಿಂತನೆಯಲ್ಲಿ ಇದ್ದವನಿಗೆ ಬಾಹ್ಯದಲ್ಲಿ ಏನು ನಡೆದರೂ ಗುರ್ತಾಗುವದಿಲ್ಲ. ತಾನು ಮಾಡಿದ್ದು ತನಗೇ ಗುರ್ತಿರುವದಿಲ್ಲ. ಇದನ್ನು ನಿತ್ಯ ಸಾಧಿಸಿದರೆ ಮುಕ್ತನಾಗುವಿ. ಮನಸಾದಿ ಅಂತಃಕರಣಕ್ಕೆ





ನೀನು ಸಾಕ್ಷಿಯಾಗಿರುವಿ. ದೇಹಪಾತವಾಗುವವರೆಗೆ ಎಲ್ಲದರಲ್ಲಿ ತಾನಿದ್ದು, ಯಾವುದನ್ನೂ ಹಚ್ಚಿಕೊಳ್ಳದೆ, ಚೈತನ್ಯದಲ್ಲಿಯೇ ಇರಬೇಕು, ಅಂದರೆ ಜೀವತ್ವ ನೀಗುತ್ತದೆ. ಪ್ರತಿಬಿಂಬ ಜೀವಾತ್ಮನನ್ನು ತೆಗೆದು ಬಿಂಬ ಚೈತನ್ಯದಲ್ಲಿ ಮನವಿಡು. ಒಂದೂ ವಿಷಯದ (36 ತತ್ತ್ವ) ನೆನಪು ತೆಗೆಯದೆ ಆತ್ಮಚಿಂತನೆಯಲ್ಲಿ ತೊಡಗು. ಬೇಕಾದಂಥ ಆಪತ್ತು ಬಂದರೂ ತಮ್ಮ ಸ್ವರೂಪದ ಸ್ಥಿತಿಯನ್ನು ಮರೆಯಬಾರದು.

ಅಡ್ಡಾಡುವ ಕಾಲಕ್ಕಾದರೂ ಸಮಾಧಿಯಿಂದ ಕೇವಲ ಅರುವಿನಲ್ಲಿರುವವರಿಗೆ ದಾರಿಯಲ್ಲಿ ಏನು ಬಂದರೂ ಕಾಣಿಸುವದಿಲ್ಲ. ಕೂತರೂ, ನಿಂತರೂ, ತಿರುಗಾಡಿದರೂ, ಮಲಗಿಕೊಂಡರೂ, ಉಣ್ಣುವಾಗಲೂ, ಏನು ಕೆಲಸ ಮಾಡಿದರೂ ಅರುವಿನ ಕಡೆಗೆ ಲಕ್ಷ್ಯ ಮಾಡಿದರೆ ಅದೇ ಸವಿಕಲ್ಪ ಸಮಾಧಿಯು. ಸುಂದರ ಸ್ತ್ರೀಯು ಬಂದರೆ ಆಕೆಯನ್ನು ಕಾಣದೆ ಕೇವಲ ಅರಿವಿನಿಂದ ನೋಡಬೇಕು, ನಾಮ ರೂಪ ಕ್ರಿಯೆ ತೆಗೆದು ಅಸ್ತಿ ಭಾತಿ ಪ್ರಿಯವನ್ನೇ ಅನುಸಂಧಾನ ಮಾಡಬೇಕು, ಅಂದರೆ ನಾಮರೂಪ ತೆಗೆದು ನೋಡಿದರೆ ಏನೂ ಕಾಣುವದಿಲ್ಲ. ಇದನ್ನೇ ಜೋರುಮಾಡಿ ಅರುವಿನ ವಿಚಾರದಲ್ಲಿದ್ದದ್ದಾದರೆ ಯಾವದೂ ಕಾಣಿಸುವದಿಲ್ಲ. ಶಬ್ದ ಸ್ಪರ್ಶ ರೂಪ ರಸ ಗಂಧ ಯಾವದೂ ತಿಳಿಯುವದಿಲ್ಲ. ಏಕಾಂತದಲ್ಲಿ ಕುಳಿತು ಸಮಾಧಿಯನ್ನು ಸಾಧಿಸಬೇಕು. ಬುದ್ಧಿಯಿಂದ ತಿಳಿಯಲಿಕ್ಕೆ ಹೋಗಿ ಕೆಡುತ್ತೀ, ಬುದ್ಧಿಯನ್ನು ಬಿಟ್ಟು ಸ್ವರೂಪದಲ್ಲಿ ನಿಂತುನೋಡು. ತಾನೇ ಸಚ್ಚಿದಾನಂದ ಸ್ವರೂಪನಿದ್ದೇನೆಂದು ನಿಶ್ಚಯವಾದದ್ದೇ ಸಮಾಧಿಯು. ಧಾರಾಪಾತ್ರೆಯ ನೀರಿನಂತೆ ಒಂದು ಸೆಕೆಂಡು ಸಹ ಸವಡು ಕೊಡದೆ ಅರುವಿನಲ್ಲಿ ತದಾಕಾರನಾಗಬೇಕು. ಈ ಸಂಸಾರವನ್ನು ಕೆಡಿಸಬೇಕಾದರೆ ಸಮಾಧಿಯೇ ಬೇಕು. ಕನ್ನಡಿಯನ್ನೂ ಅದರಲ್ಲಿದ್ದ ಮುಖವನ್ನೂ ಬಿಟ್ಟು ತನ್ನ ನಿಜಕ್ಕೆ ಹೊರಳಿಸಿದಂತೆ, ಅಂತಃಕರಣವನ್ನು ತೆಗೆದರೆ ಸಾಕು, ಜೀವಾತ್ಮನೂ ಪರಮಾತ್ಮನೂ ಏಕವಾದುದೇ ಸಮಾಧಿಯು, ನಿನ್ನ ಬುದ್ಧಿಯೇ ಎರಡು ಚೇತನ ಮಾಡಿರುವದು, ತಾನು ಬೇರೆ, ಪರಮಾತ್ಮ ಬೇರೆ ಎಂದು ತಿಳಿದುಕೊಂಡಿರುವದು. ಉಪ್ಪಿನ ಗೊಂಬೆ ಸಮುದ್ರದ ಆಳವನ್ನು ನೋಡಲಿಕ್ಕೆ ಹೋಗಿ ಅಲ್ಲಿಯೇ ಕರಗಿದಂತೆ, ಜೀವನು ಸಾಕ್ಷೀ ಗುರ್ತು ಹಚ್ಚಲು ಹೋಗಿ ಶಿವನಾದನು. ಅವಸ್ಥಾತ್ರಯಗಳನ್ನು ನುಂಗಿ, ಜೀವತ್ರಯಗಳನ್ನು ನುಂಗಿ, ಪರಮಾನಂದದಿಂದ ಇರುವೆನೆಂಬ ನೆನಪೂ ಸಹಿತ ಮರೆತು ನಿಲ್ಲುವದೇ ಸಮಾಧಿಯು. ಮೈಗೆಲ್ಲ ಹುತ್ತ ಬೆಳೆದರೂ, ಹಾವು ಚೇಳು ಸುತ್ತಿದರೂ, ಜಡೆಯಲ್ಲಿ ಗುಬ್ಬಿ ಮನೆಮಾಡಿಕೊಂಡರೂ, ಭಾನವಿಲ್ಲದೆ ಹಳ್ಳದ ವಂಡಿಯಲ್ಲಿ ಸಿಕ್ಕರೂ, ಪರಿಚಯವಿಲ್ಲದ ಸ್ಥಿತಿಯೇ ಸುಖಪೂರಿತ ನಿಜ ಸಮಾಧಿಯು. ಸ್ಥೂಲ ಸೂಕ್ಷ್ಮ ಹೋಗಿ, ಸುಷುಪ್ತಿಯ ಅವಿದ್ಯೆಯು ಹೋಗಿ, ಅನಂತರ ಮಾಯಾತನುವುಳ್ಳದ್ದೇ ತೂರ್ಯವು, ಪ್ರತ್ಯಗಾತ್ಮನ ಬುದ್ಧಿಕೃತ್ಯವೇ ತೂರ್ಯವು. ಸಮಾಧಿ ಎಂದರೂ ತೂರ್ಯಸ್ಥಿತಿ ಎಂದರೂ ಒಂದೇ. ಕೋಟಿ ಜನ್ಮದಲ್ಲಿ ತಪಸ್ಸು ಮಾಡಿದರೂ ಸಮಾಧಿಯಾಗುವದಿಲ್ಲ. ಈ ಜಗತ್ತಿನ ತಿಳುವಳಿಕೆ ನಾಶಮಾಡಿ ಮನೆಯಲ್ಲಿದ್ದರೇನು, ಮಠದಲ್ಲಿದ್ದರೇನು, ಎಲ್ಲಿದ್ದರೇನು, ಅವನೇ ಸಮಾಧಿ ಹೊಂದುವನು. ಜಗತ್ತಿರುವದೆಂಬ ಹೊರಗಿನ ತಿಳುವಳಿಕೆ, ಸಚ್ಚಿದಾನಂದ ತಾನೆಂಬ ಒಳಗಿನ ತಿಳುವಳಿಕೆ, ಎರಡೂ ಹೋದರೆ ಭಗ್ಗನೆ ಸಮಾಧಿ ಹತ್ತುವದು, ಇದೇ ನಿರ್ವಿಕಲ್ಪ ಸಮಾಧಿ.

ನಾಮರೂಪ ಜಗತ್ತು ಮತ್ತು ದೇಹದ ಆಶೆಯನ್ನು ಬಿಡಬೇಕು. ಇಲ್ಲದಿದ್ದರೆ ಅಧ್ಯಾತ್ಮವು ಸಾಧಿಸುವದಿಲ್ಲ. ಜನನ ಮರಣ ತಪ್ಪುವದಿಲ್ಲ. ಯಾರು ವಿಷಯಗಳಿಗೆ ಸಾಕ್ಷೀಯಾಗಿರುವರೋ ಅವರಿಗೆ ಯಾವುದೇ ಕರ್ಮವು ಏನನ್ನೂ ಮಾಡಲಾರದು, ಇಲ್ಲದಿದ್ದರೆ ಕರ್ಮವು ಕಾಲುಹಿಡಿದು ಎಳೆಯುತ್ತದೆ. ಆದ್ದರಿಂದ ಸರ್ವಕ್ಕೆ ಸಾಕ್ಷಿಯಾಗಿ ನಿಲ್ಲಬೇಕು. ತೂರ್ಯದಲ್ಲಿ ತನ್ನ ದೇಹದ ಖಬರು ತನಗೇ ಇರುವದಿಲ್ಲ, ತೂರ್ಯದ ಸುಖದಲ್ಲಿಯೇ ಕೆಲವು ದಿನ ಇದ್ದು, ನಂತರ ಬೈಲಿಗೆ ಬರುತ್ತಾರೆ, ಬೋಧವನ್ನು ಮಾಡುತ್ತಾರೆ. ಉತ್ತಮಾಧಿಕಾರಿಗೆ ಶ್ರವಣಕಾಲಕ್ಕೆ ಸಮಾಧಿಯು ಸಾಧಿಸುವದು. ಅವನಿಗೆ ವ್ಯಾವಹಾರಿಕ ಜಾಗ್ರವು ಸ್ವಪ್ನವಾಗುವದು. ಜ್ಞಾತೃವು ಹೋದ ಕೂಡಲೇ ದೃಶ್ಯವೂ ಹೋಯಿತು, ಬರೇ ಅರುವೇ ಉಳಿಯಿತು. ಆತ್ಮಸಾಕ್ಷಾತ್ಕಾರವಾದರೆ ಜೀವಾತ್ಮನು ಸತ್ತಂತೆಯೇ. ಭೇದ ಅಳಿದುದೇ ಸಮಾಧಿಯು. ಗಾಢನಿದ್ರೆಯಲ್ಲಿ ಅಜ್ಞಾನದಿಂದ ಏನೂ ತಿಳಿಯಲಿಲ್ಲವೆಂದು ಹೇಳುತ್ತಾನೆ. ಅಲ್ಲಿ ಚಿದಾಭಾಸನನ್ನು ಕಳೆದು ಸ್ವಯಂಜ್ಯೋತಿ ಇರುವನು. ಸಮಾಧಿಯಲ್ಲಿ ಅರುವು ಇದ್ದು, ಏನೂ ಗೊತ್ತಿರುವದಿಲ್ಲ. ತೂರ್ಯ ಸಾಧನೆ ಮಾಡಿ ನಿರ್ವಿಕಲ್ಪ ಸಮಾಧಿ ಹೊಂದಿದ್ದೇ ನಿರ್ಗುಣವು. ನಿದ್ರೆಯಲ್ಲಿ ಬುದ್ಧಿಯು ಮರವೆಯಲ್ಲಿ ಅಡಗಿ ಆನಂದವಾಗುವದು, ಸಮಾಧಿಯಲ್ಲಿ ಬುದ್ಧಿಯು ಅರುವಿನಲ್ಲಿ ಅಡಗಿ ಆನಂದವಾಗುವದು. ಮರನಿದ್ರೆಯಲ್ಲಿ ಬುದ್ಧಿಯು ಅವಿದ್ಯೆಯಲ್ಲಿ ಅಡಗುವದರಿಂದ ಬೀಜರೂಪದಿಂದಿರುವದು, ಎಚ್ಚರಾದ ಕೂಡಲೆ ಮತ್ತೆ ಏಳುತ್ತದೆ. ಆದರೆ ಬುದ್ಧಿಯನ್ನು ಜಾಗ್ರದಲ್ಲಿ ಲಯಪಡಿಸಿದರೆ, ಬೀಜ ಗಿಡ ಎರಡೂ ನಾಶವಾದಂತೆ, ಜ್ಞಾನವೆಂಬ ಬೆಂಕಿಯಿಂದ ಸುಟ್ಟು ನಾಶವಾಗುತ್ತದೆ.

ತೂರ್ಯವು ನಿನ್ನ ನಿಜವನ್ನು ತೋರಿಸಿ ಮಾಯವಾಗುವದು. ಬ್ರಹ್ಮ ಸತ್ಯಂ ಜಗನ್ಮಿಥ್ಯಾ ಎಂಬ ಬುದ್ಧಿಯೇ ತೂರ್ಯವು, ತನ್ನ ಅಚ್ಚ ಅರುವಿನ ಸ್ವಚ್ಛ ರೂಪದಲ್ಲಿ ತದೇಕನಾಗಿ ಏನೊಂದೂ ಇಲ್ಲದೆ, ತಾನೇನೂ ಆಗದೆ, ತಾನೇ ತಾನಾಗಿ ಆನಂದವನ್ನು ಸವಿದುಣ್ಣುತ್ತ, ಲುಪ್ತತೆ ಹೊಂದಿದುದೇ ತೂರ್ಯಾತೀತಾವಸ್ಥೆಯು. ತಾನು ಪರಮಾತ್ಮನೆಂಬ ತಿಳುವಳಿಕೆಯೇ ತೂರ್ಯವು, ಈ ಭಾವದ ಮರೆಯುವಿಕೆಯೇ ತೂರಿಯಾತೀತಾವಸ್ಥೆಯು.



# ಜ್ಞಾನ

ಪ್ರಬಲ ಶೃತಿಯು ನೀನು ಬ್ರಹ್ಮ ಇದ್ದೀ (ತತ್ವಂ ಅಸಿ) ಎಂದೇ ಹೇಳುತ್ತಿರುವದು. ಪಾರಮಾರ್ಥವಾಗಿ ಯಾವುದೇ ದೇಶ, ಕಾಲ, ವರ್ಣಾಶ್ರಮದವನೆಂದು ಹೇಳುವದಿಲ್ಲ. ನಾಮರೂಪ ಮಿಥ್ಯೆ. ನೀನು ಸತ್ಯವೆಂದು ತಿಳಿದುಕೊ. 'ತತ್' ಎಂದರೆ ಬ್ರಹ್ಮ. 'ತ್ವಂ' ಎಂದರೆ ನೀನು, 'ಅಸಿ' ಅಂದರೆ ಇದ್ದೀ. ಜೀವ ಸುಳ್ಳು, ಬ್ರಹ್ಮವೇ ಸತ್ಯವಿರುವದು.

"ನಾನು ಪ್ರತಿಬಿಂಬನಲ್ಲ, ಮೂಲಬಿಂಬನು; ಜಡ, ಅಜಡ, ಜಡಾಜಡ ದೃಶ್ಯಗಳಲ್ಲಿ ಸಿಲುಕದ ಶುದ್ಧ ಪರಮಾತ್ಮನೇ ನಾನು" ಎಂಬ ಭಾವವನ್ನು ತೆಗೆದು ನಿಲ್ಲುವದೇ ಆತ್ಮಜ್ಞಾನದ ಸ್ಥಿತಿಯು. ಏನಾದರೂ ತಿಳಿದರೆ ಜೀವನೆಂದು ತಿಳಿ. ಅರುವು ಇದ್ದು ತಿಳಿಯದಿದ್ದುದೇ ಪರಮಾತ್ಮ. ಅಂತಃಕರಣವಿದ್ದಲ್ಲಿ ಜೀವ-ಪರಮಾತ್ಮರಿಬ್ಬರೂ ಇರುವರು. ಅಂತಃಕರಣವಿಲ್ಲದಿದ್ದಲ್ಲಿ ಪರಮಾತ್ಮನೊಬ್ಬನೇ ಇರುವನು.

ಮನಸ್ಸಿನಲ್ಲಿ ಹೊಳೆದ ಆತ್ಮನ ಛಾಯೆಯೇ ಜೀವಾತ್ಮನು. ಕನ್ನಡಿಯಲ್ಲಿ ಮುಖ ಕಾಣುತ್ತದೆ. ಕಂಡರೂ ಅದು ಪ್ರತಿಬಿಂಬವೇ. ಏನನ್ನೇ ತಿಳಿದರೂ ಜೀವಾತ್ಮನೇ ತಿಳಿಯುತ್ತಾನೆ. ಪರಮಾತ್ಮನು ಏನನ್ನೂ ತಿಳಿಯುವದಿಲ್ಲ. ಒಣ ಕಂಬದಲ್ಲಿ ಬರೇ ಅರುವಿದೆ. ಹಸಿಯ ಗಿಡದಲ್ಲಿ ಜೀವ ಪರಮಾತ್ಮರಿಬ್ಬರೂ ಇರುತ್ತಾರೆ. ಜಾಗ್ರ ಸ್ವಪ್ನ ಸುಪ್ತಿ ತೂರ್ಯಗಳಲ್ಲಿ ಜೀವಾತ್ಮನಿರುವನು. ಅರುವಿಗೆ ಅವಸ್ಥೆಗಳಿಲ್ಲ, ಅರುವಿನಲ್ಲಿ ಅನ್ಯ ಕಲ್ಪನೆ ಇಲ್ಲ.

ಆತ್ಮನ ಪಂಚ ಲಕ್ಷಣಗಳು ಸತ್ತು, ಚಿತ್ತು, ಆನಂದ, ನಿತ್ಯ, ಪರಿಪೂರ್ಣ. ನಾನು ತಿಳಿಯುತ್ತೇನೆ, ತಿಳಿಯೆನು ಎಂಬಲ್ಲಿಯೂ, ಕಾಮಕ್ರೋಧ ವಿಪತ್ತಿ ತೋರುವಲ್ಲಿಯೂ ತೋರದಲ್ಲಿಯೂ, ಜಾಗ್ರ ಕನಸು ಗಾಢನಿದ್ರೆ ಎಂಬ ಮೂರು ಅವಸ್ಥೆಗಳಲ್ಲಿಯೂ, ಅವುಗಳ ಆಗುಹೋಗುಗಳಲ್ಲಿಯೂ, ತನಗೆ ಒಂದೂ ಬಾಧೆ ಇಲ್ಲದ ಇರುವಿಕೆಯೇ ಸದ್ರೂಪವು. ಎಲ್ಲ ಅವಸ್ಥೆಗಳು ಬರುವವು, ಅವುಗಳನ್ನು ಇದಿರಿಟ್ಟು ತಿಳಿಯುವವವನು ತಾನು ಎಂದು ತಿಳಿದಿರುವದೇ ಚಿದ್ರೂಪವು. ಎಲ್ಲಕ್ಕಿಂತಲೂ ತಾನೇ ಪ್ರಿಯನು, ಆದ್ದರಿಂದ ತಾನು ಆನಂದರೂಪನು, ಅನಾತ್ಮ ವಸ್ತುಗಳು ಉದಯಾಸ್ತವಾದರೂ, ಅವುಗಳಂತೆ ತಾನು ಬರುವದನ್ನು ಹೋಗುವದನ್ನು ಮಾಡದೆ ಸತತೋದಿತ ಇರುವದೇ ಆತ್ಮನ ನಿತ್ಯತ್ವ ಲಕ್ಷಣವು. ತೋರದೆ ಅಡಗದೆ ಇರುವದೇ ನಿತ್ಯತ್ವವು. ಆತ್ಮನ ಹೊರತು ಅನ್ಯವೇನೂ ಇಲ್ಲ. ಅವನಲ್ಲಿ ಯಾವುದೇ ಅನ್ಯ ಪದಾರ್ಥಗಳಿಲ್ಲ. ಅಜ್ಞಾನದಿಂದ ಆತ್ಮನ ಆಧಾರದ ಮೇಲೆ ಅವಸ್ಥಾದಿಗಳು ಇದ್ದಂತೆ ತೋರುತ್ತವೆ. ಆದ್ದರಿಂದ ಆತ್ಮನು ಪರಿಪೂರ್ಣನು. ಸತ್ತು ಇದ್ದಲ್ಲಿ ಆನಂದವಿದೆ, ಚಿತ್ತು ನಿತ್ಯ ಪರಿಪೂರ್ಣಾದಿಗಳು ಇದ್ದೇ ಇರುತ್ತವೆ, ಪಂಚಲಕ್ಷಣ ಹೇಳಿದರೂ ಕಲ್ಪಿಸಿ ಹೇಳಿದ್ದು, ತಿಳಿಸಲಿಕ್ಕೆ ಹೇಳಿದ್ದು. ಇಲ್ಲದಾಗಿಯೂ ತೋರಿ ಅಡಗುವದಕ್ಕೆ ಮಾಯಾ, ಪ್ರಕೃತಿ, ಭ್ರಾಂತಿ, ಕಲ್ಪಿತ ಹೀಗೆ ಅನೇಕ ನಾಮಗಳಿವೆ. ನಿದ್ರೆಯಲ್ಲಿ ತೋರಿಕೆಯು ಅಡಗುವದು, ಜಾಗ್ರದಲ್ಲಿ ಮತ್ತೆ ತೋರುವದು. ಅದು ಅಂದರೆ ಸ್ವರ್ಗ, ಇದು

ಎಂದರೆ ಇಹಲೋಕ, ಇದೆಲ್ಲ ಕಂಡದ್ದು ಥೇಟ ಸುಳ್ಳಿದೆ. ನೀನೇ ಖರೆ, ನೀನೇ ಆನಂದ. ಇದನ್ನುಳಿದು ಸ್ವರ್ಗದ ಅಮೃತ ಆನಂದವೆಂದರೆ ತಪ್ಪು. ಯಾಕೆಂದರೆ ಅದು ಕಾಮಧೇನುವಿನ ಹಾಲು ಕ್ಷೀಣವಾಗಿ ಹೋಗುತ್ತದೆ. ಅದನ್ನು ಉಂಡರೆ ಮುಗಿಯುವದಿಲ್ಲ. ಪುಣ್ಯ ತೀರಿದ ಮೇಲೆ ಬಿಟ್ಟು ಇಲ್ಲಿಗೆ ಬರಬೇಕಾಗುವದು.

ಮನಸ್ಸಿದ್ದರೆ ಕಿವಿ ಕೇಳುತ್ತದೆ. ಕಣ್ಣು ನೋಡುತ್ತದೆ. ಆದರೆ ಜೀವಾತ್ಮನು ಸುಮ್ಮನೆ ಇರುತ್ತಾನೆ. ಮನಸ್ಸೇ ಎಲ್ಲ ಕಾರಭಾರವನ್ನು ಮಾಡುತ್ತದೆ. ಆದ್ದರಿಂದ ಮನಸ್ಸಿಗೆ ಬಂಧವು, ಆತ್ಮನಿಗೆ ಕೈಗಳಿಲ್ಲ. ನಿನಗೆ ಕೊಡುವ ನರಕವಿಲ್ಲ. ಮನಸ್ಸಿನಿಂದ ಕರ್ತವ್ಯವಲ್ಲದೆ ಸ್ವಯಂ ಆತ್ಮನಲ್ಲಿ ಕರ್ತವ್ಯವಿಲ್ಲ. ಆತ್ಮನು ಕರ್ಮದ ಕರ್ತಾ ಅಲ್ಲ. ಅವನು ಏನೂ ಕ್ರಿಯೆಯನ್ನು ಮಾಡುವದಿಲ್ಲ. ಆತ್ಮನು ಸಾಕ್ಷೀ ಸ್ವರೂಪನು.

ಇಂದ್ರಜಾಲ, ಮಹೇಂದ್ರಜಾಲ, ಜಾದೂ ಆಟದಂತೆ ಇದೆಲ್ಲವೂ ತೋರಿ ಅಡಗುವದು. ತನ್ನ ಸ್ವರೂಪದ ಕಡೆಗೆ ಲಕ್ಷ್ಯ ಕೊಟ್ಟರೆ ಈ ಮಾಯೆಯೆಂಬುದು ಇಲ್ಲವೇ ಇಲ್ಲ. ಇದೆಲ್ಲವೂ ನಿನ್ನ ಭಾವದ ಬಳಿಕೆಯು, ಇದು ಇರುವವರೆಗೆ, ನೀನು ನಿನ್ನ ನಿಜಸ್ವರೂಪವನ್ನು ಅನುಸರಿಸುವದಿಲ್ಲ, ದುಃಖವು ತಪ್ಪುವದಿಲ್ಲ. ಈಗ ಜಗತ್ತು ಹಗ್ಗದಲ್ಲಿ ತೋರಿದ ಹಾವಿನಂತಿದೆ. ಇಲ್ಲದ್ದರಲ್ಲಿ ಮೋಹವನ್ನು ಇಟ್ಟಿರುವದು, ಭಯ ಪಡುವದು ಸುಳ್ಳು, ಇದೆಲ್ಲವೂ ಕಾಲ್ಪನಿಕವು.

ನಿನ್ನೆ ಹಗಲೆಲ್ಲ ಹೆಂಡಿರು ಮಕ್ಕಳು ಕೂಡಿ, ಅನೇಕ ಉದ್ಯೋಗ ವ್ಯವಹಾರ ಮಾಡಿ, ಬೇಸತ್ತು ದಣಿದು ಮಲಗಿಕೊಂಡು, ಕಣ್ಣು ಮುಚ್ಚುವಷ್ಟರಲ್ಲಿ ನಿದ್ರೆ ಹತ್ತಿತು. ಆಗ ಜಾಗ್ರದ ನಿನ್ನ ಸ್ಥೂಲದೇಹ, ಹೆಂಡಿರು ಮಕ್ಕಳು, ಉಳಿದ ವ್ಯವಹಾರಗಳು ಏನೂ ಇಲ್ಲ. ಆದರೆ ನೀನು ಮಾಯಾವೃತ್ತಿಯಿಂದ ಆನಂದವನ್ನು ಅನುಭವಿಸುತ್ತಲಿರುವಿ, ಮತ್ತೆ ಸ್ವಲ್ಪ ವೇಳೆಯಲ್ಲಿ ಕನಸನ್ನು ಕಾಣುವಿ. ಕನಸಿನಲ್ಲಿ ಜಾಗ್ರವಿಲ್ಲ. ಜಾಗ್ರದ ವ್ಯವಹಾರವಿಲ್ಲ. ಆದರೆ ಕನಸನ್ನು ನೋಡುವ ನೀನು ಇದ್ದೇ ಇರುವಿ. ಹೀಗೆ ಮೂರೂ ಅವಸ್ಥೆಗಳೂ, ಅವುಗಳಲ್ಲಿಯ ದೇಹ ವಿಷಯಗಳೂ ಬರುವವು, ಹೋಗುವವು. ಆದರೆ ನೀನು ಮಾತ್ರ ಸಾಕ್ಷೀಯಾಗಿರುತ್ತೀ, ಒಂದು ದೇಹ ಅವಸ್ಥೆ, ಅವುಗಳ ಧರ್ಮ, ಇನ್ನೊಂದು ದೇಹ ಅವಸ್ಥೆಗೆ ಇರುವದಿಲ್ಲ. ನೀನು ಮಾತ್ರ ಎಲ್ಲ ದೇಹ ಅವಸ್ಥೆಗಳಿಗೆ ವಿಲಕ್ಷಣನಾಗಿ ಇರುವಿ. ನಿದ್ರೆಯಲ್ಲಿ ಆತ್ಮನು ಎಚ್ಚರವಿರುವನು, ಆದ್ದರಿಂದಲೇ ನಿದ್ರೆಯನ್ನು ತಿಳಿದಿರುವನು. ಸೂರ್ಯನು ಎಂದೂ ಓಡಿಲ್ಲ, ಮೋಡಗಳೇ ಓಡಿರುವವು, ಇದನ್ನೆಲ್ಲ ಚಿದಾಭಾಸನನ್ನು ಲಕ್ಷಿಸಿ ಹೇಳಬೇಕಾಗಿದೆ. ಮೂರವಸ್ಥೆಗಳು ನಿನ್ನ ಸ್ವರೂಪದಲ್ಲಿಲ್ಲ, ಇರುವವೆಂದು ಭಾವಿಸುವದೇ ಭ್ರಮೆಯು. ಇವುಗಳನ್ನು ಪೂರ್ಣ ಅಭಾವ ಮಾಡಿದವನೇ ಆರೂಢನು, ಅವನು ಬರೇ ಅರುವಾಗಿಯೇ ಉಳಿದಿರುವನು.

'ನಾನು' ಎಂಬುದು ಎಲ್ಲಿ ಇದೆಯೋ ಅಲ್ಲಿ ಹಲವಾಕಾರವಿರುವದು. ಗಾಢನಿದ್ರೆಯಲ್ಲಿ ಹಲವಾಕಾರವಿಲ್ಲ, ಜಾಗ್ರ ಸ್ವಪ್ನಗಳಲ್ಲಿದೆ. ಗಾಢನಿದ್ರೆಯಲ್ಲಿ ನಿರಾಕಾರವಿದೆ. ಜಾಗ್ರದಲ್ಲಿ ಸ್ಥೂಲವಾಗಿ ಮತ್ತು ಕನಸಿನಲ್ಲಿ ಸೂಕ್ಷ್ಮವಾಗಿ ನಾನತ್ವವು ತೋರುವದು. ಗಾಢನಿದ್ರೆಯಲ್ಲಿ ಅಡಗಿ ಏನೂ ಕಾಣಿಸುವದಿಲ್ಲ. ಆತ್ಮನ ಹೊರತು ಯಾವುದಕ್ಕೂ





ಇರುವಿಕೆಯಿಲ್ಲ. ವ್ಯಾವಹಾರಿಕ ಎಚ್ಚರಿಕೆಗೆ ಬಂದಾಗ ಅಂತಃಕರಣವೇ ದೇಹೇಂದ್ರಿಯ ವಿಷಯಾಕಾರವಾಗುವದು. ಇದಕ್ಕೆ 'ನಾನು' 'ನಾನು' ಎನ್ನುತ್ತೇವೆ. ಅಂತಃಕರಣವೇ ಪರಮಾತ್ಮನ ಸತ್ತೆಯಿಂದ ಎಲ್ಲ ಅವಯವ ಆಗುವದು. ನಿನ್ನ ನಿಜಸ್ವರೂಪದಲ್ಲಿ ಏನೂ ಇಲ್ಲ. ಈ ಹಲವಾಕಾರವೇ ತಾನೆಂದು ತಿಳಿದು, ಸತ್ಯವೆಂದು ಭಾವಿಸಿ, ಅದರಲ್ಲಿಯೇ ಸುಖವಿರುವದೆಂದು ಜೀವನು ನಂಬಿದ್ದಾನೆ. ತಾನು ಇದ್ದೇನೆ ಎನ್ನುವದು ಒಂದು ಭ್ರಾಂತಿ. ಹುಲಿಯನ್ನು ಕಂಡರೆ ಅದು ತಾನೇ ಎಂದು ನಿಶ್ಚಿತ ತಿಳಿಯಬೇಕು. ಎಲ್ಲವೂ ನಾನೇ ಎಂದು ತಿಳಿದರೆ ಮೋಹ, ಭಯ ಏನೂ ಇಲ್ಲ. ಸರ್ವ ಬ್ರಹ್ಮಾಂಡವೆಲ್ಲ ಬ್ರಹ್ಮಮಯ (ಆತ್ಮಮಯ ಅಂದರೆ ತಾನೇ) ಎಂದು ತಿಳಿದಾಗ ಜ್ಞಾನವು ನೆಲೆಗೊಂಡಿತೆಂದು ತಿಳಿಯಬೇಕು. ಒಟ್ಟಿನ ಮೇಲೆ ಎಲ್ಲವೂ ನಾನೇ, ಹೀಗೆ ಸರ್ವಾತ್ಮ ಭಾವ ದೃಢೀಕರಿಸಿ ತಾದ್ಯಾತ್ಮ ಭಾವ ಹೊಂದುವ ಅಭ್ಯಾಸ ಮಾಡಬೇಕು. ಎಲ್ಲವೂ ನಾನೆಂದು ತಿಳಿದರೆ ಆರೊಡನೆ ವೈರತ್ವ, ಆರೊಡನೆ ಮಿತ್ರತ್ವ, ತನಗೆ ತಾನೇ ವೈರಿ, ತನಗೆ ತಾನೇ ಮಿತ್ರ.

ಅರುವು ತಾವೆಂದು ತಿಳಿಯದವರು ಅತ್ಯಂತ ದಡ್ಡರು. ಅರುವೇ ತಾವೆಂದು ತಿಳಿದುಕೊಂಡವರು ಜಾಣರು. ಆತ್ಮಾನಾತ್ಮ ವಿಚಾರ ಮಾಡುವದೇ ಕುಶಲಬುದ್ಧಿ, ಇದರಿಂದ ತೀವ್ರ ತಿಳಿಯುತ್ತದೆ. ವಿಚಾರಿಸಿದರೆ ಶರೀರವೇ ನರಕ. ಅರುಮಯವಾದರೆ ಇಂಥ ಶರೀರಕ್ಕೆ ಬರುವದಿಲ್ಲ. ಆತ್ಮ ವಿಚಾರದಲ್ಲಿರುವದೇ ಜಾಗ್ರವು. ಆತ್ಮನನ್ನು ಅನುಭವಿಸುವದೇ ನಿಜಜಾಗ್ರವು.

ತಾನು ಚೈತನ್ಯರೂಪನಿದ್ದು, ಜಡದೇಹಕ್ಕೆ ನಾನು ಅಂದಾಗ ಅಜ್ಞಾನಿಯಾಗುವನು. ಸ್ವರೂಪವನ್ನು ಅರಿಯಬೇಕಾದರೆ "ನಾನಿದ್ದೇನೆ" ಎಂಬ ಮತ್ತು 'ಇದು' ಎಂಬ ತಿಳುವಳಿಕೆ ಇರಬಾರದು. ಈ ಜ್ಞಾನ ಜೀವತ್ವವಾಯಿತು. ಅರುವು ಇದ್ದು ಅದರ ಮರವೆಯಾಗಬೇಕು, ಎಲ್ಲಿಯವರೆಗೆ ಈ ದೇಹವು ನೀನು, ಇದು ಜಗತ್ತು ಎಂಬ ಭೇದಭಾವವು ಅಳಿದುಹೋಗುವದಿಲ್ಲವೋ ಅಲ್ಲಿಯವರೆಗೆ ಜ್ಞಾನವಾಗುವದಿಲ್ಲ. ಕಲಿತಂಥ ಶಾಸ್ತ್ರ ಪಠಣದಿಂದ ಹೇಳುವದು ಕೇಳುವದು ಬಂದೇ ಬರುತ್ತದೆ. ಬರೇ ಶಾಸ್ತ್ರ ಕಲಿತಿದ್ದೇನೆ, ಹೇಳುತ್ತೇನೆ, ಅಂದರೆ ಅದು ಆಶಾಬಡಕರದು. ಬಾಯಿಲೆ ಬ್ರಹ್ಮವ ನುಡಿದರೆ ಜ್ಞಾನಿಯಾಗುವನೇನು? ಬಿಸಿಲ್ಗುದುರೆಯ ನೀರಿದ್ದಂತೆ ಜಗತ್ತುಂಟು, ಇದನ್ನು ಬ್ರಹ್ಮಸ್ವರೂಪವೆಂದು ತಿಳಿಯಲು, ನಾಮ ರೂಪ ಕ್ರಿಯೆ ತೆಗೆದು ಅಸ್ತಿ ಭಾತಿ ಪ್ರಿಯವನ್ನೇ ನೋಡಬೇಕು.

ಮಣ್ಣು ನೀರು ಹೇಗೆ ಬೇರೆ ಬೇರೆ ಎಂದು ತಿಳಿದಿರುವೆವೋ, ಹಾಗೆ ಶರೀರಕ್ಕೂ ನಾನು ಬೇರೆ ಇದ್ದೇನೆಂದು ತಿಳಿಯಬೇಕು. ಶರೀರವು ಅನ್ನ ನೀರಿನಿಂದ ಸಪ್ತಧಾತುವಾಗಿ ಬಲಿತು, ಕಡೆಗೆ ಮಣ್ಣು ಮಣ್ಣಿನಲ್ಲಿ ಕೂಡುತ್ತದೆ. ಅಂತಃಕರಣ ಮಾಡಿದ್ದಕ್ಕೆ ನಾನೇ ಮಾಡಿದ್ದೇನೆ ಅನ್ನುವನು, ಇದು ತುಂಬಿಕೊಂಡು ಜನ್ಮ ತೆಗೆದುಕೊಳ್ಳುವದಕ್ಕೆ ಕಾರಣವಾಗುತ್ತದೆ. ಅಂತಃಕರಣವು ನಾಶವಾದರೆ ಜನ್ಮವಿಲ್ಲ.

ತನ್ನನ್ನು ತಾನು ತಿಳಿವಲ್ಲಿ ಪ್ರಮಾಣವು ಬೇಕಿಲ್ಲ, ತನಗನ್ಯವನ್ನು ತಿಳಿಯಬೇಕಾದರೆ ಪ್ರಮಾಣವು ಬೇಕು. 'ನಾನು ಇದ್ದೇನೆ' ಎನ್ನುವದನ್ನು

ತಿಳಿದುಕೊಳ್ಳುವದಕ್ಕೆ ಯಾವ ಸಾಧನವೂ ಬೇಕಾಗಿಲ್ಲ. ಅರುವಿನಿಂದ ಅರುವನ್ನು ತಿಳಿದು, ಅರುವಿನಲ್ಲಿಯೇ ಎರಕತೆಯನ್ನು ಹೊಂದಬೇಕು. ನಿನ್ನ ಎದುರಿಗೆ ನೀನು ಬರುವದಿಲ್ಲ, ಏಕೆಂದರೆ ನೀನು ಅರುವು, ಅರುವು ಅರುವಿನ ಎದುರಿಗೆ ಬರುವದಿಲ್ಲ. ವಿಷಯಗಳನ್ನು ತಿಳಿಯುವಾಗ ಜೀವನು, ತನ್ನನ್ನು ತಾನು ತಿಳಿಯುವಾಗ ತಾನೇ ಶಿವನು, ಅಹಂಕಾರವಿದ್ದರೆ ತಾನೇ ಜೀವ, ಅಹಂಕಾರ ತೆಗೆದರೆ ತಾನೇ ಶಿವನು.

ಎಷ್ಟು ಶಾಸ್ತ್ರ ಬರೆದರೂ, ಇಷ್ಟೇ ತಿಳಿಯುವದಕ್ಕೆ ಹೊರತು ಬೇರೆ ಇಲ್ಲ. ನೀನು ಒಬ್ಬನೇ ಇದ್ದೀ, ಉಳಿದುದೆಲ್ಲವೂ ಕಲ್ಪನಾಮಯವು, ಇದನ್ನು ಯಾವನು ತಿಳಿಯುತ್ತಾನೋ ಅವನು, ನಾನು ಹುಟ್ಟಿರುವೆ, ಸಾಯುತ್ತೇನೆ, ಪಾಪಿ, ಪುಣ್ಯವಾನ ಇತ್ಯಾದಿ ಭಾವವು ಸುಳ್ಳೆಂದು ಗಟ್ಟಿಮಾಡಿಕೊಳ್ಳುವನು. ಸ್ವರ್ಗ, ನರಕ, ಯಮ, ಇನ್ನೊಬ್ಬ, ಮತ್ತೊಬ್ಬ ಎಂಬುವದು ಎಲ್ಲವೂ ಸುಳ್ಳು, ಪುಣ್ಯ ಯಾರಿಗೆ ಮಾಡುತ್ತೀ, ಪಾಪ ಯಾರಿಗೆ ಮಾಡುತ್ತೀ? ಇದೆಲ್ಲವೂ ಸುಳ್ಳು. ಇದೆಲ್ಲವನ್ನು ಒದ್ದು, ಗೆದ್ದುನಿಂತು, ಎಂದೆಂದೂ ಕೆಡದಂಥ, ಯಾವುದರ ಕಲಂಕವೂ ಇಲ್ಲದಂಥ, ಆತ್ಮನನ್ನು ತಿಳಿದು ಸಕಲ ಸಂಸಾರದ ಅತ್ಯಂತ ದುಃಖವನ್ನು ಕಳೆದುಕೊಳ್ಳಬೇಕು. ಭವರೋಗದ ಹುಚ್ಚು ಹೋಗಬೇಕಾದರೆ ಸದ್ಗುರುವೇ ಡಾಕ್ಟರನು, ಶಾಸ್ತ್ರಬೋಧೆಯೇ ಔಷಧ, ಹೀಗೆ ಮಾಡಿದರೆ ಭವರೋಗದ ಹುಚ್ಚು ಹೋಗುತ್ತದೆ, ಇಲ್ಲದಿದ್ದರೆ ಎಂಭತ್ನಾಲ್ಕು ಲಕ್ಷ ಜೀವಿಗಳಾಗಿ ತಿರುಗುವ ಕಾಲ ಬರುತ್ತದೆ.

ಆತ್ಮನ ಹೊರತು ಜಡ ಪದಾರ್ಥಗಳು ಒಂದೂ ಇರಲಾರವು. ಉಳಿದುದೆಲ್ಲವೂ ತೋರಿಕೆಯು. ಎಲ್ಲಿ ನೋಡಿದರೂ ತಾನೇ ಇದ್ದಾನೆ. ಇಷ್ಟು ತಿಳಿದುಕೊಂಡು ಸುಮ್ಮನಿದ್ದರೆ ಮುಗಿಯಿತು. ಇದೇ ಮುಕ್ತಿಯ ಇರುವು. ಬಹಳ ಶಾಸ್ತ್ರ ಓದಿ, ತಲೆಕೆಟ್ಟು ಹುಚ್ಚು ಹಿಡಿದು ತಿರುಗುತ್ತಾರೆ. ಇದೆಲ್ಲವೂ ಭ್ರಮೆಯೆಂದು ತಿಳಿಯಬೇಕು. ತಾನೊಬ್ಬನಿದ್ದಲ್ಲಿ ರಾಗ ದ್ವೇಷಗಳಿಲ್ಲ. ತನಗನ್ಯವಿಲ್ಲದ್ದರಿಂದ ಯಾವುದರ ಮೇಲೆ ರಾಗ ದ್ವೇಷ ಮಾಡಬೇಕು.

ಆತ್ಮನಲ್ಲಿ ಸ್ವಗತ ಸಜಾತೀಯ ಮತ್ತು ವಿಜಾತೀಯ ಭೇದಗಳಿಲ್ಲ. ಆತ್ಮನಿಗೆ ಅವಯವಗಳಿಲ್ಲ, ಆದ್ದರಿಂದ ಸ್ವಗತ ಭೇದವಿಲ್ಲ. ಆತ್ಮನಂತೆ ಬೇರೆ ಆತ್ಮರಿಲ್ಲ, ಆದ್ದರಿಂದ ಸಜಾತಿಯ ಭೇದವಿಲ್ಲ. ಆತ್ಮನಿಗೆ ಅನ್ಯವಾಗಿ ಅನಾತ್ಮವಿಲ್ಲ, ಆದ್ದರಿಂದ ವಿಜಾತೀಯ ಭೇದವಿಲ್ಲ, ಅಜ್ಞಾನಾದಿ ಇಲ್ಲ, ತಾನೊಬ್ಬನೇ ಇರುವನು. ಹೀಗೆ ತಾನು ಭೇದತ್ರಯರಹಿತನು. ಇಲ್ಲದಲೇ ಈ ಜಗತ್ತು ಇಷ್ಟು ಬಂಧುರವಾಗಿ ತೋರುವದು. ಅಜ್ಞಾನದ ಭ್ರಮೆಯಲ್ಲಿ ಜಗತ್ತು ತೋರುವದು. ಉಪಾಧಿಯಿಂದ ಜೀವಿಗಳು ಬೇರೆ ಬೇರೆ ಆದರೂ, ಉಪಾಧಿಯನ್ನು ತೆಗೆದರೆ ಚೇತನವು ಒಂದೇ ಇರುತ್ತದೆ, ಅನೇಕ ಆತ್ಮರೆಂಬುವದು ಸುಳ್ಳು, ಖರೇ ಆನೆಯು ಕನ್ನಡಿಯಲ್ಲಿಯ ಸುಳ್ಳಾನೆಯನ್ನು ಕಂಡು ಅತ್ತ ಇತ್ತ ಹೊಯ್ದಾಡುವ ಸೊಂಡೆಯನ್ನು ನೋಡಿ, ಸಿಟ್ಟಿಗೆದ್ದು ಮುಸುಗುಟ್ಟುತ್ತ ಬಡಿದಾಡಲಿಕ್ಕೆ ಹೋದರೆ ಹೇಗೆ ತಪ್ಪೋ, ಅದರಂತೆ ಅಂತಃಕರಣದ ಧರ್ಮಗಳನ್ನು ಹಚ್ಚಿಕೊಂಡು, ಇತರರೊಡನೆ ಬಡಿದಾಡಲಿಕ್ಕೆ ಹೋಗುವದೂ ಹಾಗೇ ಇದೆ. ನಾಮರೂಪ ಕ್ರಿಯೆಗಳು ಕನ್ನಡಿಯಲ್ಲಿಯ ಪ್ರತಿಬಿಂಬಗಳಂತೆ ಇವೆ.





"ಏಕಮೇವಾದ್ವಿತೀಯಮ್ ಬ್ರಹ್ಮ" ಎಂದು ಹೇಳಿದರೆ ಸ್ವಗತಾದಿ ಭೇದಗಳನ್ನು ದೂರೀಕರಿಸಿದಂತೆ. ಉಳಿಮೆಗೆ ಪೆರತಾಗಿ ಎಲ್ಲವನ್ನು ನೇತಿಗಳೆಯುತ್ತ ಹೋಗಲಾಗಿ ಪರಮಾತ್ಮನೇ ಉಳಿಯುವನು.

ಅರುವನ್ನು ಮಾಡಲಿಕ್ಕೆ ಯಾರಿಗೂ ಬರುವದಿಲ್ಲ, ತನ್ನಿಂದ ತಾನೇ ಇದೆ. ಆಕಾಶವು ಒಂದಕ್ಕೂ ಒಳಗಾಗದಂತೆ ಇರುವದು, ಎಲ್ಲವೂ ಅದರಲ್ಲಿ ತೋರಿ ಅಡಗುವದು, ಅದು ಯಾವುದಕ್ಕೂ ಅಂಟಿಲ್ಲ. ಉತ್ಪತ್ತಿ ಸ್ಥಿತಿ ಲಯಗಳಿಗೆ ಶರೀರವೇ ಗುರಿ, ಆತ್ಮನಲ್ಲ. 'ಅಜ' ಎಂದರೆ ಬ್ರಹ್ಮ ('ಅ' ಎಂದರೆ ಇಲ್ಲ. 'ಜ' ಎಂದರೆ ಹುಟ್ಟುವಿಕೆ) ಹುಟ್ಟುವಿಕೆ ಇಲ್ಲದ್ದೇ ಬ್ರಹ್ಮವು. ನಾನು ಈಗ ಹುಟ್ಟಿರುವೆ, ಮುಂದೆ ಸಾಯುವೆ ಎಂದು ತಿಳಿದರೆ ಅವನು ನರಕದ ಹುಳುವೆಂದು ತಿಳಿಯಬೇಕು. ಅರುವೇ ತಾವೆಂದು ತಿಳಿಯುವವರು ಜಾಣರು, ಅರುವು ತಾವೆಂದು ತಿಳಿಯದವರು ದಡ್ಡರು. ನೀನು ಏನನ್ನು ಕೂಡಿಕೊಂಡಿರುವಿಯೋ ಅದು ನೀನಲ್ಲ. ದೇಹಕ್ಕೂ ನಿನಗೂ ಏನೂ ಸಂಬಂಧವಿಲ್ಲ. ನೀನು ಮನ ಬುದ್ಧಿಗಳನ್ನು ಕೂಡಿಕೊಂಡಿರುವಿ. ಅವು ನೀನಲ್ಲ, ಶರೀರದೊಳಗಿನ ಗಾಳಿಯು ಹೋದಕೂಡಲೇ ಶರೀರವು ಬೀಳುತ್ತದೆ, ಸತ್ತನು ಎನ್ನುವರು. ನೀನು ಸತ್ತಿಲ್ಲ, ನಿನಗೆ ಹುಟ್ಟು ಸಾವುಗಳಿಲ್ಲ, ತೊಗಲ ತಿತ್ತಿ ಹುಟ್ಟಿತು, ಗಾಳಿಯು ಶರೀರವನ್ನು ಹೊತ್ತಿದೆ.

ನೋಡುವ ನೇತ್ರವೇ ಪ್ರಮಾಣ, ನೋಡಿಸಿಕೊಳ್ಳುವ ದೇಹವೇ ಪ್ರಮೇಯ, ಇವಕ್ಕೆ ಆಶ್ರಯದಾತನೇ ಪ್ರಮಾತೃ, ಅಂದರೆ ಜೀವ. ಮಾನವೇ ಸತ್ವವು, ಮೇಯವೇ ತಮವು, ಎರಡರ ಮಿಶ್ರಣವೇ ರಜವು. ಹೀಗೆ ತ್ರಿಪುಟಿ ಇದ್ದಲ್ಲಿ ಗುಣವಿರುತ್ತವೆ, ನಿರ್ಗುಣದಲ್ಲಿ ಏನೂ ಇಲ್ಲ.

ಹಗ್ಗದಂತೆ ಆತ್ಮನು, ಹಾವಿನಂತೆ ಜಗತ್ತು. ಜೀವ, ಈಶ್ವರ ಇವು ಒಮ್ಮೆಲೇ ತೋರಿದವು. ಮಾಯೆಯ ಭಾದೆಯು ಆತ್ಮನಿಗಿಲ್ಲ. ನಾನು ಹುಟ್ಟುತ್ತೇನೆ, ಸಾಯುತ್ತೇನೆ ಎನ್ನುವದೇ ಸುಳ್ಳು, ಜಾಗ್ರವು ಕನಸಿನಂತಿದೆ. ಅದರಿಂದ ಎಚ್ಚರವಾದಾಗ (ತೂರ್ಯವನ್ನು ಹೊಂದಿದಾಗ) ಅದರ ಬಾಧೆ ಇಲ್ಲ. ನಾಮ ರೂಪ ಕ್ರಿಯೆ ಎನ್ನುವದು ಏನೂ ಇಲ್ಲ, ಯಾಕೆಂದರೆ ಮಾಯೆಯೇ ಇಲ್ಲ. ಆದ್ದರಿಂದ ಎಲ್ಲವೂ ಇಲ್ಲ, ಸ್ವಪ್ನದಲ್ಲಿಯ ಸುಖ ದುಃಖಗಳು ಜಾಗ್ರದಲ್ಲಿ ದುಃಖವನ್ನು ಕೊಟ್ಟಿಲ್ಲ. ಆಕಾಶದಲ್ಲಿ ಪಕ್ಷಿಗಳು ಹಾರಾಡಿದರೆ ನಿನಗೇನಾಗಿಲ್ಲ, ಹೀಗೆ ನೀನಿರುವಿ. ಹಕ್ಕಿಗಳು ಹಾರಾಡಿದರೂ, ಗಾಳಿ ಬೀಸಿದರೂ, ವಿಮಾನ ಹಾಯ್ದರೂ, ಹಗಲು ರಾತ್ರಿ ಬಂದಿಳಿದರೂ, ಮಳೆ ಸಿಡಿಲು ಹಾಯ್ದರೂ ಗಗನಕ್ಕೇನು? ಹಾಗೆ ಆತ್ಮವಿದೆ.

ಇದ್ದಕ್ಕಿದ್ದಂಥ ವಸ್ತುವೆಂದರೆ ಆತ್ಮವೊಂದೇ, ಆತ್ಮನಿಗೆ ಭಿನ್ನವಾಗಿ ಏನೂ ಇಲ್ಲ, ಆತ್ಮವು ಎಂದೂ ಕೆಡುವದಿಲ್ಲ. ತನು ಮೊದಲು ಮಾಡಿಕೊಂಡು ಬಿಂದು ತತ್ವದವರೆಗೆ ಅನ್ಯವೆಲ್ಲವೂ ತೋರಿ ಅಡಗುತ್ತವೆ. ನಮಗೆ ತಿಳಿಯದಂತೆ ಅನ್ಯವೆಲ್ಲವೂ ವಿಕಾರಹೊಂದುತ್ತವೆ. ಪ್ರತ್ಯಕ್ಷ ವಿಕಾರ ನಡೆದಿದೆ. ಆದರೆ ನಮಗೆ ತಿಳಿದುಕೊಳ್ಳಲಿಕ್ಕೆ ಬರಲೊಲ್ಲದು. ಆದ್ದರಿಂದ ಇಂಥ ಅಜ್ಞಾನಿಗೆ ದುಃಖವಾಗುವದು ಬಿಟ್ಟೀತೇ? ಸಾಧ್ಯವಿಲ್ಲ. ಸ್ವರೂಪವನ್ನು ತಿಳಿದರೆ ಅದನ್ನು ಜೋಕೆ ಮಾಡಬೇಕೆಂಬುವದಿಲ್ಲ, ಅದು ಕೆಡುವದಿಲ್ಲ,

ಕಾವಲಿಲ್ಲ, ಖರ್ಚಿಲ್ಲ, ಸಾಕಾಯಿತು ಬೇಕಾಯಿತು ಎನ್ನುವದಿಲ್ಲ, ಹೋಗಿ ಬರುವದಿಲ್ಲ, ವಿಕಾರವಿಲ್ಲ.

ನೀನು ನಿರ್ದೇಹಿ ಇರುವೆ, ನಿನಗೆ ದೇಹವು ಇಲ್ಲದಲೇ ಕಾಣುವದು. ಸುಡುವ ಕನ್ನಡಿಯಲ್ಲಿ ಮುಖವನ್ನು ನೋಡಿಕೊಂಡರೆ ನಿನ್ನ ಖರೇ ಮುಖ ಮತ್ತು ಪ್ರತಿಬಿಂಬಿಸಿದ ಮುಖ ಸುಡುವದಿಲ್ಲ, ಕನ್ನಡಿಯೇ ಸುಡುವದು. ಇದರಂತೆ ಜೀವಾತ್ಮ ಪರಮಾತ್ಮರು ನಿರ್ವಿಕಾರಿಯಾಗಿರುತ್ತಾರೆ. ಅನೇಕ ಬಣ್ಣಗಳುಳ್ಳ ಕನ್ನಡಿಗಳನ್ನಿಟ್ಟರೆ ಅನೇಕ ಬಣ್ಣದ ರೂಪ ಕಂಡಂತೆ, ದೇವತರು ಮನುಷ್ಯರು ಪಶು ಪಕ್ಷಿ ಜೀವಿಗಳಾದವು, ಆದರೆ ಬಿಂಬ ಒಂದೇ.

ದೇಹವು ಆತ್ಮವಲ್ಲ, ದೇಹವೇ ನೀನಾದರೆ ನಿನ್ನನ್ನು ಬಿಟ್ಟು ಅದು ಮಣ್ಣುಪಾಲು ಆಗಬಾರದು. ಏಕೆಂದರೆ ಅದು ಹೆಣವಾಗುತ್ತದೆ. ನೀನು ದೇಹವೂ ಅಲ್ಲ, ದೇಹಕ್ಕೆ ಸಂಬಂಧಿಕನೂ ಅಲ್ಲ. ಕೆಲವರು ಒಂದೊಂದು ಇಂದ್ರಿಯಕ್ಕೆ ಆತ್ಮವೆನ್ನುವರು. ಇಂದ್ರಿಯಗಳು ಹೋದರೂ ಆತ್ಮನಿರುವನು. ಆದ್ದರಿಂದ ಇಂದ್ರಿಯವು ಆತ್ಮವಲ್ಲ. ಇಂದ್ರಿಯ ಸಮುದಾಯವೇ ಆತ್ಮವೆಂದರೆ ಅನೇಕ ಆತ್ಮಗಳಿದ್ದಂತಾಯಿತು. ಇಂದ್ರಿಯಗಳನ್ನು ನೀನು ತಿಳಿಯುವದರಿಂದ ನೀನು ಅವುಗಳಿಗೆ ಸಾಕ್ಷೀ ಇರುವಿ. ಮನ ಬುದ್ಧಿಗಳು ತಿಳಿಸಿಕೊಳ್ಳುವದರಿಂದ ಆತ್ಮವಾಗಲಾರವು. ಆಹಾರವು ಕಡೆಗೆ ಇದ್ದಾಗ ಬೇರೆ ಇದೆ ಎನ್ನುವರು, ಅದೇ ಅನ್ನವು ಹೊಟ್ಟೆಯಲ್ಲಿ ಹೋದಾಗ್ಗೆ ಅದಕ್ಕೆ ನಾವೇ ಎನ್ನುವರು, ಕುದಿಸಿ ಹೊಟ್ಟೆಗೆ ಹಾಕಿದರೆ ನಾವೇ ಎನ್ನುವರು. ಗಾಳಿ, ನೀರು, ಬೆಂಕಿಗಳೆಂಬ ಭೂತಗಳಿವೆ ಎಂಬುವವನೂ ಸುಳ್ಳು, ಅವೂ ಸುಳ್ಳು. ನಿದ್ರೆಯಲ್ಲಿ ಶರೀರದ ನೆನಪಿಲ್ಲ, ಆದ್ದರಿಂದ ಶರೀರವು ನೀನಲ್ಲ. ಹೀಗೆ ತಿಳಿದವನು ಉತ್ತಮನು. ತನಗೂ ತಿಳಿಯುವದಿಲ್ಲ, ತಿಳಿದವರು ಹೇಳಿದರೂ ಕೇಳುವದಿಲ್ಲ, ಇವನೇ ಕನಿಷ್ಠನು.

ಪ್ರಾಣಮಯ ಕೋಶವು ತಾನಲ್ಲ, ಗಾಳಿಗೆ ರೂಪವಿಲ್ಲ, ಕಾಣುವದಿಲ್ಲ, ಬೆಂಕಿಗಿಂತ ಆಚೆಗಿದೆ. ಆತ್ಮನಂತೂ ಮೂವತ್ತಾರು ತತ್ತ್ವಗಳ ಆಚೆಗಿರುವನು.

ಕಣ್ಣು ವಿಷಯಕ್ಕೆ ಸಾಕ್ಷೀ ಆಗಿದೆ. ಅದಕ್ಕೆ ಸೂಕ್ಷ್ಮ ಶರೀರವು ಕಾಣಿಸುವದಿಲ್ಲ. ಮನಸ್ಸು ಇಲ್ಲದಿದ್ದರೆ ಕಣ್ಣು ನೋಡುವದಿಲ್ಲ. ಇದರಿಂದ ಕಣ್ಣು ಮನಸ್ಸಿಗೆ ವಿಷಯವಾಯಿತು. ಸಂಶಯ ಮಾಡಿದ್ದೇ ಮನಸ್ಸು. ನನ್ನ ಮನಸ್ಸು ಎನ್ನುವಿರಿ. ಆದ್ದರಿಂದ ನೀವು ಮನಸ್ಸಿನಿಂದ ಎಷ್ಟೋ ದೂರ ಉಳಿದಿರಿ. ಸಂಕಲ್ಪ ವಿಕಲ್ಪವೇ ಮನಸ್ಸಿನ ವೃತ್ತಿಯು. ಎಷ್ಟು ಹೇಳಿದರೂ ಮನಸ್ಸು ಸಂಶಯಯುಕ್ತವೇ. ಮನಸ್ಸನ್ನು ತಿಳಿಯುವವರು ನೀವು. ಮಣ್ಣು ನೀರಿನಿಂದ ಕೂಡಿದ ದೇಹಕ್ಕೆ 'ನಾನು', 'ನನ್ನದು' ಎನ್ನುತ್ತಾರೆ.

ಬುದ್ಧಿಯು ನಿಶ್ಚಯಾತ್ಮಕವು, ಅದು ಜಗತ್ತಿದೆಯೆಂದು ಗಟ್ಟಿ ತಿಳಿದಿದೆ. ನನ್ನ ಬುದ್ಧಿಕೆಟ್ಟು, ತಲೆ ಕೆಟ್ಟಿದೆ ಅನ್ನಬೇಕಾದರೆ, ಆ ಬುದ್ಧಿಗೆ ನೀನು ಸಾಕ್ಷೀ ಇರುವಿ. ನೀನು ಬುದ್ಧಿಯನ್ನು ತಿಳಿಯುವದರಿಂದ ಬುದ್ಧಿಗೆ ಸಾಕ್ಷೀ ಇರುವಿ. ವಿಜ್ಞಾನಮಯ ಕೋಶದಲ್ಲಿ ಜೀವನಿರುವನು, ಇಲ್ಲಿ ಪಾಪ ಪುಣ್ಯವಿರುವದು. ಆದ್ದರಿಂದ ಎಲ್ಲ ಗೋಳು ಬುದ್ಧಿಯಲ್ಲಿಯೇ ಇರುವದು. ಬುದ್ಧಿಯನ್ನು ಬಿಟ್ಟರೆ ತೋರಿಕೆ ಇಲ್ಲ,





ಬುದ್ಧಿಯು ಕನ್ನಡಿಯಂತೆ ಸೂಕ್ಷ್ಮವಿದೆ, ಇಲ್ಲಿಯೇ ಚಿದಾಭಾಸನು ಪ್ರತಿಬಿಂಬಿತನಾಗಿರುವನು. ಮರಣಕಾಲಕ್ಕೆ ವಿಜ್ಞಾನಮಯ ಕೋಶವು ದೇಹದಿಂದ ಕಡೆಗೆ ಆಗುವದು, ನೀನು ವಿಜ್ಞಾನಮಯಕೋಶವನ್ನು ಇದಿರಿಟ್ಟು ತಿಳಿಯುತ್ತಿ, ನೆನಪಿಟ್ಟುಕೊಳ್ಳುವ ಚಿತ್ತವನ್ನು ನೀನೇ ತಿಳಿಯುವಿ, ಆದ್ದರಿಂದ ಚಿತ್ತವು ನೀನಲ್ಲ.

ಅಹಂಕಾರವು ಶರೀರವೇ 'ನಾನು', 'ನನ್ನದು' ಎನ್ನುವದು, ಈ ಅಹಂಕಾರವು ನಿದ್ರೆಯಲ್ಲಿಲ್ಲ. ಆದರೆ ನಿದ್ರೆಯಲ್ಲಿ ಆತ್ಮವಿದೆ, ಆದ್ದರಿಂದ ಅಹಂಕಾರವು ಆತ್ಮವಲ್ಲ, ಅದು ಜಡವಿದೆ. ಅಹಂಕಾರವು ಬೀಜರೂಪವಾಗಿ ಉಳಿದುಕೊಳ್ಳುತ್ತದೆ. ಇದರ ಬಲದಿಂದ ದುಡಿಯಬೇಕು, ಉಣ್ಣಬೇಕು, ಶರೀರವನ್ನು ಶೃಂಗಾರ ಮಾಡಬೇಕೆನಿಸುತ್ತದೆ. ವಿಷಯಗಳಲ್ಲಿ ವಾಸನೆಯನ್ನು ಇಟ್ಟದ್ದಾದರೆ, ಇದೇ ಬೀಜವಾಗಿ ಮುಂದೆ ಜನ್ಮ ಬರುವದು ತಪ್ಪುವದಿಲ್ಲ. ಪರಮಾತ್ಮನಲ್ಲಿ ಕರ್ತೃತ್ವ ಭೋಕ್ತೃತ್ವವಿಲ್ಲ. ಪರಮಾತ್ಮನಲ್ಲಿ ಜಗತ್ತನ್ನು ಕಲ್ಪಿಸಿದ್ದೇವೆ. ನೆನಪಿಟ್ಟದ್ದು ಚಿತ್ತು, ಅದನ್ನು ನೀನು ತಿಳಿಯುವದರಿಂದ ಚಿತ್ತಿಗೆ ನೀನು ಸಾಕ್ಷೀ ಇರುವಿ.

ಮರವೆಯೆಂಬುದು ನಿನಗೆ ಹತ್ತಿಲ್ಲ, ಏಕೆಂದರೆ ಮರವೆಯನ್ನು ನೀನು ತಿಳಿಯುತ್ತೀ, ನಿದ್ರೆಯಲ್ಲಿ ಏನೂ ತಿಳಿಯಲಿಲ್ಲವೆಂಬ ಅಜ್ಞಾನವನ್ನು ನೀನೇ ತಿಳಿಯುತ್ತೀ, ತ್ರಿಕಾಲದಲ್ಲಿಯೂ ನಿನಗೆ ಮರವೆಯು ಇಲ್ಲ. ನಿನ್ನ ಸ್ವರೂಪವು ಉಪಾಧಿಯಿಂದ ಜೀವಾತ್ಮವಾಗಿರುತ್ತದೆ.

ಒಂದೇ ಅಂತಃಕರಣವು ಮನ, ಬುದ್ಧಿ, ಚಿತ್ತ ಇತ್ಯಾದಿ ಆಗಿದೆ. ಇವು ಅಂತಃಕರಣದ ವೃತ್ತಿಗಳು, ಅಂತಃಕರಣವು ಜಡವು, ಆತ್ಮವಲ್ಲ, ಅವಿಚಾರಿಗೆ ಆತ್ಮ ಕಂಡಂತೆ ಕಾಣುತ್ತದೆ. ಇದು ಆತ್ಮನ ಛಾಯೆಯನ್ನು ತೆಗೆದುಕೊಂಡು ಜಗತ್ತಿನ ಕಾರ್ಯವನ್ನು ನಡೆಸುತ್ತದೆ. ಪಾಪವನ್ನು ಮಾಡಿ ನರಕವನ್ನು ಅನುಭವಿಸುತ್ತೇನೆ, ಪುಣ್ಯವನ್ನು ಮಾಡಿ ಸ್ವರ್ಗವನ್ನು ಅನುಭವಿಸುತ್ತೇನೆ ಎನ್ನುವದು ಅಂತಃಕರಣವೇ, ಇದು ವೇದ್ಯ, ವೇದಕ, ವೇತೃರೂಪವಿದೆ, ಪ್ರಕಾಶ್ಯವೂ ಇದೆ. ಆತ್ಮನು ಸ್ವಯಂಪ್ರಕಾಶನಿದ್ದಾನೆ. ಅಂತಃಕರಣವು ವೇದ್ಯವಾಗುವದು. ಅಂತಃಕರಣವನ್ನು ಪ್ರಕಾಶಿಸುವದರಿಂದ ಆತ್ಮನಿಗೆ ಪ್ರಕಾಶಯಿತೃ ಎನ್ನುವರು. ಅಂತಃಕರಣದಲ್ಲಿ ಜೀವ ಚೈತನ್ಯವು ಪ್ರತಿಬಿಂಬಿಸಿ, ಜೀವನೆನಸಿ ವ್ಯವಹಾರ ಮಾಡುತ್ತದೆ. ಅದು ಆತ್ಮನ ಚೇತನಸತ್ತೆಯನ್ನು ಪಡೆದು ನಾಲ್ಕು ವೃತ್ತಿಗಳಿಂದ ಜೀವನಿಗೆ ಮುಖ್ಯ ಸಾಧನವಾಗಿ ಪರಿಣಮಿಸುವದು. ಅಂತಃಕರಣವು ಜಾಗ್ರ ಸ್ವಪ್ನಗಳಲ್ಲಿ ದೇಹೇಂದ್ರಿಯ ವಿಷಯಾಕಾರವಾಗಿ ತೋರಿ, ಪ್ರಪಂಚವೆಂಬ ನಾಟಕದ ವಸ್ತುಗಳಾಗಿ, ಸುಷ್ಟಿಯಲ್ಲಿ ಅಜ್ಞಾನದಲ್ಲಿ ಲಯವಾಗುವದು. ಅಂತಃಕರಣದ ಉಪಾಧಿಯಿಂದ ಜೀವಾತ್ಮವು ಹೋಗುವದನ್ನೂ ಬರುವದನ್ನೂ ಮಾಡುವದು. ಅನೇಕ ಅವಸ್ಥೆ ತೋರಿದರೂ, ಎಷ್ಟು ಜನ್ಮ ತಿರುಗಿದರೂ ಕೂಟಸ್ಥನು ಇದ್ದಂತೆ ಇರುತ್ತಾನೆ. ಉಪಾಧಿಯು ಮಾತ್ರ ಇಹದಿಂದ ಪರಕ್ಕೆ, ಪರದಿಂದ ಇಹಕ್ಕೆ ಎಡತಾಕುವದು. ನೀನು ಬರುವವನೂ ಅಲ್ಲ, ಹೋಗುವವನೂ ಅಲ್ಲ. ಸ್ವರೂಪದಲ್ಲಿ ಉಪಾಧಿಯೇ ಇಲ್ಲ. ಅಂತಃಕರಣವು ಕರ್ತೃವಲ್ಲ, ಆತ್ಮವು ಕರ್ತೃವಲ್ಲ, ಕರ್ತೃತ್ವವು ಚಿದಾಭಾಸನಲ್ಲಿರುವದು. ಆತ್ಮನು ಕರಣ ರಹಿತನು,

ಕೇವಲ ಸುಖರೂಪನು, ವಿಚಾರಿಸಿದರೆ ನಿನ್ನಿರವು ಸೂರ್ಯ ಚಂದ್ರ ಬ್ರಹ್ಮಾದಿಗಳಿಗೂ ಗುರ್ತಿಲ್ಲ, ಅಂದಮೇಲೆ ಮೂರವಸ್ಥೆಯೊಳಗಿನ ವ್ಯವಹಾರದವರಿಗೆ ನಿನ್ನಿರವು ಸಿಗಬಹುದೇ?

ಇದ್ದಕ್ಕಿದ್ದಂಥ ವಸ್ತುವೆಂದರೆ ಆತ್ಮವೊಂದೇ. ಆತ್ಮವು ಎಂದೂ ಕೆಡುವದಿಲ್ಲ, ಅದು ತ್ರಿಕಾಲಾಬಾಧಿತವು, ಕಾಲವಿಲ್ಲದಿದ್ದರೂ ಆತ್ಮವು ಇರುತ್ತದೆ. ಗಾಢನಿದ್ರೆಯಲ್ಲಿ ಕಾಲವು ಅಡಗುವದು, ಕಾಲವನ್ನು ಅರಿಯುವ ಆತ್ಮವಿದೆ. ಜೀವನು ಇರುವವರೆಗೆ ಕಾಲವು ಬಂಜೆಯ ಮಗನಂತೆ ಇರುವದು. ಜೀವನು ನಾಶವಾದ ಕೂಡಲೇ ಕಾಲವು ನಾಶವಾಗುವದು, ಆತ್ಮವು ಮಾತ್ರ ಉಳಿಯುವದು, ಕಾಲವಿದ್ದಾಗ್ಯೂ ನಿಜವಾದ ಆತ್ಮವು ಇದ್ದೇ ಇರುತ್ತದೆ. ತಿಳಿದು ನೋಡಿದರೆ ಗುರ್ತಾಗುತ್ತದೆ, ಇದನ್ನು ವಿಚಾರ ಮಾಡಿ ನೋಡಿಕೊಳ್ಳಲಿಕ್ಕೆ ಬರಲೊಲ್ಲದು. ಸುಮ್ಮನೆ ಉದ್ದುದ್ದ ಶಾಸ್ತ್ರವನ್ನು ಓದುತ್ತಾರೆ. ತೋರತಕ್ಕದ್ದೆಲ್ಲವೂ ಮೊದಲೇ ಇಲ್ಲದ್ದು, ನಾಶದ ನಂತರ ಇಲ್ಲದ್ದು, ಅಂದಮೇಲೆ ನಡುವೆ ಹೇಗೆ ಖರೆ? ಇದಿರಿಟ್ಟು ತೋರುವಂಥದ್ದೆಲ್ಲ ಬರೇ ನಾಶವೇ, "ಯಾ ಮಾಯಾ ಸಾ ಮಾಯಾ" ಎಂಬಂತಿರುವದು. ಮಾಯೆಯೆಂದರೆ ತಾನೇ ಇಲ್ಲದಂಥಾದ್ದು, ಆದ್ದರಿಂದ ಏನೂ ಇಲ್ಲ, ನೀನೇ ಇರುವಿ.

ಅರುವು ಆರುಹಿಸಿಕೊಳ್ಳದು. ಒಂದುವೇಳೆ ಅರುಹಿಸಿಕೊಂಡರೆ ಜಡವಾದಂತಾಯಿತು. ಅದು ಎಲ್ಲವನ್ನೂ ತಿಳಿಯುವದು, ಆದರೆ ಯಾವದೂ ಅದನ್ನು ತಿಳಿಯಲಾರದು. ನೀನು ಏನನ್ನು ತಿಳಿಯುವಿಯೋ ಅದಕ್ಕೆ ನೀನು ಸಾಕ್ಷೀಯಾಗಿರುವಿ, ಅದು ನೀನಲ್ಲ. ಯಾವದು ನಿನ್ನ ಡುಬ್ಬದ ಮೇಲೆ ಬೆಳಗುವದೋ ಅದೇ ನೀನು, ಎಲ್ಲವನ್ನೂ ಬೆಳಗುವಂಥ ಚೈತನ್ಯವೇ ನೀನು. ದೇಹವು ಏನನ್ನೂ ತಿಳಿಯಲಾರದು. ವಿಶ್ವಜೀವನಾದ ನೀನು ಮನಸ್ಸು ಇಂದ್ರಿಯಗಳ ಮುಖಾಂತರ ಬಾಹ್ಯ ಪದಾರ್ಥಗಳನ್ನು ಅರಿಯುತ್ತೀ, ವಾಸನೆಯಿಂದ ತೈಜಸನಾಗಿ ಕಲ್ಪನಾಮಯವಾದ ಕನಸನ್ನು ತಿಳಿಯುವಿ, ಸುಷುಪ್ತಿಯಲ್ಲಿ ನಿದ್ರೆಯನ್ನು ಕೂಡಿಕೊಂಡು ಪ್ರಾಜ್ಞ ಜೀವನಾಗಿ, ಮಾಯಾಕರಣದಿಂದ ವಿಷಯಗಳಿಲ್ಲದೆ ಪರಮಾತ್ಮನ ಸುಖವನ್ನು ಅನುಭವಿಸುವಿ. ನಿದ್ರೆಯಿಂದ ಎಚ್ಚತ್ತಮೇಲೆ, ನಿದ್ರೆಯು ಆರಾಮವಿತ್ತು, ಏನೂ ತಿಳಿಯಲಿಲ್ಲ ಎನ್ನುವದನ್ನು ತಿಳಿಯುವವನೇ ನೀನು, ಅದನ್ನು ಸ್ಮರಿಸಿಕೊಂಡು ಹೇಳುತ್ತೇವೆ. ನಿದ್ರೆಗೆ ಭಿನ್ನವಾಗಿ ನೀನು ಸದಾ ಎಚ್ಚರವಾಗಿರುವಿ. ಸುಷುಪ್ತಿಯಲ್ಲಿ ಏನೂ ಇಲ್ಲವೆಂದರೂ ಅರಿವು ಇದೆ. ಆದ್ದರಿಂದಲೇ ಸುಖದಿಂದ ಮಲಗಿದ್ದೆ, ಏನೂ ತಿಳಿಯಲಿಲ್ಲವೆನ್ನುವೆವು. ಅರಿವು ತೂರ್ಯಾವಸ್ಥೆಯನ್ನೂ ತಿಳಿಯುವದು. ಅರಿವು ಅವಿದ್ಯೆಯಲ್ಲಿ, ನಂತರ ಅಹಂಕಾರ ಬುದ್ಧಿಯಲ್ಲಿ, ನಂತರ ಇಂದ್ರಿಯಗಳ ಮೇಲೆ, ತರುವಾಯ ಜಗತ್ತಿನ ಮೇಲೆ ಬೀಳುವದು, ಆಗ ಜೀವನು ಅರಿವಿನಿಂದ ಜಗತ್ತೆಂದು ತಿಳಿಯುವನು. ಸೂರ್ಯ ಚಂದ್ರ ಎಲ್ಲವೂ ಆತ್ಮನಿಂದ ಬೆಳಗಲ್ಪಡುತ್ತವೆ. ಆತನ ಆಶ್ರಯದಿಂದಲೇ ಎಲ್ಲವೂ ಬೆಳಗಲ್ಪಡುತ್ತವೆ. ಸೂರ್ಯನು ಅರಿಯಲಾರನು. ಆದ್ದರಿಂದ ಅವನು ಜಡನು, ಸ್ವಯಂಪ್ರಕಾಶಕನಲ್ಲ, ಆತ್ಮನೇ ಸ್ವಯಂಪ್ರಕಾಶಕನು, ಜೀವಾತ್ಮನನ್ನು ತಿಳಿಯುವವನೂ ನೀನೇ.

ಅರುವಿನಲ್ಲಿ ಮರವೆ ಇಲ್ಲ, ನಾವು ಇರುವದೆಂದು ತಿಳಿದುಕೊಂಡಿದ್ದೇವೆ, ಇದು ಸುಳ್ಳು, ಇದು ಇಲ್ಲವೇ ಇಲ್ಲ. ಬೆಳಕಿನಲ್ಲಿ ಕತ್ತಲೆ ಇಲ್ಲ, ಕತ್ತಲೆ ಬೆಳಕು ಒಮ್ಮೆಲೇ ತೋರುವದಿಲ್ಲ, ಹೀಗೆ ತಿಳಿದವರೇ ಜಾಣರು.





ಗಾಢನಿದ್ರೆಯಲ್ಲಿ ಏನಿರುವದು? ಆರಾಮವಿರುವದು, ಮತ್ತೇನೂ ಇರುವದಿಲ್ಲ, ಆಗ ನೀನಿರುವಿ, ಆದ್ದರಿಂದ ಆನಂದವೇ ನೀನು.

ತೋರದೇ, ಅಡಗದೇ ಇದ್ದುದೇ ನಿತ್ಯವು. ನಿದ್ರೆಯಲ್ಲಿ ತೋರಿಕೆಯು ಅಡಗುವದು, ಜಾಗ್ರದಲ್ಲಿ ಮತ್ತೆ ತೋರುವದು, ಆಕಾಶವು ಜಡವು ಮತ್ತು ಅನಿತ್ಯವು, ಒಂದು ಅವಸ್ಥೆಯಲ್ಲಿಯ ಆಕಾಶವು ಇನ್ನೊಂದು ಅವಸ್ಥೆಯಲ್ಲಿಲ್ಲ. ಆಕಾಶವು ನಿದ್ರೆಯಲ್ಲಿ ಅಡಗುವದು. ಆದರೆ ತನ್ನ ಸ್ವರೂಪಕ್ಕೆ ಎಂದೂ ಹಾನಿಯಿಲ್ಲ.

ಪಂಚಭೂತಗಳು ನಾಶವಾಗುವವು. ಆಕಾಶವು ನಿದ್ರೆಯಲ್ಲಿ ಲಯವಾಗುವದು, ಆದರೆ ತನ್ನ ಸ್ವರೂಪಕ್ಕೆ ಎಂದೂ ಹಾನಿಯಿಲ್ಲ. ಮಾಯೆಯನ್ನು ಮೀರಿ ನಿನ್ನ ನಿಜಸ್ವರೂಪವು ಹೊಳೆಯುತ್ತಿರುವದು.

ನಿದ್ರೆಯಲ್ಲಿ ನಿರಾಕಾರವಿದ್ದ ಮಾಯೆಯು, ಜಾಗ್ರದಲ್ಲಿ ಜಗದಾಕಾರವಾಗಿ ಪರಿಣಮಿಸುವದು. ಮನ, ಬುದ್ಧಿ, ಚಿತ್ತ, ಅಹಂಕಾರ ಎಲ್ಲವೂ ಮಾಯೆಯ ಪರಿಣಾಮಗಳು. ಜಾಗ್ರ ಸ್ವಪ್ನಗಳಲ್ಲಿ ಅಂತಃಕರಣದ ಕೂಡ ಚಿದಾಭಾಸನಿರುವನು. ಅಂತಃಕರಣ ವೃತ್ತಿಯು ಇಂದ್ರಿಯಗಳ ಮುಖಾಂತರ ಹೊರಗೆ ಹೋಗಿ ವಿಷಯಾಕಾರವಾಗಿ, ಚಿದಾಭಾಸನನ್ನು ಕೂಡಿಕೊಂಡು ಜಾಗ್ರದ ವ್ಯವಹಾರವನ್ನು ನಡೆಸುತ್ತದೆ.

ಸುಷುಪ್ತಿಯಲ್ಲಿ ಏನೂ ತಿಳಿಯಲಿಲ್ಲ, ಸುಖದಿಂದ ಮಲಗಿದ್ದೆ, ಏನೂ ಕಡಿಯಲಿಲ್ಲ ಅನ್ನುವನು, ಆ ಕಾಲಕ್ಕೆ ಯಾರಾದರೂ ಎಬ್ಬಿಸಿದರೆ ಸುಖ ಕೆಡಿಸಿದನೆಂದು ಸಿಟ್ಟಿಗೇಳುವನು, ಆಂದಬಳಿಕ ಸುಖದ ಸ್ಮರಣವಿದ್ದ ಹಾಗಾಯಿತು, ಆಗ ಅರುವಿನಿಂದ ಸುಖವನ್ನು ತಿಳಿದ ಹಾಗಾಯಿತು. ಅಂದರೆ ಸುಖ ತಿಳಿದಂಥ, ಏನೂ ತಿಳಿಯಲಿಲ್ಲ ಎಂಬ ಅಜ್ಞಾನವನ್ನು ತಿಳಿಯುವ ಅರಿವು ಇರಲಿಕ್ಕೇ ಬೇಕು. ಆನಂದವನ್ನು ಅನುಭವಿಸದ ಹೊರತು ಆನಂದದ ಬಗ್ಗೆ ಹೇಳಲು ಬರುವದಿಲ್ಲ. ಒಬ್ಬ ಮನುಷ್ಯನನ್ನು ಇಂದು ಹಗಲೆಲ್ಲ ಏನು ಮಾಡಿದೆ, ಎಂದು ಕೇಳಿದರೆ ಏನೂ ಮಾಡಲಿಲ್ಲ ಅಂದನು. ಆಗ ಏನೂ ಉದ್ಯೋಗ ಮಾಡಿಲ್ಲ ಅಂತ ತಿಳಿದುಕೊಳ್ಳುತ್ತೀಯೋ, ಇವನು ಸತ್ತಾನೆಂದು ತಿಳಿದುಕೊಳ್ಳುತ್ತೀಯೋ? ನೀನೇ ಹೇಳು. ಸುಷುಪ್ತಿಯಲ್ಲಿ ಅಹಂಕಾರವು ಎಲ್ಲ ಸಾಮಗ್ರಿಯನ್ನು ಕಟ್ಟಿಕೊಂಡು ಅವಿದ್ಯೆಯೆಂಬ ಕೋಣೆಯಲ್ಲಿ ಹೋಗುತ್ತದೆ. ಇದು ಎಲ್ಲಿ ಹೋದರೂ, ಅಂದರೆ ಇಹ-ಪರಕ್ಕೆ ತನ್ನ ಗಂಟು ಕಟ್ಟಿಕೊಂಡೇ ಹೋಗುತ್ತದೆ. ಇದು ಸಕಲ ತತ್ವಾದಿಗಳನ್ನೂ, ಸಂಸ್ಕಾರ ಮೊದಲಾದ ಸಾಮಗ್ರಿಗಳನ್ನೂ ಕಟ್ಟಿಕೊಂಡೇ ತಿರುಗುತ್ತದೆ. ಏನೊಂದೂ ಗೊತ್ತಿಲ್ಲವೆಂಬುದು ಅಹಂಕಾರವು. ಇದು ಸುಷುಪ್ತಿಯಲ್ಲಿ ಲಯ ಹೊಂದುತ್ತದೆ. ಅರುವು ಮಾತ್ರ ಇದ್ದು ಸುಖ ಅನುಭವಿಸುವನು. ಕೇವಲ ಆನಂದಮಯ ಆತ್ಮನು ತನ್ನಿಂದ ತಾನೇ, ಇನ್ನೊಂದು ಮಿಶ್ರವಿಲ್ಲದೆ ಬ್ರಹ್ಮಾನಂದ ಸುಖವನ್ನು ಹೊಂದುವನು.

ಜಾಗ್ರದಲ್ಲಿ ಕರಣಾದಿಗಳು ಇದ್ದು ಜಗತ್ತು, ಸುಖ, ದುಃಖ ಎಲ್ಲವನ್ನು ತಿಳಿಯುತ್ತೇವೆ. ನಿದ್ರೆಯಲ್ಲಿ ಕರಣಾದಿಗಳಿಲ್ಲ. ಇಲ್ಲಿಯೂ ಕರಣಾದಿಗಳು ಇದ್ದಿದ್ದರೆ ಎಲ್ಲವನ್ನು ತಿಳಿಯಲಾಗುತ್ತಿತ್ತು. ಅಂತಃಕರಣ ವೃತ್ತಿಯು ಕಣ್ಣಿನಲ್ಲಿ ಹಾಯ್ದು, ಹೊರಗೆ

ಹೋಗಿ ವಿಷಯಾಕಾರವಾಗಿ, ಚಿದಾಭಾಸನನ್ನು ಕೂಡಿಕೊಂಡು ಜಾಗ್ರದ ವ್ಯವಹಾರವನ್ನು ನಡೆಸುತ್ತದೆ. ನಿದ್ರೆಯಲ್ಲಿ ಅಂತಃಕರಣವು ಅವಿದ್ಯೆಯಲ್ಲಿ ಅಡಗುವದು, ಚಿದಾಭಾಸನು ಬಿಂಬ ಆತ್ಮನಲ್ಲಿ ಒಂದಾದಂತಾಗಿ ಕೇವಲ ಅರಿವು ಅಲ್ಲಿರುತ್ತದೆ. ಜಾಗ್ರ ಸ್ವಪ್ನಗಳಲ್ಲಿ ಅಂತಃಕರಣದ ಕೂಡ ಚಿದಾಭಾಸನಿರುವನು. ಸ್ಥೂಲ ಸೂಕ್ಷ್ಮ ಶರೀರ ಬಿಟ್ಟು ಕಾರಣ ಶರೀರಕ್ಕೆ ಹೋದಾಗ ಚಿದಾಭಾಸನು ಅಡಗುವನು, ಆಗ ಅರಿವು ಉಳಿಯುವದು.

ಮೂರು ಅವಸ್ಥೆಗಳು ಕರ್ಮಾನುಸಾರವಾಗಿ ಸಾಗಿವೆ. ಇವುಗಳಲ್ಲಿರುವ ಜೀವರು ತಮ್ಮ ಉಪಾಧಿ ತೆಗೆದಾಗ, ತಮ್ಮ ಮೂಲಭೂತ ಸ್ವರೂಪದಲ್ಲಿಯೇ ಅಡಗುತ್ತಾರೆ. ಅರಿಯದಿದ್ದಲ್ಲಿಯೂ, ಅರಿಯುವಲ್ಲಿಯೂ ಅರಿವು ಇದ್ದದ್ದೇ.

ಗಾಢನಿದ್ರೆಯಲ್ಲಿ ಆನಂದಾನುಭವವು ನಡೆದಿರುವದು, ಆದರೆ ಅದು ಆಗ ತಿಳಿಯುವದಿಲ್ಲ. ವ್ಯಾವಹಾರಿಕ ಎಚ್ಚರಿಕೆಗೆ ಬರುವಾಗ ಗಾಢನಿದ್ರೆಯ ಉಪಾಧಿಯು, ಜೀವನಿಗೆ ಅಲ್ಲಿಯ ಅನುಭವವನ್ನು ಅಚ್ಚಿನಂತೆ ಒತ್ತಿ ಕಳಿಸುವದು. ಆಗ ಏನೂ ತಿಳಿಯದೆ ಸುಖದಿಂದ ಮಲಗಿದ್ದೆ, ಎನ್ನುವನು. ಮರವೆಯೆಂಬುದು ನಿನಗೆ ಹತ್ತಿಲ್ಲ, ಏಕೆಂದರೆ ನೀನು ಮರವೆಯನ್ನು ತಿಳಿಯುತ್ತೀ, ತ್ರಿಕಾಲದಲ್ಲಿ ನಿನಗೆ ಮರವೆಯು ಇಲ್ಲ, ನಿನ್ನ ಸ್ವರೂಪವು ಉಪಾಧಿಯಿಂದ ಜೀವಾತ್ಮವಾಗಿರುತ್ತದೆ.

ಆತ್ಮನು ಮೂರೂ ಅವಸ್ಥೆಗಳನ್ನು ಅರಿಯುತ್ತಾನೆ. ಇಹದಲ್ಲಿ ಅಪರಾಧವನ್ನು ಮಾಡಿದರೆ ಸರಕಾರದವರು ಸ್ಥೂಲದೇಹಕ್ಕೆ ಶಿಕ್ಷೆಯನ್ನು ಕೊಡುತ್ತಾರೆ. ಇದನ್ನು ನೋಡುತ್ತ ಆತ್ಮನು ಸಾಕ್ಷೀಯಾಗಿರುತ್ತಾನೆ. ಪರಲೋಕದಲ್ಲಿ ಯಮನು ಸೂಕ್ಷ್ಮಶರೀರಕ್ಕೆ ಶಿಕ್ಷೆಯನ್ನು ಕೊಡುತ್ತಾನೆ, ಇಲ್ಲಿಯೂ ಆತ್ಮನು ಸಾಕ್ಷೀಯಾಗಿರುವನು. ಗಾಢನಿದ್ರೆಯಲ್ಲಿ ಏನೂ ತಿಳಿಯಲಿಲ್ಲ, ಸುಖದಿಂದ ಮಲಗಿದ್ದೆ ಎಂಬುದನ್ನು ತಿಳಿಯುತ್ತ ಇರುತ್ತಾನೆ.

ಈ ಜಗತ್ತನ್ನು ನೋಡಿ ಅದನ್ನು ಸೃಷ್ಟಿಸಿದವನೊಬ್ಬನು (ಈಶ್ವರನು) ಇರಬೇಕೆಂದು ಕಲ್ಪಿಸಿ ಬರೆದಿರುತ್ತಾರೆ. ವಿಚಾರಿಸಿದರೆ ಈ ವಿಚಾರವು ಸುಳ್ಳೆಂಬುದು ಗುರ್ತಾಗುವದು. ಈ ಜಗತ್ತನ್ನು ಯಾರೂ ಮಾಡಿಲ್ಲ, ಮಾಡುವವರೂ ಇಲ್ಲ. ಇಲ್ಲದ ಜಗತ್ತು ನಂಬಿ, ಆ ದೇವ ಮಾಡಿದ, ಮಹಾದೇವ ಮಾಡಿದ ಎಂದರೆ ಎಷ್ಟು ತಪ್ಪು! ಅವರೇಕೆ ದುಃಖಮಯ ಜಗತ್ತನ್ನು ಮಾಡುವರು, ಜಡಜಗತ್ತನ್ನು ಜಡಪ್ರಕೃತಿಯು ಮಾಡಿದೆ ಎಂಬುವದು ಸುಳ್ಳು, ಚೈತನ್ಯದ ಸತ್ತಾ ಬಿಟ್ಟು ಹೇಗೆ ಆಗುತ್ತದೆ? ನಮ್ಮ ನಿದ್ರೆಯಲ್ಲಿ ಸ್ವಪ್ನ ಹೊರಬಿದ್ದಂತೆ, ಬಲವಾದ ಮರವೆಯಲ್ಲಿ ಜಗತ್ತು ಹೊರಬಿದ್ದಿದೆ. ಕನಸೂ ಇಲ್ಲ, ಜಾಗ್ರವೂ ಇಲ್ಲ, ಇರುವವನು ನೀನೊಬ್ಬನೇ. ಸೃಷ್ಟಿಯೆಂಬುದು ಇಲ್ಲವೇ ಇಲ್ಲ. ಏಕಮೇವಾದ್ವಿತೀಯ ಆತ್ಮನಲ್ಲಿ ತೋರ್ಪ ಲೋಕರಂಜನೆಯು ಕಾಲ್ಪನಿಕವೇ ಇರುವದು.

ಯುಗಪತ್ಸೃಷ್ಟಿ, ಕ್ರಮಸೃಷ್ಟಿ ಇವೆರಡೂ ಸುಳ್ಳು. ಜಲದಲ್ಲಿ ಅನೇಕ ತೆರೆನೊರೆಗಳು ಎದ್ದು ಅಡಗುತ್ತವೆ. ಇದು ಯುಗಪತ್ಸೃಷ್ಟಿ. ಪಂಚೀಕರಣದಿಂದ ತಿಳಿಸುವದು ಕ್ರಮಸೃಷ್ಟಿ. ಈ ಜಗತ್ತು ಕನಸಿನ ಬಾಳ್ವೆಯಂತೆ ಇದೆ, ಇದು ಮಂದಮತಿಗೆ ತಿಳಿಯುವದಿಲ್ಲವೆಂದು ಕ್ರಮಸೃಷ್ಟಿಯನ್ನು ಹೇಳುವರು. ಕಾರ್ಯ ಕಾರಣ ಎರಡೂ ಸುಳ್ಳು, ಅವು ಒಮ್ಮೆಲೇ





ತೋರಿರುತ್ತವೆ, ಅಂದರೂ ಕನಸಿನಂತೆ ಸುಳ್ಳಿವೆ, ಇದೇ ನಿಜವಾದ ತಿಳುವಳಿಕೆಯು, ಕಲ್ಪಿತ ಪುರಷನ ಸಂಕಲ್ಪದಿಂದ ವಿಕಲ್ಪವಾದ ಜಗತ್ತಿದು.

ನಿನ್ನ ಅರುವಿನ ಮರವೆಯಿಂದ ದೇಹವು ತೋರಿದೆ. ತಂದೆ ತಾಯಿಗಳಿಂದ ಹುಟ್ಟಿಲ್ಲ.

ಸ್ವಪ್ನದೊಳಗೆ ಆಕಳು ಮತ್ತು ಅದರ ಕರು ಒಮ್ಮೆಲೇ ತೋರುವಂತೆ, ಜಾಗ್ರದಲ್ಲಿಯಾದರೂ ತಂದೆ ಮಗ ಒಮ್ಮೆಲೇ ತೋರಿರುವರೆಂದು ವೇದಾಂತವು ಹೇಳುವದು. ಆತ್ಮನು ರೇತೋರಕ್ತದ ಹನಿಯಲ್ಲಿ ಎಂದೂ ಸಿಗುವದಿಲ್ಲ. ಇದರಂತೆ ಬೀಜ ಮೊದಲೋ ಗಿಡ ಮೊದಲೋ, ಇವೆಲ್ಲವೂ ಏಕಕಾಲಕ್ಕೆ ತೋರುತ್ತವೆ. ಸಂಸಾರವು ಕನಸಿನಂತೆ ಇದೆ. ಒಂದು ನಿಮಿಷದಲ್ಲಿ ಎಷ್ಟೋ ಕಾಲ ಬಾಳ್ವೆಯನ್ನು ಮಾಡಿದಂತಾಗುತ್ತದೆ. ಅಷ್ಟು ದಿನ ನಿದ್ರೆ ಮಾಡಿರುವನೇನು? ಇಲ್ಲ, ಇದರಂತೆ ಇದೆ. ಎಲ್ಲವೂ ಕನಸಿನಂತೆ ಸುಳ್ಳಿದೆ. ಮಾಯೆಯೆಂದರೆ ಇಲ್ಲದ್ದು, ಅಂದಮೇಲೆ ಅದರ ಕಾರ್ಯವು ಹೇಗೆ ಖರೆ?. ಜಗತ್ತು ತ್ರಿಕಾಲಗಳಲ್ಲಿಯೂ ಇಲ್ಲ, ಇದೆಲ್ಲವೂ ಜಾದೂ ಆಟದಂತಿದೆ. ದೇಹವೇ ನಾಶವಾಗಿ ಹೋಗುವಲ್ಲಿ, ಉಳಿದದ್ದು ಯಾವುದು ಖರೆ? ಭ್ರಾಂತಿಯನ್ನು ಕಳೆದುಕೊಳ್ಳಲಿಕ್ಕೆ ಒಂದು ಅನುವಿನಿಂದ ತಿಳಿಸಿಕೊಡುವದಕ್ಕಾಗಿ ಕಲ್ಪಿಸಿ ಹೇಳುತ್ತಾರೆ, ಬಂಜೆ ಮಗನ ಲಗ್ನದ ಸುದ್ದಿಯಂತೆ, ಸುಳ್ಳೇ ಕೇಳಿದ್ದರಿಂದ ಸುಳ್ಳೇ ಹೇಳುತ್ತ ಹೋಗುತ್ತಾರೆ.

ಕಣ್ಣಿನಲ್ಲಿಯೇ ಇದೆಲ್ಲ ಜಗತ್ತಿದೆ. ಆದ್ದರಿಂದ ಕಣ್ಣು ಖರೆ ಉಳಿದದ್ದು ಸುಳ್ಳು. ಯಾಕೆಂದರೆ ಕಣ್ಣು ಇಲ್ಲದಿದ್ದರೆ ಜಗತ್ತೇ ಇಲ್ಲ. ಇದರಂತೆ ಮನಸ್ಸು ಖರೆ ಇಂದ್ರಿಯ ಸುಳ್ಳು, ಆತ್ಮ ಖರೆ ಮನಸ್ಸು ಸುಳ್ಳು. ಹುಟ್ಟುವದಕ್ಕಿಂತ ಮೊದಲಿಲ್ಲದ ಕಣ್ಣು, ನಾಳೆ ಸತ್ತ ಬಳಿಕ ಮಣ್ಣಾಗುವ ಕಣ್ಣು, ಅಂದರೆ ಮೊದಲೂ ಇಲ್ಲ, ಅಂತ್ಯದಲ್ಲಿಯೂ ಇಲ್ಲ, ಮಧ್ಯದಲ್ಲಿ ಹೇಗಿರುತ್ತದೆ? ಇವು ಸುಳ್ಳು. ಸುಳ್ಳು ಕಣ್ಣಿನಿಂದ ಕಂಡ ಜಗತ್ತು ಎಷ್ಟರ ಮಟ್ಟಿಗೆ ಖರೆ ಇರಬೇಕು.

ಅರುವು (ಆತ್ಮನು) ಏನೂ (ಜಗತ್ತು) ಆಗಿಲ್ಲ. ನೀನೇ ನೀನಿರುವಿ. ನೀನು ತಿಳಿದದ್ದು ಇಲ್ಲ, ತಿಳಿಸಿದ್ದೂ ಇಲ್ಲ, ಏನೊಂದು ಭಾವಭೇದ ಇಲ್ಲವೇ ಇಲ್ಲ. ಸಮಾನ ಸತ್ತೆಯುಳ್ಳದ್ದು ಮತ್ತೊಂದಿಲ್ಲ, ಎರಡು ಪೂರ್ಣ ಇರುವದಿಲ್ಲ, ಆದ್ದರಿಂದ ತಾನೊಂದೇ ಸುಖವಾಗಿದೆ. ದುಃಖವೆಂಬ ಮಾತನ್ನೇ ತರಬೇಡ. ಆದದ್ದೆಲ್ಲ, ಬರುವದೆಲ್ಲ ಸುಖವೆಂದೇ ಭಾವಿಸು. ಇಡೀ ಬ್ರಹ್ಮಾಂಡಕ್ಕೆ ಬ್ರಹ್ಮಾಂಡವು ಹಾಳಾಗಿ ಹೋದರೂ, ಸುಖವೇ ಎಂದು ನಿತ್ಯ ಅರಿಯಬೇಕು. ಏನೂ ಇಲ್ಲ, ತಾನೇ ತಾನು, ಭೇದವನ್ನು ಕಂಡದ್ದೇ ದುಃಖ, ಭೇದದ ವಿಷಯಾದಿಗಳಲ್ಲಿ ಸತ್ಯತ್ವ ಬುದ್ಧಿಯನ್ನು ಇಟ್ಟುಕೊಂಡರೆ ದೊಡ್ಡ ದುಃಖವನ್ನು ಹೊಂದಬೇಕಾಗುವದು.

ಆತ್ಮನು ಅನಾದಿ ಅನಂತನು. ಬರೇ ಅರುವು ಇದೆ. ಮಣ್ಣು ನೀರು ಬೆಂಕಿ ಇಲ್ಲ, ಕಣ್ಣು ಕಾಲು ಕಿವಿ ಮುಂತಾದ ಇಂದ್ರಿಯಗಳಿಲ್ಲ, ಮೂವತ್ತಾರು ತತ್ವಗಳಿಲ್ಲ, ದೇಹವಿಲ್ಲ, ದೇವತರಿಲ್ಲ, ಬರೇ ಚೈತನ್ಯವಿರುವದು. ಗುರುಶಿಷ್ಯರು ಅಜ್ಞಾನದಲ್ಲಿಯೇ ತೋರಿರುತ್ತಾರೆ, ಜ್ಞಾನವಾದ ಮೇಲೆ ತಾನೇ ತಾನು, ತಾನೇ ಪರಮಾತ್ಮನು. ತನಗನ್ಯವಾಗಿ

ಏನೂ ಇಲ್ಲ ಎಂಬ ಭಾವವಿರಬೇಕು. ಇವರು ದೇವತರು, ಹುಲಿ ಕರಡಿ ಹಾವು ಚೇಳು ಎಂಬ ಅನ್ಯಭಾವವಿರಬಾರದು, ತಾನೇ ಎಂದು ಸುನಿಶ್ಚಿತ ತಿಳುವಳಿಕೆ ಇರಬೇಕು. ಅಂದರೆ ಮೋಹ ಭಯ ಏನೂ ಇಲ್ಲ. ತನಗನ್ಯವಾಗಿ ಜಗತ್ತು ಇದೆ ಎನ್ನುವವನಿಗೆ ವಾಸನೆಯು ಜನ್ಮ ಕೊಡುತ್ತದೆ. ಇದು ಎಂದು ತಿಳಿಯಿತೋ ಅಂದೇ ಮುಕ್ತನು. ಇದನ್ನು ಸರಿಯಾಗಿ ತಿಳಿದರೆ ಏನೇ ಕಷ್ಟ ಬಂದರೂ ಸುಖವೇ ಇರುವದು.

ಚಿದಾಭಾಸನೂ ನಾಮರೂಪಗಳೂ ಇಲ್ಲವೇ ಇಲ್ಲ. ಇದ್ದೇನೆ ಎನ್ನುವದೂ ಸುಳ್ಳು, ಸಾಯುತ್ತೇನೆ ಎನ್ನುವದೂ ಸುಳ್ಳು, ಜೀವ ಇದ್ದರೆ ಸುಖ ದುಃಖ ಖರೆ, ಜೀವನೇ ಇಲ್ಲದಿದ್ದರೆ ಯಾವದು ಖರೆ? ನಾಮರೂಪಗಳನ್ನು ತಿಳಿದುಕೊಂಡು ಜೀವನು ಚಿತ್ತಿನಂತೆ ಕಂಡರೂ ನಿಜವಾದ ಅರುವಲ್ಲ. ಬುದ್ಧಿಯಲ್ಲಿ ಹೊಳೆಯಲ್ಪಟ್ಟ ಪ್ರತಿಬಿಂಬವು ಹೇಗೆ ತೋರಿದರೂ ಅಭಾವ ಪದಾರ್ಥವೇ. ತನ್ನ ಇರುವಿನ ಗುರ್ತು ಹಚ್ಚಿಕೊಂಡವನಿಗೆ ನಾಮರೂಪ ಜಗತ್ತು ಸುಳ್ಳೆನಿಸುವದು. ಕಲ್ಪಿತನಿಗೇ ಕಲ್ಪಿತವು ತೋರುತ್ತದೆ. ಕನ್ನಡಿಯಲ್ಲಿಯ ಪ್ರತಿಬಿಂಬದಂತೆ ಜೀವ ಜಗತ್ತು ಎಲ್ಲವೂ ಸುಳ್ಳು. ಯಾವನ ಮನಸ್ಸು ಸ್ವಾಧೀನವಿದೆಯೋ ಅವನ ಅಂಗಳದಲ್ಲಿ ದೇವತರು ಕೈಮುಗಿದು ನಿಂತಿರುವರು, ಕಸ ಗೂಡಿಸುವರು. ಪರಮಾತ್ಮ ಬೇರೆ ಜೀವಾತ್ಮ ಬೇರೆ ಎಂಬುವದಿಲ್ಲ, ಪರಮಾತ್ಮನ ಹೊರತು ಬೇರೆ ಏನೂ ಇಲ್ಲವೆಂದು ಸಕಲ ವೇದಾಂತದ ಸಾರವನ್ನು ತಿಳಿದುಕೊಂಡು ಜ್ಞಾನಿಗಳು ಹೇಳುವರು. ಹಗ್ಗದಲ್ಲಿ ಹಾವು ಹೇಗೆ ಸುಳ್ಳೋ, ಹಾಗೆ ನೋಡುವವನೂ ನೋಡಿಸಿಕೊಳ್ಳುವವನೂ ಸುಳ್ಳು, ಜಾಗ್ರ ಕನಸು ಗಾಢನಿದ್ರೆಗಳು ಒಂದರೊಳಗೊಂದಿಲ್ಲ, ಆದ್ದರಿಂದ ಎಲ್ಲವೂ ಸುಳ್ಳು. ಅವೆಲ್ಲವುಗಳನ್ನು ಅರಿಯುವ ಅರಿವು ಒಂದೇ ಸತ್ಯ.

ಹಗ್ಗದಲ್ಲಿ ಹಾವು ತೋರಿದಂತೆ ಜಗತ್ತು ತೋರಿದೆ. ಜಗತ್ತು ಇಲ್ಲದಲೇ ಹೀಗೆ ತೋರುವದು. ಅಜ್ಞಾನಿಯು ಅಗಾಧವಾಗಿ ಮೋಹಿತನಾಗಿ ಪ್ರೀತಿ ಭಯ ಪಡುತ್ತಾನೆ.

ದೇಹವು ನೀನೆಂದು ನೀನೇ ಭಾವಿಸಿರುವಿ, ಈ ಭಾವವನ್ನು ತೆಗೆದರೆ ದೇಹವೇ ಇಲ್ಲ. ನೀನೇ ವಿಷಯಾದಿಗಳನ್ನು ಮೋಹಿಸಿ ಅವುಗಳಲ್ಲಿ ಸಿಕ್ಕು ಭ್ರಮೆಗೊಂಡಿರುವೆ, ಅವುಗಳ ಮೋಹ ತೆಗೆದರೆ ಅವುಗಳಿಂದ ನಿನಗೆ ಭಾದೆ ಇಲ್ಲ. ಜೀವಭಾವವು ಸುಳ್ಳೆಂದು ನಿಶ್ಚಿತ ತಿಳಿದುಕೊ. ಬರೇ ಜಳಕ ಜಾಪತ್ರಿ ಲಂಡಪಂಜಿ ಹಚ್ಚಿಕೊಂಡು, ಕರ್ಮ ಮಾಡುತ್ತ ಕುಳಿತರೆ ಜೀವಭಾವವು ಹೋಗುವದಿಲ್ಲ. ಮರವೆಯಿಂದ ಆದ ಜಗತ್ತಿದು, ಇದರೊಳಗೆ ಇಲ್ಲದಂಥ ಜನನ ಮರಣಗಳನ್ನು ಕಳೆಯಲಿಕ್ಕೆ ಬರುವದಿಲ್ಲ, ತಿಳಿಯಲಿಕ್ಕೆ ಮಾತ್ರ ಬರುವದು. ಇದು ನಿಶ್ಚಯವಿಲ್ಲದೆ ಎಷ್ಟು ಹೇಳಿದರೇನು, ಕೇಳಿದರೇನು? ಎಲ್ಲವೂ ನಿಷ್ಫಲ. ಭೇದರೂಪ ಭೇದಬುದ್ಧಿಯು ಜೀವಾತ್ಮನ ತಿಳುವಳಿಕೆಯು. ಭೇದವನ್ನು ಕಳೆದುಕೊಂಡರೆ ನೀನೇ ಪರಮಾತ್ಮನು.



## ಜೀವನ್ಮುಕ್ತನ ಸ್ಥಿತಿ

ವಿಶಾಲಮತಿಗಳೆಂದರೆ ಇಡೀ ಬ್ರಹ್ಮಾಂಡವೇ ತನ್ನಂತೆಂದು ತಿಳಿದುಕೊಂಡವರು. ಜ್ಞಾನಿಯು ಎಲ್ಲರಲ್ಲಿ ಒಂದೇ ಆತ್ಮವಿರುವದೆಂದು ಮಣಿಯುತ್ತಿರುವನು, ಜಾತಿ ಪಂಥ ವರ್ಣ ಆಶ್ರಮ ಕುಲಗೋತ್ರ ಯಾವ ಅಭಿಮಾನವೂ ಜ್ಞಾನಿಯಲ್ಲಿಲ್ಲ, ಸಮವಿರುವದೇ ಅವನ ಕಾರ್ಯ. ಪ್ರಾಣಿಮಾತ್ರರಲ್ಲಿ ದಯೆ ಇದ್ದವನೇ ಗುರುವು. ಸರ್ವ ಪ್ರಾಣಿಗಳಲ್ಲಿ ಅವನು ಸಹಜವಾಗಿ ದಯೆ ತೋರುವನು. ತ್ರಿಕರಣಗಳಿಂದ ಪ್ರಾಣಿ ಹಿಂಸೆಯನ್ನು ಎಂದೂ ಮಾಡುವದಿಲ್ಲ. ಕಾಯಾ ವಾಚಾ ಮನಸಾ ಇವುಗಳಿಂದ ತನ್ನ ಸುಖದ ಸಲುವಾಗಿ ಅನ್ಯರಿಗೆ ದುಃಖ ಕೊಟ್ಟದ್ದಾದರೆ ಅವನು ಗುರು ಅಲ್ಲ, ಶುದ್ಧ ಚಾಂಡಾಲನೆನ್ನಬೇಕು. ಗುರು ಆದವನು ತನ್ನ ದಶಿಂದ ಸುಖವನ್ನು ಬಯಸಬಾರದು, ವಂಚನೆ ಇರಬಾರದು.

ಬಸವಾದಿ ಪ್ರಮಥರು ನಾಳಿಗೆ ಏನಾದರೊಂದನ್ನು ಉಳಿಸಿದರೆ ಅದು ಎಂಜಲವೆಂದು ತಿಳಿಯುತ್ತಿದ್ದರು. ಬಸವಣ್ಣನವರು ದುಡ್ಡಿಗೂ ಎಂಜಲವೆಂದರು. ನಿತ್ಯದ ದುಡಿಮೆಯಲ್ಲಿ ಆ ಹೊತ್ತಿನ ಖರ್ಚಿಗೆ ಇಟ್ಟುಕೊಂಡು ಉಳಿದುದೆಲ್ಲವನ್ನೂ ದಾನ ಮಾಡುತ್ತಿದ್ದರು, ಇಂಥ ವರಗುಣ ಬೇಕು.

ಋಷಿಮುನಿಗಳು ಎಲ್ಲರನ್ನು ತಮ್ಮಂತೆ ಎಂದು ತಿಳಿದುಕೊಂಡವರು, ಸರ್ವ ಜನಗಳು ಜನನ ಮರಣ ದುಃಖ ಕಳೆದುಕೊಂಡು ಜ್ಞಾನವಂತರಾಗಲಿ ಎಂಬ ದಯಾಪರರು, ಇವರನ್ನು ಪರಮಾತ್ಮನ ಸಮಾನವೆಂದು ತಿಳಿದುಕೊಳ್ಳಬೇಕು.

ಜ್ಞಾನಿಯು ಸ್ವಾರ್ಥಕ್ಕಾಗಿ ಕೊಡು ಎಂದು ಯಾರನ್ನೂ ಬೇಡುವದಿಲ್ಲ, ಕೊಡಿರಿ ಎಂದು ಯಾರಿಗೂ ಕೈಚಾಚುವದಿಲ್ಲ, ಬೇಡಿದವರಿಗೆ ತಾನು ಕೊಡುವದನ್ನು ಬಿಡುವದಿಲ್ಲ.

ವಿಷಯಗಳಿಗೆ ಬಾಗದವರೇ ಗುರುಗಳೆಂದೆನಿಸಿಕೊಳ್ಳುವರು, ಸೋತವರು ಗುರುಗಳೆನಿಸಿಕೊಂಡರೆ ಹಲ್ಗುರು ಎಂದು ತಿಳಿದುಕೊಳ್ಳಬೇಕು. ವಿಷಯಗಳು ತಾವಾಗಿ ನಿರಾಯಾಸವಾಗಿ ಬಂದರೂ ಒಲ್ಲೆ ಎನ್ನುತ್ತಾನೆ, ಮೆರವಣಿಗೆ ಮಾನ ಮನ್ನಣೆಗಳಿಗಾಗಿ ಮಠಾಧಿಪತಿಗಳಾಗುವವರು ಗುರುಗಳೆನಿಸುವರೇ? ಕೂಳಿಗಾಗಿ ಸೋಗು ಹಾಕಿಕೊಂಡು ತಿರುಗುವವರು ಗುರುಗಳೇ ಅಲ್ಲ.

ಸ್ವರೂಪದ ಅಜ್ಞಾನವನ್ನು ನಾಶ ಮಾಡುವವನೇ ಗುರುವು. ಯಾವನು ದೇಹಾದಿಗಳಲ್ಲಿ ಆತ್ಮಬುದ್ಧಿಯನ್ನು ಗಟ್ಟಿಗೊಳಿಸುವನೋ ಅವನು ಗುರುವರನಲ್ಲ, ಯಮನು. ದುಃಖವನ್ನು ಅನುಭವಿಸಲಿಕ್ಕೆ ಹಚ್ಚುವಂಥವನು ಯಮಕಿಂಕರನೆಂದು ತಿಳಿ. ದೇಹಾತ್ಮ ಬುದ್ಧಿಯನ್ನು ಕೆಡಿಸಿ ಚೈತನ್ಯವೇ ತನ್ನ ಸ್ವರೂಪವೆಂದು ಬೋಧಿಸುವವನೇ ನಿಜವಾದ ಗುರುವು. ದೇಹಾತ್ಮ ಬುದ್ಧಿಯನ್ನು ಗಟ್ಟಿ ಮಾಡಿಸುವವರನ್ನು ನಂಬಬಾರದು. ಪೂರ್ವ ದಿಕ್ಕಿನಲ್ಲಿ ಹುಟ್ಟಿರುವ ಸೂರ್ಯನನ್ನು ಪಶ್ಚಿಮ ದಿಕ್ಕಿನಲ್ಲಿ ಹುಟ್ಟಿಸಿದರೂ,

ಅನೇಕ ಸಿದ್ಧಾಟಿಕೆಗ್ಯೆದರೂ ಜಾದೂಗಾರನೆಂದು ದೂರೀಕರಿಸಬೇಕು. ವಿಷಯಾಸಕ್ತಿಯನ್ನು ತೆಗೆದುಹಾಕಿ ಆತ್ಮಭಾವವನ್ನು ನೆಲೆಗೊಳಿಸುವವನೇ ಗುರುವು. ಕರ್ಮವನ್ನು ಹೇಳುವವನು ಗುರುವಲ್ಲ, ಯಮಕಿಂಕರನು. ಬ್ರಹ್ಮಜ್ಞಾನಿಯೇ ಶ್ರೀಗುರುವು. ಇವನು ಪೂರ್ಣ ದುಃಖ ನಿವಾರಣೆ ಮಾಡಿ, ನಿತ್ಯ ಸುಖವನ್ನುಂಟು ಮಾಡುವನು. ಗುರುವು ಭವದ ಬೇರನ್ನೇ ಕಿತ್ತು ಒಗೆಯುತ್ತಾನೆ. ಜ್ಞಾನವಾಗಿರುವದು ಎಂಬುದಕ್ಕೆ ಗುರುತೇನೆಂದರೆ ಜನನ ಮರಣಕ್ಕೆ ಹೆದರದಿರುವದು. ಎಂಥ ಸಂಕಟ ಬಂದರೂ ಧೈರ್ಯಗುಂದುವದಿಲ್ಲ. ಇಲ್ಲಿ ದೇಹಾತ್ಮ ಬುದ್ಧಿಯು ಇರುವದಿಲ್ಲ. ಅಂದರೆ ಸ್ವರೂಪಜ್ಞಾನ ಹೊಂದಿದವ ಎಂದರ್ಥ. ಜ್ಞಾನಿಯು ನಾಮ ರೂಪ ಜಗತ್ತನ್ನು ಕಂಡಿಲ್ಲ, ಅವರಿಗೆ ಹುಟ್ಟಿರುವೆ, ಸಾಯುವೆ, ಉಣ್ಣುವೆ ಎಂಬ ಭಾವವಿರುವದಿಲ್ಲ. ಇಂಥವರಲ್ಲಿ ಸೇವಾ ಮಾಡಿಕೊಂಡಿರಬೇಕು. ಗುರುಗಳಲ್ಲಿ ಕುಲಗೋತ್ರ ನೋಡದೆ ಬ್ರಹ್ಮಜ್ಞಾನವನ್ನು ಸೇವಿಸು.

ತತ್ತ್ವ ತಿಳಿಯಿತು ಎಂದರೆ ಮೈಮೇಲೆ ಹಾವು ಹರಿದಾಡಿದರೂ ಹೆದರಿಕೆ ಬರಬಾರದು, ಹುಲಿ ಎದುರಿಗಿದ್ದರೂ ಅಂಜಬಾರದು, ಹಾವು ಚೇಳು ಕಡಿದು ಸತ್ತರೂ ಭಯವಿರಬಾರದು, ಶರೀರದ ಮೋಹವಿಟ್ಟುಕೊಂಡು ನಾನು ತಿಳಿದಿದ್ದೇನೆ ಅಂದರೆ ಜ್ಞಾನಿಯಲ್ಲವೆಂದು ತಿಳಿಯಬೇಕು.

ಗುರುವಿಗೆ ಯಾವ ಆಶೆಯೂ ಇರಬಾರದು, ಕಾಮ ಕ್ರೋಧ ದ್ವೇಷ ಅಸೂಯೆ ಇರಬಾರದು, ಕೊಡದವರ ಮೇಲೆ ಸಿಟ್ಟು, ಕೊಟ್ಟವರ ಮೇಲೆ ಪ್ರೀತಿ ಇದ್ದರೆ ಇದು ಗುರು ಲಕ್ಷಣವಲ್ಲ, ಹೊಟ್ಟೆ ಹೊರೆದುಕೊಳ್ಳುವ ಜಾತಿಗಾರನೆಂದು ತಿಳಿಯಿರಿ. ಬೇಸರಿಲ್ಲದೆ ಲೋಕ ಹಿತಕ್ಕಾಗಿ ದುಡಿಯುವವನೇ ಗುರುವೆನಿಸುವನು. ತಾನಾಗಿ ಊರೂರಿಗೆ ಹೋಗಿ ಬೋಧಿಸುವನು. ಶಾಸ್ತ್ರ ವಾಸನೆ ಎಂದರೆ ಹೇಳಬೇಕು ಕೇಳಬೇಕು ಎಂಬುದು ಸಹ ಜ್ಞಾನಿಗೆ ಎಳ್ಳಷ್ಟೂ ಇಲ್ಲ, ಹೇಳುವದು ನಾಲಿಗೆಯ ತಿಂಡಿ, ಕೇಳುವದು ಕಿವಿಯ ತಿಂಡಿ ಎಂದು ಅನ್ನುವನು. ನನಗೆ ಏನು ಅನ್ನುವರೋ, ನಿಂದೆಯನ್ನು ಮಾಡುತ್ತಾರೋ, ಹೊಗಳುತ್ತಾರೋ, ಎಂದು ಅನ್ಯರ ಕಡೆಗೆ ನೋಡಿದರೆ ಜ್ಞಾನಿಯಲ್ಲ. ಕಾರಿಕೊಂಡಿದ್ದನ್ನು ಯಾರು ತಿನ್ನುತ್ತಾರೆ? ಅಂದರೆ ತುಚ್ಛೀಕರಿಸಿದ ವಸ್ತುಗಳನ್ನು ಹೊರಳಿ ನೋಡಿದರೆ, ಪ್ರೀತಿ ಇದ್ದರೆ, ಉಪಯೋಗಿಸಿದರೆ, ಅವನು ಜ್ಞಾನಿಯೂ ಅಲ್ಲ, ಸಾಧಕನೂ ಅಲ್ಲ.

ಇವನಿಗೆ ಹಿಗ್ಗು ಕುಗ್ಗು ಯಾವದೂ ಇಲ್ಲ, ಶಬ್ದ ಸ್ಪರ್ಶ ರೂಪ ರಸ ಗಂಧ ಇವುಗಳಿಗೆ ಮೋಹಿಸುವದಿಲ್ಲ, ಇವು ಸುಳ್ಳೆಂದು ನಿಶ್ಚಯಿಸಿದ್ದಾನೆ. ಇಹಲೋಕ ಪರಲೋಕ ಯಾವದರಲ್ಲಿಯೂ ಪ್ರೀತಿ ಇಲ್ಲ. ದೇವಾನುದೇವತರನ್ನೂ ಸಹ ಕಣ್ಣೆತ್ತಿ ನೋಡುವದಿಲ್ಲ, ವಿಷಯಾದಿಗಳು ಜಾದೂ ಆಟದಂತೆ ಸುಳ್ಳೆಂದು ತಿಳಿದಿರುವನು. ಕನಸಿನಲ್ಲಿ ಭೋಗವನ್ನು ಉಂಡಂತೆ, ಸುಳ್ಳು ಜಗತ್ತಿನಲ್ಲಿ ಸುಳ್ಳು ಪದಾರ್ಥಗಳಿರುವವು ಎಂಬ ಅನುಭವವಿರುವದು.

ಜ್ಞಾನಿಗೆ ಜನನ ಮರಣಗಳಿಲ್ಲ, ಧರ್ಮ ಆಶ್ರಮ ಕುಲಗೋತ್ರಗಳಿಲ್ಲ. ಅವನು ಹಿಂದೆ ಆದದ್ದನ್ನು ನೆನೆಸುವದಿಲ್ಲ, ಮುಂದೆ ಇಂತಹದು ಆಗಬೇಕೆಂದು ಆಶೆ ಮಾಡುವದಿಲ್ಲ, ಈಗ ಇದ್ದುದರ ಮೇಲೆ ನನ್ನದೆಂಬ ಅಭಿಮಾನವಿಲ್ಲ. ನಾವು ಮಾತ್ರ ದೊರೆತದ್ದುದರಲ್ಲಿಯೇ ಚಲೋ ಕೆಟ್ಟ ಹುಡುಕುವೆವು. ಹಿಂದೆ ಆಗಿ ಹೋದ





ಪದಾರ್ಥಗಳನ್ನು ನೆನೆಸುವದೂ, ಈಗ ಗಳಿಸುವದೂ, ಮುಂದಿನದನ್ನು ಆಶೆ ಮಾಡುವದೂ ಮಾಡಿಯೇ ಮಾಡುತ್ತೇವೆ. ಇದೇ ಜ್ಞಾನಿ ಅಜ್ಞಾನಿಗಳ ಗುರ್ತೆಂದು ಭಾವಿಸಬೇಕು. ಏನು ಬಂದರೂ, ಅಮೃತ ಕೊಟ್ಟರೂ, ವಿಷ ಕೊಟ್ಟರೂ, ಒಂದೇ ಎಂದು ತಿಳಿದಿರುತ್ತಾನೆ. ಯಾಕೆಂದರೆ ಹಿಂದೆ ಈ ಕರ್ಮ ಮಾಡಿರುವೆ ಬಂದಿರುತ್ತದೆ, ಇದು ಉಂಡು ತೀರದ ಹೊರತು ಬಿಡುವದಿಲ್ಲ. ಇವನು ಬ್ರಹ್ಮಾಂಡ ಹೊರಳಿ ಬಿದ್ದರೂ ಹೆದರುವದಿಲ್ಲ, ಮೊದಲು ತನ್ನ ಶರೀರವನ್ನೇ ನಂಬಿರುವದಿಲ್ಲ.

ತಾನು ರಾಜನಾದರೂ ಹೊಲೆಯರವನಿಗೆ ನಮಸ್ಕರಿಸಬೇಕು, ಅಂದರೆ ಜ್ಞಾನವಾದಂತೆ. ನಾನು ಜ್ಞಾನಿ, ತಿಳಿದಿರುವೆ, ಮುಕ್ತನಾಗಿರುವೆ ಎಂದು ಯಾರು ಅನ್ನುವರೋ ಅವರಿಗೆ ಜ್ಞಾನವಾಗಿಲ್ಲ ಎಂದರ್ಥ, ಅವನಿಗೆ ಏನೂ ತಿಳಿದಿಲ್ಲವೆಂದೇ ಅರ್ಥ. ಮಾಡಿದ್ದು ಉಣ್ಣುವದು, ನಮಗೇನು? ಇದರ ಅಭಿಮಾನವೇಕೆ ಎಂದು ಮೆಲ್ಲಮೆಲ್ಲನೆ ಒಳಸರಿಯುತ್ತ ನಿಲ್ಲುವರು, ಇವರೇ ಸುಖಿ. ನಿರಭಿಮಾನಾಂಚಿತವೇ ಮುಕ್ತಿಯೆನಿಸುವದು. ಇದೇ ಜ್ಞಾನಿಗಳ ಇರುವು.

ವಿಚಾರಹೀನರು ತಾವು ಮಾಡಿದ್ದನ್ನೇ ಜ್ಞಾನಿಗಳು ಮಾಡುವರೆಂದು ಅನ್ನುವರು. ಅವರಿಗೂ ನಮ್ಮಂತೆ ಕೈ ಕಾಲುಗಳಿವೆ, ಆಶೆ ಬಹಳವಿದೆ, ಏನೋ ಒಂದು ಜಾದೂ ಹೂಡಿರುವರು, ಮಳ್ಳ ಜನರು ಹೋಗಿ ಕಾಲಿಗೆ ಬೀಳುತ್ತಾರೆ, ಅಂತಹದು ಅವರ ಹತ್ತರ ಏನಿದೆ? ಎಂದು ನಿಂದಿಸುವರು, ಪೆಟ್ಟು ತಿನ್ನುವರು, ಆದರೆ ಜ್ಞಾನಿಗಳು ಇದಕ್ಕೆ ಸೊಪ್ಪು ಹಾಕುವದಿಲ್ಲ. "ಆನೆ ನೀರಾಟದೊಳು ಮೀನ ಕಂಡಂಜುವದೇ, ಹೀನ ಮಾನವರ ಬಿರುನುಡಿಗೆ ತತ್ತ್ವಜ್ಞಾನಿ ಅಂಜುವನೇ ಸರ್ವಜ್ಞ" ಎಂಬಂತಿರುವರು. ಆದರೆ ಆ ಮಹಾಜ್ಞಾನಿಯು ನಿರ್ಲೇಪನೂ, ನಾಮರೂಪ ರಹಿತನೂ, ಸೀಮಾತೀತನೂ ಇರುವನು.

ಜೀವನ್ಮುಕ್ತನು ಭೇದಜ್ಞಾನವು ಬಾರದಂತೆ ವ್ಯವಹಾರ ಮಾಡುವನು, ನಾನು ಮಾಡುವೆನು, ನಾನು ತಿನ್ನುವೆನು ಎಂಬ ಅಭಿಮಾನವು ಅವನಿಗಿಲ್ಲ. ಉರುಳಾಡಿದರೂ, ಹೊರಳಾಡಿದರೂ, ಬೇಕಾದಷ್ಟು ಸಾವು ನೋವುಗಳಾದರೂ ಜ್ಞಾನಿಯು ಮರುಗುವದಿಲ್ಲ, ಉತ್ಪತ್ತಿ ಮರಣಗಳ ಗುರುತು ಅವನಿಗಿಲ್ಲ. ಅವನು ಸಂಕಟದಿಂದ ಸತ್ತರೂ, ಮರಣದ ದುಃಖದಿಂದ ಹೊಯ್‌ಕೊಂಡರೂ, ಬಡಕೊಂಡರೂ ಸುಖದಿಂದಿರುವನು. ಇದೇ ಸ್ವೇಚ್ಛಾಚರಣೆಯು. ಜ್ಞಾನಿಗೆ ಚಲೋ ಕೆಟ್ಟ ಎರಡೂ ಸುಳ್ಳಿರುತ್ತವೆ, ಆದ್ದರಿಂದ ಅವನಿಗೆ ದುಃಖವಿಲ್ಲ. ಇದು ವಿಷ, ಇದು ಸವಿ ಇವೆರಡೂ ಸಮವಾಗಿ ಸಮಬುದ್ಧಿ ಇರುತ್ತದೆ. ಜೀವನ್ಮುಕ್ತನು ಗೃಹಸ್ಥನಾದರೂ, ಸನ್ಯಾಸಿಯಾದರೂ, ಕುಲವಂತನಾದರೂ, ಕುಲಹೀನನಾದರೂ ಇದೆಲ್ಲ ದೇಹದ ಧರ್ಮ, ಅಂತಃಕರಣಗಳ ಧರ್ಮವೆಂದು ತಿಳಿದು ಇವುಗಳನ್ನು ದೂರೀಕರಿಸಿ ಸುಖದಿಂದಿರುವನು. ಜ್ಞಾನಿಗೆ ಮಾತ್ರ ತನ್ನ ಶರೀರ ಸೊರಗಿತು, ಬಲಿತಿತು ಎಂಬ ಭಾವನೆ ಕನಸಿನಲ್ಲಿಯೂ ಇರುವದಿಲ್ಲ.

ಸಂಸಾರದಲ್ಲಿ ಜ್ಞಾನಿ ಇರುವನು, ಅವನಲ್ಲಿ ಸಂಸಾರವಿಲ್ಲ. ಜ್ಞಾನಿಯು ಹೊಲಗೇರಿಯಲ್ಲಿ, ಹೇಸಿಗೆಯಲ್ಲಿ, ಕೆರೆಯಲ್ಲಿ ಬಿದ್ದರೇನು, ದೇವಸ್ಥಾನವೇನು, ಊರೇನು, ಅಡವಿಯೇನು, ಅಳುತ್ತ ಸತ್ತರೇನು, ಬಡಕೊಳ್ಳುತ್ತ ಸತ್ತರೇನು, ದುಃಖದಿಂದ ಸತ್ತರೇನು, ಜ್ಞಾನಿಗೆ ಲೇಪವಿಲ್ಲ. ಜ್ಞಾನಿಯು ದೇಹವನ್ನು ಬಿಟ್ಟಾಗ ಪುನರ್ಜನ್ಮವಿಲ್ಲ. ಅವನ ಸೂಕ್ಷ್ಮ ಶರೀರವು ಸತ್ತು ಹೋಗಿರುವದು.

ಲೋಕರಂಜನೆಗಾಗಿ ಜನರನ್ನು ಮೆಚ್ಚಿಸಬಹುದು, ಶಾಸ್ತ್ರ ಪ್ರವಚನಗಳನ್ನೂ, ನ್ಯಾಯಶಾಸ್ತ್ರಗಳನ್ನೂ ಬೇಕಾದಷ್ಟು ಕಲಿಯಬಹುದು, ಹೇಳಬಹುದು. ಆದರೆ ಒಳಗೆ ಕೃತಿ ಬೇರೆ ಇರುವದು. ಬಾಯಿಲೆ ಮಾತ್ರ ಬ್ರಹ್ಮಜ್ಞಾನ, ಒಳಗೆ ಜೀವಭಾವವು ಹೋಗಿರುವದಿಲ್ಲ.

ಉದರ ಪೋಷಣೆಗಾಗಿ ಉಪಚಾರದ ಮಾತು, ಡಂಭಾಚಾರದ ಪೂಜೆಗಳನ್ನು ಬೆಳೆಯಿಸಿಕೊಂಡು ಆಡಂಬರ ಜೀವಿಗಳಾಗುವರು, ಇಂಥವರ ಕಡೆಗೆ ಲಕ್ಷ್ಯ ಕೊಡಬಾರದು.

ತ್ರಿಕಾಲಾಬಾಧ್ಯ ಸ್ವರೂಪವನ್ನು ತಿಳಿದವನು ಜ್ಞಾನಿಯು, ಮುಂದಾಗುವ ಯಾವದಾದರೊಂದು ಸುದ್ದಿಯನ್ನು ಹೇಳಿದರೆ ತ್ರಿಕಾಲ ಜ್ಞಾನವಲ್ಲ, ಚಾಟಕಿ ವಿದ್ಯೆಯೆನ್ನಬೇಕು.

ಬ್ರಹ್ಮನಿಷ್ಠರು ಎಲ್ಲ ವೇದ, ಶಾಸ್ತ್ರ, ಪುರಾಣ, ಉಪನಿಷತ್ತುಗಳ ಅರ್ಕ ತೆಗೆದು ಹೇಳುತ್ತಾರೆ. ಅವರು ಹೇಳುವದರಲ್ಲಿ ಏನೂ ಉಳಿಸುವದಿಲ್ಲ, ಪುಕ್ಕಟೆಯಾಗಿ ದುಡ್ಡು ತಕ್ಕೊಳ್ಳದೆ ಹೇಳುವರು, ಐದು ಮನೆಯ ಭಿಕ್ಷೆಯನ್ನು ಬೇಡಿ ತಿಂದಾದರೂ ತಿಳಿಸುವರು, ಕೈಯೊಡ್ಡುವ ಚಾಳಿಯವರಲ್ಲ. ಜಗತ್ತಿನಲ್ಲಿ ಯಾರಿಗಾದರೂ ತಿಳಿಸಿ ಆತ್ಮಸಾಕ್ಷಾತ್ಕಾರ ಮಾಡಿಕೊಡುವಷ್ಟು ಯೋಗ್ಯತೆಯುಳ್ಳವರಿರುವರು.

ಒಂದು ವೇಳೆ ಶೃತಿಯಲ್ಲಿಯೂ ಕೂಡ ದೋಷವಿದ್ದರೆ, ಬಲ್ಲಂಥ ಜ್ಞಾನಿಗಳು ತಮ್ಮ ಸ್ವಂತ ಅನುಭವದಿಂದ ಅದನ್ನು ತೆಗೆದು ಹಾಕುತ್ತಾರೆ.

ಜೀವಭಾವವು ಅಡಗಿ ಕೂಟಸ್ಥನಾದಾಗ, ಮನಸ್ಸು ಎತ್ತ ಎರಗಿದರೂ ಯೋಗಗೈಯ್ಯುವನೆಂದೇ ಭಾವಿಸಬೇಕು. ಯಾವದೇ ಪ್ರಾಣಿಯನ್ನು ಕಂಡರೂ ಚೈತನ್ಯವೊಂದೇ ಇದೆ ಎಂದು ತಿಳಿದುಕೊಳ್ಳುವನು, ಪ್ರೀತಿಸುವನು.

ಜ್ಞಾನಿಯು ಊಟದ ಆನಂದವಾದರೂ ಸ್ವರೂಪದ ಆನಂದವೆಂದೇ ತಿಳಿದುಕೊಂಡಿರುತ್ತಾನೆ.

ಜ್ಞಾನಿಗಳಿಗೆ ಅಷ್ಟಮಾದಿ ಸಿದ್ಧಿಗಳು ಜಡವಾಗಿಯೂ ಭ್ರಾಂತಿಯುತವಾಗಿಯೂ ಕಾಣುವವು. ಅವುಗಳನ್ನು ಪಡೆಯುವ ಆಶೆ ಅವರಿಗಿಲ್ಲ. ಮಂತ್ರಾಭ್ಯಾಸ ಮಾಡಿ ಅಷ್ಟಮಾದಿ ಸಿದ್ಧಿಗಳನ್ನು ಪಡೆಯಬಹುದು. ಅವನು ಭೋಗಗಳಲ್ಲಿ ಉದಾಸೀನನಾಗಿರುವನು, ಅವನಿಗೆ ಪಡೆಯಬೇಕು ಹಿಡಿಯಬೇಕೆಂಬ ಭ್ರಾಂತಿಯು ನಾಶವಾಗಿದೆ.

ವೇದಾಂತ ತಜ್ಞರಾದ ಮಹಾತ್ಮರು ಏನು ಬಿಟ್ಟಿದ್ದರು? ಎಲ್ಲಿಯವರೆಗೆ ಬಾಹ್ಯ ವಿಷಯಗಳು ತೋರಿದವೋ ಅವೆಲ್ಲವುಗಳನ್ನು ಅವರು ಅಡಗಿಸಿದ್ದರು ಅಥವಾ ಅವು ಇದ್ದರೂ ಅವುಗಳನ್ನು ಮಿಥ್ಯೆಯೆಂದು ಗಟ್ಟಿಯಾಗಿ ತಿಳಿದಿದ್ದರು, ವಿಚಾರಿಸಿದರೆ ದೇಹವೂ ಒಂದು ವಿಷಯ, ಇದು ವಂಧ್ಯಾಪುತ್ರನಂತೆಯೂ ಗಗನಕುಸುಮದಂತೆಯೂ ಮೊಲದ ಕೋಡಿನಂತೆಯೂ ಜ್ಞಾನಿಗೆ ಅತ್ಯಂತಾಭಾವವಾಗಿದೆ, ಅಜ್ಞಾನಿಯು ಜಗತ್ತು ಸತ್ಯವೆಂದು ವ್ಯವಹರಿಸುವನು.





ಸೂಜಿಯ ತುದಿಯ ಮೇಲೆ ನಿಂತು ಸಾವಿರಾರು ವರ್ಷ ತಪಸ್ಸು ಮಾಡಿದ ವಿಶ್ವಾಮಿತ್ರನು ಬಹಿರ್ಭಾವನೆಗೆ ಬಂದು ವಿಕಾರಿಯಾದನು. ಆದರೆ ಸಣ್ಣ ಶಿಶುವು ಸ್ತ್ರೀಯರ ತೊಡೆಯ ಮೇಲೆ ಆಡಿದರೂ, ಕುಚಗಳ ಗ್ರಹಣಗೈದರೂ, ಕಪೋಲಗಳ ಚುಂಬಿಸಿದರೂ ವಿಕಾರಿಯಾಗುವದೇ? ಅವನನ್ನು ವಿಕಾರ ಮಾಡುವದಕ್ಕೆ ಯಾವ ರಂಭೆ ಮೇನಕೆಯರು ಸಮರ್ಥರಾದಾರು! ಹೀಗೆ ಜೀವನ್ಮುಕ್ತರಿರುವರು.

ಬ್ರಹ್ಮವೊಂದೇ ನಿರ್ವಿಕಾರಿ, ಸತ್ಯವಾದದ್ದು, ಅದರ ಮೇಲೆ ತೋರಿದ ಜಗತ್ತು ಕನಸಿನಂತೆ ಮಿಥ್ಯವಾದದ್ದು ಎಂದು ಎಲ್ಲ ಜ್ಞಾನಿಗಳೂ, ಶೃತಿಗಳೂ ಹೇಳುತ್ತವೆ. ಇದು ಯಾರ ಅನುಭವಕ್ಕೆ ಬರುವದೋ ಅವರೇ ಧನ್ಯರು. ಅವರು ಈ ಲೋಕದಲ್ಲಿ ದುರ್ಲಭ, ಜ್ಞಾನಿ ತ್ರೈಲೋಕ್ಯ ದುರ್ಲಭ ಎಂದಿರುವರು.

ಸಮಾಧಿಯೆಂದರೆ ಸಮಬುದ್ಧಿಯು, ಭಿನ್ನ ಭಿನ್ನ ವಿಷಯ ಕಲ್ಪನೆಗಳನ್ನು ಕಳೆದು, ಸಮನಾದ ಬ್ರಹ್ಮವೊಂದನ್ನೇ ತಿಳಿಯುವದು. ನಿರ್ದೋಷಂ ಹಿ ಸಮಂಬ್ರಹ್ಮ (ಭ.ಗೀ). ಜ್ಞಾನಿಗಳು ಒಂದೇ ತರದ್ದಾದ ನಿರ್ವಿಕಾರಿ ಬ್ರಹ್ಮನಲ್ಲಿ ರಮಮಾಣರಾಗಿರುತ್ತಾರೆ. ಹೇಗೆ ಉತ್ತಮ ರೈತನು ತಗ್ಗು ದಿನ್ನೆಗಳಿದ್ದ ಸ್ಥಳವನ್ನು ಕಡಿದು ಸಮನೆಲ ಮಾಡುತ್ತಾನೋ, ಹಾಗೆಯೇ ವಿಷಯಗಳ ಮತ್ತು ಅವುಗಳ ಕಲ್ಪನೆಗಳು ಕಳೆದು ಸಮಬುದ್ಧಿ ಉಂಟಾದರೆ ಆತ್ಮೈಕ್ಯ ಜ್ಞಾನವಾಗುವದು.

ವಿರಾಗಿಯು ಗುರುಸೇವೆಯಿಂದ ದೃಢಜ್ಞಾನ ಪಡೆದು, ಧ್ಯಾನ ಸಮಾಧಿಗಳನ್ನು ಸಾಧಿಸಿ, ಸದ್ಯೋನ್ಮುಕ್ತನಾಗುತ್ತಾನೆ. ಯೋಗೀಶ್ವರನಿಗೆ ತನು, ಮನ, ಬುದ್ಧಿ, ಹಮ್ಮು, ಜ್ಞಾತೃ, ಮಾಯೆ ಮೊದಲಾದ ಅನಾತ್ಮ ಪದಾರ್ಥಗಳು ಲಯಪಟ್ಟದ್ದರಿಂದ ಏನೇನೂ ಕಾರ್ಯ ಮಾಡಲಾರವು. ಅವನು ಎಲ್ಲ ಪದಾರ್ಥಗಳು ಸ್ವಪ್ನದಂತೆ, ಇಂದ್ರಜಾಲದಂತೆ ಮಿಥ್ಯೆಯೆಂದು ತಿಳಿದು, ಅವುಗಳ ಮೇಲೆ ಎಂದೆಂದಿಗೂ ಮಮತೆಯನ್ನು ಮಾಡುವದಿಲ್ಲ. ಹೇಗೆ ಸ್ವಪ್ನದಲ್ಲಿ ತನ್ನ ಹೊರತು ಅನ್ಯ ಪದಾರ್ಥಗಳಿಲ್ಲವೋ, ಅಲ್ಲಿ ಏನೇನು ತಿಳಿಯುತ್ತಾನೆ, ಅದೆಲ್ಲವೂ ತಾನೇ ಆಗಿದ್ದಾನೆ. ಹಾಗೆಯೇ ಜಾಗ್ರಾವಸ್ಥೆಯಲ್ಲಿ ತಾನು ತಿಳಿದಂಥ ಪದಾರ್ಥಗಳು ತಾನೇ ಆಗಿರುತ್ತಾನೆ. ಅದರಂತೆ ಆತ್ಮವನ್ನು (ಬ್ರಹ್ಮ) ತಿಳಿದ ಮಾತ್ರಕ್ಕೆ ಬ್ರಹ್ಮರೂಪನಾಗಿರುತ್ತಾನೆ. ಮಾಯೆಯು ಯಾವತ್ತೂ ಲಯವಾದ್ದರಿಂದ ಅತ್ಯಂತ ಸುಖಿಯಾಗಿರುತ್ತಾನೆ. ಹೇಗೆ ದೀಪವನ್ನು ಹಚ್ಚಿದ ಕೂಡಲೆ ಕತ್ತಲೆಯು, ಅದರಿಂದಾದ ಕಾರ್ಯಗಳು (ಎಡವುವದು, ತಲೆ ಕಂಬಕ್ಕೆ ಹಾಯ್ದು ಬೀಳುವದು) ಇಲ್ಲದಂತಾಗುವವೋ, ಹಾಗೆಯೇ ಜ್ಞಾನಿಗೆ ಜೀವನು, ಜೀವನ ತಿಳುವಳಿಕೆಯು, ಕಾರ್ಯರೂಪ ಸಕಲ ಸಂಸಾರವು ಏಕಕಾಲಕ್ಕೆ ಇಲ್ಲದಂತಾಗುವವು. ಸ್ವರೂಪಜ್ಞಾನವಾದರೆ ಜೀವಾತ್ಮನು ಸತ್ತಹಾಗೆ.

ಎಲ್ಲವೂ ಇಂದ್ರಜಾಲದಂತೆ ಮಾಟದ ವಸ್ತುವೆಂದು ನಿಶ್ಚಯವಾಗಿ ಭೇದವಳಿದ ಯೋಗೀಶ್ವರನು, ನಿಜನಿಷ್ಠನಾಗಿ ಕುಳಿತು ಚಿದಾಭಾಸವಳಿದ ಮೇಲೆ ಧ್ಯಾನಾದಿ ತಪಕ್ರಿಯೆಗಳು ಅನವಶ್ಯ.

ಜ್ಞಾನಿಯು ತನು ಅಂತಃಕರಣಗಳ ಧರ್ಮಗಳು ಅವುಗಳಲ್ಲಿವೆ, ತಾನು ಸಚ್ಚಿದಾನಂದ ನಿತ್ಯ ಪರಿಪೂರ್ಣನೆಂದು ತಿಳಿದು ಸುಮ್ಮನಿರುವನು.

ಜ್ಞಾನಿಯು ತನು ಇಂದ್ರಿಯ ಸರ್ವಕ್ಕೂ ಸಾಕ್ಷೀಭೂತನಾಗಿದ್ದಾನೆ, ಪ್ರವೃತ್ತಿ ನಿವೃತ್ತಿ ಎರಡೂ ಜ್ಞಾನಿಯಲ್ಲಿ ಇಲ್ಲ. ಜ್ಞಾತೃ ಹೋದಕೂಡಲೇ ದೃಶ್ಯವೂ ಹೋಯಿತು, ಮರೆಯಲಿಕ್ಕೆ ಅರಿಯಲಿಕ್ಕೆ ಏನೂ ಜೀನಸು ಇಲ್ಲ, ಬರೇ ಅರಿವು ಇದೆ, ಬರೇ ಬಚ್ಚ ಅರಿವು ತನ್ನ ಸ್ವರೂಪವೆಂದು ದಿಗಂಬರನಾಗಬೇಕು. ನಿದ್ರೆಯಲ್ಲಿದ್ದವನಿಗೆ ಕಳವು ಆದರೂ, ಊಚ ನೀಚ ಕಾರ್ಯವಿದ್ದರೂ ಹೇಗೆ ಕಾಣುವದಿಲ್ಲವೋ, ಹಾಗೆ ಯೋಗೀಶ್ವರನು ಇರುತ್ತಾನೆ. ಆದ್ದರಿಂದ ಯೋಗೀಶ್ವರನಿಗೆ ಅನ್ಯರು ನಿಂದೆ ಸ್ತುತಿ ಮಾಡಿದರೆ ಈತನು ಎರಡಕ್ಕೂ ಸಂಬಂಧವಿಲ್ಲ, ಏಕೆಂದರೆ ಅನ್ಯಥಾ ತಿಳುವಳಿಕೆ ಇಲ್ಲದ್ದರಿಂದ, ಆ ಪಾಪ ಪುಣ್ಯಗಳು ಅನ್ಯರಿಗೆ ಹೊರತು ಜ್ಞಾನಿಗೆ ಅಲ್ಲ.

ನಮಗೆ ಗುರುಗಳ ಅವಶ್ಯಕತೆ ಇಲ್ಲ, ಆದರೂ ಲೋಕಾರೂಢಿಗೆ ಮಾಡಿಕೊಂಡಿದ್ದೆವು. ಗುರು ಮುಟ್ಟಿ ಗುರುವಾದನೆಂಬ ನಿಯಮವಿರುವಾಗ ಆ ನಿಯಮವನ್ನು ಏಕೆ ಮುರಿಯಬೇಕು?

ಜ್ಞಾನಿಗಳು ವೃತ್ತಿಯಿಂದ ಬೇರೆ ಬೇರೆ ತೋರಿದರೂ ಜ್ಞಾನವೊಂದೇ ಇರುವದು. ಜ್ಞಾನಿಯಲ್ಲಿ ಹೆಚ್ಚು ಕಡಿಮೆ ಇಲ್ಲವಾದರೂ, ಪ್ರಾರಬ್ಧವು ಬಲವತ್ತರವಿರುವದರಿಂದ ಅವರವರ ನಡತೆ ವಿಚಿತ್ರವಿರುವದು. ಅವರು ಬಾಲಕ, ವೈಯ್ಯಾಕರಣಿ, ಪಿಶಾಚಿ, ಹುಚ್ಚನಂತಿರುವರು, ವೈಯಾಕರಣಿಯು ಅವರಿವರೆನ್ನದೆ ಭುವನದ ಮಾನವರೆಲ್ಲರಿಗೂ ಬೋಧ ಮಾಡುತ್ತಿರುವನು. ಮೌನಿಯು ತಿಳಿದುಕೊಂಡು ಸುಮ್ಮನೆ ತನ್ನೊಳಗೆ ತಾನು ಇರುವನು, ಅವನಿಂದ ದರ್ಶನ ಲಾಭ ಮಾತ್ರ ಆಗುತ್ತಿರುವದು, ಆತ್ಮ ಸುಖದಲ್ಲಿ ಮಗ್ನನಾಗಿ ಬಾಹ್ಯ ಪ್ರವೃತ್ತಿ ಆಗದೇ ಇರುವನು.

ಯೋಗಿಗಳು ಸಂಸಾರದಲ್ಲಿಯೂ ಇರುತ್ತಾರೆ, ಕಮಲದ ಎಲೆಯು ನೀರಿನಲ್ಲಿದ್ದರೂ ಲೇಪವಿಲ್ಲದಂತೆ ಇರುತ್ತಾರೆ. ಯಾಕೆಂದರೆ ಸ್ವರೂಪದ ಜ್ಞಾನವು ಸಂಸಾರದ ಬಾಧೆಯನ್ನು ಹತ್ತಗೊಡುವದಿಲ್ಲ. ಅಹಂಕಾರದಲ್ಲಿ ಯಾವತ್ತೂ ಸಂಸಾರವು ಇರುವದೆಂದು ಮತ್ತು ತಾನು ಸೂರ್ಯನಂತೆ ಕರ್ಮಸಾಕ್ಷೀ ಎಂದು ತಿಳಿದು, ಯಾವತ್ತೂ ಪ್ರಾಪಂಚಿಕ ವ್ಯವಹಾರವು ಸ್ವಪ್ನವೆಂದು (ಮಿಥ್ಯ) ತಿಳಿದು, ತಾನು ಮಾತ್ರ ಬರೀ ಅರಿವಲ್ಲದೆ ಮೂಢ ಜೀವನಲ್ಲ, ನಿರ್ಗುಣ ನಿರಾಕಾರ ಜ್ಞಾನವೇ ತನ್ನ ಸ್ವರೂಪವೆಂದು ತಿಳಿದುಕೊಂಡು ಯೋಗಿಯು ಮುಕ್ತಿಯನ್ನು ಹೊಂದುವನು. ಬುದ್ಧಿ ಇದ್ದವನು ಬುದ್ಧಿಗೇಡಿ, ಬುದ್ಧಿ ಇಲ್ಲದವನು ಪಂಡಿತನು. ಹುಡುಗರಿಗೆ ಏನೂ ಗುರುತಿಲ್ಲ, ಹಾಸಿಗೆಯಲ್ಲಿ ಮಲಮೂತ್ರ ಮಾಡಿಕೊಂಡರೂ, ಮೈಗೆಲ್ಲ ಮಾಡಿಕೊಂಡರೂ ಗುರ್ತಿಲ್ಲ. ಹೀಗೆ ಯೋಗಿಗಳು ಭಾವರಹಿತ ಸ್ಥಿತಿಯಲ್ಲಿರುವರು.

ಅವರು ಉಂಡೂ ಉಣ್ಣದಂತೆಯೂ, ಅರಿತೂ ಅರಿಯದಂತೆಯೂ, ನೋಡಿಯೂ ನೋಡದಂತೆಯೂ, ದೇಹವು ಊಟ ಮಾಡಿದರೂ, ಬೆತ್ತಲೆ ತಿರುಗಿದರೂ, ಕತ್ತೆಯ ಮೇಲೆ, ಪಲ್ಲಕ್ಕಿಯಲ್ಲಿ ಕುಳಿತರೂ, ಬಾಯಲ್ಲಿ ಹೇಸಿಗೆ ಹಾಕಿದರೂ ಸುಮ್ಮನಿರುವರು. ತಾನೇ ತಾನಾದ ಬಳಿಕ ಈ ದೇಹಕ್ಕೆ ಏನು ಮಾಡಿದರೇನು? ಅವನು ನುಡಿದಂತೆ, ಉಂಡಂತೆ ಕಂಡರೂ ಕುಂಬಾರ ಹುಳುವಿನಂತಿರುವನು.





ಪ್ರತಿಯೊಬ್ಬ ಜೀವನ ಬುದ್ಧಿಯಲ್ಲಿ ಅನೇಕ ಜನ್ಮಪ್ರದ ಸಂಚಿತ ಕರ್ಮವು ಒಕ್ಕಲಿಗರ ಮನೆಯ ಕಾಳು ಇದ್ದಂತೆ ಇರುವದು. ಇದನ್ನು ಯೋಗೀಶ್ವರನು ಜ್ಞಾನಾಗ್ನಿಯಿಂದ ನಾಶಮಾಡುವನು, ಯೋಗೀಶ್ವರನು ಪ್ರಾರಬ್ಧಕರ್ಮವನ್ನು ದೇಹಬೀಳುವವರೆಗೆ ಸುಮ್ಮನೆ ಉಂಡು, ಅದನ್ನು ತಿದ್ದುವ ಉದ್ಯೋಗ ಮಾಡದೆ, ಸುಖ ದುಃಖಗಳನ್ನು ಉಂಡು ಸವಿಯುತ್ತಾನೆ. ಈಗ ಅವನ ದೇಹೇಂದ್ರಿಯ ಅಂತಃಕರಣಗಳು ಸುಖ ದುಃಖಗಳನ್ನು ಅನುಭವಿಸುತ್ತಿದ್ದಾಗಲೂ, ತಾನು ನಿರ್ವಿಕಾರ ಚಿನ್ಮಯನೆಂದು ತಿಳಿಯುತ್ತಾನೆ. ಪ್ರಾರಬ್ಧದ ಮೇಲೆ ಜ್ಞಾನಿಯ ಕೈ ನಡೆಯುವದಿಲ್ಲ. ಮನೆಗೆ ಬೆಂಕಿ ಹತ್ತಿದರೆ ಮನೆಯಲ್ಲಿಯ ಬೀಜ ಸುಡಬಹುದು, ಬಿತ್ತಿದ ಬೀಜ ಹೇಗೆ ಸುಡುವದು? ಹೀಗಿದೆ ಈ ಶರೀರಕ್ಕೆ ಪ್ರಾರಬ್ಧವು. ಡಬ್ಬಿಯಲ್ಲಿಯ ಕರ್ಪೂರವು ತೀರಿಹೋದರೂ ಅದರ ವಾಸನೆಯು ಉಳಿದಂತೆ ಪ್ರಾರಬ್ಧವು ಉಳಿದಿರುವದು. ಕೆಲವು ದಿನಗಳ ನಂತರ ಆ ವಾಸನೆಯು ತಾನೇ ಹೋದಂತೆ, ಜ್ಞಾನಿಯ ದೇಹವಾದರೂ ಹೋಗುವದು, ನೊಡುವವನಿಗೆ ಮಾತ್ರ ಜ್ಞಾನಿಯ ಸುಖ ದುಃಖಗಳು ಕಾಣುತ್ತವೆ, ಅವನು ಯಾವದನ್ನೂ ಹಚ್ಚಿಕೊಂಡಿರುವದಿಲ್ಲ.

ಜ್ಞಾನಿಗೆ ಯಾವ ಕಾಲಕ್ಕೆ ಏನು ಆಗಬೇಕಾಗಿದೆಯೋ ಅದು ಆಗಿಯೇ ತೀರುವದು. ಆದರೆ ಅವನು ನಿರಭಿಮಾನದಿಂದ ಇರುವನು. ಈ ಶರೀರವಿರುವವರೆಗೆ ಜೀವನ್ಮುಕ್ತನು, ಶರೀರ ಬಿಟ್ಟ ಮೇಲೆ ವಿದೇಹ ಮುಕ್ತನು, ಅವನು ಹೀಗೆ ತಿಳಿಯುತ್ತಾನಲ್ಲ, ತಿರುಕನಿಗೆ ಕನಸು ಬಿದ್ದು ಲಗ್ನವಾಗಿ ಆರು ಮಕ್ಕಳನ್ನು ಹಡೆದು, ಅವರನ್ನು ದೊಡ್ಡವರನ್ನಾಗಿ ಮಾಡಿ, ತನ್ನ ಅರಸೊತ್ತಿಗೆಯನ್ನು ಒಪ್ಪಿಸುವವನಿದ್ದನು, ಆದರೆ ಅಷ್ಟರಲ್ಲಿ ಪರರಾಜರ ಮುತ್ತಿಗೆ ನಡೆಯಿತು, ಗಾಬರಿಯಾಗಿ ಎಚ್ಚರಾಗಲು ಅವನ ಹೆಂಡಿರು ಮಕ್ಕಳು ನಾಶವಾದಂತೆ, ಸುಖ ದುಃಖ ಯಾವವೂ ಏನೂ ಇಲ್ಲ, ಶುದ್ಧ ಸ್ವಪ್ನವಿದು. ಶರೀರವೂ ಇಲ್ಲದ್ದು, ಪ್ರಾರಬ್ಧವೂ ಇಲ್ಲದ್ದು, ಇಲ್ಲದ್ದು ಇಲ್ಲದಾಗಿ ಹೋಗುವದೆಂದು ನಿಶ್ಚಿತ ತಿಳಿದಿರುವನು.

ಜ್ಞಾನಿಯ ಸನ್ನಿಧಿಯಲ್ಲಿ ಹಾವು ಮುಂಗಲಿ, ಹುಲಿ ಆಕಳು ಕೂಡಿ ಆಡುತ್ತವೆ. ಇದೆಲ್ಲವೂ ಜ್ಞಾನಿಯ ತಪಸ್ಸಿನ ಪ್ರಭಾವವು, ಯಾವತ್ತೂ ಶಾಸ್ತ್ರ ಪುರಾಣಗಳು ಜ್ಞಾನಿಯ ಪಾದದ ಕೆಳಗೆ ಇರುವವು.

ಇವರು ಬರಡು ಹಿಂಡಿಸುತ್ತಾರೆ, ಕೊರಡು ಚಿಗುರಿಸುತ್ತಾರೆ, ದೇವಾನುದೇವತರು ಇವರ ಮಾತಿಗೆ ಅಡ್ಡ ಬರುವದಿಲ್ಲ.

ಅವನು ಮುಟ್ಟಿದ ಜಲತೀರ್ಥ, ಮೆಟ್ಟಿದ ಸ್ಥಾನ ಪಾವನ ಕ್ಷೇತ್ರ, ನಿಂತ ಸ್ಥಾನವೇ ಕಾಶಿ, ಮನಸ್ಸು ಒಪ್ಪಿದ್ದೇ ಸುಮತ, ಬಾಯಿಂದ ನುಡಿದದ್ದೇ ಮಹಾಮಂತ್ರ, ಮುಕ್ತರಿರುವ ಸ್ಥಾನವೇ ಕೈಲಾಸ. ಆ ಗುರುವೇ ಪರಮಾತ್ಮನು, ಇವನ ನುಡಿಗಳನ್ನು ವೇದ ಆಗಮಗಳು ಆರಿಸಿಕೊಳ್ಳುತ್ತವೆ. ಬಲ್ಲಂಥ ಉತ್ತಮ ಅಧಿಕಾರಿಗಳು ತ್ರಿಕರಣ ಪೂರ್ವಕವಾಗಿ ಅವನ ಬೋಧನೆಯನ್ನು ಸಿಕ್ಕಷ್ಟು ಸ್ವೀಕರಿಸಬೇಕು, ಅಂದರೆ ಜನ್ಮೋದ್ಧಾರವಾಗುವದು. ಸಚ್ಚಿದಾನಂದವೇ ತಾನೆಂದು ತಿಳಿದುಕೊಂಡ ಯೋಗೀಶ್ವರನನ್ನು ವಂದಿಸು, ನಿಂದಿಸದಿರು.

ಯೋಗೀಶ್ವರನು ಮನೆಗೆ ಬಂದುದೇ ಹಬ್ಬವು. ಆ ಗುರುವೇ ಪರಮಾತ್ಮನು. ಯೋಗೀಶ್ವರನಿಗೆ ತೃಪ್ತಿ ಮಾಡಿದ ಫಲವು ಸಹಸ್ರ ಗಣಾಧೀಶರಿಗೆ ತೃಪ್ತಿಪಡಿಸಿದರೂ ಸಮವಲ್ಲವು. ಜ್ಞಾನಿಯೇ ದೇವರೆಂದು ತಿಳಿದವರಿಗೆ ಮುಕ್ತಿಯು ದೂರವಿಲ್ಲ.

ಗರಗದ ಮಡಿವಾಳಪ್ಪನವರು ಮಾಯೆಯನ್ನು ತೊರೆದು ತಮ್ಮನ್ನು ತಾವೇ ಪೂಜಿಸುತ್ತಿದ್ದರು. ಗಂಧ, ಪುಷ್ಪ, ಅಕ್ಷತೆ ಎಲ್ಲವೂ ತಾನೇ.

ಅವಿದ್ಯೆಯನ್ನು ಗೆದ್ದು ಎರಿತಾತ, ಎಮ್ಮಿಗನೂರು ಜಡಿಯಪ್ಪನವರು ಸಮಾಧಿಯಲ್ಲಿದ್ದರು. ಸಿದ್ಧಾರೂಡರು ಸಮಾಧಿಯಿಂದ ಉತ್ಥಾನರಾಗಿ ಬೋಧನೆ ಮಾಡಿದರು.

ಯಾಜ್ಞವಲ್ಕ್ಯರು ತಾವು ಸಂಚಾರಕ್ಕೆ ಹೋಗುವಾಗ, ತಮ್ಮ ಆಸ್ತಿಯನ್ನು ತಮ್ಮ ಇಬ್ಬರು ಹೆಂಡಂದಿರಿಗೆ ಹಂಚಿಕೊಳ್ಳಿರೆಂದು ಹೇಳಿದರು, ಕಾತ್ಯಾಯನಿಯು ಕೊಡಿರೆಂದು ತಕ್ಕೊಂಡಳು, ಮೈತ್ರೇಯಿಯು ದುಡ್ಡಿನಿಂದ ಮೋಕ್ಷ ಸಿಗುವದೋ ಎಂದು ಕೇಳಿದಳು. ಯಾಜ್ಞವಲ್ಕ್ಯರು ದುಡ್ಡಿನಿಂದ ಮತ್ತು ಕರ್ಮದಿಂದ ಮೋಕ್ಷ ಸಿಗುವದಿಲ್ಲವೆಂದರು. ಮೈತ್ರೇಯಿಯು ತನಗೆ ದುಡ್ಡುಕೊಟ್ಟು ಮೋಸ ಮಾಡುತ್ತಿರುವಿರಿ, ನಿಮ್ಮ ಸುಖಕ್ಕಾಗಿ ನಾನು, ನನ್ನ ಸುಖಕ್ಕಾಗಿ ನೀವು ಬೇಕಾಗಿದೆ, ಇದು ಸ್ವಾರ್ಥದ ಸಂಸಾರವಾಯಿತು, ನಿಜಸುಖ ಎಲ್ಲಿದೆ? ಎಂದು ಕೇಳಿಕೊಂಡಳು.

ನಾಗಲಿಂಗಪ್ಪನವರು ಮಂದಿಗೆ ಕಲ್ಲು ಒಗೆಯುವದನ್ನು ಮಾಡುತ್ತಿದ್ದರು, ತಮ್ಮಿಂದ ತಾವೇ ಬಿಟ್ಟು ಹೋಗಬೇಕೆಂದು ಹಾಗೆ ಮಾಡುತ್ತಾರೆ, ಆದರೂ ಅವರಲ್ಲಿಯೇ ಇರಬೇಕು.

ಬೆಲ್ಲದ ಸವಿ ಬೆಲ್ಲಕ್ಕೆ ಗುರ್ತಿಲ್ಲ. ಹೀಗೆ ಪೂರ್ಣ ಅರುಮಯನಾಗಿರುವವನೇ ಆರೂಢನು, ಜ್ಞಾನಿಗೆ ಜ್ಞಾನಸಿದ್ಧನ ಗುರ್ತಾಗುವದು, ಸಾಧಕನಿಗೆ ಗುರ್ತಾಗುವದಿಲ್ಲ.

ಜೀವನ್ಮುಕ್ತನು ಅನ್ಯರಿಗೆ ಸುಖವಾಗಲೆಂದು ಎಷ್ಟು ತ್ರಾಸು ಕೊಟ್ಟರೂ, ಬೈದರೂ ಉತ್ತಮವೇ.

ಗರಗದ ಮಡಿವಾಳಪ್ಪನವರಲ್ಲಿಗೆ ಒಬ್ಬ ಕಾಶಿ ಪಂಡಿತನು "ಹೌದು ಆದದ್ದು ಅಲ್ಲ, ಅಲ್ಲವಾದದ್ದು ಹೌದು" ಎಂದು ಸಿದ್ಧ ಮಾಡುತ್ತೇನೆಂದು ಬಂದಿದ್ದನು. ಆಗ ಮಡಿವಾಳಪ್ಪನವರು ಅವನಿಗೆ "ನಿಮ್ಮ ತಂದೆಗೆ ನೀನು ಹುಟ್ಟಿರುವಿ ಎಂದು ನಾನು ಸಿದ್ಧ ಮಾಡುತ್ತೇನೆ. ಇಲ್ಲವೆಂದು ನೀನು ಸಿದ್ಧಮಾಡು" ಎಂದರು. ಅವನಿಗೆ ಅಪಮಾನವಾಗಿ ದುಃಖಿಸುತ್ತ ಹೋದನು.

ತತ್ತ್ವ ತಿಳಿದ ಮೇಲೆ ಪ್ರಪಂಚ ಮಾಡಬೇಕೋ, ಮಾಡಬಾರದೋ ಎಂದು ಕೇಳಿದರೆ ಅವನಿಗೆ ಜ್ಞಾನವಾಗಿಲ್ಲವೆಂದು ನಿಶ್ಚಿತ ತಿಳಿಯಬೇಕು. ತಿಳಿದ ಮೇಲೆ ತಿಂದರೇನು, ಕುಡಿದರೇನು, ಏನು ಮಾಡಿದರೇನು ಎಂಬ ಕೆಟ್ಟ ಚಾಳಿಯವನಿಗೂ ತಿಳಿದಿಲ್ಲವೆಂದು ನಿಶ್ಚಿತ ತಿಳಿಯಬೇಕು. ಇಂಥವರ ಕೂಡ ಹೇಗೆ ಬಳಿಕೆ ಮಾಡಲಿ ಅನ್ನುವ ಸಂಶಯವಿದ್ದವನಿಗೆ ತಿಳಿದಿಲ್ಲವೆನ್ನಬೇಕು. ಮೇಲೆ ತಿಳಿದವರ ಹಾಗೆ ಮಾಡಿದರೂ ಪ್ರಸಂಗ ಬಂದಾಗ ಅವರ ಹೂರಣ ಹೊರಗೆ ಬೀಳುವದು.

# ಶ್ರೀ ಆತ್ಮಾನಂದ ಅಧ್ಯಾತ್ಮ ಪ್ರಕಾಶನ

ಮು : ಹಂಗರಕಿ, ಪೋ : ಗರಗ, ತಾ.ಜಿ. : ಧಾರವಾಡ

| | |
|---|---|
| 1. ಅಧ್ಯಾತ್ಮ ಪ್ರವಚನ ಸಂಗ್ರಹ | ರೂ. 40–00 |
| 2. ಪೂಜ್ಯ ಶ್ರೀ ಶಿವಾನಂದ ಸ್ವಾಮಿಗಳ ಜೀವನ ಬೋಧಾಮೃತ | ರೂ. 15–00 |
| 3. ಕಾಮದಹನ | ರೂ. 15–00 |
| 4. ನಿಜ ಸುಖ ಮಾರ್ಗ ಪ್ರದೀಪ | ರೂ. 15–00 |
| 5. ನಿಜವಾದ ನಾನು ಯಾರು | ರೂ. 20–00 |
| 6. ಅಧ್ಯಾತ್ಮ ವಚನಾಮೃತ | ರೂ. 15–00 |
| 7. ಆತ್ಮ ಸಂಶೋಧನೆ | ರೂ. 15–00 |
| 8. ಆತ್ಮ ಸಾಕ್ಷಾತ್ಕಾರ | ರೂ. 10–00 |
| 9. ಪ್ರಥಮಾನುಭೂತಿ | ರೂ. 10–00 |
| 10. ಶಾಶ್ವತ ಶಾಂತಿ | ರೂ. 25–00 |
| 11. ಗುರಿ ಒಂದೇ, ಸಾಧನೆ ಒಂದೇ | ರೂ. 25–00 |
| 12. ಗಾಢನಿದ್ರೆ ಮತ್ತು ಸಮಾಧಿ | ರೂ. 10–00 |
| 13. ಪುನರ್ಜನ್ಮ | ರೂ. 50–00 |
| 14. ಅವಿದ್ಯೆಯು ಅನಾದಿ ಅನಂತವಲ್ಲ, ಅದು ಸಾದಿ ಸಾಂತವು | ರೂ. 10–00 |
| 15. ಶ್ರೀ ಸ್ವಾಮಿ ರಾಮತೀರ್ಥರ ಪ್ರವಚನ ಸಾರ | ರೂ. 100–00 |
| 16. ಅಧ್ಯಾತ್ಮ ನುಡಿ ರತ್ನಗಳು | ರೂ. 25–00 |
| 17. ವೇಮನ ಜಯಂತಿ ಮತ್ತು ಮಹಾನಿದ್ರಾ ಸಪ್ತಾಹ | ರೂ. 15–00 |
| 18. ಆತ್ಮಾನಂದ ಪ್ರವಚನ ಸಂಗ್ರಹ | ರೂ. 40–00 |
| 19. ಆತ್ಮಾನಂದ ಬೋಧ–ಭಾಗ ೧ | ರೂ. 40–00 |
| 20. ಶ್ರೀ ಸದ್ಗುರು ಆತ್ಮಾನಂದ ಸ್ವಾಮಿಗಳ ಪ್ರವಚನ ಸಾರ | ರೂ. 60–00 |

*****